ಶನಿವಾರ, ಜನವರಿ 10, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ನೃತ್ಯ ಪ್ರದರ್ಶನ

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ–2026 ಕಾರ್ಯಕ್ರಮದಲ್ಲಿ ಕಲಾವಿದರೊಬ್ಬರು ಗೊಂಬೆ ವೇಷ ಧರಿಸಿ ನೃತ್ಯ ಮಾಡಿದರು



ಜೆಮಿಮಾ ನಾಯಕಿ


ಭಾರತ ತಂಡದ ಜೆಮಿಮಾ ರಾಡ್ರಿಗಸ್ ಅವರು ಡಬ್ಲ್ಯುಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮುನ್ನಡೆಸುವರು. ಶನಿವಾರ ಮುಂಬೈ ಇಂಡಿಯನ್ಸ್ ಎದುರು ಡೆಲ್ಲಿ ಆಡಲಿದೆ

ಬೆಂಗಳೂರು ಉತ್ತರ ವಿ.ವಿಗೆ ಹೊಸ ಕುಲಪತಿ

ಪ್ರಜಾವಾಣಿ ವಾರ್ತೆ

ಕೋಲಾರ: ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ಪ್ರೊ.ಬಿ.ಕೆ. ರವಿ ನೇಮಕವಾಗಿದ್ದು, ಶುಕ್ರವಾರ ನಗರ ಹೊರವಲಯದ ಟಮಕದಲ್ಲಿರುವ ಆಡಳಿತ ಕಚೇರಿಯಲ್ಲಿ ಸಂವಿಧಾನ ಪೀಠಿಕೆ ವಾಚನದ ಮೂಲಕ ಅಧಿಕಾರ ಸ್ವೀಕರಿಸಿದರು.

ಈವರೆಗೆ ಉತ್ತರ ವಿಶ್ವವಿದ್ಯಾಲಯದ ಕುಲಪತಿ ಆಗಿದ್ದ ಪ್ರೊ. ನಿರಂಜನ ವಾನಳ್ಳಿ ಅವರು ನವೆಂಬರ್ 30ರಂದು ತಮ್ಮ ನಾಲ್ಕು ವರ್ಷಗಳ ಅಧಿಕಾರ ಅವಧಿ ಪೂರ್ಣಗೊಳಿಸಿ ಮಾತೃ ಇಲಾಖೆಗೆ ಮರಳಿದ್ದರು.


ಪ್ರೊ.ಬಿ.ಕೆ.ರವಿ

ಪ್ರಭಾರ ಕುಲಪತಿ ಆಗಿದ್ದ ವಿಶ್ವವಿದ್ಯಾಲಯದ ಮಂಗಸಂದ್ರ ಗ್ರಾಮದಲ್ಲಿರುವ ಸ್ನಾತಕೋತ್ತರ ಕೇಂದ್ರದ ಪ್ರೊ.ಡಿ. ಕುಮುದಾ ಅವರಿಂದ ಪ್ರೊ.ಬಿ.ಕೆ.ರವಿ ಅಧಿಕಾರ ಸ್ವೀಕರಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಸಂವಹನದ ವಿಭಾಗದ ಮುಖ್ಯಸ್ಥರಾಗಿದ್ದ ಅವರು, ಈ ಹಿಂದೆ ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿಯಾಗಿ ಕೆಲಸ ಮಾಡಿದ್ದಾರೆ. ಇನ್ನೂ ಕೆಲ ತಿಂಗಳ ಅಧಿಕಾರಾವಧಿ ಇತ್ತು. ಅಷ್ಟರಲ್ಲಿ ಮತ್ತೊಂದು ಅವಕಾಶ ಸಿಕ್ಕಿದ್ದು, ನಾಲ್ಕು ವರ್ಷ ಕುಲಪತಿ ಆಗಿರಲಿದ್ದಾರೆ.

ಸಂತ್ರಸ್ತರಿಗೆ ಭವನದಲ್ಲಿ ಆಶ್ರಯ

ಥಣಿಸಂದ್ರ: ಎರಡನೇ ದಿನವೂ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿದ ಬಿಡಿಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್.ಪುರ ಹೋಬಳಿಯ ಥಣಿಸಂದ್ರ ಗ್ರಾಮದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಕಟ್ಟಡಗಳ ತೆರವು ಕಾರ್ಯಾಚರಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಶುಕ್ರವಾರವೂ ಮುಂದುವರಿಸಿದೆ.

ಬೆಂಗಳೂರು ಪೂರ್ವ ತಾಲ್ಲೂಕಿನ ಥಣಿಸಂದ್ರ ಗ್ರಾಮದ ಸರ್ವೆ ನಂ. 28/1 ಮತ್ತು 28/2ರ ಎರಡು ಎಕರೆ ಪ್ರದೇಶದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಮನೆ, ಗೋದಾಮು ಹಾಗೂ ಗ್ಯಾರೇಜ್‌ಗಳನ್ನು ತೆರವುಗೊಳಿಸಿ, ಕೋಟ್ಯಂತರ ರೂಪಾಯಿ ಮೌಲ್ಯದ ಜಾಗವನ್ನು ವಶಪಡಿಸಿಕೊಂಡಿದೆ.

ಇಟ್ಟಿಗೆಗಳ ರಾಶಿ, ಕಬ್ಬಿಣದ ವಸ್ತು, ಫ್ರಿಜ್, ಶಾಲಾ ಬ್ಯಾಗ್, ಹಾಸಿಗೆ ಸೇರಿದಂತೆ ಮನೆಬಳಕೆಯ ವಸ್ತುಗಳು ಚೆಲ್ಲಾಪಿಲ್ಲಿಯಾಗಿದ್ದವು. ಅಂದಾಜು 40 ಕುಟುಂಬಗಳು ಬೀದಿಗೆ ಬಂದಿದ್ದು, ನೂರಾರು ಜನರು ಚಳಿಯಲ್ಲಿಯೇ ದಿನ ಕಳೆಯಬೇಕಾಯಿತು.

‘ಸಂತ್ರಸ್ತರಿಗೆ ಸಮೀಪದ ಸಮುದಾಯ ಭವನದಲ್ಲಿ ಆಶ್ರಯ ಕಲ್ಪಿಸಿದ್ದು, ಮೊಬೈಲ್ ಶೌಚಾಲಯಗಳ ವ್ಯವಸ್ಥೆ ಮಾಡಲಾಗಿದೆ. ಆಹಾರ ಮತ್ತು ಕುಡಿಯುವ ನೀರು ಒದಗಿಸಲಾಗಿದೆ’ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

‘ಗುರುವಾರ ಬೆಳಿಗ್ಗೆ 6 ಗಂಟೆಗೆ ಸಿಬ್ಬಂದಿ ಬಂದು ಮನೆಗಳನ್ನು ನೆಲಸಮ ಮಾಡಲು ಆರಂಭಿಸಿದರು. ಮನೆಯಲ್ಲಿರುವ ವಸ್ತುಗಳನ್ನು ಸ್ಥಳಾಂತರಿಸಲು ಕೇವಲ ಒಂದು ಗಂಟೆ ಸಮಯ ಕೊಡುವಂತೆ ಬೇಡಿಕೊಂಡರೂ ಅನುಮತಿ ನೀಡಲಿಲ್ಲ. ಅಧಿಕಾರಿಗಳು ನಮ್ಮನ್ನು ನಾಯಿಗಳಂತೆ ನಡೆಸಿಕೊಂಡರು’ ಎಂದು ಹತ್ತು ವರ್ಷಗಳಿಂದ ವಾಸಿಸುತ್ತಿದ್ದ ನಿವಾಸಿಯೊಬ್ಬರು ಕಣ್ಣೀರಿಟ್ಟರು.

‘ಮನೆಗಳನ್ನು ನೆಲಸಮಗೊಳಿಸಿದ ಪರಿಣಾಮ ನಾವೆಲ್ಲಾ ಬೀದಿಗೆ ಬಿದ್ದಿದ್ದೇವೆ. ಯಾವ ಸಚಿವರೂ ಸಹಾಯಕ್ಕೆ ಧಾವಿಸಲಿಲ್ಲ. ಮತಗಳು ಬೇಕಾದರೆ ಮಾತ್ರ ಬರುತ್ತಾರೆ. ಅಂಗವಿಕಲರು, ಮಕ್ಕಳು, ಮಹಿಳೆಯರು ಇದ್ದಾರೆ. ನಾವು ಎಲ್ಲಿಗೆ ಹೋಗಬೇಕು? ಸಂಕಷ್ಟದಲ್ಲಿರುವ ನಮಗೆ ದಾರಿ ತೋರಿಸಿ’ ಎಂದು ಬಾಡಿಗೆದಾರ ನಾಸೀರ್ ಅಹಮದ್ ಅಳಲು ತೋಡಿಕೊಂಡರು.

‘ಕಾರ್ಯಾಚರಣೆ ವಿಷಯ ತಿಳಿದು 30 ವರ್ಷಗಳಿಂದ ವಾಸಿಸುತ್ತಿದ್ದ ನಮ್ಮ ಮನೆಯ ಮಾಲೀಕರಿಗೆ ಲಘು ಹೃದಯಾಘಾತವಾಗಿದೆ. ನಾವು ಐದು ವರ್ಷಗಳಿಂದ ಇಲ್ಲಿ ಇದ್ದೇವೆ. ಯಾವುದೇ ಸೂಚನೆ ನೀಡದೆ ಮನೆಗಳನ್ನು ಕೆಡವಿದರು. ಈಗ ಆಹಾರ ಕೊಡುತ್ತೇವೆ ಎನ್ನುತ್ತಿದ್ದಾರೆ. ಆದರೆ, ಮನೆ ಯಾರು ಕೊಡುತ್ತಾರೆ? ಬಾವಿಗಳನ್ನು ಸಹ ಮುಚ್ಚಲಾಗಿದೆ. ಮಕ್ಕಳ ಸ್ನಾನಕ್ಕೂ ನೀರು ಇಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಬಿಡಿಎ ಕಾರ್ಯಾಚರಣೆಯನ್ನು ವಿರೋಧಿಸಿದ ಸ್ಯಾಮುವೆಲ್ ರಾಜ್, ‘ಇದು ಬಿಡಿಎ ಭೂಮಿಯಾಗಿದ್ದರೆ, ಉಪ ನೋಂದಣಾಧಿಕಾರಿ ಮಾರಾಟಕ್ಕೆ ಹೇಗೆ ಅನುಮತಿ ನೀಡಿದರು? ಮಹಾನಗರ ಪಾಲಿಕೆ ತೆರಿಗೆ ಹೇಗೆ ಕಟ್ಟಿಸಿಕೊಂಡಿತು? ವಿದ್ಯುತ್ ಸಂಪರ್ಕಗಳನ್ನು ಹೇಗೆ ನೀಡಿದರು? ಎಂದು ಕೇಳಿದರು.

‘ಜಾಗ ಅರ್ಕಾವತಿ ಬಡಾವಣೆಗೆ ಸ್ವಾಧೀನವಾಗಿದ್ದು’

ಬೆಂಗಳೂರು: ಥಣಿಸಂದ್ರದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಕಟ್ಟಡಗಳನ್ನು ತೆರವು ಮಾಡಿ, ಜಾಗವನ್ನು ವಶಕ್ಕೆ ಪಡೆಯಲಾಗಿದ್ದು, ಇದನ್ನು ಅರ್ಕಾವತಿ ಬಡಾವಣೆಗಾಗಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ. 2023ರಲ್ಲಿ ಪ್ರಾಥಮಿಕ ಅಧಿಸೂಚನೆ ಹಾಗೂ 2024ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸ್ಪಷ್ಟಪಡಿಸಿದೆ.

2024ರಲ್ಲಿ ಒಂದು ಸುತ್ತಿನ ಒತ್ತುವರಿ ತೆರವುಗೊಳಿಸಿ, ಆಸ್ತಿ ಒಡೆತನವನ್ನು ಪಡೆದುಕೊಳ್ಳಲಾಗಿದೆ. ಈ ಸಂಬಂಧ ಭೂ ಮಾಲೀಕರು ಪರಿಹಾರವನ್ನು ಪಡೆದುಕೊಂಡಿದ್ದಾರೆ. 2014ರಲ್ಲಿ ಈ ಬಗ್ಗೆ ಹೈಕೋರ್ಟ್ ಆದೇಶವನ್ನು ಸಹ ಹೊರಡಿಸಿದೆ. 2021ರಲ್ಲಿ ಅರ್ಕಾವತಿ ಬಡಾವಣೆಗೆ ಸಂಬಂಧಿಸಿ ಹೈಕೋರ್ಟ್ ಆದೇಶ ಹೊರಡಿಸಿತ್ತು. ಇದರ ಹೊರತಾಗಿಯೂ, ಭೂಮಾಲೀಕರು ಅಕ್ರಮವಾಗಿ ನಿವೇಶನಗಳನ್ನು ನಿರ್ಮಿಸಿ, ಮಾರಾಟ ಮಾಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ನಿವೇಶನ ಖರೀದಿಸಿದ 33 ಮಂದಿ ನ್ಯಾಯಾಲಯ ನೇಮಿಸಿದ ಕೇಶವ ನಾರಾಯಣ ಸಮಿತಿಯಲ್ಲಿ ಪ್ರಕರಣ ದಾಖಲಿಸಿದರು. ಸಮಿತಿಯು ನೋಟಿಸ್ ನೀಡಿ, ವಿಚಾರಣೆ ನಡೆಸಿ, ಅವುಗಳನ್ನು ಅಕ್ರಮ ಎಂದು 2023ರಲ್ಲಿ ಘೋಷಿಸಿ, ಪ್ರಾಧಿಕಾರದ ಸುಪರ್ದಿಗೆ ಪಡೆದುಕೊಳ್ಳುವಂತೆ ನಿರ್ದೇಶನ ನೀಡಿತು ಎಂದು ತಿಳಿಸಿದ್ದಾರೆ.

ಈ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು, ಪರಿಹಾರ ಪಾವತಿಸಲಾಗಿದೆ. ನ್ಯಾಯಾಲಯ ಮತ್ತು ಪರಿಶೀಲನಾ ಸಮಿತಿಯಲ್ಲಿ ಬಿಡಿಎ ಪರವಾಗಿ ನಿರ್ಧಾರವಾಗಿದೆ. ನಿವೇಶನ ಮಾಲೀಕರಿಗೆ ನೋಟಿಸ್ ನೀಡಿ, ವಿಚಾರಣೆ ನಡೆಸಲಾಗಿದೆ. ಭೂ ಮಾಲೀಕರು ಬಿಡಿಎಗೆ ಸೇರಿದ ಭೂಮಿಯಲ್ಲಿ ಅಕ್ರಮವಾಗಿ ಶೆಡ್‌ಗಳನ್ನು ನಿರ್ಮಿಸಿ, ಬಾಡಿಗೆ ಸಂಗ್ರಹಿಸುತ್ತಿದ್ದರು ಎಂದಿದ್ದಾರೆ.


ಥಣಿಸಂದ್ರದಲ್ಲಿ ಅಕ್ರಮ ಮನೆಗಳನ್ನು ನೆಲಸಮಗೊಳಿಸಿದ್ದು, ಅವಶೇಷಗಳಡಿ ಗೃಹೋಪಯೋಗಿ ವಸ್ತುಗಳಿಗೆ ಹುಡುಕಾಟ ನಡೆಸಿದ ಸಂತ್ರಸ್ತರು —ಪ್ರಜಾವಾಣಿ ಚಿತ್ರ: ಬಿ.ಕೆ.ಜನಾರ್ದನ

ಬೃಹತ್ ಮೈಸೂರು ಮಹಾನಗರ ಪಾಲಿಕೆ: ಸರ್ಕಾರಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಜಿಲ್ಲೆಯ 341.44 ಚದರ ಕಿ.ಮೀ ವ್ಯಾಪ್ತಿಯೊಳಗೆ ಬರುವ ನಗರಸಭೆ, ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳನ್ನು ಮೈಸೂರು ಮಹಾನಗರ ಪಾಲಿಕೆಗೆ ಸೇರ್ಪಡೆಗೊಳಿಸಿ ‘ಬೃಹತ್ ಮೈಸೂರು ಮಹಾನಗರ ಪಾಲಿಕೆ’ ಎಂದು ಮರುನಾಮಕರಣ ಮಾಡಿ ಆದೇಶ ಹೊರಡಿಸಲಾಗಿದೆ.

ಬೃಹತ್ ಮೈಸೂರು ಮಹಾನಗರ ಪಾಲಿಕೆಗೆ ಸೇರ್ಪಡೆಗೊಂಡ ಪ್ರದೇಶಗಳು: ಮೈಸೂರು ಮಹಾನಗರ ಪಾಲಿಕೆ, ಹೂಟಗಳ್ಳಿ ನಗರಸಭೆ, ಶ್ರೀರಾಂಪುರ, ರಮ್ಮನಹಳ್ಳಿ, ಕಡಕೊಳ, ಬೋಗಾದಿ ಪಟ್ಟಣ ಪಂಚಾಯಿತಿಗಳು, ಚಾಮುಂಡಿಬೆಟ್ಟ ಗ್ರಾಮ ಪಂಚಾಯಿತಿ (ಪೂರ್ಣ), ಆಲನಹಳ್ಳಿ ಗ್ರಾಮ ಪಂಚಾಯಿತಿಯ ಆಲನಹಳ್ಳಿ, ಲಲಿತಾದ್ರಿಪುರ ಗ್ರಾಮಗಳು, ಸಿದ್ದಲಿಂಗಪುರ ಗ್ರಾಮ ಪಂಚಾಯಿತಿಯ ಸಿದ್ದಲಿಂಗಪುರ, ಬೆಲವತ್ತ, ಕೆಸರೆ, ಮೇಟಗಳ್ಳಿ ಗ್ರಾಮಗಳು.

ಇಲವಾಲ ಗ್ರಾಮ ಪಂಚಾಯಿತಿಯ ಇಲವಾಲ, ಕರಕನಹಳ್ಳಿ, ಮೈದನಹಳ್ಳಿ, ಮೇಗಳಾಪುರ ಗ್ರಾಮಗಳು, ಧನಗಳ್ಳಿ ಗ್ರಾಮ ಪಂಚಾಯಿತಿಯ ಧನಗಳ್ಳಿ, ಯಡಹಳ್ಳಿ, ಕೆಂಚಲಗೂಡು, ಹಾಲಾಳು, ಚೌಡಹಳ್ಳಿ (ಕೋಟೆಹುಂಡಿ) ಗ್ರಾಮಗಳು. ಮಲ್ಲಹಳ್ಳಿ (ಬೀರಿಹುಂಡಿ) ಗ್ರಾಮ ಪಂಚಾಯಿತಿಯ ಮಲ್ಲಹಳ್ಳಿ–ಬೀರಿ ಹುಂಡಿ, ಗೋಹಳ್ಳಿ, ಕುಮಾರಬೀಡು, ಬಲ್ಲಹಳ್ಳಿ ಗ್ರಾಮಗಳು, ನಾಗನಹಳ್ಳಿ ಗ್ರಾಮ ಪಂಚಾಯಿತಿಯ ಶ್ಯಾದನಹಳ್ಳಿ, ನಾಗವಾಲ ಗ್ರಾಮ ಪಂಚಾಯಿತಿಯ ನಾಗವಾಲ, ಬೊಮ್ಮನ ಹಳ್ಳಿ, ಹುಯಿಲಾಳು ಗ್ರಾಮಗಳು.

ಈ ಕುರಿತು ಯಾವುದೇ ಆಕ್ಷೇಪಣೆ, ಸಲಹೆಗಳಿದ್ದಲ್ಲಿ 30 ದಿನಗಳೊಳಗೆ ಲಿಖಿತವಾಗಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, 9 ನೇ ಮಹಡಿ,ವಿ.ವಿ.ಗೋಪುರ, ಬೆಂಗಳೂರು ಇವರಿಗೆ ಸಲ್ಲಿಸಬಹುದು.

4.15 ಎಕರೆ ಭೂಮಿ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ₹6.26 ಕೋಟಿ ಮೌಲ್ಯದ 4.15 ಎಕರೆ ಜಮೀನನ್ನು ಶುಕ್ರವಾರ ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿದೆ.

‘ಒತ್ತುವರಿಯಾಗಿದ್ದ ಸ್ಮಶಾನ, ಓಣಿದಾರಿ, ರಾಜಕಾಲುವೆ, ಕುಂಟೆ, ಖರಾಬು, ಸರ್ಕಾರಿ ಬಿ ಖರಾಬು, ಸರ್ಕಾರಿ ಪಡ ಜಾಗಗಳಿಗೆ ವಿವಿಧ ತಾಲ್ಲೂಕುಗಳ ತಹಶೀಲ್ದಾರ್‌ಗಳು ಭೇಟಿ ನೀಡಿ ತೆರವು ಕಾರ್ಯಾಚರಣೆ ಕೈಗೊಂಡರು’ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ ತಿಳಿಸಿದ್ದಾರೆ.

ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್. ಪುರ ಹೋಬಳಿಯ ನಾಗೊಂಡನಹಳ್ಳಿಯ ಸ.ನಂ 21ರ ಸ್ಮಶಾನ ಜಾಗ 0.4 ಗುಂಟೆ ಒತ್ತುವರಿ ತೆರವುಗೊಳಿಸಿದ್ದು, ಅಂದಾಜು ಮೌಲ್ಯ ₹1 ಕೋಟಿಯಾಗಿದೆ.

ಆನೇಕಲ್ ತಾಲ್ಲೂಕಿನ ಬೆಸ್ತಮಾರನಹಳ್ಳಿ ಗ್ರಾಮದ ಸ.ನಂ. 25,26,27,30,24,25ರ ಮಧ್ಯದ ಜಾಗ, ಓಣಿ ದಾರಿ ಅಂದಾಜು ₹80 ಲಕ್ಷ ಮೌಲ್ಯದ ಒಂದು ಎಕರೆ ಒತ್ತುವರಿ ತೆರವುಗೊಳಿಸಲಾಗಿದೆ.

ಅತ್ತಿಬೆಲೆ ಹೋಬಳಿಯ ಇಂಡ್ಲಬೆಲೆ ಗ್ರಾಮದ ಸ.ನಂ 128, 129, 130 ರಾಜಕಾಲುವೆ ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.30 ಗುಂಟೆ. ಇದರ ಅಂದಾಜು ಮೌಲ್ಯ ₹ 60 ಲಕ್ಷ. ಇದಲ್ಲದೇ ಹೆಬ್ಬಗೋಡಿ ಗ್ರಾಮ ಸ.ನಂ 90 ರ ಅಂದಾಜು ₹90 ಲಕ್ಷ ಮೌಲ್ಯದ ಕುಂಟೆ 0.28 ಗುಂಟೆ ಒತ್ತುವರಿ ತೆರವುಗೊಳಿಸಲಾಗಿದೆ.

ಸರ್ಜಾಪುರ ಹೋಬಳಿಯ ಚಿಕ್ಕನಾಗಮಂಗಲ ಗ್ರಾಮದ ಸ.ನಂ. 177 ರ ಖರಾಬು ಒಟ್ಟು 0.10 ಗುಂಟೆ ಒತ್ತುವರಿ ತೆರವುಗೊಳಿಸಲಾಗಿದೆ. ಇದರ ಅಂದಾಜು ಮೌಲ್ಯ ₹ 1 ಕೋಟಿ. ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರಕೆರೆ ಹೋಬಳಿಯ ಕುರುಬರಹಳ್ಳಿ ಗ್ರಾಮದ ಸ.ನಂ 198ರ ಸರ್ಕಾರಿ ಬಿ ಖರಾಬು 0.23 ಗುಂಟೆ ಒತ್ತುವರಿ ತೆರವುಗೊಳಿಸಲಾಗಿದೆ. ಅಂದಾಜು ಮೌಲ್ಯ ₹ 46 ಲಕ್ಷ. ಬೇಗೂರು ಹೋಬಳಿಯ ಬೆಟ್ಟದಾಸನಪುರ ಗ್ರಾಮದ ಸ.ನಂ 16ರ ಅಂದಾಜು ಮೌಲ್ಯ ₹ 1.50 ಕೋಟಿ ಅಂದಾಜು ಮೌಲ್ಯದ ಒಂದು ಎಕರೆ ಸರ್ಕಾರಿ ಪಡ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಸಾಹಿತ್ಯ ಪರಿಷತ್ ಚಟುವಟಿಕೆ ಮುಂದುವರಿಸಿ: ಸಿ.ಎಂ.ಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್‌ನ ಚಟುವಟಿಕೆಗಳು ಮುಂದುವರಿಯುವಂತೆ ಪೂರಕವಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾ ಘಟಕಗಳ ಅಧ್ಯಕ್ಷರು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಪ್ರಕಾಶ ಮೂರ್ತಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬರೆದಿರುವ ಪತ್ರ ಬರೆದಿದ್ದು, 11 ಜಿಲ್ಲಾ ಘಟಕಗಳ ಅಧ್ಯಕ್ಷರು ಇದಕ್ಕೆ ಸಹಿ ಮಾಡಿದ್ದಾರೆ.

ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಸಮ್ಮೇಳನಗಳು ನಡೆಯು ವಂತೆ ಅನುದಾನ ಬಿಡುಗಡೆ ಮಾಡಬೇಕು ಹಾಗೂ ಬಾಕಿ ಇರುವ ಅನುದಾನವನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಈಗಾಗಲೇ ಘೋಷಣೆಯಾಗಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಕಾರ್ಯಕಾರಿ ಸಮಿತಿ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿದ್ದು, ಇದೇ ಆರ್ಥಿಕ ವರ್ಷದಲ್ಲಿ ಸಮ್ಮೇಳನ ಆಯೋಜಿಸಲು ಕ್ರಮ ಕೈಗೊಳ್ಳಬೇಕು. ಅದಕ್ಕೆ ಒತ್ತಾಸೆಯಾಗಿ ನಾವೆಲ್ಲರೂ ಒಮ್ಮತದಿಂದ ಸಹಕರಿಸುತ್ತೇವೆ ಎಂದಿದ್ದಾರೆ.

ಪರಿಷತ್‌ನ ಕೇಂದ್ರ ಕಚೇರಿ ಸಿಬ್ಬಂದಿಗೆ ಸುಮಾರು ನಾಲ್ಕು ತಿಂಗಳ ವೇತನ ಬಿಡುಗಡೆ ಮಾಡಬೇಕು. ಪರಿಷತ್‌ನಲ್ಲಿ ನಡೆದಿದೆ ಎನ್ನಲಾದ ಆರ್ಥಿಕ ವ್ಯವಹಾರಗಳಿಗೆ ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರು ಹೊಣೆಗಾರರು ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಒಂದು ವೇಳೆ ಆರ್ಥಿಕ ಅವ್ಯವಹಾರಗಳು ನಡೆದಿದ್ದಲ್ಲಿ ಜಿಲ್ಲಾ ಘಟಕದ ಅಧ್ಯಕ್ಷರು ಹೊಣೆಗಾರರಲ್ಲ. ಈ ಸಂಬಂಧ ಈಗಾಗಲೇ ವಿಚಾರಣಾಧಿಕಾರಿಗಳು ನೀಡಿದ್ದ ನೋಟಿಸ್‌ಗೆ ಉತ್ತರ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಉಮಾ ಅನಂತ್, ಸಂತೋಷ ಚಿನಗುಡಿಗೆ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮಾಧ್ಯಮ ಅಕಾಡೆಮಿಯು 2025ನೇ ಸಾಲಿನ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ‘ಸುಧಾ’ ವಾರಪತ್ರಿಕೆ ಮುಖ್ಯ ಉಪ ಸಂಪಾದಕಿ ಉಮಾ ಅನಂತ್ ಅವರು ಮಾಧ್ಯಮ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ, ‘ಪ್ರಜಾವಾಣಿ’ಯ ಬೆಳಗಾವಿ ಜಿಲ್ಲಾ ಹಿರಿಯ ವರದಿಗಾರ ಸಂತೋಷ ಜಿ.ಚಿನಗುಡಿ ಅವರು ‘ಮೈಸೂರು ದಿಗಂತ ದತ್ತಿ ಪ್ರಶಸ್ತಿ’ಗೆ ಆಯ್ಕೆಯಾಗಿದ್ದಾರೆ.


ಉಮಾ ಅನಂತ್


ಸಂತೋಷ ಈ. ಚಿನಗುಡಿ

ಪತ್ರಕರ್ತೆ ಸರಿತಾ ರೈ ಅವರು ಅಕಾಡೆಮಿಯ ವಾರ್ಷಿಕ ವಿಶೇಷ ಪ್ರಶಸ್ತಿಗೆ ಆಯ್ಕೆಯಾಗಿದ್ದು, ಪ್ರಶಸ್ತಿಯು ಫಲಕ ಮತ್ತು ₹1 ಲಕ್ಷ ನಗದು ಒಳಗೊಂಡಿದೆ.

ವಾರ್ಷಿಕ ಪ್ರಶಸ್ತಿ: ಡಿ.ಕುಮಾರಸ್ವಾಮಿ, ಬನಶಂಕರ ಆರಾಧ್ಯ, ಹೇಮಾ ವೆಂಕಟ್, ಮಂಜುನಾಥ್ ವೈ.ಎಲ್., ಅನಂತ ನಾಡಿಗ್, ಗುರುರಾಜ್ ವಾಮನರಾವ್ ಜಮಖಂಡಿ, ಎಂ.ಎಂ.ಪಾಟೀಲ್, ಎಲ್.ವಿವೇಕಾನಂದ, ಆರ್.ಪಿ.ಭರತ್‌ರಾಜ್ ಸಿಂಗ್, ಪ್ರೊ.ಪೂರ್ಣಾನಂದ, ಮೊಹಮ್ಮದ್ ಅಸದ್, ತುಂಗರೇಣುಕ, ಮೊಹಿಯುದ್ದೀನ್ ಪಾಷಾ, ರುದ್ರಪ್ಪ ಅಸಂಗಿ, ಸತೀಶ್ ಆಚಾರ್ಯ.

ಸೋಮಶೇಖರ್ ಪಡುಕೆರೆ, ಗುಲ್ನಾರ್ ಮಿರ್ಝಾ, ಗಣೇಶ ಹೆಗಡೆ ಇಟಗಿ, ಆರತಿ ಎಚ್.ಎನ್., ಕೆ.ಲಕ್ಷ್ಮಣ, ಮಂಜುನಾಥ ಮಹಾಲಿಂಗಪೂರ, ಮಂಜುನಾಥ ಟಿ., ಮಲ್ಲಿಕಾಚರಣವಾಡಿ, ಪ್ರತಿಮಾ ನಂದಕುಮಾರ್, ಅಮಿತ್ ಉಪಾಧ್ಯೆ, ಪ್ರಭುಸ್ವಾಮಿ ನಟೇಕರ್, ಸಿದ್ದೇಗೌಡ ಎನ್., ಸಂಜೀವ ಕಾಂಬ್ಳೆ, ನೀಲಕಂಠ ಕೆ.ಆರ್.

ವಾರ್ಷಿಕ ಪ್ರಶಸ್ತಿಯು ₹50 ಸಾವಿರ ನಗದು ಮತ್ತು ಫಲಕ ಒಳಗೊಂಡಿದೆ.

ದತ್ತಿ ಪ್ರಶಸ್ತಿಗಳು: ಡಾ.ಬಿ.ಆರ್.ಅಂಬೇಡ್ಕರ್ ಮೂಕನಾಯಕ ದತ್ತಿ–ಎ.ನಾರಾಯಣ, ಅರಗಿಣಿ ದತ್ತಿ–ಚೇತನ್ ನಾಡಿಗೇರ, ಬಸವರಾಜ ದೊಡ್ಡಮನಿ ಕೃಷಿ ಪತ್ರಿಕೋದ್ಯಮ ಪ್ರಶಸ್ತಿ–ಸಿದ್ದೇಶ್ ತ್ಯಾಗಟೂರು, ಸಿ.ವಿ.ರಾಜಗೋಪಾಲ್ ದತ್ತಿ–ಪ್ರಹ್ಲಾದ್ ಕುಳಲಿ, ಕೆಯುಡಬ್ಲ್ಯುಜೆ ದತ್ತಿ–ಕೆ.ಆನಂದ ಶೆಟ್ಟಿ.

ಆಂದೋಲನ ದತ್ತಿ–ಕೊಪ್ಪಳದ ಸುವರ್ಣಗಿರಿ ಪತ್ರಿಕೆ, ಅಭಿಮಾನಿ ದತ್ತಿ– ಶಿವು ಹುಣಸೂರು, ಅಭಿಮನ್ಯು ದತ್ತಿ–ಚಂದ್ರಶೇಖರ ಬೆನ್ನೂರು, ಪ್ರಜಾ ಸಂದೇಶದತ್ತಿ–ನಾಗರಾಜು ವೈ.

ಆರ್ಥಿಕ ಸ್ಥಿತಿ ಸುಧಾರಣೆಗೆ ಗೃಹಲಕ್ಷ್ಮಿ ಡಿಜಿಟಲ್ ಮಾರ್ಕೆಟಿಂಗ್: ಲಕ್ಷ್ಮೀ ಹೆಬ್ಬಾಳಕರ

‘ಕರ್ಮಣಿ ಉತ್ಸವ’ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ತ್ರೀ ಶಕ್ತಿ ಸ್ವ ಸಹಾಯ ಗುಂಪುಗಳು ಉತ್ಪಾದಿಸಿದ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ ‘ಕರ್ಮಣಿ ಉತ್ಸವ-2026’ಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಅಭಿವೃದ್ಧಿ ನಿಗಮ ಶುಕ್ರವಾರ ರಾಜಾಜಿನಗರದ ಶ್ರೀರಾಮಮಂದಿರ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಮೂರು ದಿನಗಳ ಉತ್ಸವವನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಿದರು.

ಇದೇ ವೇಳೆ ಮಹಿಳಾ ಉದ್ಯಮಗಳ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ‘ಗೃಹ ಲಕ್ಷ್ಮೀ ಡಿಜಿಟಲ್ ಮಾರ್ಕೆಟಿಂಗ್ ಆ್ಯಪ್’ ಹಾಗೂ ಕರ್ಮಣಿ ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು.

ಡಿ.ಕೆ.ಶಿವಕುಮಾರ್ ಮಾತನಾಡಿ, ‘ಹೆಣ್ಣು ಕುಟುಂಬದ ಕಣ್ಣು ಎಂದು ಸರ್ಕಾರ ಭಾವಿಸಿ ಶಕ್ತಿ ತುಂಬುವ ಕೆಲಸ ಮಾಡಿದೆ. ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಅನೇಕ ಕಾರ್ಯಕ್ರಮ ರೂಪಿಸಲಾಗಿದೆ’ ಎಂದರು.

‘ಕೆಂಪೇಗೌಡ ಕಟ್ಟಿದ ಬೆಂಗಳೂರಿಗೆ ಹೊಸ ರೂಪ ನೀಡಲಾಗಿದೆ. ಬೆಂಗಳೂರು ನಗರ ಬೆಳೆಯುತ್ತಿದ್ದು, ಐ.ಟಿ. ಕ್ಷೇತ್ರದಲ್ಲಿ 25 ಲಕ್ಷ ಮಂದಿ ಕೆಲಸ ಮಾಡುತ್ತಿದ್ದಾರೆ. ಒಂದೂವರೆ ಲಕ್ಷ ಕೋಟಿ ರೂಪಾಯಿ ವೆಚ್ಚದ ಕಾಮಗಾರಿಗಳು ನಗರದಲ್ಲಿ ನಡೆಯುತ್ತಿವೆ’ ಎಂದು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಮಾತನಾಡಿ, ‘ಮಹಿಳೆಯರ ಆರ್ಥಿಕ ಸುಧಾರಣೆಗೆ ಗೃಹಲಕ್ಷ್ಮಿ ಡಿಜಿಟಲ್ ಮಾರ್ಕೆಟಿಂಗ್ ಅನುಕೂಲ ಆಗಲಿದೆ. ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳು ಇದರ ಸದುಪಯೋಗ ಪಡಿಸಿಕೊಳ್ಳಬೇಕು’ ಎಂದು ಕರೆ ನೀಡಿದರು.

ಡಿಜಿಟಲ್ ಮಾರ್ಕೆಟಿಂಗ್ ಗ್ರಾಮಾಂತರ ಮಹಿಳೆಯರಿಗೆ ಅನುಕೂಲ ಆಗಲಿದೆ, ಮುಂದಿನ ದಿನಗಳಲ್ಲಿ ಆ್ಯಪ್ ಬಗ್ಗೆ ತಿಳಿಸಲು ಕಾರ್ಯಾಗಾರ ಹಮ್ಮಿಕೊಳ್ಳಲಾಗುವುದು ಎಂದರು.

ಮಹಿಳಾ ಸಬಲೀಕರಣಕ್ಕಾಗಿ ಕರ್ಮಣಿ ಉತ್ಸವ, ಗೃಹಲಕ್ಷ್ಮಿ ಡಿಜಿಟಲ್ ಅನಾವರಣ ಮಾಡಲಾಗಿದೆ. ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಸರ್ಕಾರ ಎಲ್ಲಾ ರೀತಿಯ ಕೆಲಸ ಮಾಡುತ್ತಿದೆ ಎಂದರು.

ಸಚಿವ ರಾಮಲಿಂಗಾರೆಡ್ಡಿ, ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ, ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪದ್ಮಾವತಿ, ಚಿತ್ರನಟಿ ರಾಗಿಣಿ ದ್ವಿವೇದಿ, ಮಹಿಳಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಬಾಬು, ಸಚಿವರ ವಿಶೇಷ ಕರ್ತವ್ಯಾಧಿಕಾರಿ ಬಿ.ಎಚ್. ನಿಶ್ಚಲ್ ಉಪಸ್ಥಿತರಿದ್ದರು.


ರಾಜಾಜಿನಗರದಲ್ಲಿ ಏರ್ಪಡಿಸಿದ್ದ ‘ಕರ್ಮಣಿ ಉತ್ಸವ’ದ ಉದ್ಘಾಟನೆ ನೆರವೇರಿಸಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಳಿಗೆಗಳಿಗೆ ಭೇಟಿ ನೀಡಿ ಕರಕುಶಲ ಉತ್ಪನ್ನಗಳನ್ನು ವೀಕ್ಷಿಸಿದರು. ಲಕ್ಷ್ಮೀ ಹೆಬ್ಬಾಳಕರ, ಜಿ. ಪದ್ಮಾವತಿ, ಪುಟ್ಟಣ್ಣ, ರಾಮಲಿಂಗಾರೆಡ್ಡಿ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

prajavani.net prajavani
ಶನಿವಾರ, ಜನವರಿ 10, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 10 | ಪುಟ 24
www.prajavani.net



ವೈಕುಂಠ ದ್ವಾರ ದರ್ಶನ
ವೈಕುಂಠ ಏಕಾದಶಿ ಅಂಗವಾಗಿ ಡಿ.30ರಿಂದ ಜ.8ರವರೆಗೆ ನಡೆದ 'ವೈಕುಂಠ ದ್ವಾರ ದರ್ಶನ'ದಲ್ಲಿ ದಾಖಲೆ ಪ್ರಮಾಣದ 7.83 ಲಕ್ಷ ಭಕ್ತರು ತಿರುಪತಿ ತಿರುಮಲ ವೆಂಕಟೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದರು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 83,576 | ನಿಫ್ಟಿ 25,683 | $/₹ 90.18 | ಚಿನ್ನ (Std. 10g) ₹1,42,850 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,54,900 (ಬೆಂಗಳೂರು)

ಭಾರತ–ಅಮೆರಿಕ: ಭಿನ್ನ ಸ್ವರ ತಾರಕ

ಭಾರತವು ರಷ್ಯಾದಿಂದ ಕಚ್ಚಾ ತೈಲ ಖರೀದಿಸಲು ಆರಂಭಿಸಿದ ಬಳಿಕ ಅಮೆರಿಕದ ಜೊತೆಗಿನ ಸಂಬಂಧದಲ್ಲಿ ಬಿರುಕು ಕಾಣಿಸಿಕೊಂಡಿದೆ. ಅಮೆರಿಕದ ಅಧ್ಯಕ್ಷ ಟ್ರಂಪ್ ಅವರು ಭಾರತದಿಂದ ರಫ್ತಾಗುವ ಸರಕುಗಳ ಮೇಲೆ ಶೇ 50ರಷ್ಟು ಸುಂಕ ಹೇರಿದ್ದಾರೆ. ಶೇ 500ರಷ್ಟು ಸುಂಕ ಹೇರುವ ಮಸೂದೆಗೂ ಒಪ್ಪಿಗೆ ನೀಡಿದ್ದಾರೆ. ಇದರಿಂದಾಗಿ, ಹಲವು ಸುತ್ತಿನ ಮಾತುಕತೆ ನಡೆದರೂ ವ್ಯಾಪಾರ ಒಪ್ಪಂದ ಅಂತಿಮಗೊಂಡಿಲ್ಲ. ಈಗ ಈ ಕುರಿತು ಅಮೆರಿಕ ಮತ್ತು ಭಾರತ ಭಿನ್ನ ಸ್ವರದಲ್ಲಿ ಹೇಳಿಕೆ ನೀಡಿವೆ

'ಕರೆ ಮಾಡದ ಮೋದಿ; ಆಗದ ಒಪ್ಪಂದ'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ದೂರವಾಣಿ ಕರೆ ಮಾಡಿ ಮಾತನಾಡದ ಕಾರಣಕ್ಕೆ ಎರಡೂ ದೇಶಗಳ ನಡುವಣ ವ್ಯಾಪಾರ ಒಪ್ಪಂದ ವಿಳಂಬವಾಗಿದೆ ಎಂದು ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹವಾರ್ಡ್ ಲಟ್ನಿಕ್ ಶುಕ್ರವಾರ ಹೇಳಿದ್ದಾರೆ.

ಕಳೆದ ವರ್ಷ ಹಲವು ಸುತ್ತು ಮಾತುಕತೆಗಳು ನಡೆದರೂ ಒಪ್ಪಂದ ಅಂತಿಮಗೊಳಿಸಲು ಸಾಧ್ಯವಾಗಲಿಲ್ಲ. ಜೊತೆಗೆ, ಭಾರತದಿಂದ ರಫ್ತಾಗುವ ಸರಕುಗಳ ಮೇಲೆ ಶೇ 50ರಷ್ಟು ಸುಂಕವನ್ನು ಟ್ರಂಪ್ ಹೇರಿದರು.



'ಎಲ್ಲವೂ ತೀರ್ಮಾನವಾಗಿತ್ತು. ಮೋದಿ ಅವರು ಅಧ್ಯಕ್ಷರಿಗೆ ಕರೆ ಮಾಡಬೇಕಿತ್ತು. ಆದರೆ ಅವರು ಅದನ್ನು ಮಾಡಲಿಲ್ಲ' ಎಂದು ಲಟ್ನಿಕ್ ಅವರು ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ರಷ್ಯಾದಿಂದ ಕಚ್ಚಾ ತೈಲ ಖರೀದಿಯನ್ನು ಕಡಿತಗೊಳಿಸದೇ ಇದ್ದರೆ ಇನ್ನಷ್ಟು ಹೆಚ್ಚು ಸುಂಕ ಹೇರಲಾಗುವುದು ಎಂದು ಟ್ರಂಪ್ ಈ ವಾರ ಎಚ್ಚರಿಕೆ ನೀಡಿದ್ದಾರೆ. ಹೀಗಾಗಿ ಒಪ್ಪಂದವನ್ನು ಆದಷ್ಟು ಬೇಗ ಅಂತಿಮಗೊಳಿಸುವ ಒತ್ತಡ ಸೃಷ್ಟಿಯಾಗಿದೆ. ಇದರಿಂದಾಗಿ ಡಾಲರ್ ಎದುರು ರೂಪಾಯಿ ಮೌಲ್ಯ ದಾಖಲೆ ಮಟ್ಟಕ್ಕೆ ಕುಸಿದಿದೆ. ಬಹು ಕಾಲದಿಂದ ಅಪೂರ್ಣವಾಗಿಯೇ ಉಳಿದಿರುವ ವ್ಯಾಪಾರ ಒಪ್ಪಂದವು ಪೂರ್ಣಗೊಳ್ಳಲು ಹೂಡಿಕೆದಾರರು ಕಾಯುತ್ತಿದ್ದಾರೆ.

▸9

ತಪ್ಪು ಮಾಹಿತಿ– ಭಾರತ ತಿರುಗೇಟು

ಲಟ್ನಿಕ್ ಅವರ ಹೇಳಿಕೆಯು 'ನಿಖರವಲ್ಲ' ಎಂದು ಭಾರತ ಪ್ರತಿಕ್ರಿಯೆ ನೀಡಿದೆ. ಎರಡು ಪರಸ್ಪರ ಪೂರಕ ಅರ್ಥ ವ್ಯವಸ್ಥೆಗಳ ನಡುವೆ 'ಪರಸ್ಪರ ಪ್ರಯೋಜನಕಾರಿ' ಯಾದ ವ್ಯಾಪಾರ ಒಪ್ಪಂದ ಏರ್ಪಡಲಿ ಎಂಬುದನ್ನು ಭಾರತವು ಎದುರು ನೋಡುತ್ತಿದೆ ಎಂದು ಭಾರತ ಹೇಳಿದೆ.

ಮೋದಿ ಅವರು ಟ್ರಂಪ್ ಅವರ ಜೊತೆಗೆ ದೂರವಾಣಿ ಕರೆ ಮಾಡಿ ಮಾತನಾಡಿಲ್ಲ ಎಂಬುದೂ ಸರಿಯಲ್ಲ. 2025ರಲ್ಲಿ ಇಬ್ಬರು ನಾಯಕರು ಎಂಟು ಬಾರಿ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಾರೆ ಎಂದು ಭಾರತ ಹೇಳಿದೆ.

ಭಾರತದಿಂದ ರಫ್ತಾಗುವ ಸರಕುಗಳ ಮೇಲೆ ಟ್ರಂಪ್ ಅವರು ಶೇ 50ರಷ್ಟು ಸುಂಕ ಹೇರಿದ ನಂತರ ಎರಡೂ ದೇಶಗಳ ನಡುವೆ ಮನಸ್ತಾಪ ಕಾಣಿಸಿಕೊಂಡಿದೆ. ಟ್ರಂಪ್ ಅವರನ್ನು ಮೋದಿ ಅವರು 2025ರ ಫೆಬ್ರುವರಿ 13ರಂದು ಶ್ವೇತಭವನದದಲ್ಲಿ ಭೇಟಿಯಾದ ಸಂದರ್ಭದಲ್ಲಿ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ನಿರ್ಧಾರಕ್ಕೆ ಬರಲಾಗಿತ್ತು.

▸9



ಬೇರೆ ದೇಶಗಳು ಒಪ್ಪಂದಗಳನ್ನು ಕಾರ್ಯಗತಗೊಳಿಸುತ್ತಿದ್ದವು. ಭಾರತ ಮಾತ್ರ ಸರತಿಯಲ್ಲಿ ಹಿಂದುಳಿಯಿತು. ವ್ಯಾಪಾರ ಒಪ್ಪಂದವೆಂಬುದು ಉಭಯ ರಾಷ್ಟ್ರಗಳಿಗೆ ಅನುಕೂಲಕರವಾಗಿ ಏರ್ಪಡುತ್ತದೆ
ಹವಾರ್ಡ್ ಲಟ್ನಿಕ್, ಅಮೆರಿಕದ ವಾಣಿಜ್ಯ ಕಾರ್ಯದರ್ಶಿ



ಲಟ್ನಿಕ್ ಅವರು ಈಗ ನೀಡಿರುವ ಮಾಹಿತಿಯೇ ತಪ್ಪು. ನಾವು ಈಗಲೂ ಉಭಯ ರಾಷ್ಟ್ರಗಳಿಗೆ ಅನುಕೂಲಕರವಾಗುವ ವ್ಯಾಪಾರ ಒಪ್ಪಂದ ಮಾಡಲು ಆಸಕ್ತಿ ಹೊಂದಿದ್ದು, ಶೀಘ್ರದಲ್ಲಿ ಮತುಕತೆಗೆ ಎದುರುನೋಡುತ್ತಿದ್ದೇವೆ
ರಣಧೀರ್ ಜೈಸ್ವಾಲ್, ವಿದೇಶಾಂಗ ಸಚಿವಾಲಯದ ವಕ್ತಾರ



ಆಲಿಂಗಿಸಿದರೂ ಸಿಗದ ಫಲ– ಕಾಂಗ್ರೆಸ್ ಟೀಕೆ

ಉಭಯ ರಾಷ್ಟ್ರಗಳ ನಡುವಿನ ವ್ಯಾಪಾರ ಒಪ್ಪಂದದ ಕುರಿತು ಹವಾರ್ಡ್ ಲಟ್ನಿಕ್ ಹೇಳಿಕೆ ನೀಡಿದ ಬೆನ್ನಲ್ಲೇ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಾಂಗ್ರೆಸ್ ಸಿನಿಮಾ ಸಂಭಾಷಣೆ ಶೈಲಿಯಲ್ಲಿ ಟೀಕಿಸಿದೆ.

ಲಟ್ನಿಕ್ ಅವರ ಹೇಳಿಕೆಯನ್ನು ಸಾಮಾಜಿಕ ಮಾಧ್ಯಮದಲ್ಲಿ ಅಪ್‌ಲೋಡ್ ಮಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ(ಸಂವಹನ ವಿಭಾಗ ಉಸ್ತುವಾರಿ) ಜೈರಾಮ್ ರಮೇಶ್, 'ಆಲಿಂಗನ ಮಾಡಿದ್ರಿ.. ಏನಾಯ್ತು... ಏನಾಯ್ತು, ನಿಮ್ಮ ಗೆಳೆತನದಿಂದ ಏನೂ ಆಗಿಲ್ಲ. ನಿಮಗೆ ಮೋಸ ಮಾಡಿಬಿಟ್ಟರು' ಎಂದು ಮೋದಿ ಅವರನ್ನು ಉಲ್ಲೇಖಿಸಿ ಟಾಂಗ್ ನೀಡಿದ್ದಾರೆ.

ಕಲ್ಲಿದ್ದಲು ಹಗರಣದ ಹಣ ಬಿಜೆಪಿಗರ ಜೇಬಿಗೆ: ಮಮತಾ

'ಕಾರ್ಯತಂತ್ರ ಕದಿಯಲು ದಾಳಿ'

ನವದೆಹಲಿ/ಕೋಲ್ಕತ್ತ (ಪಿಟಿಐ): 'ಟಿಎಂಸಿ ಮುಂಬರುವ ವಿಧಾನಸಭಾ ಚುನಾವಣೆಗೆ ರೂಪಿಸಿರುವ ಕಾರ್ಯತಂತ್ರವನ್ನು ಕದಿಯುವ ಉದ್ದೇಶದಿಂದ ಜಾರಿ ನಿರ್ದೇಶನಾಲಯದ (ಇ.ಡಿ) ದಾಳಿ ನಡೆದಿದೆ' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ರಾಜಕೀಯ ಸಲಹಾ ಸಂಸ್ಥೆ 'ಐ-ಪ್ಯಾಕ್' ಕಚೇರಿ ಮತ್ತು ಅದರ ನಿರ್ದೇಶಕ ಪ್ರತೀಕ್ ಜೈನ್ ಅವರ ನಿವಾಸದ ಮೇಲೆ ನಡೆದ ಇ.ಡಿ ದಾಳಿಯನ್ನು ಖಂಡಿಸಿ ಟಿಎಂಸಿ ಕೋಲ್ಕತ್ತದಲ್ಲಿ ಶುಕ್ರವಾರ ಆಯೋಜಿಸಿದ ಬೃಹತ್ ಪ್ರತಿಭಟನಾ ರ್‍ಯಾಲಿಯಲ್ಲಿ ಅವರು ಮಾತನಾಡಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಬಿಜೆಪಿ ನಾಯಕರು ಕಲ್ಲಿದ್ದಲು ಹಗರಣದಿಂದ ಲಾಭ ಗಳಿಸಿದ್ದಾರೆ ಎಂದು ಆರೋಪಿಸಿದ ಅವರು, 'ಅಗತ್ಯ ಬಿದ್ದರೆ ಎಲ್ಲ ಸಾಕ್ಷ್ಯಗಳನ್ನು ಬಹಿರಂಗ ಪಡಿಸುತ್ತೇನೆ' ಎಂದು ಹೇಳಿದರು.

ಸುವೇಂದು ಅಧಿಕಾರಿ ಸೇರಿದಂತೆ ಈಗ ಬಿಜೆಪಿಯೊಂದಿಗೆ ಇರುವ ಟಿಎಂಸಿ ನಾಯಕರನ್ನು ಉಲ್ಲೇಖಿಸಿದ ಮಮತಾ, 'ಕಲ್ಲಿದ್ದಲು ಹಗರಣದ ಜಾಲದಲ್ಲಿ ಎಲ್ಲರೂ ಇದ್ದಾರೆ' ಎಂದು ಆರೋಪಿಸಿದರು.

'ಈಗ ಅವರು ಕಲ್ಲಿದ್ದಲು ಹಗರಣದ ಬಗ್ಗೆ ಮಾತನಾಡುತ್ತಾರೆ. ಆದರೆ ಕಲ್ಲಿದ್ದಲು ಹಗರಣದ ಹಣ ತಿಂದವರು ಯಾರು? ಆ ಹಣ ಎಲ್ಲಿಗೆ ಹೋಗುತ್ತದೆ? ಅದರ ಹಿಂದೆ 'ದೇಶದ್ರೋಹಿ'ಗಳ ಜಾಲ ಇದೆ. ಜಗನ್ನಾಥ್–ಸುವೇಂದು ಅಧಿಕಾರಿ–ಅಮಿತ್ ಶಾ ಸೇರಿದಂತೆ ಒಂದು ಸರಪಳಿ ಇದೆ. ಅದಕ್ಕೆ ಸಂಬಂಧಿಸಿದ ಸಾಕ್ಷ್ಯಗಳನ್ನು ಒಳಗೊಂಡ ಪೆನ್‌ಡ್ರೈವ್ ನನ್ನಲ್ಲಿದೆ. ಸಮಯ ಬಂದಾಗ ಅದನ್ನು ಬಹಿರಂಗಪಡಿಸುವೆ' ಎಂದರು.

ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಗುರುವಾರ ಇ.ಡಿ ದಾಳಿ ನಡೆದಿದೆ. ಈ ವೇಳೆ ಸ್ಥಳಕ್ಕೆ ಧಾವಿಸಿ ಬಂದಿದ್ದ ಮಮತಾ ಅವರು ಕೆಲವು ದಾಖಲೆಗಳನ್ನು ಕೊಂಡೊಯ್ದಿದ್ದರು.

▸12



ಇ.ಡಿ ದಾಳಿ ಖಂಡಿಸಿ ಮಮತಾ ಬ್ಯಾನರ್ಜಿ ನೇತೃತ್ವದಲ್ಲಿ ಕೋಲ್ಕತ್ತದಲ್ಲಿ ಶುಕ್ರವಾರ ಬೃಹತ್ ರ್‍ಯಾಲಿ ನಡೆಯಿತು —ಪಿಟಿಐ ಚಿತ್ರ

ನಾನು ಟಿಎಂಸಿ ಮುಖ್ಯಸ್ಥೆಯಾಗಿದ್ದುಕೊಂಡು ಆ ಕೆಲಸ (ದಾಳಿ ಸ್ಥಳಕ್ಕೆ ಬಂದದ್ದು) ಮಾಡಿದ್ದೇನೆ. ಯಾವುದೇ ಕಾನೂನುಬಾಹಿರ ಕೃತ್ಯ ಎಸಗಿಲ್ಲ
ಮಮತಾ ಬ್ಯಾನರ್ಜಿ, ಮುಖ್ಯಮಂತ್ರಿ

ಚಿನಕುರುಳಿ ಪ್ರಕಾಶ್ ಶೆಟ್ಟಿ



₹9.5 ಲಕ್ಷ ಲಂಚ ಪ್ರಕರಣ: ಸಿಬಿಐ ಕಾರ್ಯಾಚರಣೆ

ಸಿಪಿಆರ್‌ಐ ನಿರ್ದೇಶಕರ ಬಂಧನ

ನವದೆಹಲಿ (ಪಿಟಿಐ): ಬೆಂಗಳೂರಿನ ಕೇಂದ್ರೀಯ ವಿದ್ಯುತ್ ಸಂಶೋಧನಾ ಸಂಸ್ಥೆಯ (ಸಿಪಿಆರ್‌ಐ) ಜಂಟಿ ನಿರ್ದೇಶಕ ರಾಜಾರಾಮ್ ಮೋಹನ್ ರಾವ್ ಚೆನ್ನು ಅವರನ್ನು ಕೇಂದ್ರೀಯ ತನಿಖಾ ಸಂಸ್ಥೆ (ಸಿಬಿಐ) ಅಧಿಕಾರಿಗಳು ₹9.5 ಲಕ್ಷ ಲಂಚ ಪ್ರಕರಣಕ್ಕೆ ಸಂಬಂಧಿಸಿ ಗುರುವಾರ ಬಂಧಿಸಿದ್ದಾರೆ.

ಸಿಬಿಐ ಅಧಿಕಾರಿಗಳು ಅವರ ಮನೆಯಲ್ಲಿ ಶೋಧ ನಡೆಸಿದ ಸಂದರ್ಭದಲ್ಲಿ ಸುಮಾರು ₹3.59 ಕೋಟಿ ನಗದು ವಶಪಡಿಸಿಕೊಂಡಿದ್ದಾರೆ. ಇದರಲ್ಲಿ ಅಮೆರಿಕದ ಡಾಲರ್, ಹಾಂಗ್‌ಕಾಂಗ್ ಡಾಲರ್, ಸಿಂಗಪುರ ಡಾಲರ್, ಇಂಡೊನೇಷ್ಯಾದ ರೂಪಿಯ್ಯ, ಮಲೇಷ್ಯಾದ ರಿಂಗಿಟ್, ಯುರೋ, ಯುವಾನ್ ಹಾಗೂ ಸ್ವೀಡಿಷ್ ಕ್ರೊನಾ ಹಾಗೂ ಸಂಯುಕ್ತ ಅರಬ್ ಒಕ್ಕೂಟದ ₹4 ಲಕ್ಷ ಮೌಲ್ಯದ ದಿರ್ಹಂ ಕರೆನ್ಸಿ ಸೇರಿದ್ದವು ಎಂದು ಸಿಬಿಐ ತಿಳಿಸಿದೆ.



'ಸುಧೀರ್ ಗ್ರೂಪ್ ಆಫ್ ಕಂಪನೀಸ್' ಉತ್ಪಾದಿಸಿದ ವಿದ್ಯುನ್ಮಾನ ಪರಿಕರಗಳಿಗೆ ಸಂಬಂಧಿಸಿ ಅನುಕೂಲಕರವಾದ ಪರೀಕ್ಷಾ ವರದಿ ನೀಡಲು ಚೆನ್ನು ಅವರು ಲಂಚ ಪಡೆದಿದ್ದಾರೆ ಎಂದು ಆರೋಪಿಸಲಾಗಿದೆ. ಈ ಪ್ರಕರಣದಲ್ಲಿ ಕಂಪನಿಯ ನಿರ್ದೇಶಕ ಅತುಲ್ ಖನ್ನಾ ಅವರನ್ನೂ ಬಂಧಿಸಲಾಗಿದೆ' ಎಂದು ಸಿಬಿಐ ಅಧಿಕಾರಿಗಳು ಹೇಳಿದ್ದಾರೆ.

'ಎಫ್‌ಐಆರ್ ದಾಖಲಿಸಿಕೊಂಡ ಸಿಬಿಐನ ಅಧಿಕಾರಿಗಳು ಶುಕ್ರವಾರ ₹9.5 ಲಕ್ಷ ಲಂಚದ ಹಣವನ್ನು ಪಡೆಯುತ್ತಿದ್ದ ಸಂದರ್ಭದಲ್ಲಿಯೇ ಸಿಪಿಆರ್‌ಐನ ನಿರ್ದೇಶಕ ಹಾಗೂ ಖಾಸಗಿ ಕಂಪನಿಯ ನಿರ್ದೇಶಕರನ್ನು ಬಂಧಿಸಿದ್ದಾರೆ' ಎಂದು ಸಿಬಿಐ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ. 'ಚೆನ್ನು ಮನೆಯ ಶೋಧದ ವೇಳೆ ಮನೆಯಿಂದ ₹3.76 ಕೋಟಿ ನಗದನ್ನು (ವಿದೇಶಿ ಕರೆನ್ಸಿ) ಇಲ್ಲಿಯವರೆಗೆ ವಶಕ್ಕೆ ಪಡೆಯಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಫೆ.1ಕ್ಕೆ ಕೇಂದ್ರ ಬಜೆಟ್

ಪ್ರಜಾವಾಣಿ ವಾರ್ತೆ



ನವದೆಹಲಿ: ಸಂಸತ್ತಿನ ಬಜೆಟ್ ಅಧಿವೇಶನವು ಜನವರಿ 28ರಂದು ಆರಂಭವಾಗಿ ಏಪ್ರಿಲ್ 2 ರಂದು ಕೊನೆಗೊಳ್ಳಲಿದೆ. ಫೆಬ್ರುವರಿ 1ರಂದು ಬಜೆಟ್ ಮಂಡನೆ ಆಗಲಿದೆ. ವಾಡಿಕೆಯಂತೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 28ರಂದು ಲೋಕಸಭಾ ಹಾಗೂ ರಾಜ್ಯಸಭಾ ಸದಸ್ಯರ ಜಂಟಿ ಸಭೆ ಉದ್ದೇಶಿಸಿ ಮಾಡುವ ಭಾಷಣದೊಂದಿಗೆ ಅಧಿವೇಶನ ಆರಂಭವಾಗುತ್ತದೆ.

'ದ್ರೌಪದಿ ಮುರ್ಮು ಅವರು ಬಜೆಟ್ ಅಧಿವೇಶನಕ್ಕಾಗಿ ಸಂಸತ್ತಿನ ಎರಡೂ ಸದನಗಳನ್ನು ಕರೆಯಲು ಅನುಮೋದನೆ ನೀಡಿದ್ದಾರೆ' ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು 'ಎಕ್ಸ್'ನಲ್ಲಿ ತಿಳಿಸಿದ್ದಾರೆ. ಅಧಿವೇಶನದ ಮೊದಲ ಹಂತವು ಜನವರಿ 28ರಿಂದ ಫೆಬ್ರುವರಿ 13ರವರೆಗೆ, ಎರಡನೇ ಹಂತವು ಮಾರ್ಚ್ 9ರಿಂದ ಏಪ್ರಿಲ್ 2ರವರೆಗೆ ನಡೆಯಲಿದೆ. ಆರ್ಥಿಕ ಸಮೀಕ್ಷೆ ಹಾಗೂ ಬಜೆಟ್ ಮಂಡನೆಯ ದಿನಾಂಕಗಳನ್ನು ರಿಜಿಜು ಟ್ವೀಟ್‌ನಲ್ಲಿ ಉಲ್ಲೇಖಿಸಿಲ್ಲ. ಸಾಮಾನ್ಯವಾಗಿ ಬಜೆಟ್ ಅನ್ನು ಫೆಬ್ರುವರಿ 1ರಂದು ಮಂಡಿಸಲಾಗುತ್ತದೆ.

ಹೆದ್ದಾರಿಯಲ್ಲಿ ಹೆಚ್ಚಿದ ದರೋಡೆ

• ಆದಿತ್ಯ ಕೆ.ಎ.

ಬೆಂಗಳೂರು: ರಾಜ್ಯ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಕ್ರಿಯವಾಗಿರುವ ದರೋಡೆ ಹಾಗೂ ಸುಲಿಗೆ ತಂಡಗಳು ನೂರಾರು ಪ್ರಯಾಣಿಕರಿಂದ ಹಣ, ಚಿನ್ನಾಭರಣ ದೋಚಿವೆ.

ವೇಗವಾಗಿ ಬರುವ ವಾಹನಗಳನ್ನು ಗುರಿಯಾಗಿಸಿ, ಹೆದ್ದಾರಿ ಮಧ್ಯದಲ್ಲಿಯೇ ಕಲ್ಲುಗಳನ್ನು ಜೋಡಿಸಿಟ್ಟು ಅಪಘಾತಕ್ಕೀಡು ಮಾಡಿ ಬೆಲೆಬಾಳುವ ವಸ್ತುಗಳನ್ನು ದೋಚುವ ಘಟನೆಗಳು ನಡೆಯುತ್ತಿವೆ. ಕಳೆದ ಮೂರು ವರ್ಷಗಳಲ್ಲಿ 430 ದರೋಡೆ, ಸುಲಿಗೆ ಪ್ರಕರಣಗಳು ನಡೆದಿವೆ.

ಸುಲಿಗೆಕೋರರು ವಾಹನಗಳನ್ನು ಅಪಘಾತಕ್ಕೀಡು ಮಾಡುತ್ತಾರೆ. ಇಲ್ಲವೇ ರಾತ್ರಿ ವೇಳೆ ಹೆದ್ದಾರಿಗಳ ಆಯ್ದ ಕಡೆಗಳಲ್ಲಿ ಮೊಳೆಗಳನ್ನು ಎಸೆದು ವಾಹನಗಳ ಚಕ್ರ ಪಂಕ್ಚರ್ ಮಾಡಿಸಿ ಕೃತ್ಯ ಎಸಗುತ್ತಿದ್ದಾರೆ.

▸12



ವಾಹನಗಳನ್ನು ಅಡ್ಡಗಟ್ಟಲು ಹೆದ್ದಾರಿ ಬದಿಯಲ್ಲಿ ಕುಳಿತಿದ್ದ ದರೋಡೆಕೋರರ ದೃಶ್ಯವು ಕಾರೊಂದರ ಡ್ಯಾಶ್ ಬೋರ್ಡ್ ಕ್ಯಾಮೆರಾದಲ್ಲಿ ಸೆರೆಯಾಗಿದೆ

ಸೂರ್ಯೋದಯ: 6:44 ಸೂರ್ಯಾಸ್ತ: 6:09 | ಚಂದ್ರೋದಯ: ರಾ. 11:30 ಚಂದ್ರಾಸ್ತ: ಬೆ. 11:30 | ಶುಕ್ರವಾರದ ಉಷ್ಣಾಂಶ: ಗರಿಷ್ಠ 25° ಕನಿಷ್ಠ 14°

ಶನಿವಾರ ● ಜನವರಿ 10, 2026

ಶನಿವಾರದ ಉಷ್ಣಾಂಶ 26° ಗರಿಷ್ಠ 15° ಕನಿಷ್ಠ | ಭಾನುವಾರ 27°: 16° | ಸೋಮವಾರ 28°: 16° | ಮಂಗಳವಾರ 28°: 16°

ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಕವಿದ ವಾತಾವರಣ ಇರಲಿದೆ

ಕೇಂದ್ರೀಯ ವಿದ್ಯಾಲಯಕ್ಕೆ ಹುಸಿ ಬಾಂಬ್ ಬೆದರಿಕೆ

ಬೆಂಗಳೂರು: ಹೆಬ್ಬಾಳದ ಕೇಂದ್ರೀಯ ವಿದ್ಯಾಲಯಕ್ಕೆ ಗುರುವಾರ ಬಂದಿದ್ದ ಬಾಂಬ್ ಬೆದರಿಕೆಯ ಇ–ಮೇಲ್‌ನಿಂದ ವಿದ್ಯಾಲಯದ ಆವರಣ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ವಿದ್ಯಾಲಯದ ಆವರಣದಲ್ಲಿ ಮೂರು ಆರ್‌ಡಿಎಕ್ಸ್ ಇಡಲಾಗಿದ್ದು, ಸ್ಫೋಟಗೊಳ್ಳಲಿವೆ ಎಂದು ಸಂದೇಶದಲ್ಲಿ ಉಲ್ಲೇಖಿಸಲಾಗಿತ್ತು. ಇ–ಮೇಲ್ ಪರಿಶೀಲಿಸಿದ ಶಾಲಾ ಸಿಬ್ಬಂದಿ, ಪ್ರಾಂಶುಪಾಲರ ಗಮನಕ್ಕೆ ತಂದಿದ್ದರು. ಪ್ರಾಂಶುಪಾಲರು ಪೊಲೀಸರ ಗಮನಕ್ಕೆ ತಂದಿದ್ದರು. ಸದಾಶಿವನಗರ ಠಾಣೆಯ ಪೊಲೀಸರು ಪರಿಶೀಲಿಸಿದರು. ‘ಬಾಂಬ್ ಪತ್ತೆ ದಳ, ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳದ ಸಿಬ್ಬಂದಿ ಪರಿಶೀಲಿಸಿದರು. ಆರ್‌ಡಿಎಕ್ಸ್ ಬಾಂಬ್ ಪತ್ತೆಯಾಗಿಲ್ಲ. ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಇ–ಮೇಲ್ ವಿಳಾಸ ತೆಗೆದುಕೊಂಡು ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಜ.6ರಂದು ಕೋರಮಂಗಲ ಪಾಸ್‌ಪೋರ್ಟ್ ಕಚೇರಿಗೂ ಇದೇ ರೀತಿ ಸಂದೇಶ ಬಂದಿತ್ತು.

‘ವೈದ್ಯೆ ಪತ್ನಿ ಕೊಲೆ: ಪತಿ ಕೃತ್ಯ ಸಾಬೀತು’

ಅನಸ್ತೇಶಿಯಾ ನೀಡಿ ಕೊಲೆ ಮಾಡಿ ‘ಸಹಜ ಸಾವು’ ಎಂದು ಬಿಂಬಿಸಿದ್ದ ಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ ಪತ್ನಿಗೆ ಅನಸ್ತೇಶಿಯಾ ನೀಡಿ ಕೊಲೆ ಮಾಡಿ ‘ಸಹಜ ಸಾವು’ ಎಂದು ಬಿಂಬಿಸಿದ್ದ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಮಾರತ್‌ಹಳ್ಳಿ ಠಾಣೆಯ ಪೊಲೀಸರು, ಎಸಿಜೆಎಂ ನ್ಯಾಯಾಲಯಕ್ಕೆ ಅಂದಾಜು 3 ಸಾವಿರಕ್ಕೂ ಹೆಚ್ಚು ಪುಟಗಳ ವಿವರವಾದ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ಪತಿಯ ಕೃತ್ಯ ಸಾಬೀತಾಗಿದೆ ಎಂದು ಉಲ್ಲೇಖಿಸಲಾಗಿದೆ.



ಕೊಲೆಯಾದ ಕೃತಿಕಾ ರೆಡ್ಡಿ ಹಾಗೂ ಆರೋಪಿ ಮಹೇಂದ್ರ ರೆಡ್ಡಿ

ಮುನೇನಕೊಳಲು ಅಯ್ಯಪ್ಪಸ್ವಾಮಿ ಲೇಔಟ್ ನಿವಾಸಿ ಡಾ.ಕೃತಿಕಾ ರೆಡ್ಡಿ (28) ಅವರನ್ನು 2024ರ ಏಪ್ರಿಲ್ 23ರಂದು ಗುಂಜೂರಿನ ನಿವಾಸಿ, ಪತಿ ಡಾ.ಜಿ.ಎಸ್.ಮಹೇಂದ್ರ ರೆಡ್ಡಿ (31) ಅವರು ಕೊಲೆ ಮಾಡಿದ್ದರು. ಪ್ರಕರಣದ ತನಿಖೆ ನಡೆಸಿದ್ದ ಪೊಲೀಸರು ಮೃತದೇಹದ ಕೆಲ ಮಾದರಿಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಿದ್ದರು. ಅದರ ವರದಿ 2025ರ ಅಕ್ಟೋಬರ್ 15ರಂದು ಬಂದಿತ್ತು. ಅನಸ್ತೇಶಿಯಾ ಅಂಶಗಳು ಹೆಚ್ಚಾಗಿದ್ದರಿಂದ ಕೃತಿಕಾ ರೆಡ್ಡಿ ಮೃತಪಟ್ಟಿದ್ದಾರೆ ಎಂದು ಎಫ್‌ಎಸ್‌ಎಲ್ ವರದಿಯಲ್ಲಿ ದೃಢಪಟ್ಟಿತ್ತು. ಕೃತಿಕಾ ಅವರ ತಂದೆಯಿಂದ ದೂರು ಪಡೆದುಕೊಂಡಿದ್ದ ಪೊಲೀಸರು ತನಿಖೆ ಆರಂಭಿಸಿದ್ದರು. ಮಹೇಂದ್ರ ರೆಡ್ಡಿ ಅವರೇ ಕೃತ್ಯ ಎಸಗಿರುವುದು ದೃಢಪಟ್ಟ ಕೆಲವು ಸಾಕ್ಷಿಗಳು ಲಭಿಸಿದ ಬೆನ್ನಲ್ಲೇ ಅವರನ್ನು ಮಾರತ್‌ಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದರು. ಮಹೇಂದ್ರ ರೆಡ್ಡಿ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ.

ತಾಂತ್ರಿಕ ಹಾಗೂ ಎಫ್‌ಎಸ್‌ಎಲ್ ವರದಿಗಳು ಸೇರಿದಂತೆ 72ಕ್ಕೂ ಹೆಚ್ಚು ಮಹತ್ವದ ಸಾಕ್ಷ್ಯಗಳನ್ನು ಸಂಗ್ರಹಿಸಿ, ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಡಿಜಿಟಲ್ ಸಾಕ್ಷ್ಯಗಳು, ವೈದ್ಯಕೀಯ ವಿವರಗಳು, ತಾಂತ್ರಿಕ ಹಾಗೂ ಎಫ್‌ಎಸ್‌ಎಲ್ ವರದಿಗಳ ಆಧಾರದ ಮೇಲೆ ಮಹೇಂದ್ರ ರೆಡ್ಡಿ ಅವರೇ ಕೃತ್ಯ ಎಸಗಿರುವುದು ದೃಢಪಟ್ಟಿದೆ ಎಂದು ಮೂಲಗಳು ಹೇಳಿವೆ.

‘ಪತ್ನಿ ಅನಾರೋಗ್ಯದಿಂದ ಬಳಲುತ್ತಿದ್ದರು ಎಂಬ ನೆಪವೊಡ್ಡಿ ಮಹೇಂದ್ರ ರೆಡ್ಡಿ ಅವರು ಬೇರೆ ಔಷಧಿಗಳನ್ನು ನೀಡುವ ಸಮಯದಲ್ಲಿ ಹೆಚ್ಚುವರಿ ಅನಸ್ತೇಶಿಯಾ ನೀಡಿದ್ದರು. ಮೆಡಿಕಲ್ ಸ್ಟೋರ್‌ಗೆ ಹೋಗಿ ಅವರೇ ಅನಸ್ತೇಶಿಯಾ ಖರೀದಿಸಿ ತಂದಿದ್ದರು. ಮೆಡಿಕಲ್ ಸ್ಟೋರ್‌ಗೆ ಹೋಗಿ ವಾಪಸ್ ಬರುತ್ತಿದ್ದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಅಲ್ಲದೇ ಯುಪಿಐ ಮೂಲಕ ಹಣ ಪಾವತಿ ಮಾಡಿದ ದಾಖಲೆಗಳನ್ನು ಸಂಗ್ರಹಿಸಲಾಗಿತ್ತು’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಸಂದೇಶದಲ್ಲಿತ್ತು ಕೊಲೆ ರಹಸ್ಯ

ಆರೋಪಿ ಬಂಧನದ ಬಳಿಕ ಮೊಬೈಲ್ ಹಾಗೂ ಲ್ಯಾಪ್‌ಟಾಪ್ ವಶಕ್ಕೆ ಪಡೆದುಕೊಂಡು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿತ್ತು. ಎಫ್‌ಎಸ್‌ಎಲ್ ತಜ್ಞರು ಪರಿಶೀಲನೆ ನಡೆಸಿ ವರದಿ ನೀಡಿದ್ದರು. ಗೆಳತಿಯ ಜತೆಗೆ ಆರೋಪಿ ಚಾಟಿಂಗ್ ನಡೆಸಿರುವುದು ಪತ್ತೆಯಾಗಿತ್ತು. ಪದೇ ಪದೇ ಚಾಟಿಂಗ್ ಮಾಡುತ್ತಿದ್ದಂತೆ ಬೇಸರಗೊಂಡಿದ್ದ ಸ್ನೇಹಿತೆ, ಮಹೇಂದ್ರ ರೆಡ್ಡಿ ಅವರ ಮೊಬೈಲ್ ಸಂಖ್ಯೆಯನ್ನು ಬ್ಲಾಕ್ ಲಿಸ್ಟ್‌ಗೆ ಸೇರಿಸಿದ್ದರು. ಕೆಲವು ಬಾರಿ ಫೋನ್ ಪೇ ಆ್ಯಪ್ ಮೂಲಕ ಗೆಳತಿಗೆ ಸಂದೇಶ ಕಳುಹಿಸಿರುವುದು ಪತ್ತೆಯಾಗಿತ್ತು ಎಂದು ಮೂಲಗಳು ಹೇಳಿವೆ.

‘ನಿನಗಾಗಿ ನನ್ನ ಪತ್ನಿಯನ್ನು ಕೊಲೆ ಮಾಡಿದ್ದೇನೆ’ ಎಂಬುದಾಗಿ ಆರೋಪಿ ಸಂದೇಶ ಕಳುಹಿಸಿರುವುದಕ್ಕೆ ದಾಖಲೆಗಳು ಸಿಕ್ಕಿದ್ದವು. ಎಂಟು ಸಂದೇಶಗಳಲ್ಲಿ ಕೊಲೆ ರಹಸ್ಯ ಅಡಗಿತ್ತು. ಈ ಎಲ್ಲ ಅಂಶಗಳನ್ನೂ ದೋಷಾರೋಪ ಪಟ್ಟಿಯಲ್ಲಿ ಸೇರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ವಾಯುವಜ್ರ ಬಸ್‌ಗಳ ನಿಲುಗಡೆ ಸ್ಥಳ ಕಡಿತ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–1ರಲ್ಲಿ ವಾಯು ವಜ್ರ ಬಸ್‌ಗಳ ನಿಲುಗಡೆ ಸ್ಥಳವನ್ನು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಬಿಐಎಎಲ್) ಕಡಿಮೆ ಮಾಡಿದೆ. ಇದರಿಂದ ಸಾರ್ವಜನಿಕ ಸಾರಿಗೆಯನ್ನೇ ಬಳಸುತ್ತಿದ್ದ ಪ್ರಯಾಣಿಕರಿಗೆ ದೊಡ್ಡ ಹೊಡೆತ ಬಿದ್ದಿದೆ.

ಅನಿವಾರ್ಯವಾಗಿ ಪ್ರಯಾಣಿಕರು ದುಬಾರಿ ಖಾಸಗಿ ಟ್ಯಾಕ್ಸಿಯತ್ತ ಮುಖ ಮಾಡುವ ವ್ಯವಸ್ಥಿತವಾದ ಜಾಲ ಇದಾಗಿದೆ ಎಂಬ ಆರೋಪ ಕೇಳಿ ಬಂದಿದೆ. ಟರ್ಮಿನಲ್–1ರಲ್ಲಿ ವಾಯು ವಜ್ರ ಬಸ್‌ಗಳಿಗೆ ಈ ಹಿಂದೆ 14 ನಿಲುಗಡೆ ಸ್ಥಳಗಳಿದ್ದವು. ಆಗ ಬಸ್‌ಗಳು 20–30 ನಿಮಿಷ ನಿಂತು ಪ್ರಯಾಣಿಕರನ್ನು ಹತ್ತಿಸಿಕೊಂಡು ಸುಗಮವಾಗಿ ಹೊರಡುತ್ತಿದ್ದವು. ಈಗ ನಿಲುಗಡೆ ಸ್ಥಳಗಳ ಸಂಖ್ಯೆ ಕೇವಲ 6ಕ್ಕೆ ಇಳಿಸಲಾಗಿದೆ. ಪರಿಣಾಮ ಬಸ್‌ಗಳಿಗೆ 10 ನಿಮಿಷಕ್ಕೂ ಕಡಿಮೆ ಸಮಯ ಮಾತ್ರ ನಿಲ್ಲಲು ಅವಕಾಶ ಸಿಗುತ್ತಿದೆ. ಇದರಿಂದ ಅನೇಕ ಪ್ರಯಾಣಿಕರಿಗೆ ನಿಗದಿತ ಮಾರ್ಗದ ಬಸ್‌ಗಳು ತಪ್ಪಿ ಹೋಗುತ್ತಿವೆ.

ಚಾಲಕರಿಗೂ ಕಷ್ಟ: ‘ಟರ್ಮಿನಲ್–1ರಲ್ಲಿ ನಿಲ್ಲಲು ಬಿಡುವುದಿಲ್ಲ. 2–3 ಕಿ.ಮೀ ದೂರದ ಪಿ7 ಪಾರ್ಕಿಂಗ್‌ಗೆ ಹೋಗಿ ಬರಬೇಕು. ಇಷ್ಟೇ ದಿನ ಓಡಾಟದಲ್ಲೇ ಹೋಗುತ್ತದೆ. ಊಟಕ್ಕೂ ಸಮಯ ಸಿಗಲ್ಲ ಎಂದು’ ಚಾಲಕರು ಅಳಲು ತೋಡಿಕೊಂಡರು.



‘ವಾಯು ವಜ್ರ ಬಸ್‌ಗಳ ನಿಲುಗಡೆ ಸ್ಥಳ ಕಡಿತ ಮಾಡಿರುವುದು ಗಮನಕ್ಕೆ ಬಂದಿದೆ. ಮುಖ್ಯ ಕಾರ್ಯದರ್ಶಿಯೊಂದಿಗೆ ಮಾತನಾಡಿ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗುವುದು’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ತಿಳಿಸಿದರು.

ಡಿಸಿಪಿ ಅಕ್ಷಯ್ ಫೋಟೊ ಬಳಸಿ ವಂಚನೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ವಿಭಾಗದ ಡಿಸಿಪಿ ಹಾಕೆ ಅಕ್ಷಯ್ ಮಚ್ಚಿಂದ್ರ ಅವರ ಫೋಟೊ ಬಳಸಿ ವಂಚನೆಗೆ ಯತ್ನಿಸಲಾಗಿದ್ದು, ಈ ಸಂಬಂಧ ಕೇಂದ್ರ ವಿಭಾಗದ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಾಕೆ ಅಕ್ಷಯ್ ಮಚ್ಚಿಂದ್ರ ಅವರು ದೂರು ನೀಡಿದ್ದು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಠಾಣೆ ಪೊಲೀಸರು ಹೇಳಿದರು.

‘ಮಚ್ಚಿಂದ್ರ ಅವರ ಫೋಟೊ ಹಾಗೂ ಹೆಸರು ವಾಟ್ಸ್‌ಆ್ಯಪ್‌ನಲ್ಲಿ ಬಳಸಿಕೊಂಡು ವಂಚಕರು ಹಣ ಕೇಳುತ್ತಿದ್ದರು. ಬೇರೆ ಬೇರೆ ಮೊಬೈಲ್ ಸಂಖ್ಯೆಯಿಂದ ಈ ರೀತಿಯ ಸಂದೇಶವನ್ನು ಡಿಸಿಪಿ ಅವರ ಸ್ನೇಹಿತರು ಹಾಗೂ ಪೊಲೀಸ್ ಸಿಬ್ಬಂದಿಗೆ ಕಳುಹಿಸಲಾಗಿತ್ತು. ಅದನ್ನು ಗಮನಿಸಿದ್ದ ಸಿಬ್ಬಂದಿ, ಅಕ್ಷಯ್ ಅವರ ಗಮನಕ್ಕೆ ತಂದಿದ್ದರು’ ಎಂದು ಮೂಲಗಳು ಹೇಳಿವೆ.



ಹಾಕೆ ಅಕ್ಷಯ್ ಮಚ್ಚಿಂದ್ರ

‘ನನ್ನ ಬ್ಯಾಂಕ್ ಖಾತೆಯ ಆನ್‌ಲೈನ್ ವರ್ಗಾವಣೆಯಲ್ಲಿ ಸಮಸ್ಯೆ ಆಗಿದೆ. ತುರ್ತಾಗಿ ಹಣ ಬೇಕಾಗಿದೆ. ನಾನು ಸಭೆಯೊಂದರಲ್ಲಿ ಭಾಗವಹಿಸಬೇಕಿರುವ ಕಾರಣ ನೀವು ಹಣ ವರ್ಗಾಯಿಸಲು ಸಾಧ್ಯವೇ? ಹಾಗಿದ್ದರೆ ನಾನು ಮುಂದಿನ ವಿವರಗಳನ್ನು ನೀಡುತ್ತೇನೆ. ಒಂದು ದಿನದ ಒಳಗಾಗಿ ಹಣವನ್ನು ಮರುಪಾವತಿ ಮಾಡುತ್ತೇನೆ ಎಂಬುದಾಗಿ ವಂಚಕರು ಸಂದೇಶವನ್ನು ಕಳುಹಿಸಿದ್ದರು’ ಎಂದು ಮೂಲಗಳು ಹೇಳಿವೆ.

ಬಿಎಂಟಿಸಿ ಡಿಕ್ಕಿ: ಬೈಕ್ ಸವಾರ ಸಾವು

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಬಳಿಯ ಬೆಟ್ಟದಾಸನಪುರ ರಸ್ತೆಯಲ್ಲಿ ಶುಕ್ರವಾರ ಮಧ್ಯಾಹ್ನ ಬಿಎಂಟಿಸಿ ಬಸ್ ಮತ್ತು ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ತಮಿಳುನಾಡಿನ ಕಣಿರಾಜ್ (28) ಮೃತಪಟ್ಟವರು.

ಕಣಿರಾಜ್ ಅವರು ಬೆಟ್ಟದಾಸನಪುರದಲ್ಲಿ ಜ್ಯೂಸ್ ಅಂಗಡಿ ಆರಂಭಿಸಲು ನಿರ್ಧರಿಸಿದ್ದರು. ಅಂಗಡಿ ನೋಡಲು ಸ್ನೇಹಿತರೊಂದಿಗೆ ಅವರು ಬೈಕ್‌ನಲ್ಲಿ ಹೊಸೂರಿನಿಂದ ನಗರಕ್ಕೆ ಬಂದಿದ್ದರು. ಆಗ ದುರ್ಘಟನೆ ನಡೆದಿದೆ ಎಂದು ಸಂಚಾರ ಪೊಲೀಸರು ಹೇಳಿದರು. ಕಣಿರಾಜ್ ಅವರ ಸ್ನೇಹಿತ ಸಹ ಗಾಯಗೊಂಡಿದ್ದಾರೆ. ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಬಸ್ ಚಾಲಕನ ಅಜಾಗರೂಕತೆ ಹಾಗೂ ಅತಿ ವೇಗವೇ ಅಪಘಾತಕ್ಕೆ ಕಾರಣ. ಚಾಲಕನನ್ನು ಬಂಧಿಸಿ, ಬಸ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಎಲೆಕ್ಟ್ರಾನಿಕ್‌ಸಿಟಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ವೈದ್ಯಕೀಯ ವಿದ್ಯಾರ್ಥಿನಿ ಆತ್ಮಹತ್ಯೆ

ಆನೇಕಲ್: ಬೊಮ್ಮನಹಳ್ಳಿ ಆಕ್ಸ್‌ಫರ್ಡ್ ಡೆಂಟಲ್ ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿನಿಯೊಬ್ಬರು ಗುರುವಾರ ರಾತ್ರಿ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಯಶಸ್ವಿನಿ

ಚಂದಾಪುರ ನಿವಾಸಿ ಯಶಸ್ವಿನಿ (23) ಆತ್ಮಹತ್ಯೆ ಮಾಡಿಕೊಂಡವರು. ಸರ್ಕಾರಿ ಶಾಲಾ ಶಿಕ್ಷಕಿ ಪರಿಮಳ ಮತ್ತು ಬೋದೇವಯ್ಯ ಅವರ ಮಗಳು. ‘ಓರಲ್ ಮೆಡಿಸಿನ್ ಮತ್ತು ರೇಡಿಯಾಲಾಜಿ’ ವಿಭಾಗದ 3ನೇ ವರ್ಷದಲ್ಲಿ ಓದುತ್ತಿದ್ದರು.

ಕಾಲೇಜಿಗೆ ರಜೆ ಹಾಕಿ ಮರುದಿನ ತೆರಳಿದಾಗ ಬೋಧಕರೊಬ್ಬರು ಅವಮಾನಕರವಾಗಿ ಮಾತನಾಡಿದ್ದರಿಂದ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಲಾಗಿದೆ. ಸಹಪಾಠಿಗಳು ಯಶಸ್ವಿನಿ ಪರ ಘೋಷಣೆ ಕೂಗಿದರು. ‘ಯಶಸ್ವಿನಿ ಒಬ್ಬಳೇ ಮಗಳು. ವೈದ್ಯೆ ಆಗುವ ಕನಸು ಕಂಡಿದ್ದೆವು. ಆದರೆ, ಆತ್ಮಹತ್ಯೆ ಮಾಡಿಕೊಂಡಿರುವುದರಿಂದ ಯಾರು ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಸೂಕ್ತ ತನಿಖೆ ನಡೆಸಬೇಕು. ಮಗಳು ಸೂಕ್ಷ್ಮ ಸ್ವಭಾವದವಳು. ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ’ ಎಂದು ಮೃತರ ತಾಯಿ ಪರಿಮಳ ತಿಳಿಸಿದರು. ಚಂದಾಪುರ ಸೂರ್ಯಸಿಟಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹4 ಕೋಟಿ ದುರ್ಬಳಕೆ: ಸೆರೆ

ಬೆಂಗಳೂರು: ಕಮಲ ಮುನಿಯಪ್ಪ ಎಜುಕೇಷನಲ್ ಟ್ರಸ್ಟ್‌ನ ಎಡಿಫೈ ಶಾಲೆಗೆ ಸೇರಿದ್ದ ₹4 ಕೋಟಿ ದುರ್ಬಳಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಲೆಯ ಲೆಕ್ಕಾಧಿಕಾರಿ ಸೇರಿದಂತೆ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಶಿಕ್ಷಣ ಸಂಸ್ಥೆಯ ಕೆ.ಎಂ.ಅಶೋಕ್ ಕುಮಾರ್ ಅವರು ದೂರು ನೀಡಿದ್ದರು. ಶಾಲೆಯ ಲೆಕ್ಕಾಧಿಕಾರಿ ಸಾಗರ್ ಮತ್ತು ಶಾಲಾ ಬಸ್ ನಿರ್ವಹಣೆ ಮಾಡುತ್ತಿದ್ದ ಮನೋಜ್ ಎಂಬುವರನ್ನು ಬಂಧಿಸ ಲಾಗಿದೆ ಎಂದು ಮೂಲಗಳು ಹೇಳಿವೆ.

2017ರಿಂದ ಇದುವರೆಗೂ ₹4 ಕೋಟಿಯನ್ನು ವಂಚಿಸಿದ್ದಾರೆ. ಮುರುಳಿ, ಕಿಶೋರ್, ಸಿ.ಮೋಹನ್ ವಿರುದ್ಧವೂ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಶಾಲಾ ಶುಲ್ಕದ ಹಣವನ್ನು ಸ್ವಂತಕ್ಕೆ ಬಳಸಿದ್ದುದು ತನಿಖೆಯಿಂದ ಗೊತ್ತಾಗಿದೆ ಎಂದು ಮೂಲಗಳು ಹೇಳಿವೆ.

ಯುವಕನ ಮೇಲೆ ಹಲ್ಲೆ: ಇಬ್ಬರ ಸೆರೆ

ಬೆಂಗಳೂರು: ಫುಡ್ ಡೆಲಿವರಿ ಮಾಡುತ್ತಿದ್ದ ಯುವಕನ ಮೇಲೆ ಹಲ್ಲೆ ನಡೆಸಿದ್ದ ಇಬ್ಬರನ್ನು ಬೈಯಪ್ಪನಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಸೀತಾರಾಮ ಪಾಳ್ಯದ ಬಳಿಯ ಹೂಡಿಯ ಜಗತ್ (28) ಹಾಗೂ ಧರ್ಮ (20) ಬಂಧಿತರು.

ಫುಡ್ ಡೆಲಿವರಿ ಹುಡುಗ ದಿಲೀಪ್ ಕುಮಾರ್ ಸ್ಕೂಟರ್‌ನಲ್ಲಿ ತೆರಳುವಾಗ ರಸ್ತೆಯ ತಿರುವಿನ ಬಳಿ ಇಬ್ಬರು ಆರೋಪಿಗಳು ಸ್ಕೂಟರ್‌ನಲ್ಲಿ ಬಂದಿದ್ದರು. ಡೆಲಿವರಿ ಯುವಕ ತಕ್ಷಣ ಸ್ಕೂಟರ್ ನಿಲ್ಲಿಸಿದ್ದರು. ಆದರೆ, ಆರೋಪಿಗಳು ನಿಯಂತ್ರಣ ತಪ್ಪಿ ರಸ್ತೆ ಮೇಲೆ ಬಿದ್ದಿದ್ದರು. ಇದರಿಂದ ಸಿಟ್ಟಿಗೆದ್ದು ಹೆಲ್ಮೆಟ್‌ನಿಂದ ಡೆಲಿವರಿ ಯುವಕನ ಮೇಲೆ ಹಲ್ಲೆ ನಡೆಸಿದ್ದರು. ಇದನ್ನು ಕಂಡು ತರಾಟೆಗೆ ತೆಗೆದುಕೊಂಡ ಸ್ಥಳೀಯರ ಮೇಲೆ ಆರೋಪಿಗಳು ಹಲ್ಲೆಗೆ ಮುಂದಾಗಿದ್ದರು. ಬಳಿಕ ಸ್ಥಳೀಯರೇ ಆರೋಪಿಗಳ ಮೇಲೆ ಹಲ್ಲೆ ನಡೆಸಿದ್ದರು ಎಂದು ಮೂಲಗಳು ಹೇಳಿವೆ.

ಹುಲಿ ಮರಿಗಳ ಶೋಧ

ಚಾಮರಾಜನಗರ: ವೀರನಪುರದ ಆನೆಮಡುವಿನ ಕೆರೆಯ ಬಳಿ ಶುಕ್ರವಾರ 7 ವರ್ಷದ ಹೆಣ್ಣು ಹುಲಿ ಬೋನಿಗೆ ಬಿದ್ದಿದ್ದು, 4 ಮರಿಗಳ ಜೊತೆಗೆ ಕಾಣಿಸಿಕೊಂಡಿದ್ದು ಅದೇ ಹುಲಿ ಎಂದು ತಿಳಿದುಬಂದಿದೆ. ಹುಲಿ ಸೆರೆ ಹಿಡಿಯಲು ನಟೇಶ್ ಎಂಬುವರ ಜಮೀನಿನಲ್ಲಿ ಬೋನು ಇರಿಸಿದ್ದರು. ಮರಿಗಳನ್ನು ಸೆರೆ ಹಿಡಿಯಲು ಬೋನಿನಲ್ಲಿ ತಾಯಿ ಹುಲಿ ಹಾಗೂ ದನದ ಕಳೇಬರ ಇರಿಸಿ ಕಾಯುತ್ತಿದ್ದಾರೆ.

ಯುವತಿ ತಬ್ಬಿಕೊಂಡು ಕಿರುಕುಳ: ಆರೋಪಿ ಬಂಧನ

ಬೆಂಗಳೂರು: ವಿಧಾನಸೌಧ ಲೇಔಟ್‌ನಲ್ಲಿ ಯುವತಿಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದ ಆರೋಪಿಯನ್ನು ಕೊತ್ತನೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳದ ಮುನಿರುದ್ದೀನ್ ಖಾನ್ ಬಂಧಿತ. ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದ. ಮನೆಯ ಎದುರು ಬಿದ್ದಿದ್ದ ಬಾಕ್ಸ್ ಅನ್ನು ಯುವತಿ ತೆಗೆದುಕೊಂಡು ಹೋಗುತ್ತಿದ್ದರು. ಆಗ ಯುವತಿಯನ್ನು ಆರೋಪಿ ಹಿಂಬಾಲಿಸಿದ್ದ. ಶರ್ಟ್ ಬಿಚ್ಚಿ ಅಸಭ್ಯವಾಗಿ ವರ್ತಿಸಿದ್ದ. ಆಕೆಯನ್ನು ತಬ್ಬಿಕೊಂಡಿದ್ದ. ಸಿಸಿಟಿವಿ ಕ್ಯಾಮೆರಾ ದೃಶ್ಯ ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ನ್ಯಾ. ಎಸ್‌. ಸುನಿಲ್ ದತ್ ಯಾದವ್ ಅಭಿಮತ

ನ್ಯಾಯಮೂರ್ತಿಗಳ ಅಭಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ದಾವೆಗಳ ದಾಖಲಾತಿಯಲ್ಲಿ ಅನೂಹ್ಯ ಏರುಗತಿ ಕಂಡು ಬರುತ್ತಿದ್ದು, ಇದಕ್ಕೆ ಪೂರಕವಾಗಿ ಅಧಿಕ ಸಂಖ್ಯೆಯಲ್ಲಿ ನ್ಯಾಯಾಲಯ ಮತ್ತು ನ್ಯಾಯಮೂರ್ತಿಗಳ ನೇಮಕಾತಿಯೂ ಹೆಚ್ಚಬೇಕಿದೆ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದ 15ನೇ ಆರೋಪಿಯಾಗಿರುವ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ, ಜಾಮೀನು ಕೋರಿ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಮುಕ್ತಾಯಗೊಳಿಸಿತು. ಅಂತೆಯೇ, ಆದೇಶ ಕಾಯ್ದಿರಿಸಿತು.

ವಿಚಾರಣೆ ಮುಕ್ತಾಯದ ಬಳಿಕ ನ್ಯಾಯಮೂರ್ತಿ ಸುನಿಲ್ ದತ್ ಯಾದವ್ ಅವರು, ‘ಪ್ರಕರಣಗಳ ವಿಲೇವಾರಿಯಲ್ಲಿ ತಡ ಆಗುತ್ತಿರುವುದಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಸರ್ಕಾರ ಸಾಂಸ್ಥಿಕ ಸುಧಾರಣೆಗಳ ಮೂಲಕ ಪರಿಹರಿಸಬೇಕೆ ವಿನಃ ನ್ಯಾಯಾಲಯದ ಮುಂದೆ ಇಡುವುದರಿಂದ ಪ್ರಯೋಜನವಿಲ್ಲ. ನ್ಯಾಯಾಲಯ ಮತ್ತು ನ್ಯಾಯಮೂರ್ತಿಗಳ ನೇಮಕಾತಿ ಹೆಚ್ಚಿಸುವ ಮಾರ್ಗವನ್ನು ಹೊರತುಪಡಿಸಿ ನ್ಯಾಯದಾನ ಪ್ರಕ್ರಿಯೆಗೆ ಮತ್ತಾವುದೇ ಅಡ್ಡದಾರಿಗಳಿಲ್ಲ’ ಎಂದು ಹೇಳಿದರು.

‘ಪ್ರತಿಯೊಂದು ಪ್ರಕರಣದ ವಿಚಾರಣೆಗೂ ತನ್ನದೇ ಆದ ಸಮಯ ಬೇಕು. ಇದರಿಂದ ನ್ಯಾಯಮೂರ್ತಿಗಳ ಕೆಲಸದ ಒತ್ತಡ ಹೆಚ್ಚಿದೆ. ಪ್ರಕರಣಗಳನ್ನು ವೇಗವಾಗಿ ಇತ್ಯರ್ಥಪಡಿಸುವ ವಿಧಾನಕ್ಕೆ ಪ್ರಯತ್ನಿಸಲು ಹೋದರೆ ಅದು ಗಂಭೀರ ಪೂರ್ವಗ್ರಹಕ್ಕೆ ದಾರಿ ಮಾಡಿಕೊಡಬಲ್ಲದು. ಪರಿಣಾಮ ಪ್ರತಿಯೊಂದು ಪ್ರಕರಣಕ್ಕೆ ಅದರದೇ ಆದ ಸಮಯ ನೀಡಲು ಪರ್ಯಾಯ ಮಾರ್ಗವೇ ಇಲ್ಲವಾಗಿದೆ. ಇದೇನಿದ್ದರೂ ಸಾಂಸ್ಥಿಕ ಸುಧಾರಣೆಗಳ ಮೂಲಕವೇ ಬಗೆಹರಿಯಬೇಕು’ ಎಂದರು.

‘ಪ್ರಕರಣಗಳ ಇತ್ಯರ್ಥ ಮತ್ತು ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಸಮನ್ವಯ ಸಾಧಿಸಲು ನ್ಯಾಯಮೂರ್ತಿಗಳು ಅನವರತ ಹೋರಾಡುತ್ತಿದ್ದಾರೆ. ಹೊಸ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದ್ದು, ಹಳೇ ಪ್ರಕರಣಗಳು ಹಿಂದಕ್ಕೆ ಸರಿಯುತ್ತಿವೆ. ಈ ವಿಲೇವಾರಿ ಸಮಸ್ಯೆಯನ್ನು ಹೇಗೆ ತಾನೆ ಪರಿಹರಿಸಲು ಸಾಧ್ಯ? ಕೆಲವು ಪ್ರಕರಣಗಳು ಜಟಿಲವಾಗಿರುತ್ತವೆ. ಯಾವುದಾದರೂ ಒಂದು ಹಳೆಯ ಪ್ರಕರಣವನ್ನು ಇತ್ಯರ್ಥ ಮಾಡೋಣ ಎಂದು ಎತ್ತಿಕೊಂಡರೆ ಅದನ್ನು ವಿಲೇವಾರಿ ಮಾಡುವುದರೊಳಗೆ 10 ಪುಟ್ಟ ಪ್ರಕರಣಗಳನ್ನು ಇತ್ಯರ್ಥಪಡಿಸಬಹುದು. ಇದು ಸುಲಭವಾಗಿ ಬಗೆಹರಿಯುವ ಸಮಸ್ಯೆಯಲ್ಲ’ ಎಂದು ನ್ಯಾ.ಸುನಿಲ್ ದತ್ ವಿಶ್ಲೇಷಿಸಿದರು.

ವಿಳಂಬಕ್ಕೆ ಸಿಬಿಐ ಕಳವಳ

‘ಹಾಲಿ ಇರುವ ನ್ಯಾಯಮೂರ್ತಿಗಳ ಪಾಲಿಗೆ ಕಾರ್ಯಭಾರದ ಒತ್ತಡ ಇನ್ನಿಲ್ಲದಂತೆ ಹೆಚ್ಚಾಗಿದೆ’ ಎಂದು ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ಹೇಳಿದರು.

ನ್ಯಾಯಪೀಠದ ಅಭಿಪ್ರಾಯಕ್ಕೆ ದನಿಗೂಡಿಸಿದ ಅವರು, ‘ಇವತ್ತಿನ ಜನಸಂಖ್ಯೆಗೆ ಹೋಲಿಕೆ ಮಾಡಿದರೆ ನ್ಯಾಯಮೂರ್ತಿಗಳ ಸಂಖ್ಯೆ ಗಣನೀಯವಾಗಿ ಕಡಿಮೆ ಇದೆ. 2013ರ ಮೇಲ್ಮನವಿಗಳು ಇನ್ನೂ ಬಾಕಿ ಇವೆ’ ಎಂದರು.

ವಿನಯ ಕುಲಕರ್ಣಿ ಪರ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್ ಅವರೂ ಸಮಸ್ಯೆಯ ಅಗಾಧತೆಯನ್ನು ಉಲ್ಲೇಖಿಸಿ, ನ್ಯಾಯಮೂರ್ತಿಗಳ ಅಭಿಪ್ರಾಯಕ್ಕೆ ಸಹಮತ ವ್ಯಕ್ತಪಡಿಸಿದರು.

ಬ್ಯಾಂಕ್ ಗ್ಯಾರಂಟಿ: ಕೆ–ರೈಡ್ ವಿರುದ್ಧದ ಪ್ರಕರಣ

ಎಲ್ ಆ್ಯಂಡ್ ಟಿ ಸಲ್ಲಿಸಿದ್ದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ ಕಾಮಗಾರಿಯನ್ನು (ಬಿಎಸ್‌ಆರ್‌ಪಿ) ಸ್ಥಗಿತಗೊಳಿಸಿದ್ದ ಎಲ್ ಆ್ಯಂಡ್ ಟಿ ಗುತ್ತಿಗೆ ಕಂಪನಿಯು ಬ್ಯಾಂಕ್ ಗ್ಯಾರಂಟಿಗೆ ಸಂಬಂಧಿಸಿದಂತೆ ಕೆ–ರೈಡ್ ವಿರುದ್ಧ ಸಲ್ಲಿಸಿದ್ದ ಅರ್ಜಿಯನ್ನು ವಾಣಿಜ್ಯ ನ್ಯಾಯಾಲಯವು ವಜಾ ಮಾಡಿದೆ.

ಚಿಕ್ಕಬಾಣಾವರ–ಬೆನ್ನಿಗಾನಹಳ್ಳಿ ನಡುವಿನ ಕಾರಿಡಾರ್–2 ಕಾಮಗಾರಿಯ ಗುತ್ತಿಗೆಯನ್ನು ಎಲ್ ಆ್ಯಂಡ್ ಟಿ ಕಂಪನಿ ಪಡೆದಿತ್ತು. ಇದಕ್ಕೆ ಸಂಬಂಧಿಸಿದಂತೆ ಬಿಎಸ್‌ಆರ್‌ಪಿ ಜಾರಿಯ ಜವಾಬ್ದಾರಿ ಹೊತ್ತಿದ್ದ ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಎಂಟರ್‌ಪ್ರೈಸರ್ಸ್ (ಕೆ- ರೈಡ್) ಜೊತೆಗೆ 2023ರ ಜೂನ್ 16ರಂದು ಒಪ್ಪಂದ ಮಾಡಿಕೊಂಡಿತ್ತು.

ಆರಂಭದಲ್ಲಿ ₹ 905.50 ಕೋಟಿಯ ಈ ಯೋಜನೆಯನ್ನು ಗುತ್ತಿಗೆ ಪಡೆಯಲು ಎಲ್ ಆ್ಯಂಡ್ ಟಿ ಕಂಪನಿಯು ₹ 80.53 ಕೋಟಿ ಬ್ಯಾಂಕ್ ಗ್ಯಾರಂಟಿ ನೀಡಿತ್ತು. ಷರತ್ತುಗಳನ್ನು ಪೂರೈಸದೇ ಇದ್ದ ಪಕ್ಷದಲ್ಲಿ ಬ್ಯಾಂಕ್ ಗ್ಯಾರಂಟಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ಅವಕಾಶವು ಗುತ್ತಿಗೆ ನೀಡಿದ ಸಂಸ್ಥೆಗೆ ಇರುತ್ತದೆ.

ಜಮೀನು ಹಸ್ತಾಂತರ ಪ್ರಕ್ರಿಯೆಯನ್ನೇ ಸಂಪೂರ್ಣ ಮಾಡಿಲ್ಲ. ಒತ್ತುವರಿ ಮಾಡಿಕೊಂಡವರು, ಖಾಸಗಿ ಜಮೀನಿನ ಮಾಲೀಕರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ಹಸ್ತಾಂತರವಾಗಿರುವ ಜಮೀನಲ್ಲಷ್ಟೇ ಕೆಲಸ ಮಾಡಿ, ಮಧ್ಯೆ ಮಧ್ಯೆ ಹಾಗೇ ಬಿಡಬೇಕಿದ್ದರೆ ಕಾಮಗಾರಿ ಪೂರ್ಣಗೊಳಿಸುವುದು ಹೇಗೆ ಎಂದು ಪ್ರಶ್ನಿಸಿ 2025ರಲ್ಲಿ ಎಲ್ ಆ್ಯಂಡ್ ಟಿ ಕಂಪನಿಯು ಗುತ್ತಿಗೆಯಿಂದ ಹಿಂದೆ ಸರಿದಿತ್ತು. ಹೀಗಾಗಿ ಕಾಮಗಾರಿ ಸ್ಥಗಿತವಾಗಿತ್ತು.

ಕಾರಿಡಾರ್–2ಕ್ಕೆ ಸಂಬಂಧಿಸಿದಂತೆ ಶೇ 84ರಷ್ಟು ಜಮೀನು ನೀಡಲಾಗಿದೆ. ಕಾರಿಡಾರ್–4ಕ್ಕೆ ಸಂಬಂಧಿಸಿದಂತೆ 17 ಕಿ.ಮೀ. ಕಾಮಗಾರಿ ನಡೆಸಲು ಅವಕಾಶವಿತ್ತು. ಶೇ 20ರಷ್ಟು ಪ್ರಗತಿಯನ್ನೂ ಸಾಧಿಸಿಲ್ಲ. ಕಾಮಗಾರಿ ನಡೆಸದೇ ಗುತ್ತಿಗೆಯಿಂದ ಹಿಂದೆ ಸರಿದಿರುವುದು ಒಪ್ಪಂದದ ಉಲ್ಲಂಘನೆಯಾಗಿದೆ. ಒಪ್ಪಂದ ಪ್ರಕಾರ ಎಲ್ ಆ್ಯಂಡ್ ಟಿಗೆ ಒಪ್ಪಂದ ರದ್ದುಗೊಳಿಸಿ ಕಾಮಗಾರಿ ರದ್ದುಗೊಳಿಸುವ ಅಧಿಕಾರವಿಲ್ಲ ಎಂದು ಕೆ–ರೈಡ್ ಹೇಳಿತ್ತು.

ಕೆ–ರೈಡ್ ಬ್ಯಾಂಕ್ ಗ್ಯಾರಂಟಿಯನ್ನು ನಗದೀಕರಿಸದಂತೆ ತಡೆಯಾಜ್ಞೆ ನೀಡಬೇಕು ಎಂದು ಎಲ್ ಆ್ಯಂಡ್ ಟಿ ಕಂಪನಿಯು ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ (ವಾಣಿಜ್ಯ) ಅರ್ಜಿ ಸಲ್ಲಿಸಿತ್ತು.

ಇದರ ವಿಚಾರಣೆ ನಡೆಸಿದ ನ್ಯಾಯಾಲಯವು ಈ ಅರ್ಜಿಯನ್ನು ವಜಾ ಮಾಡಿದೆ. ಅರ್ಜಿದಾರರಿಗೆ ನ್ಯಾಯಮಂಡಳಿಯಲ್ಲಿ ಈ ಬಗ್ಗೆ ಪ್ರಶ್ನೆ ಮಾಡುವ ಸ್ವಾತಂತ್ರ್ಯ ಇದೆ ಎಂದು ಆದೇಶದಲ್ಲಿ ತಿಳಿಸಿದೆ.

ಈ ಹಿಂದೆ ನೀಡಲಾದ ಮಧ್ಯಂತರ ಆದೇಶಗಳು ಇದರೊಂದಿಗೆ ರದ್ದಾಗಲಿವೆ ಎಂದೂ ತಿಳಿಸಿದೆ.


UNLEARN.
RELEARN.
LEAD.
LEADERSHIP BEGINS WITH REINVENTION.
AMRITA VISHWA VIDYAPEETHAM
DEEMED TO BE UNIVERSITY UNDER SECTION 3 OF UGC ACT, 1956
ADMISSIONS OPEN 2026
AMRITA MBA
APPLY WITH ACAT2026
AMRITA COMMON APTITUDE TEST
EXAM DATES 7TH & 8TH FEB, 2026
DUE DATE TO APPLY 26TH JAN 2026
UP TO 75%* FEE WAIVER FOR TOPPERS IN ACAT / CAT / MAT / XAT
₹24.84 LAKHS HIGHEST CTC IN 2025
93.62% PLACEMENT IN 2025
+91 1169323436
amrita.edu/mba
*T & C apply
AMRITA B.TECH.
Invent. Innovate. Impact.
APPLICATIONS OPEN FOR B.TECH.
Apply for AEEE 2026
Last Date for Phase 1: JAN 15
300+ Collaborations With Top Global Universities
Student Exchange, Dual Degree, Int. Master's Program, Study Abroad, Summer Programs & Internships.
Upto 75% Fee Waiver*
SEAT RESERVATIONS 70% Seats for AEEE 30% Seats for JEE
₹80.4 Lakhs Highest CTC
₹9.08 LPA Avg. CTC
92% Placements
95855 92255
aeee.amrita.edu
nirf GOVT. OF INDIA 8TH RANKED UNIVERSITY IN INDIA 2025
NAAC A++ ACCREDITED
CATEGORY 1 GRADED AUTONOMY UGC, GOVT. OF INDIA
No.1 IN INDIA Times Higher Education Impact Rankings 2025
NBA NATIONAL BOARD OF ACCREDITATION
AACSB ACCREDITED* ASB COIMBATORE CAMPUS
University at Buffalo MBA-MS* Dual Degree An ASB Bengaluru collaboration
Our Campuses
AMARAVATI | AMRITAPURI | BENGALURU | CHENNAI | COIMBATORE | FARIDABAD | HARIDWAR | KOCHI | MYSURU | NAGERCOIL

ವಾರ್ಡ್ ಕರಡು ಮೀಸಲಾತಿ ಪ್ರಕಟ

369 ಐದು ನಗರ ಪಾಲಿಕೆಗಳಲ್ಲಿರುವ ವಾರ್ಡ್‌ಗಳು | **176** ಐದು ನಗರ ಪಾಲಿಕೆಗಳಲ್ಲಿ ಮಹಿಳೆಗೆ ಮೀಸಲಾಗಿರುವ ವಾರ್ಡ್‌ಗಳು | **43** ಎಸ್‌ಸಿಗೆ ಮೀಸಲಾಗಿರುವ ವಾರ್ಡ್‌ಗಳು | **7** ಎಸ್‌ಟಿಗೆ ಮೀಸಲಾಗಿರುವ ವಾರ್ಡ್‌ಗಳು | **97** ಹಿಂದುಳಿದ ‘ಎ’ ವರ್ಗಕ್ಕೆ ಮೀಸಲಾಗಿರುವ ವಾರ್ಡ್‌ಗಳು | **24** ಹಿಂದುಳಿದ ‘ಬಿ’ ವರ್ಗಕ್ಕೆ ಮೀಸಲಾಗಿರುವ ವಾರ್ಡ್‌ಗಳು | **198** ಸಾಮಾನ್ಯ ವರ್ಗಕ್ಕೆ ಮೀಸಲಾಗಿರುವ ವಾರ್ಡ್‌ಗಳು



ಐದು ನಗರ ಪಾಲಿಕೆಗಳ 369 ವಾರ್ಡ್; ಜ.23ರವರೆಗೆ ಆಕ್ಷೇಪಣೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿರುವ ಐದು ನಗರ ಪಾಲಿಕೆಗಳ 369 ವಾರ್ಡ್‌ಗಳಿಗೆ ಕರಡು ಮೀಸಲಾತಿ ನಿಗದಿಪಡಿಸಿ, ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದೆ.

ಬೆಂಗಳೂರು ಉತ್ತರ ನಗರ ಪಾಲಿಕೆ, ದಕ್ಷಿಣ ನಗರ ಪಾಲಿಕೆ, ಕೇಂದ್ರ ನಗರ ಪಾಲಿಕೆ, ಪೂರ್ವ ನಗರ ಪಾಲಿಕೆ ಹಾಗೂ ಪಶ್ಚಿಮ ನಗರ ಪಾಲಿಕೆಗಳಿಗೆ 369 ವಾರ್ಡ್‌ಗಳನ್ನು ಪುನರ್ ವಿಂಗಡಿಸಿ, 2025ರ ನವೆಂಬರ್ 19ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಡಿಸೆಂಬರ್ 1ರಂದು ಕೆಲವು ವಾರ್ಡ್‌ಗಳ ಗಡಿ ಹಾಗೂ ಹೆಸರನ್ನು ಬದಲಿಸಿ ತಿದ್ದುಪಡಿ ಅಧಿಸೂಚನೆಯನ್ನೂ ಹೊರಡಿಸಲಾಗಿತ್ತು.

2011ರ ಜನಗಣತಿ ಆಧಾರದಲ್ಲಿ ವಾರ್ಡ್‌ವಾರು ಕರಡು ಮೀಸಲಾತಿಯನ್ನು ಪ್ರಕಟಿಸಲಾಗಿದೆ. ಐದು ನಗರ ಪಾಲಿಕೆಗಳಲ್ಲಿ ಬಹುತೇಕ ಶೇ 50ರಷ್ಟು ಸ್ಥಾನವನ್ನು ಎಲ್ಲ ವರ್ಗದಲ್ಲೂ ಸೇರಿದಂತೆ ಮಹಿಳೆಯರಿಗೆ ಮೀಸಲಿರಿಸಲಾಗಿದೆ.

ವಾರ್ಡ್‌ವಾರು ಕರಡು ಮೀಸಲಾತಿಗೆ ಆಕ್ಷೇಪಣೆ ಸಲ್ಲಿಸಲು 15 ದಿನ ಅವಕಾಶ ನೀಡಲಾಗಿದೆ. ವಿಕಾಸಸೌಧದಲ್ಲಿ 436ನೇ ಕೊಠಡಿಯಲ್ಲಿರುವ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಕಚೇರಿಗೆ ಜನವರಿ 23ರೊಳಗೆ ಆಕ್ಷೇಪಣೆ/ ಸಲಹೆಗಳನ್ನು ಸೂಕ್ತ ವಿವರಣೆಗಳೊಂದಿಗೆ ಲಿಖಿತ ರೂಪದಲ್ಲಿ ಸಲ್ಲಿಸಬಹುದಾಗಿದೆ.

ಹಿನ್ನೆಲೆ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ–2020 ಅನ್ನೂ ಸೇರಿಸಿಕೊಂಡು, ಹೊಸ ನಗರ ಪಾಲಿಕೆಗಳನ್ನು ರಚಿಸಲು ‘ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ’ 2025ರ ಮೇ 15ರಂದು ಜಾರಿಯಾಯಿತು. ಈ ಕಾಯ್ದೆಯಡಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಹಾಗೂ ಐದು ನಗರ ಪಾಲಿಕೆಗಳನ್ನು 2025ರ ಸೆಪ್ಟೆಂಬರ್ 2ರಂದು ರಚಿಸಿ ಅಧಿಸೂಚಿಸಲಾಯಿತು.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಂತೆ ಐದು ನಗರ ಪಾಲಿಕೆಗಳ ಸೆಪ್ಟೆಂಬರ್ 30ರಂದು ವಾರ್ಡ್‌ಗಳನ್ನು ಪುನರ್‌ವಿಂಗಡಿಸಿ ಕರಡು ಅಧಿಸೂಚನೆ ಹೊರಡಿಸಲಾಗಿತ್ತು. ನವೆಂಬರ್ 1ಕ್ಕೆ ಅಂತಿಮ ಅಧಿಸೂಚನೆಯಾಗಬೇಕಿದ್ದನ್ನು ತಡೆ ಹಿಡಿದು, ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗಿತ್ತು. ಆದರೆ, ಸುಪ್ರೀಂ ಕೋರ್ಟ್ 15 ದಿನದಲ್ಲಿ ವಾರ್ಡ್‌ಗಳನ್ನು ಅಂತಿಮಗೊಳಿಸಿ ಎಂದು ನವೆಂಬರ್ 4ರಂದು ಸೂಚಿಸಿತ್ತು. ಅದರಂತೆ, ಪುನರ್ ವಿಂಗಡಿಸಿದ ವಾರ್ಡ್‌ಗಳ ಅಂತಿಮ ಅಧಿಸೂಚನೆಯನ್ನು ನವೆಂಬರ್ 19ರಂದು ಹೊರಡಿಸಲಾಗಿತ್ತು.

ವಾರ್ಡ್ ಮೀಸಲಾತಿ ನಿಗದಿಪಡಿಸಲು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ 2025ರ ಸೆಪ್ಟೆಂಬರ್ 29ರಂದು ಸಮಿತಿ ರಚಿಸಲಾಗಿತ್ತು. ಈ ಸಮಿತಿ ಡಿ.12ರಂದು ಸಭೆ ನಡೆಸಿ ವಾರ್ಡ್ ಮೀಸಲಾತಿ ನಿಗದಿಗೆ ಮಾರ್ಗಸೂಚಿಗಳನ್ನು ಹೊರಡಿಸಬೇಕು ಎಂದು ಮನವಿ ಮಾಡಿತ್ತು. ಅದರಂತೆ, ವಾರ್ಡ್‌ಗಳ ಮೀಸಲಾತಿ ನಿಗದಿಪಡಿಸಲು 12 ಮಾರ್ಗಸೂಚಿಗಳನ್ನು ನಿಗದಿಪಡಿಸಿ ಡಿಸೆಂಬರ್ 19ರಂದು ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿತ್ತು. ಇದಾದ 20 ದಿನಗಳೊಳಗೆ ಕರಡು ಮೀಸಲಾತಿ ಅಧಿಸೂಚನೆ ಹೊರಬಿದ್ದಿದೆ.

ಯಾವ ವರ್ಗಕ್ಕೆ ಎಷ್ಟು ಮೀಸಲು?	ಪೂರ್ವ ವಾರ್ಡ್ 50	ಪಶ್ಚಿಮ ವಾರ್ಡ್ 112	ಉತ್ತರ ವಾರ್ಡ್ 72	ದಕ್ಷಿಣ ವಾರ್ಡ್ 72	ಕೇಂದ್ರ ವಾರ್ಡ್ 63
ಎಸ್‌ಸಿ	7 (3)	9 (4)	9 (4)	7 (3)	11 (5)
ಎಸ್‌ಟಿ	1 (0)	2 (1)	2 (1)	1 (0)	1 (0)
ಹಿಂದುಳಿದ ‘ಎ’ ವರ್ಗ	14 (7)	30 (15)	19 (9)	19 (9)	15 (7)
ಹಿಂದುಳಿದ ‘ಬಿ’ ವರ್ಗ	3 (1)	7 (3)	5 (2)	5 (2)	4 (2)
ಸಾಮಾನ್ಯ	25 (12)	64 (32)	37 (18)	40 (20)	32 (16)

(ಆವರಣದಲ್ಲಿರುವ ಸಂಖ್ಯೆ ಮಹಿಳೆಯರಿಗೆ ಮೀಸಲಾತಿ)

ಮಾರ್ಚ್ 16ರಂದು ಮತದಾರರ ಅಂತಿಮ ಪಟ್ಟಿ

ಐದು ನಗರ ಪಾಲಿಕೆಗಳ ಸಾರ್ವತ್ರಿಕ ಚುನಾವಣೆಗೆ ವಾರ್ಡ್‌ವಾರು ಮತದಾರರ ಪಟ್ಟಿ ತಯಾರಿಸುವ ವೇಳಾಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗ ವಿಸ್ತರಿಸಿದ್ದು, 2026ರ ಮಾರ್ಚ್ 16ರಂದು ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸಲಿದೆ.

ರಾಜ್ಯ ಚುನಾವಣಾ ಆಯೋಗ 2025ರ ಅಕ್ಟೋಬರ್ 27ರಂದು ಪ್ರಕಟಿಸಿದ್ದ ವೇಳಾಪಟ್ಟಿ ಪ್ರಕಾರ, 2026ರ ಜನವರಿ 29ರಂದು ವಾರ್ಡ್‌ವಾರು ಮತದಾರರ ಅಂತಿಮ ಪಟ್ಟಿ ಪ್ರಕಟವಾಗಬೇಕಿತ್ತು. ಇದರಂತಾಗಿದ್ದರೆ, ಫೆಬ್ರುವರಿ ಅಥವಾ ಮಾರ್ಚ್‌ನಲ್ಲಿ ಐದು ನಗರ ಪಾಲಿಕೆಗಳಿಗೆ ಚುನಾವಣೆ ನಡೆಯುತ್ತಿತ್ತು. ವೇಳಾಪಟ್ಟಿ ಒಂದೂವರೆ ತಿಂಗಳು ವಿಸ್ತರಣೆಯಾಗಿರುವುದರಿಂದ, ಏಪ್ರಿಲ್ ಅಂತ್ಯ ಅಥವಾ ಮೇ ಮೊದಲ ವಾರದಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ.

ವಾರ್ಡ್‌ಗಳ ಮತದಾರರ ಅಂತಿಮಪಟ್ಟಿ ಮಾರ್ಚ್ 19ಕ್ಕೆ ಸಿದ್ಧಗೊಂಡು, ವಾರ್ಡ್‌ವಾರು ಮೀಸಲಾತಿಯೂ ಆ ವೇಳೆಗೆ ಅಂತಿಮಗೊಳಿಸಿ ಸರ್ಕಾರ ನೀಡಿದರೆ, ಮಾರ್ಚ್ ಅಂತ್ಯದಲ್ಲಿ ಚುನಾವಣೆ ನಡೆಸಲು ಅಧಿಸೂಚನೆ ಹೊರಡಿಸಲಾಗುತ್ತದೆ. ಅದಾದ 45 ದಿನಗಳಲ್ಲಿ ಚುನಾವಣೆಯ ಎಲ್ಲ ಪ್ರಕ್ರಿಯೆ ಮುಗಿಯಲಿದೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ಮಾಹಿತಿ ನೀಡಿದರು.

ಕಿಂಗ್ಸ್ ಕ್ಲಬ್‌ನಲ್ಲಿ ‘ಭೂಮಿಕಾ ಕ್ಲಬ್’ ಇಂದು

ಬೆಂಗಳೂರು: ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಮಹಿಳೆಯರಿಗಾಗಿ ಸ್ಥಾಪಿಸಿರುವ ‘ಭೂಮಿಕಾ ಕ್ಲಬ್’ ವೇದಿಕೆಯು ಇದೇ ಶನಿವಾರ (ಜ.10) ಮಧ್ಯಾಹ್ನ 3.30ಕ್ಕೆ ನಾಗರಬಾವಿಯ ಸರ್.ಎಂ. ವಿಶ್ವೇಶ್ವರಯ್ಯ ಲೇಔಟ್‌ನಲ್ಲಿರುವ ಕಿಂಗ್ಸ್ ಕ್ಲಬ್‌ನಲ್ಲಿ 35ನೇ ಆವೃತ್ತಿಯ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

‘ಗೋಲ್ಡ್ ವಿನ್ನರ್’ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಅಡುಗೆ ತಯಾರಿ, ಸಂಗೀತ ಕಾರ್ಯಕ್ರಮ ಸೇರಿ ಹಲವು ವಿಶಿಷ್ಟತೆಯನ್ನು ಈ ಕಾರ್ಯಕ್ರಮ ಒಳಗೊಂಡಿರಲಿದೆ. 2022ರಲ್ಲಿ ಪ್ರಾರಂಭವಾದ ಈ ವೇದಿಕೆಯು, ರಾಜ್ಯದಾದ್ಯಂತ 34 ಕಾರ್ಯಕ್ರಮಗಳನ್ನು ನಡೆಸಿದೆ. ಬೆಂಗಳೂರಿನಲ್ಲಿ 15ನೇ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ.

ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಜನಪ್ರಿಯ ಧಾರಾವಾಹಿಯಾದ ‘ಕರ್ಣ’ದ ನಟ ಶ್ಯಾಮ್ ಕನ್ವರ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಕ್ಕಳ ಫ್ಯಾಷನ್ ಶೋ, ರ್‍ಯಾಂಪ್ ವಾಕ್, ಪ್ರತಿಭಾ ಪ್ರದರ್ಶನ, ರಸಪ್ರಶ್ನೆ ಸೇರಿ ವಿವಿಧ ಚಟುವಟಿಕೆಗಳು ನಡೆಯಲಿವೆ. ಡಬ್ಲ್ಯುಐಸಿಸಿಐ ಲೀಡರ್‌ಶಿಪ್ ಕೋಚಿಂಗ್ ಕೌನ್ಸಿಲ್‌ನ ಅಧ್ಯಕ್ಷೆ ಆಶಾ ಬಿರಾದಾರ್ ಅವರು ‘ಕೌಶಲದಿಂದ ಆದಾಯ’ ವಿಷಯದ ಬಗ್ಗೆ ಉಪನ್ಯಾಸ ನೀಡಲಿದ್ದಾರೆ. ಕೌಶಲ ವೃದ್ಧಿ ಹಾಗೂ ಆದಾಯ ಗಳಿಕೆಗೆ ಇರುವ ಅವಕಾಶಗಳ ಬಗ್ಗೆ ತಿಳಿಯಲು ಈ ಗೋಷ್ಠಿ ಸಹಕಾರಿಯಾಗಲಿದೆ.

ಫಿಟ್ನೆಸ್ ತಜ್ಞೆ ಚಂದನಾ ಲಕ್ಷ್ಮಿಕಾಂತ್ ಅವರು ‘ಜುಂಬಾ’ ನೃತ್ಯ ಪ್ರದರ್ಶನ ಪ್ರಸ್ತುತಪಡಿಸಲಿದ್ದಾರೆ. ಗಾಯಕಿ ಅನಘಾ ಎಂ. ಅವರು ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಅಡುಗೆ ತಯಾರಿ ಸ್ಪರ್ಧೆಯೂ ಇರಲಿದೆ.

ಹೊಸ ವಿಷಯಗಳನ್ನು ಕಲಿಯಲು, ಸಮಾನ ಮನಸ್ಕರೊಂದಿಗೆ ಬೆರೆಯಲು, ಸೃಜನಶೀಲತೆ ಪ್ರದರ್ಶಿಸಲು, ಆರೋಗ್ಯ ಮತ್ತು ಕ್ಷೇಮ ಜಗತ್ತಿನ ಬಗ್ಗೆ ಮಾಹಿತಿ ಪಡೆಯಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ. ಪ್ರೇಕ್ಷಕರಿಗೆ ವಿವಿಧ ಸ್ಪರ್ಧೆ ಇರಲಿದ್ದು, ಭಾಗವಹಿಸಿದವರಿಗೆ ಅಚ್ಚರಿ ಉಡುಗೊರೆ ಪಡೆಯುವ ಅವಕಾಶಗಳು ಇರಲಿವೆ.

ಒಬ್ಬ ಅದೃಷ್ಟ ಪ್ರೇಕ್ಷಕರಿಗೆ ₹15 ಸಾವಿರ ಮೌಲ್ಯದ ವಾಟರ್ ಪ್ಯೂರಿಫೈಯರ್ ಗೆಲ್ಲುವ ಅವಕಾಶ ಇರಲಿದೆ. 10 ಅದೃಷ್ಟಶಾಲಿ ಪ್ರೇಕ್ಷಕರಿಗೆ ಮಲ್ಟಿಪ್ಲೆಕ್ಸ್‌ನಲ್ಲಿ ಚಲನಚಿತ್ರ ವೀಕ್ಷಣೆಗೆ ತಲಾ ಎರಡು ಟಿಕೆಟ್‌ಗಳನ್ನು ಗೆಲ್ಲುವ ಅವಕಾಶ, ಅದೃಷ್ಟಶಾಲಿಗಳಿಗೆ ನಾಗರಬಾವಿಯ ಕಿಂಗ್ಸ್ ಕ್ಲಬ್‌ನಲ್ಲಿ ಕುಟುಂಬ ಸಹಿತ ಭೋಜನದ ವೋಚರ್ ಸಿಗಲಿದೆ. ಪ್ರವೇಶ ಉಚಿತ ಇರಲಿದ್ದು, ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಹೆಸರು ನೋಂದಾಯಿಸಿಕೊಳ್ಳಬೇಕು. ವಿವರಕ್ಕೆ ಸಂಪರ್ಕ ಸಂಖ್ಯೆ: 9035036186

Gold Winner Presents ಭೂಮಿಕಾ ಕ್ಲಬ್

ನೋಂದಣಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ನಾಳೆಯಿಂದ ನೇಮಕಾತಿ ಪರೀಕ್ಷೆ

ಬೆಂಗಳೂರು: ತಾಂತ್ರಿಕ ಶಿಕ್ಷಣ, ಬಿಡಿಎ, ಬೆಂಗಳೂರು ಜಲಮಂಡಳಿ, ಕೆಎಸ್‌ಡಿಎಲ್, ಕೃಷಿ ಮಾರಾಟ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ಭರ್ತಿಗೆ ಜ.10 ಮತ್ತು 11ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಲಿಖಿತ ಪರೀಕ್ಷೆ ನಡೆಸುತ್ತಿದೆ.

ಜ.10ರಂದು ಬೆಂಗಳೂರು, ಕಲಬುರಗಿ ಮತ್ತು ಧಾರವಾಡದ 25 ಕೇಂದ್ರಗಳಲ್ಲಿ ನಡೆಯುವ ಪರೀಕ್ಷೆಯನ್ನು 9,936 ಹಾಗೂ ಜ.11ರಂದು 12 ಜಿಲ್ಲೆಗಳ 259 ಕೇಂದ್ರಗಳಲ್ಲಿ ನಡೆಯುವ ಪರೀಕ್ಷೆಯನ್ನು 1.03 ಲಕ್ಷ ಅಭ್ಯರ್ಥಿಗಳು ಬರೆಯುತ್ತಿದ್ದಾರೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಚಿಟಿಕೆ ಸುದ್ದಿ

ಭರತನಾಟ್ಯ ಸ್ಪರ್ಧೆಗೆ ಆಹ್ವಾನ

ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನವು ಕೆ. ಮೋಹನ್‌ದೇವ್ ಆಳ್ವ ಮತ್ತು ಎಂ.ಕೆ. ಶೈಲಜಾ ಆಳ್ವ ಸ್ಥಾಪಿತ ರುಕ್ಮಿಣಿದೇವಿ ಅರುಂಡೇಲ್ ದತ್ತಿ ಆಶ್ರಯದಲ್ಲಿ ಭರತನಾಟ್ಯ ಸ್ಪರ್ಧೆ ಆಯೋಜಿಸಿದೆ.

ಫೆಬ್ರುವರಿ 22ರಂದು ಸ್ಪರ್ಧೆ ನಡೆಯಲಿದ್ದು, 13ರಿಂದ 16 ವಯೋಮಾನದವರು ಸ್ಪರ್ಧಿಸಬಹುದು. ಆಸಕ್ತರು ಪ್ರತಿಷ್ಠಾನದ ಕಚೇರಿಯಿಂದ ಅರ್ಜಿ ಪಡೆದು ದಾಖಲೆಗಳೊಂದಿಗೆ ಫೆ. 14ರ ಒಳಗೆ ನೋಂದಾಯಿಸಿಕೊಳ್ಳಬೇಕು. ಪ್ರಥಮ ಮೂರು ವಿಜೇತರಿಗೆ ನಗದು ಬಹುಮಾನ ಇರಲಿದೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

ವಿಳಾಸ: ಬಿ.ಎಂ.ಶ್ರೀ. ಪ್ರತಿಷ್ಠಾನ, ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, 3ನೇ ಮುಖ್ಯರಸ್ತೆ, ನರಸಿಂಹರಾಜು ಕಾಲೋನಿ, ಬೆಂಗಳೂರು–560004

ಮಾಹಿತಿಗಾಗಿ 9972812127 ಸಂಪರ್ಕಿಸಬಹುದು.

ಸಿಬ್ಬಂದಿಯ ವೇತನ ಹೆಚ್ಚಳ

ಬೆಂಗಳೂರು: ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ಮ್ಯಾಟ್‌ಗಳ ತಯಾರಿಕೆಯಲ್ಲಿ ತೊಡಗಿರುವ ಸಿಬ್ಬಂದಿಗೆ ನೀಡುತ್ತಿರುವ ವೇತನ ಹೆಚ್ಚಳ ಮಾಡಲಾಗಿದೆ.

ಒಂದು ದಿನಕ್ಕೆ 10 ಮ್ಯಾಟ್ ತಯಾರಿಸಲು ₹260 ನೀಡುತ್ತಿದ್ದುದನ್ನು ₹480ಕ್ಕೆ ಹೆಚ್ಚಿಸಲಾಗಿದೆ ಎಂದು ನಿಗಮದ ಅಧ್ಯಕ್ಷ ನಟರಾಜ್ ಜಾನಕಿರಾಮ್, ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶಿವಪ್ರಕಾಸ್ ತಿಳಿಸಿದ್ದಾರೆ.

ಜನವರಿ 1ರಿಂದಲೇ ಜಾರಿಗೆ ಬರುವಂತೆ ಪರಿಷ್ಕರಣೆ ಮಾಡಲಾಗಿದೆ. 220 ಮಂದಿ ಕೆಲಸ ಮಾಡುತ್ತಿದ್ದಾರೆ. 1500 ಮಂದಿಗೆ ಉದ್ಯೋಗ ನೀಡಲು ಒತ್ತು ನೀಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಇಂದು, ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಸೋಲದೇವನಹಳ್ಳಿ ಉಪಕೇಂದ್ರ ವ್ಯಾಪ್ತಿಯಲ್ಲಿ ಜ.10ರಂದು ಬೆಳಿಗ್ಗೆ 10 ರಿಂದ ಸಂಜೆ 6, ಜ.11ರಂದು ಬೆಳಿಗ್ಗೆ 8 ರಿಂದ ಸಂಜೆ 6 ನಗರದ ವಿವಿಧ ಭಾಗಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ.

ತರಬನಹಳ್ಳಿ, ಹುರುಳಿಚಿಕ್ಕನಹಳ್ಳಿ, ಟಿಬಿ ಕ್ರಾಸ್, ಹೆಸರಘಟ್ಟ, ಬಿಳಿಜಾಜಿ, ದ್ವಾರಕಾನಗರ, ಚಿಕ್ಕಬಾಣಾವರ, ಮಾರುತಿ ನಗರ, ಗಣಪತಿ ನಗರ, ಶಾಂತಿನಗರ, ಕೃಷ್ಣಾ ಕಾಲೇಜು ರಸ್ತೆ, ರಾಘವೇಂದ್ರ ಎಲ್‌ಒ, ಸಾಸುವೆಘಟ್ಟ, ಬಜ್ಜಪ್ಪ ಎಲ್‌ಒ, ಶಿವಕುಮಾರ ಸ್ವಾಮೀಜಿ ಎಲ್‌ಒ, ಗುಡ್ಡದಹಳ್ಳಿ, ದಾಸೇನಹಳ್ಳಿ, ತೋಟಗೆರೆ ಬಸವಣ್ಣ ದೇವಸ್ಥಾನ, ಹೊಸಹಳ್ಳಿ ಪಾಳ್ಯದಲ್ಲಿ ವ್ಯತ್ಯಯವಾಗಲಿದೆ.

ಡ್ಯಾನಿಶ್ ಫಾರ್ಮ್, ಗುಣಿಅಗ್ರಹಾರ, ಸೋಮಶೆಟ್ಟಿಹಳ್ಳಿ, ಗಾಣಿಗರಹಳ್ಳಿ, ಕೆರೆಗುಡ್ಡ ಲೈನ್ ಫೀಡರ್, ಹುರುಳಿ ಚಿಕ್ಕನಹಳ್ಳಿ, ಕೆ.ಟಿ.ಪುರ, ಐಐಎಚ್‌ಆರ್, ಮರಕೂರು, ಐವರಕೊಂಡಪುರ, ಸೀತಕೆಂಪನಹಳ್ಳಿ, ಲಿಂಗನಹಳ್ಳಿ, ಮಾದಪ್ಪನಹಳ್ಳಿ, ಕಾಳೇನಹಳ್ಳಿ, ಶಿವಕೋಟೆ ಗ್ರಾಮ, ಮಾವಳ್ಳಿಪುರ, ಕೊಂಡಶೆಟ್ಟಿಹಳ್ಳಿ, ಮಧುಗಿರಿವೇಹಳ್ಳಿ, ಕುರುಬರಹಳ್ಳಿ, ಕುಂಬ್ರಹಳ್ಳಿ, ಪಾಕೇಗೌಡನಪಾಳ್ಯ, ರಾಘವೇಂದ್ರ ಧಾಮ, ಬೈಲಕೆರೆ, ಆಚಾರ್ಯ ಕಾಲೇಜು ಮುಖ್ಯರಸ್ತೆ, ಅಚ್ಯುತ್ ನಗರ, ಸೋಲದೇವನಹಳ್ಳಿದಲ್ಲಿ ಅಡಚಣೆ ಆಗಲಿದೆ ಎಂದು ತಿಳಿಸಲಾಗಿದೆ.

ಕ್ರೀಡಾಪಟುಗಳಿಗೆ ಸನ್ಮಾನ

ಪ್ರಜಾವಾಣಿ ಚಿತ್ರ



ಜೈನ್ ವಿಶ್ವವಿದ್ಯಾಲಯದ ಕ್ರೀಡಾ ವಿಭಾಗವು ‘ಅಖಿಲ ಭಾರತ ವಿಶ್ವವಿದ್ಯಾಲಯ ಗೇಮ್ಸ್’, ‘ಖೇಲೊ ಇಂಡಿಯಾ ಗೇಮ್ಸ್’ಗಳಲ್ಲಿ ಪದಕ ಗೆದ್ದ ಹಾಗೂ ಅಂತರರಾಷ್ಟ್ರೀಯ ಮಟ್ಟದ ಟೂರ್ನಿಗಳಲ್ಲಿ ಭಾರತವನ್ನು ಪ್ರತಿನಿಧಿಸಿರುವ ಕ್ರೀಡಾಪಟುಗಳಿಗೆ ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ನಗದು ಬಹುಮಾನ ನೀಡಿ ಗೌರವಿಸಿತು. (ಕುಳಿತವರು) (ಎರಡನೆಯ ಸಾಲು) ಕ್ರಿಕೆಟ್ ನಿರ್ದೇಶಕ ಅನಂತ್, ಜೈನ್ ಸಮೂಹ ಸಂಸ್ಥೆಗಳ ಶೈಕ್ಷಣಿಕ ಸಲಹೆಗಾರ ಶ್ರೀಧರ ಮೂರ್ತಿ, ಕ್ರೀಡಾ ವಿಭಾಗದ ನಿರ್ದೇಶಕ ಯು.ವಿ.ಶಂಕರ್, ಜೈನ್ ವಿ.ವಿ ಕುಲಪತಿ ಚೆನ್ನರಾಜ್ ರಾಯ್‌ಚಂದ್, ಕುಲಾಧಿಪತಿ ದಿನೇಶ್ ನೀಲಕಂಠ್ ಹಾಗೂ ಜೈನ್ ಸಮೂಹ ಸಂಸ್ಥೆಗಳ ಸಲಹೆಗಾರ ಕೃಷ್ಣನ್ ಭಾಗವಹಿಸಿದ್ದರು

ಮಲೆಯಾಳ ಭಾಷೆ ಕಡ್ಡಾಯ: ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದ ಕಾಸರಗೋಡು ಜಿಲ್ಲೆಯ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಪ್ರಥಮ ಭಾಷೆಯಾಗಿ ಮಲೆಯಾಳ ಕಲಿಸಲು ಅಲ್ಲಿನ ಸರ್ಕಾರ ನಿರ್ಧಾರ ಮಾಡಿರುವುದನ್ನು ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟ ಹಾಗೂ ಕರ್ನಾಟಕ ಗಡಿ ಹೋರಾಟ ಸಮಿತಿ ಖಂಡಿಸಿದೆ.

ಕನ್ನಡ ವಿದ್ಯಾರ್ಥಿಗಳ ಮೇಲೆ ಮಲೆಯಾಳ ಭಾಷೆ ಏರಿಕೆ ಸಲ್ಲದು. ಚುನಾವಣೆ ಕಾರಣಕ್ಕೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಕೈಗೊಂಡಿರುವ ನಿರ್ಧಾರವನ್ನು ಕೂಡಲೇ ಹಿಂಪಡೆಯಬೇಕು. ಇಲ್ಲವಾದರೆ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕೆಸಿ.ಜಗನ್ನಾಥ ರೆಡ್ಡಿ ಮತ್ತು ಪ್ರಧಾನ ಕಾರ್ಯದರ್ಶಿ ಎನ್. ಮುನಿರಾಜು ಎಚ್ಚರಿಸಿದ್ದಾರೆ.

‘ಕಾಸರಗೋಡಿನ ಪಯಸ್ವಿನಿ ನದಿ ತಟದಿಂದ ತಲಪಾಡಿನವರೆಗೂ ಬಹುಸಂಖ್ಯಾತ ಕನ್ನಡಿಗರಿದ್ದು, ಸುಮಾರು 204 ಕನ್ನಡ ಶಾಲೆಗಳಿವೆ. ಮತಕ್ಕಾಗಿ ಪಿಣರಾಯಿ ವಿಜಯನ್ ಅವರು ಕೇರಳಿಗರನ್ನು ಕನ್ನಡಿಗರ ಮೇಲೆ ಎತ್ತಿಕಟ್ಟುವ ಹುನ್ನಾರ ನಡೆಸುತ್ತಿದ್ದಾರೆ’ ಎಂದು ಗಡಿ ಹೋರಾಟ ಸಮಿತಿ ಸಂಸ್ಥಾಪಕ ಅಧ್ಯಕ್ಷ ಬಿ.ಕೆ.ಆರ್.ರಾವ್ ಬೈಂದೂರ್ ಆರೋಪಿಸಿದ್ದಾರೆ.

ಕೇರಳ ಸರ್ಕಾರದ ನಡೆಗೆ ವಿರೋಧ

ಕೇರಳದ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಪ್ರಥಮ ಭಾಷೆಯಾಗಿ ಮಲಯಾಳ ಕಲಿಕೆ ಕಡ್ಡಾಯಗೊಳಿಸುತ್ತಿರುವ ಅಲ್ಲಿನ ಸರ್ಕಾರದ ನಡೆಯನ್ನು ಕರ್ನಾಟಕ ವಿಕಾಸ ರಂಗ ಖಂಡಿಸಿದೆ.

‘ಮಹಾಜನ್ ವರದಿ ಪ್ರಕಾರ ಕಾಸರಗೋಡು, ಕರ್ನಾಟಕಕ್ಕೆ ಸೇರುತ್ತದೆ. ಮಹಾಜನ್ ವರದಿ ಜಾರಿ ಕುರಿತಂತೆ ಮಹಾರಾಷ್ಟ್ರ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಕಾನೂನು ಮೊಕದ್ದಮೆ ದಾಖಲಿಸಿದೆ. ಅದರ ವಿಚಾರಣೆ ಇದೇ 21ರಂದು ಸುಪ್ರೀಂ ಕೋರ್ಟ್‌ನಲ್ಲಿ ಚರ್ಚೆಗೆ ಬರಲಿದೆ. ಮಹಾಜನ್ ವರದಿ ಜಾರಿಗೆ ಬರುವವರೆಗೆ, ಕೇರಳ ಸರ್ಕಾರ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಮಲಯಾಳ ಭಾಷೆ ಕಡ್ಡಾಯಗೊಳಿಸಿರುವುದನ್ನು ಕೇಂದ್ರ ಸರ್ಕಾರ ತಡೆ ಹಿಡಿಯಬೇಕು’ ಎಂದು ಕರ್ನಾಟಕ ವಿಕಾಸರಂಗದ ರಾಜ್ಯಾಧ್ಯಕ್ಷ ವ.ಚ.ಚನ್ನೇಗೌಡ ಆಗ್ರಹಿಸಿದ್ದಾರೆ. ‘ಕರ್ನಾಟಕ ಸರ್ಕಾರ ಈ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಬೇಕಾದ ಅಗತ್ಯವಿದೆ’ ಎಂದು ಹೇಳಿದ್ದಾರೆ.

‘ಒದ್ದು ಕಿತ್ತುಕೊಳ್ಳುವ ಅನುಭವ ನನ್ನದಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಂತೆ ಕೊಳ್ಳೆ, ಸುಲಿಗೆ ಮತ್ತು ಒದ್ದು ಕಿತ್ತುಕೊಳ್ಳುವ ಅನುಭವ ನನಗಿಲ್ಲ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕುಟುಕಿದ್ದಾರೆ.

‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ನಮ್ಮ ಪಕ್ಷದ ವಿಲೀನದ ಚಿಂತೆ ನಿಮಗೆ ಬೇಕಿಲ್ಲ. ನನ್ನ ಮತ್ತು ನಿಮ್ಮ ಅನುಭವದ ಬಗ್ಗೆ ಮಾತನಾಡೋಣ. ಜನರ ಆಶೀರ್ವಾದದಿಂದ ಸಿಕ್ಕಿದ ಅವಕಾಶದಲ್ಲಿ ಜನರಿಗೆ ನನ್ನ ಕೈಲಾಗುವಷ್ಟು ಸಹಾಯ ಮಾಡುವ ಹುಲು ರಾಜಕಾರಣಿ ನಾನು’ ಎಂದಿದ್ದಾರೆ.



ಕುಮಾರಸ್ವಾಮಿ

‘ಭೂಕಬಳಿಕೆ, ಒತ್ತುವರಿ ನಿಮಗೆ ಕರತಲಾಮಲಕ. ಉಪ ಮುಖ್ಯಮಂತ್ರಿ ಎಂದೊಡನೆ, ನಿಮಗೆ ಎರಡು ಕೊಂಬು ಇರುವುದಿಲ್ಲ. ನೀವು ಕೊಂಬು ಸಿಗಿಸಿಕೊಳ್ಳುವುದಕ್ಕೂ ಆಗುವುದಿಲ್ಲ. ಮತ್ತೊಬ್ಬ ಸಚಿವರ ಅಧಿಕಾರ ಒತ್ತುವರಿ ಮಾಡುವುದರಲ್ಲೂ ನೀವು ನಿಸ್ಸೀಮ’ ಎಂದು ಆರೋಪಿಸಿದ್ದಾರೆ.

‘ಎಚ್‌ಡಿಕೆ ಮಾಧ್ಯಮ ಹುಲಿ’

‘ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾಧ್ಯಮ ಹುಲಿ’ ಎಂದು ಕೆಪಿಸಿಸಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ. ‘ಕುಮಾರಸ್ವಾಮಿ ಅವರ ಅನುಭವದ ಕಾಲುವೆಯಲ್ಲಿ ಹರಿಯುತ್ತಿರುವುದು ಬರೀ ಸುಳ್ಳು. ಪಲಾಯನ (ಹಿಟ್ ಆ್ಯಂಡ್ ರನ್), ಅವಕಾಶವಾದ, ಆತ್ಮರತಿ ಎಂಬ ಕೊಚ್ಚೆ. ಬಳ್ಳಾರಿ ಸಂಘರ್ಷದ ವೇಳೆ ಮೃತಪಟ್ಟ ಕಾಂಗ್ರೆಸ್ ಕಾರ್ಯಕರ್ತನ ಮರಣೋತ್ತರ ಪರೀಕ್ಷೆಯನ್ನು ಎರಡು ಬಾರಿ ನಡೆಸಲಾಗಿದೆ ಎಂಬ ಆರೋಪವೂ ಸುಳ್ಳಿನ ಸರಮಾಲೆ’ ಎಂದಿದೆ.

ನಿಮಗೆ ಸಿಕ್ಕಿರುವ ಅಧಿಕಾರ ನಮಗೆ ಸಿಕ್ಕಿಲ್ಲ ಎನ್ನುವ ಕುಮಾರಸ್ವಾಮಿ ಅವರು ಸಂತೋಷವಾಗಿರಲಿ. ಡಿಸಿಎಂ ಕೊಂಬಿನ ಬಗ್ಗೆ ಅವರ ಪಕ್ಷದ ಶಾಸಕರ ಮೂಲಕ ಚರ್ಚೆ ಮಾಡಲಿ

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

‘ಮೈತ್ರಿ ನಿರ್ಧಾರವಾಗಿಲ್ಲ’

‘ಪಕ್ಷದ ಕಾರ್ಯಕರ್ತರಿಗೆ ಪ್ರಾತಿನಿಧ್ಯ ಒದಗಿಸಲು ಸ್ಥಳೀಯ ಸಂಸ್ಥೆಗಳಲ್ಲಿ ಸಾಧ್ಯವಾಗುವುದರಿಂದ ಈ ಚುನಾವಣೆಗಳು ಪ್ರಾಮುಖ್ಯತೆ ಪಡೆದುಕೊಂಡಿವೆ. ಆದರೆ, ಬಿಜೆಪಿ ಜತೆಗೆ ಮೈತ್ರಿ ಇನ್ನೂ ನಿರ್ಧಾರವಾಗಿಲ್ಲ’ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಶುಕ್ರವಾರ ನಡೆದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ‘ಕಾರ್ಯಕರ್ತರ ಚುನಾವಣಾ ರಾಜಕೀಯ ಜೀವನ ಆರಂಭವಾಗುವುದು ಸ್ಥಳೀಯ ಸಂಸ್ಥೆಯ ಚುನಾವಣೆಗಳಲ್ಲಿ. ಬಿಜೆಪಿ ಜತೆಗೆ ಮೈತ್ರಿ ಮಾಡಿಕೊಂಡರೆ ತಮಗೆಲ್ಲಿ ಸ್ಥಾನ ಸಿಗುವುದಿಲ್ಲವೋ ಎಂದು ಕೆಲವರು ಆತಂಕ ವ್ಯಕ್ತಪಡಿಸಿರಬಹುದು. ಅದು ಪಕ್ಷದ ತೀರ್ಮಾನವಲ್ಲ. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ನಿರ್ಧಾರವಾಗಿರುವುದು ಎರಡು ಪಕ್ಷಗಳ ವರಿಷ್ಠರ ಮಧ್ಯೆ. ಮೈತ್ರಿ ನಿರ್ಧಾರವನ್ನೂ ಅವರೇ ತೆಗೆದುಕೊಳ್ಳುತ್ತಾರೆ. ಬೇರೆ ಯಾರೊಬ್ಬರ ಮಾತಿಗೂ ಬೆಲೆಯಿಲ್ಲ’ ಎಂದರು.



ನಿಖಿಲ್ ಕುಮಾರಸ್ವಾಮಿ

‘ಚುನಾವಣೆಗೆ ಸಿದ್ಧತೆ’

‘ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ಕಾನೂನು ಸುವ್ಯವಸ್ಥೆ ಕುಸಿದಿದೆ. ಇದರ ವಿರುದ್ಧ ಹೋರಾಟ ನಡೆಸುತ್ತೇವೆ. ಎರಡೂವರೆ ವರ್ಷದ ನಂತರ ಬರುವ ಚುನಾವಣೆಗೆ ಈಗಿನಿಂದಲೇ ಸಿದ್ಧತೆ ನಡೆಸಿದ್ದೇವೆ ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದರು. ಮುಂದಿನ ಚುನಾವಣೆಗೆ ಯಾವ ಕ್ಷೇತ್ರದಿಂದ ಸ್ಪರ್ಧಿಸುತ್ತೀರಿ ಎಂಬ ಪ್ರಶ್ನೆಗೆ, ‘ನಾನು ರಾಜಕೀಯ ಮಾಡಲು ಮತ್ತು ವಿಧಾನಸೌಧದ ಮೆಟ್ಟಿಲು ಹತ್ತಲೆಂದೇ ಬಂದವನು. ಜನರೊಂದಿಗೆ ಜನತಾದಳ ಪ್ರವಾಸದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಫೆಬ್ರುವರಿ 1ರಿಂದ ಮತ್ತೆ 2ನೇ ಹಂತದಲ್ಲಿ ಪ್ರವಾಸ ಮಾಡುತ್ತೇನೆ’ ಎಂದರು.

ಸಂಕ್ರಾಂತಿ ಉತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಮಾಗಡಿ ಮುಖ್ಯರಸ್ತೆಯ ಬಿಇಎಲ್ ಲೇಔಟ್‌ನಲ್ಲಿ ಗ್ರಾಮೀಣ ಸೊಗಡಿನ ಸಂಕ್ರಾಂತಿಯ ಉತ್ಸವಕ್ಕೆ ಶಾಸಕ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು.

ಉತ್ಸವದ ಸುಗ್ಗಿ ಕಾರ್ಯಕ್ರಮದಲ್ಲಿ ಯಶವಂತಪುರ ಕ್ಷೇತ್ರದ ವ್ಯಾಪ್ತಿಯ ನಗರ ಪಾಲಿಕೆ, 17 ಗ್ರಾಮ ಪಂಚಾಯಿತಿಯ ನಾಗರಿಕರಿಗೆ ಪ್ರತಿ ವರ್ಷದಂತೆ ಈ ವರ್ಷವೂ ಉಚಿತವಾಗಿ ಕಡಲೆಕಾಯಿ, ಅವರೆಕಾಯಿ, ಕಬ್ಬು, ಗೆಣಸು ನೀಡಲಾಗುತ್ತದೆ ಎಂದರು.

ವಿವಿಧ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಚಿಕ್ಕರಾಜು, ಮೈಲಸಂದ್ರ ನಾಗರಾಜ್, ರೇವಣಸಿದ್ದಯ್ಯ, ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಇ.ದೊಡ್ಡನಾಗಯ್ಯ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಅನಿಲ್ ಕುಮಾರ್, ಹೇರೋಹಳ್ಳಿ ಬ್ಲಾಕ್ ಕಾಂಗ್ರೆಸ್ ಮಹಿಳಾ ಅಧ್ಯಕ್ಷ ಸುಮಾ ಜನಾರ್ಧನ್, ಕೆಂಪಣ್ಣ, ಶ್ವೇತಾಗೌಡ, ಅನುಪಮಾ ಪಂಚಾಕ್ಷರಿ ಉಪಸ್ಥಿತರಿದ್ದರು



ಅವರೆಕಾಯಿ ರಾಶಿಗೆ ಎಸ್‌.ಟಿ.ಸೋಮಶೇಖರ್ ಅವರು ಪೂಜೆ ಸಲ್ಲಿಸಿ ಸಂಕ್ರಾಂತಿ ಉತ್ಸವಕ್ಕೆ ಚಾಲನೆ ನೀಡಿದರು. ಅನುಪಮಾ ಪಂಚಾಕ್ಷರಿ, ಸುಮಾ ಜನಾರ್ದನ್, ಇ.ದೊಡ್ಡನಾಗಯ್ಯ, ಟಿ.ಎಲ್‌.ಕೆಂಪೇಗೌಡ, ಚಿಕ್ಕರಾಜು, ಮೈಲಸಂದ್ರ ನಾಗರಾಜು ಉಪಸ್ಥಿತರಿದ್ದರು

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಸ್ವಯಂಸೇವಕ ವರ್ಷ ಉದ್ಘಾಟನೆ: ರಿಷಬ್ ಶೆಟ್ಟಿ, ಆರ್. ಬಾಲಸುಬ್ರಮಣ್ಯಂ, ಆಯೋಜನೆ: ಯೂತ್ ಫಾರ್ ಸೇವಾ, ಸ್ಥಳ: ಆರ್.ವಿ. ಟೀಚರ್ಸ್ ಕಾಲೇಜು, ಬೆಳಿಗ್ಗೆ 8.30



ರಿಷಬ್ ಶೆಟ್ಟಿ

ಸಿರಿ–ಸಂಕ್ರಾಂತಿ: ಗಾಯನ–ನೃತ್ಯ ಹಾಗೂ ಗೌರವ ಪುರಸ್ಕಾರ, ಸಾನ್ನಿಧ್ಯ: ನಿಶ್ಚಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಬೈರಮಂಗಲ ರಾಮೇಗೌಡ, ಅತಿಥಿಗಳು: ವೆಂಕಟಶಿವಾ ರೆಡ್ಡಿ, ಟಿ. ತಿಮ್ಮೇಶ್, ಅಧ್ಯಕ್ಷತೆ: ವೇಮಗಲ್ ನಾರಾಯಣಸ್ವಾಮಿ, ಸಂಸ್ಕೃತ ಸಿರಿ ಗೌರ ಪುರಸ್ಕಾರ: ಎಂ. ಚಿಕ್ಕಪ್ಪಯ್ಯ, ಗುಡ್ಡದಹಳ್ಳಿ ಬಿ. ಕೃಷ್ಣಪ್ಪ, ಎಂ. ವೀರಪ್ಪ, ನಂ. ನಂಜಪ್ಪ ರಾಜಣ್ಣ, ರಾಮಕೃಷ್ಣಯ್ಯ ಅಗ್ರಹಾರ, ಆಯೋಜನೆ: ಡಾ.ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಳಿಗ್ಗೆ 10


‘ಮಹಾ ಚತುರಮತಿ ತಾರೆ’ ವಿಷಯದ ಬಗ್ಗೆ ಉಪನ್ಯಾಸ: ನಾರಾಯಣ ಯಾಜಿ, ಬಿ.ಎಚ್. ಶ್ರೀಧರ ಅವರ ಬಗ್ಗೆ: ಎಲ್.ಎಸ್. ಶಾಸ್ತ್ರಿ, ಯಕ್ಷಗಾನ ಶ್ರೇಷ್ಠರ ಮಾತುಗಳ ಅನುಕರಣೆ: ವಿಠ್ಠಲ ನಾರಾಯಣ ಪುರಾಣಿಕ, ಆಯೋಜನೆ: ಸಪ್ತಕ ಬೆಂಗಳೂರು, ಸ್ಥಳ: ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10

ತರಬೇತಿ ಕಾರ್ಯಾಗಾರ ಹಾಗೂ 17ನೇ ರಾಜ್ಯಮಟ್ಟದ ಸಮ್ಮೇಳನ: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಜಿ. ಪರಮೇಶ್ವರ, ಅತಿಥಿಗಳು: ಎಚ್.ಕೆ. ಪಾಟೀಲ, ಎಚ್.ಪಿ. ಸಂದೇಶ್, ಕೆ.ಶಶಿಕಿರಣ್ ಶೆಟ್ಟಿ, ತುಷಾರ್ ಗಿರಿನಾಥ್, ಎಂ.ಎ. ಸಲೀಂ, ಆಯೋಜನೆ: ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಕರ್ನಾಟಕ ರಾಜ್ಯ ಅಭಿಯೋಜನಾಧಿಕಾರಿಗಳ ಸಂಘ, ಸ್ಥಳ: ಎಂ.ವಿ. ಆಡಿಟೋರಿಯಂ, ಕೆ.ಇ.ಬಿ. ಎಂಜಿನಿಯರ್ ಅಸೋಸಿಯೇಷನ್ ರಜತ ಮಹೋತ್ಸವ ಕಟ್ಟಡ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

ಎಸ್. ಗುರುಮೂರ್ತಿ ಅವರ ‘ಭಾರತೀಯ ಮುಸ್ಲಿಂ ವೀರಯೋಧರ ವೀರಗಾಥೆಗಳು’ ಪುಸ್ತಕ ಬಿಡುಗಡೆ: ಎಂ. ವೀರಪ್ಪ ಮೊಯಿಲಿ, ಮುಖ್ಯ ಅತಿಥಿ: ಜಿ. ಪರಮೇಶ್ವರ, ಅಧ್ಯಕ್ಷತೆ: ಹಂಪ ನಾಗರಾಜಯ್ಯ, ಅತಿಥಿಗಳು: ಕೆ.ರಹಮಾನ್ ಖಾನ್, ಮೋಹನ್ ಕುಮಾರ್ ಕೊಂಡಜ್ಜಿ, ಎಂ. ಅಬ್ದುಲ್ ರೆಹಮಾನ್ ಪಾಷ, ಆಯೋಜನೆ: ಶ್ರೀ ಭವತಾರಿಣಿ ಪ್ರಕಾಶನ ಮತ್ತು ಚಾರಿಟಬಲ್ ಟ್ರಸ್ಟ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ನಂ.39, ಸ್ಕೌಟ್ ಆ್ಯಂಡ್ ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 11

‘ಬೆಂಗಳೂರು ನಮ್ಮ ನಾಗರಿಕರಿಗೆ ಆರೋಗ್ಯಕರ ಜೀವನ ನೀಡುತ್ತಿದೆಯೇ?’ ಚರ್ಚೆ: ಭಾಗವಹಿಸುವವರು: ದಿನೇಶ್ ಗುಂಡೂರಾವ್, ಸಿ.ಎನ್. ಅಶ್ವತ್ಥನಾರಾಯಣ್, ಶ್ರೀಲತಾ ರಾವ್ ಶೇಷಾದ್ರಿ, ನಚಿಕೇತ್ ಮೋರ್, ಶ್ರೀಕಾಂತ್ ವಿಶ್ವನಾಥನ್, ಆಯೋಜನೆ: ಜನಾಗ್ರಹ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 11

ಬರಗೂರು ರಾಮಚಂದ್ರಪ್ಪ ಅವರ ‘ಸೌಹಾರ್ದ ಭಾರತ’ ಪುಸ್ತಕ ಬಿಡುಗಡೆ: ಬಿ. ರಮೇಶ್, ಅತಿಥಿ: ಎಚ್.ಎಲ್. ಪುಷ್ಪ, ಅಧ್ಯಕ್ಷತೆ: ರಮೇಶ್ ಕುಮಾರ್, ಉಪಸ್ಥಿತಿ: ಮಾವಳ್ಳಿ ಶಂಕರ್, ಮೋಹನ್ ರಾಜ್, ಜ್ಯೋತಿ ಅನಂತ ಸುಬ್ಬರಾವ್, ಮಲ್ಲಿಗೆ, ಆಯೋಜನೆ: ಜನ ಪ್ರಕಾಶನ, ಸೌಹಾರ್ದ ಕರ್ನಾಟಕ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಡಾ.ಮನಮೋಹನಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 11



ಬರಗೂರು ರಾಮಚಂದ್ರಪ್ಪ

ಪ್ರಾಂತೀಯ ಸಮ್ಮೇಳನ: ಅತಿಥಿಗಳು: ಅನಸೂಯಾ ಡಿ.ಎಸ್., ಮೋಹನ್ ಕುಮಾರ್, ವೆಂಕಟಶಿವಾ ರೆಡ್ಡಿ, ಅಧ್ಯಕ್ಷತೆ: ಅರವಿಂದ್ ಗೋಪಾಲ್ ಟಿ.ಎಸ್., ಆಯೋಜನೆ: ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಎ, ಸ್ಥಳ: ಕರ್ನಾಟಕ ಎಂಜಿನಿಯರ್ಸ್ ಅಕಾಡೆಮಿ ಸಭಾಂಗಣ, 4ನೇ ಬ್ಲಾಕ್, ಶಕ್ತಿಗಣಪತಿ ನಗರ, ಬಸವೇಶ್ವರನಗರ, ಮಧ್ಯಾಹ್ನ 3

‘ದ್ವೇಷ ಭಾಷಣ ಮಸೂದೆ ಮತ್ತು ನಾಗರಿಕ ಸ್ವಾತಂತ್ರ್ಯ’ ವಿಚಾರಗೋಷ್ಠಿ: ಪಾಲ್ಗೊಳ್ಳುವವರು: ಸಂತೋಷ್ ಹೆಗ್ಡೆ, ಬಿ.ವಿ. ಆಚಾರ್ಯ, ಎಂ.ಟಿ. ನಾಣಯ್ಯ, ಬಿ.ವಿ. ರಾಜಾರಾಮ್, ಜ್ಯೋತಿಪ್ರಕಾಶ್ ಮಿರ್ಜಿ, ಗೋಮತಿ ದೇವಿ, ಎ. ಹರಿರಾಮ್, ವಿವೇಕ್ ಸುಬ್ಬಾರೆಡ್ಡಿ, ರಂಗನಾಥ್ ಭಾರದ್ವಾಜ್, ಆಯೋಜನೆ: ಪ್ರಜಾಪ್ರಭುತ್ವಕ್ಕಾಗಿ ನಾಗರಿಕರು, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30



ಸಂತೋಷ್ ಹೆಗ್ಡೆ

‘ಅಮೃತ ವರ್ಷ’ ರಾಷ್ಟ್ರೋತ್ಥಾನ ಆಸ್ಪತ್ರೆಯ ಸಂಸ್ಥಾಪನಾ ದಿನ: ಅತಿಥಿಗಳು: ನಲ್ಲು ಇಂದ್ರಸೇನ ರೆಡ್ಡಿ, ಅಶೋಕ್ ಪುರಾಣಿಕ್, ಎಂ.ಪಿ. ಕುಮಾರ್, ದಿನೇಶ್ ಹೆಗ್ಡೆ, ಸ್ಥಳ: ರಾಷ್ಟ್ರೋತ್ಥಾನ ಆಸ್ಪತ್ರೆ, ಆರ್.ಆರ್. ನಗರ, ಮಧ್ಯಾಹ್ನ 3

ನೃತ್ಯ ಕಲಾರ್ಪಣ: ನವರಸ ರಂಜನಿ ಮತ್ತು ಭೈರವಂ ವಿಶೇಷ ನೃತ್ಯ ಪ್ರದರ್ಶನ, ಅತಿಥಿಗಳು: ಕೆ.ಪಿ. ಸತೀಶಬಾಬು, ವಾಣಿ ಸತೀಶಬಾಬು, ರೂಪಾ ಗಿರೀಶ್, ಆಯೋಜನೆ: ಸಪ್ತಸ್ವರ ನೃತ್ಯಾಲಯ ಕಲ್ಚರಲ್ ಆರ್ಟ್ಸ್ ಸೆಂಟರ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಮಧ್ಯಾಹ್ನ 3.30



ಸರ್ವಜ್ಞರ ಸ್ಮರಣೆ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಪುಸ್ತಕ ಬಿಡುಗಡೆ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಕೆ. ಗೋಪಾಲಯ್ಯ, ಅಧ್ಯಕ್ಷತೆ: ಎಸ್. ಮಹದೇವಯ್ಯ, ಉಪನ್ಯಾಸ: ಶಶಿಧರ ನರೇಂದ್ರ, ಆಯೋಜನೆ: ಬಸವ ಇಂಟರ್‌ನ್ಯಾಷನಲ್ ಫೌಂಡೇಷನ್ ಲಂಡನ್, ವೀರಶೈವ ವಿಚಾರ ವೇದಿಕೆ ಟ್ರಸ್ಟ್, ಸ್ಥಳ: ಶರಣ ಸೇವಾ ಸಮಾಜ, ಮಹಾಲಕ್ಷ್ಮಿ ಲೇಔಟ್, ಸಂಜೆ 4.30

ಕೆಂಪೇಗೌಡರ ಕಂಚಿನ ಪುತ್ಥಳಿ ಅನಾವರಣ, ಅಣ್ಣಮ್ಮ ದೇವಿಯ ಉತ್ಸವ ಹಾಗೂ ಸಂಕ್ರಾಂತಿ ಸುಗ್ಗಿ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ: ಎಚ್.ಡಿ. ಕುಮಾರಸ್ವಾಮಿ, ಎಂ. ಕೃಷ್ಣಪ್ಪ, ಅಧ್ಯಕ್ಷತೆ: ಟಿ.ಎ. ನಾರಾಯಣಗೌಡ, ಅತಿಥಿಗಳು: ಪ್ರಿಯಕೃಷ್ಣ, ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಕರ್ನಾಟಕ ರಕ್ಷಣಾ ವೇದಿಕೆ, ನಾಡಪ್ರಭು ಕೆಂಪೇಗೌಡ ಜಾಗೃತ ವೇದಿಕೆ, ಸ್ಥಳ: ಆದಿಚುಂಚನಗಿರಿ ಮಠದ ರಸ್ತೆ, ಹಾಟ್ ಕಾಫಿ ಎದುರು, ಮನುವನ, ವಿಜಯನಗರ, ಸಂಜೆ 5



ಸಫ್ದರ್ ಹಷ್ಮಿ ಮತ್ತು ಬಾದಲ್ ಸರ್ಕಾರ್ ರಾಜ್ಯಮಟ್ಟದ ಬೀದಿ ನಾಟಕೋತ್ಸವ, ವಿಚಾರಗೋಷ್ಠಿ, ರಂಗ ಗೌರವ: ಉದ್ಘಾಟನೆ: ಪ್ರಸನ್ನ, ಅತಿಥಿಗಳು: ಎಚ್.ಎನ್. ನಾಗಮೋಹನದಾಸ್, ವಿಜಯಾ, ಉಪಸ್ಥಿತಿ: ಮನೋಜ್ ವಾಮಂಜೂರು, ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ್, ಆಯೋಜನೆ: ಸಮುದಾಯ 50, ಸ್ಥಳ: ಗಾಂಧೀ ಕುಟೀರ, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 4.30



ಮಂಜುನಾಥ ಅದ್ದೆ ಅವರ ‘ಬಡವರ ರಾಜಕುಮಾರ’ ಸಂಶೋಧನಾ ಕೃತಿ ಬಿಡುಗಡೆ: ಆರ್. ಸುನಂದಮ್ಮ, ಕೃತಿ ಬಗ್ಗೆ ಮಾತು: ರಘುನಾಥ ಚ.ಹ., ಅತಿಥಿಗಳು: ಸಬೀಹಾ ಭೂಮಿಗೌಡ, ಮಾವಳ್ಳಿ ಶಂಕರ್, ದುನಿಯಾ ವಿಜಯ್, ಅಧ್ಯಕ್ಷತೆ: ಪುರುಷೋತ್ತಮ ಬಿಳಿಮಲೆ, ಆಯೋಜನೆ: ಕೌದಿ ಪ್ರಕಾಶನ ಮತ್ತು ಡಾ. ಮಂಜುನಾಥ ಅದ್ದೆ ಗೆಳೆಯರ ಬಳಗ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 4.30



ಭರತನಾಟ್ಯ ರಂಗಪ್ರವೇಶ: ಕೀರ್ತನಾ ಎಂ.ಎಸ್., ಉಪಸ್ಥಿತಿ: ಮೈಸೂರು ಬಿ. ನಾಗರಾಜ್, ಪದ್ಮಿನಿ ಶ್ರೀಧರ್, ಆಯೋಜನೆ: ನಾಟ್ಯಕಲಾಕ್ಷೇತ್ರ, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 4.30

ಅದ್ವೈತ ಧ್ಯಾನ ಕಾರ್ಯಾಗಾರ: ಆಯೋಜನೆ: ಅದ್ವೈತ ವಿಶ್ವಾಲಯ ಪ್ರತಿಷ್ಠಾನ, ಸ್ಥಳ: ಕೇಶವಶಿಲ್ಪ, ರಾಷ್ಟ್ರೋತ್ಥಾನ ಯೋಗ ಕೇಂದ್ರ, ಚಾಮರಾಜಪೇಟೆ, ಸಂಜೆ 5

ಕೆ.ಸದಾಶಿವ ಅವರ ಸ್ಮರಣಾರ್ಥ ಅವರ ಕಥಾಲೋಕದ ಅವಲೋಕನ: ಉದ್ಘಾಟನೆ: ಎನ್.ಎಸ್. ಶಂಕರ್, ಅಧ್ಯಕ್ಷತೆ: ಎಸ್. ದಿವಾಕರ್, ಕಥೆಗಾರರ ಸ್ಪಂದನ: ವಿವೇಕ್ ಶಾನಭಾಗ, ವಿಮರ್ಶಕರ ಸ್ಪಂದನ: ಎನ್.ಎ.ಎಂ. ಇಸ್ಮಾಯಿಲ್, ಉಪಸ್ಥಿತಿ: ಎಂ. ಪ್ರಕಾಶಮೂರ್ತಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಶ್ರೀ ಶ್ರೀ ರವಿಶಂಕರ ಗುರೂಜಿ ಅವರಿಂದ ಮಹಾಸತ್ಸಂಗ: ಅತಿಥಿ: ತೇಜಸ್ವಿ ಸೂರ್ಯ, ಉಪಸ್ಥಿತಿ: ಸತೀಶ್ ರೆಡ್ಡಿ, ಸ್ಥಳ: ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ, ಎಚ್.ಎಸ್.ಆರ್. ಲೇಔಟ್, ಸಂಜೆ 6

ಹರಿದಾಸ ವೈಭವ: ಪುರಂದರದಾಸರ ಆರಾಧನಾ ಮಹೋತ್ಸವದ ಪ್ರಯುಕ್ತ, ಗಾಯನ: ಅವನಿ ಭಟ್, ಕೀ-ಬೋರ್ಡ್: ರಾಜೇಂದ್ರ ಬೆಂಡೆ, ತಬಲಾ: ಎನ್. ಮೋಹನ್, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30



ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in




ಜನಕಲ್ಯಾಣಕ್ಕೆ ಗ್ಯಾರಂಟಿ ಸರ್ಕಾರದ ಪ್ರಗತಿ ಪಥ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾಗಿ ಘೋಷಣೆಯಾದ ಗ್ಯಾರಂಟಿಗಳಿಗೆ ಈವರೆಗೆ ಒಟ್ಟು 1,12,548.07 ಕೋಟಿ ರೂ.ವೆಚ್ಚವಾಗಿದ್ದು, ಒಟ್ಟು 71.93 ಕೋಟಿ ಫಲಾನುಭವಿಗಳು ಲಾಭ ಪಡೆದುಕೊಂಡಿದ್ದಾರೆ.

• ನಾಗರಾಜು ಅಶ್ವತ್ಥ್, ಬೆಂಗಳೂರು



'ಬೆಳಗಾವಿ ನಗರದಲ್ಲಿ ಮನೆಗೆಲಸಕ್ಕೆ ಹೋಗಿಬರಲು ತಿಂಗಳಿಗೆ 1500ರೂ ಖರ್ಚಾಗುತ್ತಿತ್ತು. ಜತೆಗೆ, ಮಾಸಿಕ ವಿದ್ಯುತ್‌ಬಿಲ್, ಮಕ್ಕಳ ಶಿಕ್ಷಣಕ್ಕೆ, ಮನೆ ನಿರ್ವಹಣೆ ಹೀಗೆ ನಾನಾ ವಿಚಾರಗಳಿಗೆ ಖರ್ಚು ಹೆಚ್ಚಿರುತ್ತಿತ್ತು. ಶಕ್ತಿ ಯೋಜನೆ ಆರಂಭವಾದಾಗಿನಿಂದ ಬೆಳಗಾವಿಗೆ ಯಾವುದೇ ಖರ್ಚಿಲ್ಲದಂತೆ ಹೋಗಿಬರುತ್ತಿದ್ದೇನೆ. ನನ್ನೊಂದಿಗೆ ನೆರೆಮನೆಯವರು ಸಹ ಉದ್ಯೋಗ ಹುಡುಕಿಕೊಂಡಿದ್ದಾರೆ. ಗೃಹಲಕ್ಷ್ಮಿ, ಗೃಹಜ್ಯೋತಿ ಯೋಜನೆಗಳಿಂದಾಗಿ ಮಾಸಿಕ ಖರ್ಚಿನಲ್ಲಿ ಸಾಕಷ್ಟು ಉಳಿತಾಯವಾಗುತ್ತಿದೆ ಎಂದು ಬೆಳಗಾವಿಯಲ್ಲಿ ಸ್ವಾವಲಂಬನೆಯ ಬದುಕು ಕಟ್ಟಿಕೊಂಡ ಪಾರ್ವತಿ ಎನ್ನುವ ಮಹಿಳೆಯ ನೈಜ ಉದಾಹರಣೆಯನ್ನು ವಿವರಿಸಿದ್ದು ಸ್ವತಃ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್.

ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ, ಪ್ರಗತಿ, ಸಿದ್ದರಾಮಯ್ಯನವರ ಆಡಳಿತ ವೈಖರಿ ಅತ್ಯಂತ ಹೆಮ್ಮೆಯಿಂದ ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯರವರು ಬಾಲ್ಯದಿಂದಲೂ ಕಷ್ಟಗಳನ್ನು ನೋಡಿದ್ದಾರೆ. ಗ್ರಾಮೀಣ ಭಾಗದ ಬದುಕಿನ ಸಂಕಷ್ಟಗಳೇನೆಂದು ಸ್ವತಃ ಅನುಭವಿಸಿರುವ ಹಿನ್ನೆಲೆ ಅವರಿಗೆ ಬಡವರ ಬಗ್ಗೆ ಅತೀವ ಕಾಳಜಿ, ಪ್ರೀತಿಯಿದೆ. ಜತೆಗೆ, ಬದುಕಿನಲ್ಲಿ ಶಿಸ್ತು ಮೈಗೂಡಿಸಿಕೊಂಡ ವ್ಯಕ್ತಿತ್ವ ಅವರದ್ದು. ವಿಶೇಷವಾಗಿ ಅವರು ತತ್ವ ಸಿದ್ಧಾಂತಕ್ಕೆ ಕಟಿಬದ್ಧರಾಗಿದ್ದಾರೆ. ಹೀಗಾಗಿಯೇ, ರಾಜಕೀಯ ಬದುಕಿನಲ್ಲಿ ಅತ್ಯುನ್ನತ ಪ್ರಗತಿ, ದಾಖಲೆಯನ್ನು ಮಾಡಿದ್ದಾರೆ. ಡಿ.ದೇವರಾಜು ಅರಸುರವರನ್ನು ನೇರ ನೋಡಲಾಗಲಿಲ್ಲ. ಆದರೆ, ಸಿದ್ದರಾಮಯ್ಯನವರನ್ನು ಸ್ವತಃ ನೋಡಿ, ಅವರೊಂದಿಗೆ ಕೆಲಸ ಮಾಡುವ ಅವಕಾಶ ಸಿಕ್ಕಿದೆ. ಅತ್ಯಂತ ಸಮೀಪದಿಂದ ಅವರ ಕಾರ್ಯವೈಖರಿ ನೋಡುವ ಪ್ರತಿಬಾರಿಯೂ ಅವರಿಂದ ಸಾಕಷ್ಟು ಕಲಿಯುತ್ತಿದ್ದೇವೆ. ರಾಜಕಾರಣದಲ್ಲಿ ಯಾವುದೇ ಹೊಂದಾಣಿಕೆಗಳಿಲ್ಲದೇ, ಸಮರ್ಥವಾಗಿ ನಿಲ್ಲುವ ನೈಪುಣ್ಯತೆ ಅವರಲ್ಲಿದೆ. ಜೆಡಿಎಸ್‌ನಲ್ಲಿ ಮುಖ್ಯಮಂತ್ರಿ ಅವಕಾಶ ಸಿಕ್ಕಿರಲಿಲ್ಲ. ನಂತರ ಅವರು ಕಾಂಗ್ರೆಸ್‌ಗೆ ಬಂದಾಗ ಪಕ್ಷಕ್ಕೂ ಸಾಕಷ್ಟು ಶಕ್ತಿ ಬಂತು. ಜತೆಗೆ, ಕಾಂಗ್ರೆಸ್ ಪಕ್ಷದಿಂದ ಮುಖ್ಯಮಂತ್ರಿ ಸ್ಥಾನಕ್ಕೂ ಬಂದಿದ್ದಾರೆ. ಕಷ್ಟದಿಂದ ಬಂದ ಅವರಿಗೆ ಅಧಿಕಾರ ಸಿಕ್ಕ ತಕ್ಷಣ ಬಡವರ ಪರ ಯೋಜನೆಗಳನ್ನು ಜಾರಿಗೊಳಿಸುತ್ತಿದ್ದಾರೆ. ಮೊದಲ ಅವಧಿಯ ಭಾಗ್ಯಗಳು ಮಾತ್ರವಲ್ಲದೇ, ಪ್ರಸ್ತುತ ಗ್ಯಾರಂಟಿ ಯೋಜನೆಗಳು ಜನಪರವಾಗಿವೆ. ಮುಖ್ಯವಾಗಿ ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ, ಅನ್ನಭಾಗ್ಯ ಯೋಜನೆಗಳು ಮಹಿಳೆಯರ ಸುತ್ತ ಗಿರಕಿ ಹೊಡೆಯುತ್ತಿವೆ. ಅವರನ್ನೇ ಕೇಂದ್ರೀಕರಿಸಿವೆ. ಹೀಗೆ ಒಟ್ಟಾರೆ, ಜನಸಮುದಾಯದ ಅಭಿವೃದ್ಧಿಗೆ ಸದಾ ದುಡಿಯುವ ವ್ಯಕ್ತಿತ್ವ ಸಿದ್ದರಾಮಯ್ಯನವರದ್ದು. ಅವರ ಸಂಪುಟದಲ್ಲಿ ದುಡಿಯುತ್ತಿರುವುದು ನಿಜಕ್ಕೂ ಹೆಮ್ಮೆಯೆನಿಸಿದೆ.'- ಎಂದು ಸಂತಸ ಹಂಚಿಕೊಂಡರು.

ಪ್ರಸ್ತುತಿ
ಪಿ.ವಿ.
ಬ್ರ್ಯಾಂಡ್
ಸ್ಪಾಟ್




ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪ್ರತಿಕ್ರಿಯೆ ನೀಡಿ, 'ಧರ್ಮಸಿಂಗ್‌ರವರ ಸಂಪುಟದಲ್ಲಿ ನಾನು ಶಿಕ್ಷಣ ಸಚಿವನಾಗಿದ್ದೆ. ಸಿದ್ದರಾಮಯ್ಯನವರು ಹಣಕಾಸು ಖಾತೆ ನಿರ್ವಹಿಸುತ್ತಿದ್ದರು. ಅಂದಿನಿಂದಲೂ ಅವರ ವೃತ್ತಿಪರತೆ, ಶಿಸ್ತು, ಜನಪರ ಕಾಳಜಿಯನ್ನು ಗಮನಿಸಿದ್ದೇನೆ. ಇಲಾಖೆಯ ಯಾವುದೇ ಯೋಜನೆಗಳಿಗೆ ಸಂಪೂರ್ಣ ಸಹಕಾರ ನೀಡುತ್ತಿದ್ದರು. ಅಂದಿನ ಕಾಲಕ್ಕೆ 5ನೇ ತರಗತಿವರೆಗೆ ಮಾತ್ರ ಇದ್ದ ಬಿಸಿಯೂಟ ಯೋಜನೆಯನ್ನು ಮುಂದಿನ ತರಗತಿಗಳಿಗೆ ವಿಸ್ತರಿಸುವ ಯೋಜನೆಗೆ ಅಗತ್ಯ ಸಹಕಾರವನ್ನು ನೀಡಿದ್ದರು. ಸರ್ವಶಿಕ್ಷಣ ಅಭಿಯಾನಕ್ಕೂ ಪೂರಕ ಅನುದಾನಗಳನ್ನು ಒದಗಿಸುವ ಮೂಲಕ ಶಿಕ್ಷಣದ ಕಡೆಗೆ ಅವರಿಗಿದ್ದ ಬದ್ಧತೆಯನ್ನು ತೋರಿದ್ದರು. ವಿಶೇಷವಾಗಿ, ಅವರಲ್ಲಿ ಮಾತು ಬದಲಾಯಿಸುವ ಗುಣವಿಲ್ಲ. ನುಡಿದಂತೆ ನಡೆಯುವ ಗುಣವನ್ನು ಬೆಳೆಸಿಕೊಂಡಿದ್ದಾರೆ. ಅವರ ನೆನಪಿನ ಶಕ್ತಿ ಎಲ್ಲರನ್ನೂ ಬೆರಗುಗೊಳಿಸುತ್ತದೆ. ಸಮರ್ಥ ನಾಯಕರಾಗಿ ಗುರುತಿಸಿಕೊಂಡಿರುವ ಅವರು ಗ್ಯಾರಂಟಿಗಳ ಜಾರಿಯಿಂದ ಮತ್ತಷ್ಟು ಜನಪರ ಆಡಳಿತ ಮುಂದುವರೆಸಿದ್ದಾರೆ. ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳು ಕೇವಲ ಕಾರ್ಯಕ್ರಮಗಳಾಗಿ ಉಳಿದಿಲ್ಲ. ಬದಲಾಗಿ, ಜನರ ಬದುಕು ಬದಲಿಸುವ ಕ್ರಾಂತಿಕಾರಕ ಕ್ರಮಗಳಾಗಿ ಗುರುತಿಸಿಕೊಂಡಿವೆ. ಶಕ್ತಿ ಯೋಜನೆಯಿಂದ ಬೆಂಗಳೂರಿನಲ್ಲಿ ಶೇ.23ರಷ್ಟು, ಹುಬ್ಬಳ್ಳಿಯಲ್ಲಿ ಶೇ.21ರಷ್ಟು ಉದ್ಯೋಗಾವಕಾಶಗಳು ವೃದ್ಧಿಯಾಗಿವೆ. ನಿತ್ಯ ನಡೆದು ಹೋಗುತ್ತಿದ್ದ ಗಾರ್ಮೆಂಟ್ ನೌಕಕರು, ಮನೆಗೆಲಸಕ್ಕೆ ಹೋಗುತ್ತಿದ್ದ ಮಹಿಳೆಯರು ಸೇರಿ ಸಾಕಷ್ಟು ಜನರಿಗೆ ಶಕ್ತಿ ಯೋಜನೆ ಬೆಂಬಲವಾಗಿದೆ. ಜತೆಗೆ, ಬೆಂಗಳೂರು ನಗರವೊಂದರಲ್ಲೇ ಬಿಎಂಟಿಸಿ ಪ್ರಯಾಣಿಕರ ಸಂಖ್ಯೆ ಸಾಮಾನ್ಯಕ್ಕಿಂತ 15ಲಕ್ಷ ಏರಿಕೆ ಕಂಡಿದೆ. ಇದರಿಂದ ಸಾಕಷ್ಟು ಆರ್ಥಿಕ ವಹಿವಾಟು, ಔದ್ಯೋಗಿಕ ಲಾಭ ಸೃಷ್ಟಿಯಾಗುತ್ತಿದೆ. ಹೀಗೆ, ರಾಜ್ಯದಲ್ಲಿ ಎಲ್ಲಾ ಗ್ಯಾರಂಟಿಗಳು, ಯೋಜನೆಗಳು ಜನಪರವಾಗಿ ಮೂಡಿಬರಲು ಸಿದ್ದರಾಮಯ್ಯನವರ ದೂರದೃಷ್ಟಿ ನಾಯಕತ್ವ ಪ್ರಮುಖ ಪಾತ್ರ ವಹಿಸಿದೆ ಎಂದು ತಿಳಿಸಿದ್ದಾರೆ.





ಅನ್ನಭಾಗ್ಯದಡಿ 'ಇಂದಿರಾಕಿಟ್'

ಗ್ಯಾರಂಟಿಗಳಿಗೆ ಸಂಬಂಧಿಸಿದಂತೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ ಪ್ರತಿಕ್ರಿಯೆ ನೀಡಿ, 'ರಾಜ್ಯದಲ್ಲಿ ಅನ್ನಭಾಗ್ಯ ಯೋಜನೆಯನ್ನು ಯಶಸ್ವಿಯಾಗಿ ನೀಡುತ್ತಿದ್ದೇವೆ. ಬಡವರ ಹಸಿವು ನೀಗಿಸುವ ಉದ್ದೇಶದಲ್ಲಿ ನೀಡಲಾಗುತ್ತಿರುವ ಈ ಯೋಜನೆ ಸಿದ್ದರಾಮಯ್ಯನವರ ಮೊದಲ ಆದ್ಯತೆಯಾಗಿದೆ. ಬಡವರ ಪರ ದನಿಯಾಗಿರುವ ಸಿದ್ದರಾಮಯ್ಯನವರು, ದೀರ್ಘಕಾಲದ ಮುಖ್ಯಮಂತ್ರಿ ಎನಿಸಿಕೊಂಡಿರುವುದು ಖುಷಿ ನೀಡಿದೆ. ಪ್ರಸ್ತುತ, ಅನ್ನಭಾಗ್ಯ ಯೋಜನೆಯಡಿ 5ಕೆಜಿ ಅಕ್ಕಿಯೊಂದಿಗೆ ತೊಗರಿಬೇಳೆ, ಸಕ್ಕರೆ, ಉಪ್ಪು ಸೇರಿದಂತೆ ಇಂದಿರಾಕಿಟ್ ನೀಡುವ ಕಾರ್ಯಕ್ರಮ ಸದ್ಯದಲ್ಲೇ ಆರಂಭಗೊಳ್ಳಲಿದೆ. ಕಾಂಗ್ರೆಸ್ ಸರ್ಕಾರ ಸದಾ ಬಡವರ ಪರ ಯೋಜನೆಗಳನ್ನು ರೂಪಿಸಲಿದ್ದು, ಸಿದ್ದರಾಮಯ್ಯನವರ ಸಹಕಾರ ಎಲ್ಲಾ ಕಾರ್ಯಕ್ರಮಗಳಿಗೂ ಸದಾ ಬೆನ್ನೆಲುಬಾಗಿರುತ್ತದೆ.'- ಎಂದಿದ್ದಾರೆ.



ಅಸಹಾಯಕರ ಕಣ್ಣೀರು ಒರೆಸಲಿ

ಮುಖ್ಯಮಂತ್ರಿ ಸಿದ್ದರಾಮಯ್ಯನವರು 1970ರ ರಾಜಕಾರಣದ ಉತ್ಪನ್ನ. ಸಮಾಜವಾದ, ಸಮತಾವಾದ, ಸಾಮಾಜಿಕ ನ್ಯಾಯ, ಕಲ್ಯಾಣ ರಾಜ್ಯ ಇಂತವು ಆ ಕಾಲದಲ್ಲಿ ಸಹಜ ಪ್ರವಾಹವಾಗಿತ್ತು. ಈ ಪ್ರವಾಹದ ಜೊತೆಗೆ ಈಜುತ್ತಾ, ಆ ಕಾಲದಲ್ಲಿದ್ದ ಮುಖ್ಯಮಂತ್ರಿ ದೇವರಾಜ ಅರಸು ಅವರು ಉಳುವವನಿಗೇ ಭೂಮಿ, ಜೀತಮುಕ್ತ, ಋಣಮುಕ್ತ, ಹಿಂದುಳಿದವರಿಗೆ ಮೀಸಲಾತಿ, ಮಲ ಹೊರುವ ಪದ್ಧತಿ ನಿಷೇಧ, ಜೊತೆಗೆ ಅದುವರೆಗೆ ಪ್ರಾತಿನಿಧ್ಯವಿಲ್ಲದ ಸಮುದಾಯಗಳಿಗೆ ಶಾಸನ ಸಭೆಯಲ್ಲಿ ಪ್ರಾತಿನಿಧ್ಯ, ಹೀಗೆ ಎದೆಗಾರಿಕೆಯ ಕೆಲಸಕಾರ್ಯ ಮಾಡಿ ದಕ್ಕಿಸಿಕೊಂಡರು. ಇವರಿಗೆ ಆ ಕಾಲವೂ ಪೂರಕವಾಗಿತ್ತು. ಈಗಲೂ, ತಮ್ಮ ಎದೆಯೊಳಗೆ 1970ರ ಸಮಾಜವಾದಿ ತುಡಿತವನ್ನು ಜೀವಂತವಾಗಿರಿಸಿಕೊಂಡಿರುವ ಸಿದ್ದರಾಮಯ್ಯ ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ. ಪ್ರಗತಿಪರ ಕಲ್ಯಾಣ ಕಾರ್ಯಕ್ರಮಗಳಿಗೆ, ಜಾಗತೀಕರಣ, ಖಾಸಗೀಕರಣದ ಈ ಕಾಲ ಪೂರಕವಾಗಿಲ್ಲ. ಹಾಗಾಗಿ, ಪ್ರವಾಹದ ವಿರುದ್ಧ ಈಜಬೇಕು. ಇದಕ್ಕೆ ಅಪಾರ ಸತ್ವ, ಧೃಡಚಿತ್ತ ಬೇಕು. ಸಿದ್ದರಾಮಯ್ಯನವರಿಗೆ ಇದೆ ಅನಿಸುತ್ತದೆ. ಹಾಗಾಗಿ, ಗುತ್ತಿಗೆ ಕೆಲಸದಲ್ಲಿ ದಲಿತರು ಮತ್ತು ಹಿಂದುಳಿದವರಿಗೆ ಮೀಸಲಾತಿ, ಪಿಟಿಸಿಎಲ್ ಕಾಯ್ದೆ ಜಾರಿ, ಎಸ್‌ಸಿಪಿ, ಟಿಎಸ್‌ಪಿಯಲ್ಲಿ 7ಡಿ ರದ್ದು. ದೇವನಹಳ್ಳಿ ಡಿನೋಟಿಫಿಕೇಶನ್, ಒಳಮೀಸಲಾತಿ, ಗ್ಯಾರಂಟಿ ಯೋಜನೆ ಇಂತಹಾ ಮತ್ತಿತರ ಯೋಜನೆಗಳನ್ನು ಜಾರಿಗೊಳಿಸಿದರು. ಇಂದು ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಏನೇನೋ ರೆಕಾರ್ಡ್‌ಗಳನ್ನು ಮುರಿದರಂತೆ. ಆಯ್ತು, ಅವರು ಈಗ ಹಿಂದಿನಂತೆ ವಿಳಂಬ ಮಾಡದೆ, ಅಸಹಾಯಕರ ಕಣ್ಣೀರು ಒರೆಸುವತ್ತ ವೇಗವಾಗಿ ನಡೆಯಲಿ ಎಂದು ವಿನಂತಿಸುವೆ.


ದೇವನೂರ ಮಹಾದೇವ, ಲೇಖಕ ಮತ್ತು ಹೋರಾಟಗಾರ



ಸಂವಿಧಾನದ ಆಶಯ ಈಡೇರಿಕೆಗೆ ಪ್ರಯತ್ನ

ಒಂದು ರಾಜ್ಯ ಅಭಿವೃದ್ಧಿ ಪಥದಲ್ಲಿ ನಡೆಯಬೇಕೆಂದರೆ ರಚನಾತ್ಮಕ ನಿರ್ಧಾರಗಳನ್ನು ಕೈಗೊಳ್ಳುವ ಸರ್ಕಾರ ಅಗತ್ಯ. ತಳಮಟ್ಟದ ಜನರ ಅಗತ್ಯಗಳಿಗೆ ಸ್ಪಂದಿಸಿ, ಅವರ ಜೀವನಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಯಾವುದೇ ಸರ್ಕಾರ ಸ್ಪಂದಿಸಬೇಕು. ಹೀಗಾದಲ್ಲಿ ಮಾತ್ರ ರಾಜ್ಯ ಸುಧಾರಣೆಯತ್ತ ಮರಳುತ್ತದೆ. ಸ್ವಾತಂತ್ರ್ಯ ಪೂರ್ವದ ಆಡಳಿತಗಳು ಕೇವಲ ಗಡಿ ರಕ್ಷಣೆ, ರಾಜ್ಯ ವಿಸ್ತರಣೆ, ಆಳ್ವಿಕೆ, ತೆರಿಗೆ ಸಂಗ್ರಹ, ಆಡಳಿತಕ್ಕೆ ಸೀಮಿತವಿದ್ದವು. ಜನರ ಮೂಲಸೌಕರ್ಯಗಳಿಗೂ ಸ್ಪಂದಿಸದೇ ತೀವ್ರ ಅವ್ಯವಸ್ಥೆಯಲ್ಲಿ ಜನ ವಾಸಿಸಬೇಕಿತ್ತು. ಸಂವಿಧಾನ ಸಾಮಾನ್ಯ ಬದುಕು ಗೌರವಯುತವಾಗಿ ಬದಲಾಗುವ ಅನೇಕ ಹಾದಿಗಳನ್ನು ಸೃಷ್ಟಿಸಿಕೊಟ್ಟಿದೆ. ಈ ಪಥದಲ್ಲಿ ರಾಜ್ಯ ಸರ್ಕಾರ ಅನೇಕ ಹೆಜ್ಜೆಗಳನ್ನಿಟ್ಟಿದೆ. ಗ್ಯಾರಂಟಿ ಯೋಜನೆಗಳು ಆರ್ಥಿಕವಾಗಿ ಸಶಕ್ತರಿಗಿಂತ ಎಲ್ಲೋ ಕುಗ್ರಾಮದಲ್ಲಿ ಕೂಲಿ ಮಾಡಿಕೊಂಡು ಬದುಕು ಕಟ್ಟಿಕೊಳ್ಳುವ ತಳಮಟ್ಟದ ಜನರ ಬದುಕು ಬದಲಿಸಿದೆ. ಉಚಿತ ಯೋಜನೆಗಳು ಎಂದಿಗೂ ಎಲ್ಲರಿಗೂ ಕೊಡಬೇಕೆಂದಿಲ್ಲ. ಯಾರು ದುರ್ಬಲರಿದ್ದಾರೆ, ಯಾರ್ಯಾರು ಆರ್ಥಿಕವಾಗಿ ಅಶಕ್ತರಿದ್ದಾರೆ ಅವರಿಗೆ ನೀಡಿದರೂ ಪ್ರಗತಿಯ ಪಥ ಸುಧಾರಿಸುತ್ತದೆ. ರಾಜ್ಯದ ಗ್ಯಾರಂಟಿ ಯೋಜನೆಗಳಿಗೆ ಒಂದಷ್ಟು ಮಾನದಂಡಗಳನ್ನು ಬದಲಿಸಬೇಕಿದೆ. ಆದರೆ, ಇಡೀ ಯೋಜನೆಗಳನ್ನು ಬದಲಿಸಬೇಕೆಂದಿಲ್ಲ. ಯೋಜನೆಗಳಿಂದ ನಿಜಕ್ಕೂ ಅನೇಕ ಉಪಯೋಗಗಳನ್ನು ಗುರುತಿಸಬಹುದು. ಪದವಿ ಮುಗಿಸಿದ ವಿದ್ಯಾರ್ಥಿಯೊಬ್ಬ ಉದ್ಯೋಗಕ್ಕಾಗಿ ಹುಡುಕಿ, ನಿರುದ್ಯೋಗದಿಂದ ಬೇಯಬಾರದು. ಉದ್ಯೋಗ ಸಿಗುವವರೆಗೆ ಆತನ ಬದುಕು ಹಸನಾಗಿರಬೇಕು. ಉದ್ಯೋಗ ಸಿಗದೇ, ಆರ್ಥಿಕ ಸಮಸ್ಯೆಗಳಿಗೆ ತುತ್ತಾಗಿ, ಅನಾರೋಗ್ಯದ ನಡುವೆ ನರಳಬಾರದು. ಬದಲಾಗಿ, ಆ ಉದ್ಯೋಗ ಹುಡುಕುವ ಅವಧಿಯಲ್ಲಿ ಉಸಿರಾಡಲು ಒಂದಷ್ಟು ಆಮ್ಲಜನಕ, ಆತನ ದಾಹ ತೀರಿಸಲು ನೀರು, ಅಗತ್ಯ ಊಟ ಸಿಕ್ಕರೆ ಆತ ಮತ್ತಷ್ಟು ಪ್ರಯತ್ನಿಸುತ್ತಾರೆ. ಉದ್ಯೋಗ ದಕ್ಕಿಸಿಕೊಳ್ಳುತ್ತಾನೆ. ಆರೋಗ್ಯವಾಗಿ ದುಡಿಮೆಗೆ ಮರಳಿ ಆರ್ಥಿಕವಾಗಿ ಸದೃಢನಾಗುತ್ತಾನೆ. ಓರ್ವ ಯುವಕ ಆರ್ಥಿಕವಾಗಿ ಸುಸ್ಥಿರಕ್ಕೆ ಬರುವುದೆಂದರೆ ಅದು ರಾಜ್ಯದ, ದೇಶದ ಪ್ರಗತಿ. ಹೀಗೆ, ಸರ್ಕಾರದ ಒಂದು ಯೋಜನೆ ಅರ್ಥವ್ಯವಸ್ಥೆಗೆ ಕೊಡುಗೆ ನೀಡುವ, ರಾಜ್ಯವನ್ನು ಸುಸ್ಥಿರತೆಯ ಕಡೆಗೆ ಕೊಂಡೊಯ್ಯುವಂತಿರಬೇಕು. ಸಂವಿಧಾನದ ಆಶಯದಂತೆ ಎಲ್ಲಾ ಜನರನ್ನು ಸಮನಾಗಿ ಕಾಣಬೇಕು. ಬಡವರ ಬದುಕು ಬದಲಿಸುವ ಯೋಜನೆಗಳಿಂದ ದೇಶದ ಪ್ರಗತಿ ಸಾಧ್ಯ. ಈ ಹಾದಿಯಲ್ಲಿ ಸಿದ್ಧರಾಮಯ್ಯನವರ ನಾಯಕತ್ವ ಸಮರ್ಥವಾಗಿದೆ. ಸರ್ಕಾರಗಳಿಗೆ ಸಾಮಾನ್ಯವಾಗಿ ಸಾಕಷ್ಟು ರಾಜಕೀಯ ಒತ್ತಡಗಳಿರುತ್ತವೆ. ಈ ಒತ್ತಡಗಳ ನಡುವೆ ಜನಪರ ಆಡಳಿತ ಸಾಧ್ಯವಾಗಿಸಬೇಕಿರುತ್ತದೆ. ಭಾಗ್ಯಗಳು ಮತ್ತು ಗ್ಯಾರಂಟಿ ಯೋಜನೆಗಳು ಪ್ರತ್ಯೇಕವಾಗಿ ತಳಮಟ್ಟದ ಬಡವರ ಬದುಕಿಗೆ ಆಕ್ಸಿಜನ್ ರೀತಿ ಕೆಲಸ ಮಾಡಿವೆ. ಮಾಡುತ್ತಿವೆ. ಈ ಪ್ರಯೋಗಗಳನ್ನು ಕೇವಲ ರಾಜ್ಯ ಸ್ವೀಕರಿಸಿದ್ದಲ್ಲ. ಬದಲಾಗಿ, ಹೊರ ರಾಜ್ಯಗಳು ಮಾತ್ರವಲ್ಲದೇ ಕೇಂದ್ರ ಸರ್ಕಾರವೇ ಅನುಕರಣೆ ಮಾಡಿದೆ. ರಾಜಕೀಯ ಉದ್ದೇಶ ಏನೇ ಇದ್ದರೂ, ತಳಮಟ್ಟದ ಜನರ ಜೀವನಮಟ್ಟ ಸುಧಾರಣೆಗೆ ಯೋಜನೆಗಳು ಸಾಕಷ್ಟು ಕೊಡುಗೆ ನೀಡುತ್ತಿವೆ. ಡಿ.ದೇವರಾಜ ಅರಸುರವರನ್ನು ಸಿದ್ಧರಾಮಯ್ಯನವರೊಂದಿಗೆ ಹೋಲಿಕೆ ಮಾಡಲಾಗದು. ಏಕೆಂದರೆ, ಇಬ್ಬರ ಕಾಲಘಟ್ಟ ಪ್ರತ್ಯೇಕ. ಪರಿಸ್ಥಿತಿಗಳು ತದ್ವಿರುದ್ಧ. ದೇವರಾಜ ಅರಸುರವರ ಕಾಲದ ವ್ಯವಸ್ಥೆಗಳು, ಆರ್ಥಿಕ ಸ್ಥಿತಿ, ರಾಜಕೀಯ ಅವಕಾಶಗಳು, ಮೂಲಸೌಕರ್ಯ ಹೀಗೆ ಎಲ್ಲಾ ಅಂಶಗಳು ಅಂದಿನ ಕಾಲದ ಸವಾಲುಗಳ ನಡುವೆ ಇದ್ದವು. ಪ್ರಸ್ತುತ, ಎಐ ಯುಗ ನಡೆಯುತ್ತಿದೆ. ಜಾಗತಿಕ ಪರಿಸ್ಥಿತಿಯಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಈ ಪರಿಸ್ಥಿತಿಗಳ ನಡುವೆ ಸರ್ಕಾರಗಳು ನಡೆಯಬೇಕಿದೆ. ಹೀಗಾಗಿ, ಇಬ್ಬರ ಹೋಲಿಕೆ ಸರಿಯಲ್ಲ. ಆದರೆ, ಸಮರ್ಥ ಆಡಳಿತ ಸಿಗುತ್ತಿದೆ. ಬಡವರ ಅಭ್ಯುದಯಕ್ಕೆ ಪೂರಕ ವಾತಾವರಣವಿದೆ. ಇನ್ನಷ್ಟು ಪಾರದರ್ಶಕ ಮೌಲ್ಯಗಳೊಂದಿಗೆ, ಜನಪರ ಕಾಳಜಿಯೊಂದಿಗೆ ಮುಂದುವರಿದು, ಜನರ ಬದುಕು ಹಸನಾಗಲಿ. ಸಂವಿಧಾನದ ಆಶಯ ಈಡೇರಲಿ.

ಡಾ.ಎಚ್.ಎನ್.ನಾಗಮೋಹನ ದಾಸ್, ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರು



ಕೋಟ್ಯಾಂತರ ಜನರಿಗೆ ಗ್ಯಾರಂಟಿ ಶ್ರೀರಕ್ಷೆ

'ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದಾಗ ಟೀಕಿಸಿದ್ದ ಇತರೆ ಸರ್ಕಾರಗಳೀಗ ಕಾಂಗ್ರೆಸ್ ಕಾರ್ಯಕ್ರಮಗಳನ್ನು ಅನುಕರಣೆ ಮಾಡುತ್ತಿದ್ದಾರೆ. ಏಕೆಂದರೆ, ಈ ಯೋಜನೆಗಳು ಸಾಮಾಜಿಕವಾಗಿ ಸಾಕಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ. ಬಡವರ ಆರ್ಥಿಕ ಮಟ್ಟವನ್ನು ಸಾಮಾಜಿಕವಾಗಿ ಬದಲಾಯಿಸಲು ನೆರವಾಗುವ ಈ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯ ಸರ್ಕಾರ ಬಡವರ ಬದುಕನ್ನು ಬದಲಿಸುವ ಕಾಯಕವನ್ನು ಕಟಿಬದ್ಧವಾಗಿ ಮಾಡುತ್ತಿದ್ದು, ಸಿದ್ದರಾಮಯ್ಯನವರ ನೇತೃತ್ವ ಎಲ್ಲರ ಗಮನ ಸೆಳೆಯುತ್ತದೆ. ಸಮಾಜವಾದಿ ಹಿನ್ನೆಲೆಯಿಂದ ಬಂದಿರುವ ಅವರು, ರಾಜ್ಯ ಕಂಡಿರುವ ಅತ್ಯುತ್ತಮ ಆಡಳಿತಗಾರ. ಬದ್ಧತೆಯ ರಾಜಕಾರಣಿ. ಇಡೀ ದೇಶದ ರಾಜಕೀಯ ಇತಿಹಾಸದಲ್ಲಿ ರಾಜ್ಯಕ್ಕೆ ಪ್ರತ್ಯೇಕ ಗುರುತು ಸಿಗುವಂತೆ ಸಾಕಷ್ಟು ಶ್ರಮಿಸುತ್ತಿದ್ದಾರೆ. ರಾಷ್ಟ್ರ ಮಟ್ಟದಲ್ಲಿ ರಾಜ್ಯಕ್ಕಾಗುವ ಅನುದಾನ ತಾರತಮ್ಯಗಳ ವಿರುದ್ಧ ಹೋರಾಟ ರೂಪಿಸುವ ಜನಪರ ನಾಯಕ ಸಿದ್ದರಾಮಯ್ಯ. 'ನಮ್ಮ ತೆರಿಗೆ, ನಮ್ಮ ಹಕ್ಕು' ಹೋರಾಟದ ಮೂಲಕ ಕೇಂದ್ರದ ಧೋರಣೆಯನ್ನು ಖಂಡಿಸಿದ ಅಪ್ರತಿಮ ಹೋರಾಟಗಾರ. ಅವರ ಆಡಳಿತ ಡಿ.ದೇವರಾಜ ಅರಸುರವರ ಸುದೀರ್ಘ ಮುಖ್ಯಮಂತ್ರಿ ದಾಖಲೆಯನ್ನು ಮೀರಿಸಿರುವುದು ವಯಕ್ತಿಕವಾಗಿ ಖುಷಿ ನೀಡಿದೆ.

ಎಚ್.ಎಂ.ರೇವಣ್ಣ, ರಾಜ್ಯ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರು

ಸಿದ್ದರಾಮಯ್ಯನವರದ್ದು ಒಳಗೊಳ್ಳುವಿಕೆಯ ರಾಜಕಾರಣ



ಸರ್ಕಾರಗಳನ್ನು ಮುನ್ನಡೆಸುವವರು ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗುವ 'ಒಳಗೊಳ್ಳುವಿಕೆಯ ರಾಜಕಾರಣ' ನಡೆಸಬೇಕಾಗುತ್ತದೆ. ಈಗಿನ ಕಾಲಘಟ್ಟದಲ್ಲಿ ಸಿದ್ಧಾಂತಗಳೊಂದಿಗೆ ಬದ್ಧತೆಯುಳ್ಳ ವ್ಯಕ್ತಿಗಳು ರಾಜಕಾರಣದಲ್ಲಿ ತೀರಾ ವಿರಳ. ಈ ಹಾದಿಯಲ್ಲಿ ಸಿದ್ದರಾಮಯ್ಯನವರು ಸಮರ್ಥವಾಗಿ ನಿಂತಿದ್ದಾರೆ. ಸಮಾಜವಾದಿ ಸಿದ್ಧಾಂತದ ಹಿನ್ನೆಲೆಯಿಂದ ಬಂದು, ಅತ್ಯಂತ ಬದ್ಧತೆಯ ನಾಯಕರಾಗಿ ಗುರುತಿಸಿಕೊಂಡಿದ್ದಾರೆ. ಅವರ ಬದ್ಧತೆ ಸರ್ಕಾರದಿಂದ ನೀಡುತ್ತಿರುವ ಗ್ಯಾರಂಟಿಗಳ ಮೂಲಕ ಗಮನಿಸಬಹುದು. ಸರ್ಕಾರಗಳು ಎಲ್ಲರನ್ನೂ ಸಮಾನವಾಗಿ ಪರಿಗಣಿಸಿ, ಎಲ್ಲರ ಬದುಕು ಸುಸ್ಥಿತಿಯತ್ತ ಮರಳಿಸಲು ಅಗತ್ಯ ಕ್ರಮ, ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ಈ ಹಾದಿಯಲ್ಲಿ ಸರ್ಕಾರದ ಗ್ಯಾರಂಟಿಗಳನ್ನು ಉಚಿತ-ಅನುಚಿತ ಎನ್ನುವ ದೃಷ್ಟಿಯಲ್ಲಿ ನೋಡುವಂತೆಯೇ ಇಲ್ಲ. ಜನರ ಜೀವನಮಟ್ಟ ಸುಧಾರಿಸಲು ಸರ್ಕಾರಗಳು ಅಗತ್ಯವಾಗಿ ಮಾಡಬೇಕಾದ ಕೆಲಸವನ್ನು ಸಿದ್ದರಾಮಯ್ಯನವರು ಮಾಡಿದ್ದಾರೆ. ಇಂದಿಗೂ ಅನೇಕ ಕುಟುಂಬಗಳು ಕೇವಲ 10ಸಾವಿರ ರೂ.ಮಾಸಿಕ ವೇತನದಲ್ಲಿ ಬದುಕು ನಡೆಸುತ್ತಿವೆ. ಇಂಥಹಾ ಕುಟುಂಬಗಳಿಗೆ ಗ್ಯಾರಂಟಿ ಯೋಜನೆಗಳು ಅಗತ್ಯ. ಜತೆಗೆ, ಇಂದಿನ ಪೀಳಿಗೆಯ ಯುವಕರು ಸಿದ್ದರಾಮಯ್ಯರ ಸಿದ್ಧಾಂತ, ವೈಚಾರಿಕ ಮನೋಭಾವ, ನಾಯಕತ್ವ ಗುಣಗಳನ್ನು ಅಳವಡಿಸಿಕೊಂಡು, ನೆಲಮಟ್ಟದಿಂದ ಜನರ ಸಮಸ್ಯೆಗಳಿಗೆ ದನಿಯಾಗಿ ಬೆಳೆಯುವ ಹಾದಿಯನ್ನು ಅನುಸರಿಸಬೇಕಿದೆ.

ಡಾ.ಎಚ್.ಎಸ್.ಅನುಪಮಾ, ಸಾಹಿತಿ.


ಸೈದ್ಧಾಂತಿಕ ಹಿನ್ನೆಲೆಯ ನಾಯಕ



'80ರ ದಶಕದಲ್ಲಿ ಧಾರವಾಡದಲ್ಲೊಮ್ಮೆ ಬಂಡಾಯ ಸಂಘಟನೆ ಕಾರ್ಯಕ್ರಮವೊಂದರಲ್ಲಿ ಸಿದ್ದರಾಮಯ್ಯನವರು ಭಾಷಣ ಮಾಡಲು ಬಂದಿದ್ದರು. ಮೊದಲ ಬಾರಿಗೆ ಅವರ ಪರಿಚಯವಾಗಿತ್ತು. ವಿಶೇಷವಾಗಿ ಸೈದ್ಧಾಂತಿಕ ಹಿನ್ನೆಲೆಯಿಂದ ಗಮನಿಸುವುದಾದರೆ, ಒಂದೇ ಆಲೋಚನೆ, ಪ್ರಗತಿಪರ ಚಿಂತನೆಯಿಂದಾಗಿ ನಮ್ಮವರು ಎಂದೆನಿಸುತ್ತಾರೆ. ಜತೆಗೆ, ಅವರ ಜನಪರ ಕಾಳಜಿ ನಿಜಕ್ಕೂ ಅತ್ಯಂತ ಖುಷಿಯೆನಿಸುತ್ತದೆ. ಜತೆಗೆ, ಆರಂಭದಿಂದಲೂ ಸಮಾಜದಲ್ಲಿನ ಶೋಷಿತ ವರ್ಗಗಳ ಸಮಸ್ಯೆಗಳ ಕುರಿತು ಹೋರಾಟ ಮನೋಭಾವನೆಯುಳ್ಳವರಾಗಿದ್ದಾರೆ. ಅಧಿಕಾರಕ್ಕೆ ಬಂದ ಬಳಿಕ ಅವರ ಚಿಂತನೆಗಳೆಲ್ಲಾ ಕೃತಿ ರೂಪದಲ್ಲಿ ಮಾರ್ಪಟ್ಟಿವೆ. ಕೇವಲ ಭಾಷಣಕ್ಕೆ ಸೀಮಿತವಾಗದೇ, ಅನೇಕ ಕಾರ್ಯಕ್ರಮಗಳ ಸ್ವರೂಪದಲ್ಲಿ ಬಡವರ ನೋವಿಗೆ ಸ್ಪಂದಿಸಿದ್ದಾರೆ. ಹೀಗಾಗಿಯೇ ಅವರು ಸಾರ್ವಕಾಲಿಕ ನಾಯಕ ಎಂದೆನಿಸುತ್ತಾರೆ. ಅವರ ಆರಂಭದ ದಿನಗಳಿಂದಲೂ ಸಮಾಜವಾದಿ, ಸಮತಾವಾದಿ, ಲೋಹಿಯಾವಾದಿಗಳ ಜತೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದ ಹಿನ್ನೆಲೆ ರಾಜ್ಯ ಕಂಡ ಅತ್ಯಂತ ವಿಶಿಷ್ಟ ವ್ಯಕ್ತಿತ್ವವಾಗಿ ಹೊರಹೊಮ್ಮಿದ್ದಾರೆ. ಜತೆಗೆ, ರಾಜಕಾರಣಿಯಾಗಿಯೂ ಅತ್ಯಂತ ಅಧ್ಯಯನಶೀಲ ಹಿನ್ನೆಲೆಯುಳ್ಳವರಾಗಿದ್ದಾರೆ. ರಾಜಕೀಯದಲ್ಲಿ ಸಿಕ್ಕಿರುವ ಅವಕಾಶಗಳಲ್ಲೆವನ್ನೂ ಸಮಾಜಕ್ಕೆಂದು ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದು, ಡಿ.ದೇವರಾಜ ಅರಸುರವರ ನಂತರ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ಸಿದ್ದರಾಮಯ್ಯ, ಎಲ್ಲ ಕಾಲಕ್ಕೂ ನಾಯಕರಾಗಿಯೇ ಉಳಿಯುತ್ತಾರೆ. ಈ ಕಾರ್ಯಕ್ರಮಗಳ ವಿಚಾರದಲ್ಲಿ ಪಕ್ಷಾತೀತವಾಗಿ ಅಭಿನಂದಿಸಬೇಕಿದೆ. ಪ್ರಸ್ತುತ, ಗ್ಯಾರಂಟಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರ ಕೆಲವೊಂದು ಮಾನದಂಡಗಳನ್ನು ರೂಪಿಸಿಕೊಳ್ಳಬೇಕಿದೆ. ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ ಯೋಜನೆಗಳಿಗೆ, ಕೆಲವೊಂದಿಷ್ಟು ಮಾನದಂಡಗಳ ಆಧಾರದಲ್ಲಿ ಸೌಲಭ್ಯಗಳನ್ನು ಒದಗಿಸಬೇಕು. ಅತ್ಯಂತ ಕಡುಬಡತನದಲ್ಲಿರುವ, ತಳಮಟ್ಟದಲ್ಲಿನ ಜನರಿಗೆ ಈ ಯೋಜನೆಗಳು ಅತ್ಯಂತ ಅವಶ್ಯ. ಹೀಗಾಗಿ, ಅರ್ಥಪೂರ್ಣ ಯೋಜನೆಗಳು ದುರುಪಯೋಗವಾಗುವುದನ್ನು ತಡೆಗಟ್ಟಬೇಕಿದೆ. ಒಟ್ಟಾರೆ, ಸಿದ್ದರಾಮಯ್ಯನವರು ಅತ್ಯಂತ ಒಳ್ಳೆಯ ಮುಖ್ಯಮಂತ್ರಿಯೆನಿಸಿದ್ದಾರೆ.

ಸುಕನ್ಯಾ ಮಾರುತಿ, ಸಾಹಿತಿ.

ನೌಕಕರ ಹಿತಕಾಯುವ ನೇತಾರ



ರಾಜ್ಯದ ಜನಹಿತ ಕಾಯುವ ಸಿದ್ಧರಾಮಯ್ಯನವರು ಸರ್ಕಾರಿ ನೌಕಕರ ಪರ ಸಾಕಷ್ಟು ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ಮಾಡುತ್ತಿದ್ದಾರೆ. 6ನೇ ವೇತನ ಆಯೋಗದಲ್ಲಿ 10.530ಕೋಟಿ ರೂ, 7ನೇ ವೇತನ ಆಯೋಗದಲ್ಲಿ 17ಸಾವಿರ ಕೋಟಿ ರೂ.ಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಅತಿಮುಖ್ಯವಾಗಿ ರಾಜ್ಯಾದ್ಯಂತ ಸರ್ಕಾರಿ ನೌಕರರ ಕುಟುಂಬಗಳ 25ಲಕ್ಷ ಜನರಿಗೆ ಉಚಿತ ಚಿಕಿತ್ಸೆಗಾಗಿ 1500 ಕೋಟಿ ರೂ. ವೆಚ್ಚದ ಯೋಜನೆ ಕಳೆದ ಅಕ್ಟೋಬರ್‌ನಿಂದ ಜಾರಿಗೆ ಬಂದಿದೆ. ಈ ಹಿಂದೆ 2014ರಲ್ಲಿ ಜ್ಯೋತಿ ಸಂಜೀವಿನಿ ಯೋಜನೆಯ ಮೂಲಕ ಗಂಭೀರ ಸ್ವರೂಪದ 7ರೋಗಗಳಿಗೆ ಉಚಿತ ಚಿಕಿತ್ಸೆಗೆ ಅವಕಾಶ ಮಾಡಿಕೊಟ್ಟಿದ್ದರು. ಹೀಗೆ, ಸದಾ, ಸರ್ಕಾರಿ ನೌಕಕರ ಹಿತ ಕಾಯುವ ನಾಯಕರಾಗಿ ಸಿದ್ದರಾಮಯ್ಯನವರು ಗುರುತಿಸಿಕೊಂಡಿದ್ದಾರೆ. ಈ ಕಾಲಘಟ್ಟದಲ್ಲಿ ಯಾವುದೇ ಕಪ್ಪು ಚುಕ್ಕೆಗಳಿಲ್ಲದೇ ಚಾರಿತ್ರ್ಯವನ್ನು ಕಾಪಾಡಿಕೊಂಡು, ಸಮರ್ಥ ಮುಖ್ಯಮಂತ್ರಿಗಳೆನಿಸಿದ್ದಾರೆ. ಸುದೀರ್ಘ ಅವಧಿಯ ಮುಖ್ಯಮಂತ್ರಿಗಳೆನಿಸಿ ದಾಖಲೆ ಸೃಷ್ಟಿಸಿರುವ ಸಿದ್ದರಾಮಯ್ಯನವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

ಸಿ.ಎಸ್.ಷಡಾಕ್ಷರಿ, ರಾಜ್ಯ ಸರ್ಕಾರಿ ನೌಕಕರ ಸಂಘದ ಅಧ್ಯಕ್ಷರು.

ಗ್ಯಾರಂಟಿ ಅನುಷ್ಠಾನದ ಅಂಕಿಅಂಶಗಳು (ಆರಂಭದಿಂದ 2025ರ ಅಂತ್ಯಕ್ಕೆ)

ಯೋಜನೆ	ಫಲಾನುಭವಿಗಳು	ಅನುದಾನ (ರೂ. ಕೋಟಿಗಳಲ್ಲಿ)
ಗೃಹಲಕ್ಷ್ಮಿ	1.24ಕೋಟಿ	57,381
ಗೃಹಜ್ಯೋತಿ	1.65ಕೋಟಿ	21,239
ಶಕ್ತಿ ಯೋಜನೆ	638ಕೋಟಿ	16,479
ಅನ್ನಭಾಗ್ಯ(ಡಿಬಿಟಿ)	72.02ಕೋಟಿ	11,821.17
ಯುವನಿಧಿ	2.98ಲಕ್ಷ	874

(ಮಾಹಿತಿ ಮೂಲ : ರಾಜ್ಯ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರ)

ಗ್ಯಾರಂಟಿಗಳೆನ್ನುವ ಬಡವರ ಆಮ್ಲಜನಕ!

'ಗೌರಿಬಿದನೂರಿನಿಂದ ನಿತ್ಯ ಬೆಂಗಳೂರಿನ ಕೆಆರ್.ಮಾರುಕಟ್ಟೆಗೆ ಬಂದು ತರಕಾರಿ ಮಾರಲು ಹಾದಿಮಾಡಿಕೊಟ್ಟಿದ್ದೇ ಉಚಿತ ಬಸ್ ಪ್ರಯಾಣವೆಂದು ಕೃತಜ್ಞತಾಭಾವದಲ್ಲಿ ಮಾತನಾಡುವ ಸಾಕಷ್ಟು ಮಹಿಳೆಯರನ್ನು ಮೆಜೆಸ್ಟಿಕ್‌ನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಕಾಣಬಹುದು. ಗ್ಯಾರಂಟಿ ಯೋಜನೆಗಳನ್ನು ಎಲ್ಲರಿಗೂ ನೀಡಿರುವ ಬಗ್ಗೆ ಸಾಕಷ್ಟು ಚರ್ಚೆಗಳಿದ್ದು, ಒಂದಷ್ಟು ಮಾನದಂಡಗಳನ್ನು ಅಳವಡಿಸಬೇಕೆನ್ನುವ ಚಿಂತನೆ ಸರಕಾರದ ಹಂತದಲ್ಲೇ ನಡೆಯುತ್ತಿದೆ. ಆದರೆ, ಈ ಯೋಜನೆಗಳು ರಾಜ್ಯದಲ್ಲಿ ಬಡವರು, ಶ್ರಮಿಕ ಮಹಿಳಾ ವರ್ಗಕ್ಕೆ ನಿಜಕ್ಕೂ ಅತ್ಯಂತ ಸಹಕಾರಿಯಾಗಿವೆ. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾಗಿ ಘೋಷಣೆಯಾದ ಗ್ಯಾರಂಟಿಗಳಿಗೆ ಈವರೆಗೆ ಒಟ್ಟು 1,12,548.07ಕೋಟಿ ರೂ.ವೆಚ್ಚವಾಗಿದ್ದು, ಒಟ್ಟು 71.93ಕೋಟಿ ಫಲಾನುಭವಿಗಳು ಲಾಭ ಪಡೆದುಕೊಂಡಿದ್ದಾರೆ. ಗ್ಯಾರಂಟಿ ಯೋಜನೆಗಳು ಕೇವಲ ಭರವಸೆಗಳಾಗಿ ಉಳಿಯದೆ, ಜನರ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರುತ್ತಿವೆ ಎಂಬುದಕ್ಕೆ ಇತ್ತೀಚಿನ ಅಂಕಿಅಂಶಗಳೇ ಸಾಕ್ಷಿ. ಮಹಿಳೆಯರ ಸಬಲೀಕರಣದಿಂದ ಹಿಡಿದು ಯುವಜನರ ಆರ್ಥಿಕ ಭದ್ರತೆಯವರೆಗೆ ಈ ಯೋಜನೆಗಳು ವಿಸ್ತರಿಸಿವೆ.

1 ಗೃಹಲಕ್ಷ್ಮಿ : ಮಹಿಳೆಯರ ಆರ್ಥಿಕ ಸ್ವಾತಂತ್ರ್ಯದ ಶಕ್ತಿ

ಗೃಹಲಕ್ಷ್ಮಿ ಯೋಜನೆಯು ರಾಜ್ಯದ ಗೃಹಿಣಿಯರ ಪಾಲಿಗೆ ಆಪದ್ಬಾಂಧವನಂತಾಗಿದೆ. ಸೆಪ್ಟೆಂಬರ್ 2025ರ ಅಂಕಿಅಂಶಗಳ ಪ್ರಕಾರ, ರಾಜ್ಯದ 1.24 ಕೋಟಿ ಮಹಿಳೆಯರು ಈ ಯೋಜನೆಯಡಿ ನೋಂದಾಯಿಸಿಕೊಂಡಿದ್ದಾರೆ. ಸರ್ಕಾರವು ಈ ಯೋಜನೆಗಾಗಿ 57,381ಕೋಟಿ ರೂಪಾಯಿಗಳನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ವರ್ಗಾಯಿಸಿದೆ. ಪ್ರತಿ ತಿಂಗಳು ನೀಡಲಾಗುವ 2,000 ರೂ. ಹಣವು ಕುಟುಂಬದ ನಿರ್ವಹಣೆಯಲ್ಲಿ ಮಹಿಳೆಯರ ಘನತೆಯನ್ನು ಹೆಚ್ಚಿಸಿದೆ.

2 ಶಕ್ತಿ ಯೋಜನೆ: ಶ್ರಮಿಕ ವರ್ಗದ ಅರ್ಥ–ಸೇತುವೆ

ಜ.2, 2026ರವರೆಗಿನ ಅಂಕಿಅಂಶಗಳ ಪ್ರಕಾರ, ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳಲ್ಲಿ ಮಹಿಳೆಯರ ಉಚಿತ ಪ್ರಯಾಣದ 'ಶಕ್ತಿ' ಯೋಜನೆಯು ಅಭೂತಪೂರ್ವ ಯಶಸ್ಸು ಕಂಡಿದೆ ಎಂದು ಸಾರಿಗೆ ಇಲಾಖೆ ತಿಳಿಸಿದೆ. ಈವರೆಗೆ ಮಹಿಳೆಯರು ಬರೋಬ್ಬರಿ 638 ಕೋಟಿ ಬಾರಿ ಬಸ್‌ಗಳಲ್ಲಿ ಉಚಿತವಾಗಿ ಸಂಚರಿಸಿದ್ದಾರೆ. ಈ ಯೋಜನೆಯ ನಿರ್ವಹಣೆಗಾಗಿ ಸರ್ಕಾರವು ಸಾರಿಗೆ ಸಂಸ್ಥೆಗಳಿಗೆ 16,479 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಈ ಯೋಜನೆಯು ಮಹಿಳೆಯರ ಉದ್ಯೋಗಾವಕಾಶ ಮತ್ತು ಚಲನಶೀಲತೆಯನ್ನು ಗಮನಾರ್ಹವಾಗಿ ಹೆಚ್ಚಿಸಿದೆ.

3 ಗೃಹಜ್ಯೋತಿ: ಮನೆ ಬೆಳಗಿದ ಉಚಿತ ವಿದ್ಯುತ್

ನವೆಂಬರ್ 2025ರ ವೇಳೆಗೆ, ಗೃಹಜ್ಯೋತಿ ಯೋಜನೆಯಡಿ ರಾಜ್ಯದ 1.65 ಕೋಟಿ ಗ್ರಾಹಕರು ಶೂನ್ಯ ವಿದ್ಯುತ್ ಬಿಲ್ ಸೌಲಭ್ಯ ಪಡೆಯುತ್ತಿದ್ದಾರೆ. ಮಧ್ಯಮ ಮತ್ತು ಬಡ ಕುಟುಂಬಗಳ ಮಾಸಿಕ ಖರ್ಚುಗಳ ಪಟ್ಟಿಯಲ್ಲಿ ವಿದ್ಯುತ್ ಬಿಲ್ ಹೊರೆ ತಪ್ಪಿದ್ದು, ಇದಕ್ಕಾಗಿ ಸರ್ಕಾರ 21,239 ಕೋಟಿ ರೂಪಾಯಿಗಳನ್ನು ವ್ಯಯಿಸಿದೆ.

4 ಅನ್ನಭಾಗ್ಯ : ಹಸಿವು ಮುಕ್ತ ಕರ್ನಾಟಕದ ಗುರಿ

ಅನ್ನಭಾಗ್ಯ ಯೋಜನೆಯಡಿ ಸರ್ಕಾರವು ಎರಡು ಹಂತಗಳಲ್ಲಿ ಸೌಲಭ್ಯ ನೀಡುತ್ತಿದೆ:

- **ನಗದು ವರ್ಗಾವಣೆ (ಡಿಬಿಟಿ):** ಡಿಸೆಂಬರ್ 2024ರವರೆಗೆ ಸುಮಾರು 72.02 ಕೋಟಿ ಫಲಾನುಭವಿಗಳಿಗೆ ಒಟ್ಟು 11,821.17 ಕೋಟಿ ರೂಪಾಯಿಗಳನ್ನು ಅಕ್ಕಿಯ ಬದಲಾಗಿ ನಗದು ರೂಪದಲ್ಲಿ ನೀಡಲಾಗಿದೆ.
- **ಆಹಾರ ಧಾನ್ಯ ವಿತರಣೆ:** ಫೆಬ್ರವರಿ 2025ರಿಂದ ನವೆಂಬರ್ 2025 ರವರೆಗೆ 21 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯವನ್ನು ವಿತರಿಸಲಾಗಿದ್ದು, ಇದಕ್ಕಾಗಿ 4,753.90 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

5 ಯುವನಿಧಿ: ನಿರುದ್ಯೋಗಿ ಯುವಕರಿಗೆ ಆಸರೆ

ಪದವೀಧರ ಮತ್ತು ಡಿಪ್ಲೊಮಾ ನಿರುದ್ಯೋಗಿಗಳಿಗೆ ನೀಡಲಾಗುವ 'ಯುವನಿಧಿ' ಯೋಜನೆಯು ಡಿಸೆಂಬರ್ 2023ರಿಂದ ನವೆಂಬರ್ 2025ರವರೆಗೆ 2.98 ಲಕ್ಷ ಅಭ್ಯರ್ಥಿಗಳಿಗೆ ತಲುಪಿದೆ. ಇವರಿಗೆ ಒಟ್ಟು 874 ಕೋಟಿ ರೂಪಾಯಿ ನಿರುದ್ಯೋಗ ಭತ್ಯೆ ನೀಡುವ ಮೂಲಕ ಉದ್ಯೋಗ ಹುಡುಕಾಟದ ಸಮಯದಲ್ಲಿ ಆರ್ಥಿಕ ಸಹಾಯ ಒದಗಿಸಲಾಗಿದೆ.



ಕೊನೆಗೂ ಬರಲೇ ಇಲ್ಲವಲ್ಲೇ... ಪೆಣ್ಣೇ?

• ರಮ್ಯಾ ಕವೀಶ್

ಭಾವಯಾನ

ಪ್ರೀತಿಯ ಬಂಧ ಬೆಸೆಯಲು ರಕ್ತಸಂಬಂಧಿಯೇ ಆಗಿರಬೇಕೆಂದೇನೂ ಇಲ್ಲ. ಅದಕ್ಕಿಂತಲೂ ಹೆಚ್ಚು ಅಕ್ಕರೆ, ಒಡನಾಟ ಬೆಳೆಯಲು ಆ ಸಂದರ್ಭದ ಕಾಳಜಿ ಕಾರಣವಾಗಿಬಿಡುತ್ತದೆ.

ನನಗೂ ಹಾಗೇ, ರಕ್ತಸಂಬಂಧಿಯಲ್ಲದ, ಆದರೆ ಅದಕ್ಕಿಂತಲೂ ಹೆಚ್ಚಾಗಿದ್ದ ಅಜ್ಜನೊಬ್ಬನಿದ್ದ. ಅವನೇ ನನ್ನ ಪೆಣ್ಣಜ್ಜ. ಅವ ನನ್ನನ್ನು ಚಿಕ್ಕಂದಿನಲ್ಲಿ ಹಳೆಗನ್ನಡ ಭಾಷೆಯಲ್ಲಿ ಪೆಣ್ಣು (ಹೆಣ್ಣು) ಎಂದು ಕರೆಯುತ್ತಿದ್ದರಿಂದ ನನ್ನ ಬಾಯಲ್ಲಿ ಅವ ಪೆಣ್ಣಜ್ಜನೇ ಆಗಿಬಿಟ್ಟಿದ್ದ.

ಬಾಲ್ಯದಿಂದಲೂ ತಮಾಷೆ, ಕೀಟಲೆ ಮಾಡುತ್ತಾ ನನಗೆ ಹೆಚ್ಚು ಪ್ರಿಯವಾಗಿದ್ದ ಪಕ್ಕದ ಮನೆಯ ಪೆಣ್ಣಜ್ಜ, ಪ್ರೌಢಾವಸ್ಥೆಗೆ ಬರುವಾಗ ತಾಯಿಯನ್ನು ಕಳೆದುಕೊಂಡ ನನಗೆ ಹೆಚ್ಚು ಆಪ್ತನಾದ. ಮಮತೆ ತೋರುವ ತಾಯಿಯಾಗಿ, ತಿದ್ದಿ ಬುದ್ಧಿ ಹೇಳುವ ತಂದೆಯಾಗಿ, ಬೇಸರ ಕಳೆಯುವ ಸ್ನೇಹಿತನಾಗಿ, ಮಾರ್ಗದರ್ಶಕನಾಗಿ, ನನ್ನಪ್ಪ ಬೇರೆ ಊರಲ್ಲಿ ಉಳಿಯಲೇಬೇಕಾದ ಸಂದರ್ಭಗಳಲ್ಲಿ ನನ್ನ ಕಾವಲುಗಾರನಾಗಿ, ಒಬ್ಬಂಟಿ ಅನಿಸಿದಾಗಲೆಲ್ಲ ಪಗಡೆ, ಚೆನ್ನೆಮಣೆ, ಚದುರಂಗದಾಟಗಳಿಗೆ ಎದುರಾಳಿಯಾಗಿ... ಹೀಗೆ ನನ್ನ ಬದುಕಿನಲ್ಲಿ ಹೆಚ್ಚು ಪಾತ್ರಗಳನ್ನು ನಿರ್ವಹಿಸಿದ.

ತಾನು ಹೋಟೆಲ್, ಅಂಗಡಿಗಳಿಗೆ ಹೋಗಿ ಏನೇ ತಿಂದರೂ ಪೆಣ್ಣಿಗೆ ಎಂದು ಕಟ್ಟಿಸಿಕೊಂಡು ತರುತ್ತಿದ್ದ. ತನ್ನ ಮನೆಯಲ್ಲಿ ಯಾವುದೇ ವಿಶೇಷ ಖಾದ್ಯ ಮಾಡಿದರೂ ಈ ಪೆಣ್ಣಿಗೆ ಪಾಲಿರುತ್ತಿತ್ತು. ವರ್ಷದ ಜಾತ್ರೆಯಲ್ಲಿ ರಾತ್ರಿ ತೆಪ್ಪೋತ್ಸವಕ್ಕೆಂದೇ ಬಿಡುತ್ತಿದ್ದ ವಿಶೇಷ ಬಸ್ಸಿನಲ್ಲಿ ನಮ್ಮಿಬ್ಬರಿಗೂ ಸೀಟು ಕಾದಿರಿಸಿ, ಜೋಪಾನವಾಗಿ ಕರೆದುಕೊಂಡು ಹೋಗಿ ಬರುತ್ತಿದ್ದ. ನನಗೆ ನೆನಪಿರುವ ಹಾಗೆ, ನಾಲ್ಕನೇ ತರಗತಿಯಿಂದ ನನ್ನ ಮದುವೆಯಾಗುವ ಹಿಂದಿನ ವರ್ಷದವರೆಗೂ ಪೆಣ್ಣಜ್ಜನೇ ನನ್ನ ಜಾತ್ರೆಯ ಜೊತೆಗಾರ. ವಿದುರನಾಗಿದ್ದ ಅಜ್ಜ, ತನ್ನ ಹೆಣ್ಣುಮಕ್ಕಳ ಮದುವೆಯಾದ ಮೇಲೆ ಮಗ–ಸೊಸೆಯೊಂದಿಗೆ ವಾಸವಿದ್ದ. ನಂತರದ ಮಗಳು ನಾನೇ ಆಗಿಹೋಗಿದ್ದೆ.

ನನ್ನ ಮದುವೆ ನಿಶ್ಚಯವಾಯಿತೆಂದು ತಿಳಿದಾಗ ಪೆಣ್ಣಜ್ಜನಿಗೆ ಸಂತೋಷಕ್ಕಿಂತ ಪೆಣ್ಣು ದೂರ ಹೋಗುತ್ತಾಳೆ ಎಂಬ ದುಃಖವೇ ಜಾಸ್ತಿಯಾಗಿತ್ತು. ಅದೂ ದೂರದ ಬೆಂಗಳೂರಲ್ಲಿ ಇರುತ್ತೇನೆಂದು ತಿಳಿದು, 'ಮದುವೆಯಾದ ಮೇಲೆ ಅಜ್ಜನನ್ನು ಮರೆತುಬಿಟ್ಟೀಯ. ಆಗಾಗ ಬಂದುಹೋಗು. ನನ್ನ ಸಾವು ಹತ್ತಿರ ಬಂದ ಸುದ್ದಿ ತಿಳಿದರೆ ಬಂದು ಬಾಯಿಗೆ ನೀರು ಬಿಡು, ನೆಮ್ಮದಿಯಾಗಿ ಕಣ್ಣುಮುಚ್ಚುತ್ತೇನೆ' ಎಂದಿದ್ದ. 'ಹೀಗೇಕೆ ಮಾತನಾಡುತ್ತೀಯ ಅಜ್ಜಾ' ಎಂದು ಪ್ರೀತಿಯಿಂದ ಗದರಿ ಎದ್ದು ಹೋಗಿದ್ದೆ.

ಮದುವೆಯಾಗಿ ಗಂಡನ ಮನೆಗೆ ಹೊರಟು ನಿಂತಾಗ, ನನ್ನಪ್ಪನಷ್ಟೇ ದುಃಖ, ಸಂಕಟವನ್ನು ಅಜ್ಜನೂ ಅನುಭವಿಸಿದ್ದ.

ವಿಪರ್ಯಾಸವೆಂದರೆ, ಅಜ್ಜನ ಕೊನೇ ದಿನಗಳಿರಲಿ, ಅವನ ಸಾವಿಗೂ ನನಗೆ ಹೋಗಲಾಗಲಿಲ್ಲ. ಅಜ್ಜನ ಸಾವಾದಾಗ ನಾನು ಎರಡು ತಿಂಗಳ ಗರ್ಭಿಣಿ. ವೈದ್ಯರು ಪ್ರಯಾಣ ಮಾಡಲೇಬಾರದೆಂದು ಖಡಾಖಂಡಿತವಾಗಿ ಹೇಳಿದ್ದರಿಂದ ನನ್ನ ಪತಿ, ಅತ್ತೆ, ಮಾವ ಕಳುಹಿಸಿಕೊಡಲು ಸಾಧ್ಯವೇ ಇಲ್ಲ ಎಂದುಬಿಟ್ಟರು.

ಅತ್ತ ನನ್ನಪ್ಪನೂ 'ಇಂತಹ ಸಮಯದಲ್ಲಿ ನೀ ಬರುವುದು ಬೇಡ' ಎಂದಾಗ ಇದ್ದ ಒಂದು ಆಸೆಯೂ ಕಮರಿದಂತಾಗಿತ್ತು.

ಆ ಒಂದು ಕ್ಷಣ ನನ್ನ ಹಾಗೂ ಪೆಣ್ಣಜ್ಜನ ಬಾಂಧವ್ಯದ ನಂಟನ್ನು, ನಾ ಅಲ್ಲಿಗೆ ಹೋಗುವುದು ನನಗೆ ಎಷ್ಟು ಮುಖ್ಯವಾಗಿತ್ತು ಎಂಬುದನ್ನು ಮನೆಯವರಿಗೆ ತಿಳಿಸುವಲ್ಲಿ ವಿಫಲಳಾದೆ ಎಂಬ ಕೊರಗು ಇಂದಿಗೂ ಕಾಡುತ್ತದೆ.

ಅವರಿಗೆಲ್ಲ ಅವನು ಕೇವಲ ಪಕ್ಕದಮನೆಯ ಅಜ್ಜ. ಆದರೆ ನನಗೆ ರಕ್ತಸಂಬಂಧ ಮೀರಿ ಬೆಳೆದ ಒಂದು ಆತ್ಮೀಯ ಜೀವ. ಆದರೆ ಅವನ ಕೊನೆಯ ಆಸೆಯಂತೆ ನನಗೆ ನಡೆದುಕೊಳ್ಳಲಾಗಲಿಲ್ಲ.

ಅಜ್ಜ ನಮ್ಮಿಂದ ದೂರಾಗಿ ಹಲವು ವರ್ಷಗಳೇ ಆಗಿವೆ. ಈಗಲೂ ತವರಿಗೆ ಹೋದಾಗ ಪೆಣ್ಣಜ್ಜನ ಮನೆಯ ಗೋಡೆಯ ಮೇಲಿರುವ ಆತನ ಭಾವಚಿತ್ರ, 'ಕೊನೆಗೂ ನೀನು ಅಂದು ಬರಲೇ ಇಲ್ಲವಲ್ಲೇ ಪೆಣ್ಣೇ' ಎಂದು ಕೇಳಿದಂತೆ ಭಾಸವಾಗುತ್ತದೆ.



ಅಮ್ಮ ಹೇಳ್ತಾಳೆ

ಸಾರು ಅಥವಾ ಸಾಂಬಾರು ಮಾಡುವಾಗ ಉಕ್ಕಲು ಬಿಡಬಾರದು. ಹಾಗೆ ಮಾಡಿದರೆ ಅದರ ರುಚಿ ಕಡಿಮೆಯಾಗುತ್ತದೆ. ಅದು ಕುದಿದಷ್ಟೂ ರುಚಿ ಹೆಚ್ಚು. 'ಸಾರಿಗೆ ಸಾವಿರ ಕುದಿ' ಎನ್ನುವ ಮಾತೇ ಇದೆ.



ಈ ಜಿಲ್ಲಾಧಿಕಾರಿ ಮತ್ತವರ ಸಕ್ಸಸ್ ಸ್ಟೋರಿ!

• ಭೂಮಿಕಾ ತಂಡ

ಸಾಮಾಜಿಕ ಮಾಧ್ಯಮ ಎಂಬ ಅಸ್ತ್ರವು ಅದನ್ನು ಹಿಡಿದವರ ಮನಃಸ್ಥಿತಿಗೆ ತಕ್ಕಂತೆ ಸಮಾಜದ ಮೇಲೆ ಹೇಗೆಲ್ಲಾ ಪರಿಣಾಮ ಬೀರಬಲ್ಲದು ಎಂಬುದಕ್ಕೆ ಕನ್ನಡಿ ಹಿಡಿಯುತ್ತದೆ ಈ ಲೇಖನ.

ಕೇರಳದ ಮಲಪ್ಪುರಂ ಜಿಲ್ಲೆಯ ಹೊಸ ಜಿಲ್ಲಾಧಿಕಾರಿ ರಾಣಿ ಸೋಯಾಮೋಯ್, ಅಂದು ಆ ಊರಿನ ಪ್ರತಿಷ್ಠಿತ ಕಾಲೇಜಿಗೆ ಭೇಟಿ ನೀಡುವವರಿದ್ದರು. ಆ ಯುವ ಮಹಿಳಾ ಅಧಿಕಾರಿಗಾಗಿ ತುದಿಗಾಲಿನಲ್ಲಿ ಕಾಯುತ್ತಾ ನಿಂತಿದ್ದ ವಿದ್ಯಾರ್ಥಿಗಳಿಗೆ, ಅವರನ್ನು ಕಂಡ ಕೂಡಲೆ ಭಾರಿ ನಿರಾಸೆಯಾಯಿತು. ಆಧುನಿಕ ಗೆಟಪ್ಪಿನ ವರ್ಚಸ್ವಿ ಯುವತಿಯೊಬ್ಬರನ್ನು ನಿರೀಕ್ಷಿಸಿದ್ದವರಿಗೆ, ಕಪ್ಪು ಮೈಬಣ್ಣದ, ಮೇಕಪ್ಪಿನ ಸೋಂಕೂ ಇರದ, ಪೇಲವ ಮುಖಭಾವದ ಆ ಮಹಿಳೆಯನ್ನು ಜಿಲ್ಲಾಧಿಕಾರಿ ಎಂದು ನಂಬಲೂ ಸಾಧ್ಯವಾಗಲಿಲ್ಲ.

ಒಂದೆರಡು ನಿಮಿಷಗಳಲ್ಲೇ ಆಕೆ ಮಾತು ಮುಗಿಸಿದ್ದರು. ಆದರೆ ಅದು ಸಂಪೂರ್ಣವಾಗಿ ಆತ್ಮವಿಶ್ವಾಸ ಮತ್ತು ಬದ್ಧತೆಯಿಂದ ಕೂಡಿತ್ತು. ಬಳಿಕ ನಡೆದ ಸಂವಾದದಲ್ಲಿ ಮಕ್ಕಳ ಪ್ರಶ್ನೆಗಳಿಗೆ ರಾಣಿ ಶಾಂತಚಿತ್ತರಾಗಿ, ಚುಟುಕಾಗಿ ಉತ್ತರಿಸಿದರು. ತುಂಟ ಹುಡುಗಿಯೊಬ್ಬಳು ಎದ್ದುನಿಂತು 'ಮೇಡಂ, ನೀವ್ಯಾಕೆ ಮುಖಕ್ಕೆ ಮೇಕಪ್ಪನ್ನೇ ಹಾಕಿಕೊಂಡಿಲ್ಲ? ಕನಿಷ್ಠ ಪೌಡರ್ ಅನ್ನೂ ಹಚ್ಚಿಲ್ಲ?' ಎಂದು ತನ್ನ ಮನದಲ್ಲಿ ಆಗಿನಿಂದಲೂ ಕೊರೆಯುತ್ತಲೇ ಇದ್ದ ಪ್ರಶ್ನೆಯನ್ನು ಕೇಳಿಯೇಬಿಟ್ಟಳು. ಕೂಡಲೇ ಜಿಲ್ಲಾಧಿಕಾರಿಯ ಮುಖ ಕಪ್ಪಿಟ್ಟಿತು, ಮುಗುಳ್ನಗು ಮಾಯವಾಯಿತು. ಅದನ್ನು ಕಂಡ ಪ್ರೇಕ್ಷಕರೂ ಒಮ್ಮೆಗೇ ಮೌನವಾದರು. ಮೇಜಿನ ಮೇಲಿದ್ದ ಬಾಟಲಿಯನ್ನೆತ್ತಿ ಗಟಗಟನೆ ನೀರು ಕುಡಿದ ಜಿಲ್ಲಾಧಿಕಾರಿ ನಿಧಾನವಾಗಿ ಮಾತನಾಡತೊಡಗಿದರು.

'ಈ ಪ್ರಶ್ನೆಗೆ ನಾನು ಒಂದು ವಾಕ್ಯದ ಉತ್ತರ ಕೊಡುವುದು ಅಸಾಧ್ಯ. ಅದಕ್ಕಾಗಿ ನನ್ನ ಜೀವನಗಾಥೆಯನ್ನೇ ನಾನೀಗ ಹೇಳಬೇಕಾಗುತ್ತದೆ. ಕೇಳಲು ನಿಮ್ಮ ಅಮೂಲ್ಯವಾದ ಒಂದಷ್ಟು ಸಮಯವನ್ನು ನನಗಾಗಿ ಕೊಡುವಿರಾ?' ಎಂದಾಗ 'ಓ ಆಗಲಿ' ಎಂಬ ಧ್ವನಿ ಸಭಾಂಗಣದಲ್ಲಿ ಮೊಳಗಿತು. 'ಹಾಗಿದ್ದರೆ ಕೇಳಿ. ನಾನು ಹುಟ್ಟಿದ್ದು ಜಾರ್ಖಂಡ್ ರಾಜ್ಯದ ಕೊಡೆರ್ಮ ಜಿಲ್ಲೆಯ ಬುಡಕಟ್ಟು ಪ್ರದೇಶವೊಂದರಲ್ಲಿ. ಅಲ್ಲಿದ್ದ ಪುಟ್ಟ ಗುಡಿಸಲಿನಲ್ಲಿ ನನ್ನ ಇಬ್ಬರು ಅಣ್ಣಂದಿರು, ಒಬ್ಬಳು ತಂಗಿ ಎಲ್ಲರೂ ನೆಲಸಿದ್ದೆವು. ನನ್ನ ಅಪ್ಪ–ಅಮ್ಮ ಕನಿಷ್ಠ ಕೂಲಿಗಾಗಿ ಮೈಕಾ (ಅಭ್ರಕ ಅಥವಾ ಕಾಗೆ ಬಂಗಾರ) ಗಣಿಯಲ್ಲಿ ದುಡಿಯುತ್ತಿದ್ದರು'.

'ಅದೊಂದು ದುರ್ಗಮ ಕೆಲಸವಾಗಿತ್ತು. ನಾನು ನಾಲ್ಕು ವರ್ಷದವಳಾಗಿದ್ದಾಗ ನನ್ನ ಹೆತ್ತವರು ಮತ್ತು ಅಣ್ಣಂದಿರು ಕಾಯಿಲೆಯಿಂದ ಹಾಸಿಗೆ ಹಿಡಿದರು. ತಮ್ಮ ಉಸಿರಿನಲ್ಲಿ ಬೆರೆತುಹೋಗಿದ್ದ ಮೈಕಾ ದೂಳೇ ಅದಕ್ಕೆ ಕಾರಣ ಎಂಬುದು ಅವರಿಗೆ ತಿಳಿದಿರಲೇ ಇಲ್ಲ. ನಾನು ಐದರ ಪೋರಿಯಾದಾಗ ನನ್ನ ಇಬ್ಬರೂ ಅಣ್ಣಂದಿರು ಹಸಿವು ಮತ್ತು ಕಾಯಿಲೆಗೆ ಬಲಿಯಾಗಿಹೋದರು'.

ಹೀಗೆ ಹೇಳುತ್ತಲೇ ನಿಟ್ಟುಸಿರು ಬಿಟ್ಟ ಜಿಲ್ಲಾಧಿಕಾರಿ, ಕ್ಷಣಕಾಲ ಮಾತು ನಿಲ್ಲಿಸಿದರು. ತುಂಬಿದ್ದ ಕಣ್ಣಾಲಿಗಳನ್ನು ಮುಚ್ಚಿಕೊಂಡರು.

'ಎಷ್ಟೋ ದಿನ ನಮ್ಮ ಊಟ ಬರೀ ನೀರು ಅಥವಾ ಒಂದೆರಡು ತುಂಡು ಬ್ರೆಡ್ ಆಗಿರುತ್ತಿತ್ತು. ಮೂಳೆಚಕ್ಕಳ ಬಿಟ್ಟುಕೊಂಡು ಕೃಶವಾಗಿಹೋಗಿದ್ದ ನನ್ನನ್ನು ಒಂದು ದಿನ ನನ್ನಪ್ಪ ಸಮೀಪದಲ್ಲಿದ್ದ ಮೈಕಾ ಗಣಿಗೆ ಎಳೆದೊಯ್ದರು. ಅಬ್ಬಾ, ಅದೆಷ್ಟು ದೊಡ್ಡದಾಗಿತ್ತು ಗೊತ್ತೇ? ತೋಡಿ ತೋಡಿ ಆಳಕ್ಕಿಳಿದಿದ್ದ ಅಲ್ಲಿನ ಕೊರಕಲುಗಳ ಪುಟ್ಟ ಪುಟ್ಟ ಗುಹೆಗಳ ಒಳಗೆ ತೆವಳಿಕೊಂಡು ಹೋಗಿ, ಮೈಕಾ ಅದಿರನ್ನು ಹೆಕ್ಕಿ ತರುವ ಕೆಲಸಕ್ಕೆ ನನ್ನನ್ನು ಹಚ್ಚಿದರು. 'ರ‍್ಯಾಟ್ ಮೈನಿಂಗ್' ಎನ್ನಲಾಗುವ ಆ ಕಾರ್ಯವನ್ನು 10 ವರ್ಷದ ಒಳಗಿನ ಮಕ್ಕಳಷ್ಟೇ ಮಾಡಲು ಸಾಧ್ಯ. ನನ್ನ ಜೀವನದಲ್ಲಿ ಅಂದೇ ಮೊದಲ ಬಾರಿ ನಾನು ಹೊಟ್ಟೆ ತುಂಬಾ ಉಂಡಿದ್ದೆ'.

'ಹೊರಪ್ರಪಂಚದಲ್ಲಿ ನನ್ನ ಓರಗೆಯ ಮಕ್ಕಳು ಶಾಲೆಯ ಮೆಟ್ಟಿಲು ಹತ್ತುತ್ತಿದ್ದಾಗ, ನಾನು ಗಣಿಯ ವಿಷಕಾರಿ ದೂಳು ಕುಡಿಯುತ್ತಾ ಕಗ್ಗತ್ತಲ ಗುಹೆಗಳಲ್ಲಿ 'ಕಾಗೆ ಬಂಗಾರ'ದ ಬೆನ್ನು ಹತ್ತುತ್ತಿದ್ದೆ. ನನ್ನಂತೆಯೇ ದುಡಿಯುತ್ತಿದ್ದ ಎಷ್ಟೋ ಮಕ್ಕಳು, ಆಗಾಗ ಸಂಭವಿಸುತ್ತಿದ್ದ ಭೂಕುಸಿತಕ್ಕೆ ಅಥವಾ ಕಾಯಿಲೆಗಳಿಗೆ ಬಲಿಯಾಗುವುದು ಸಾಮಾನ್ಯ ಸಂಗತಿಯಾಗಿ ಹೋಗಿತ್ತು. ಹಸಿವು, ನೀರಡಿಕೆಯಿಂದ ಕಂಗೆಟ್ಟಿದ್ದರೂ ಎದೆಗುಂದದೆ ದಿನಕ್ಕೆ 8 ಗಂಟೆ ದುಡಿದರಷ್ಟೇ ಕನಿಷ್ಠ ಒಂದು ಪೌಂಡ್ ಬ್ರೆಡ್ ಕೊಳ್ಳುವಷ್ಟು ಕಾಸು ನಮಗೆ ದಕ್ಕುತ್ತಿತ್ತು'.

'ವರ್ಷದ ಬಳಿಕ ನನ್ನ ತಂಗಿಯೂ ನನ್ನೊಟ್ಟಿಗೆ ಬರತೊಡಗಿದಳು. ಅಪ್ಪ–ಅಮ್ಮ ಮತ್ತು ನಾವಿಬ್ಬರು ಒಟ್ಟಿಗೆ ದುಡಿಯುತ್ತಾ ತುತ್ತಿನಚೀಲ ತುಂಬಿಸಿಕೊಳ್ಳತೊಡಗಿದೆವು. ಆದರೆ ವಿಧಿಯ ಆಟ ಬೇರೆಯದೇ ಆಗಿತ್ತು. ಒಂದು ದಿನ ತೀವ್ರ ಜ್ವರದಿಂದ ನಾನು ಕೆಲಸಕ್ಕೆ ಹೋಗದೆ ಮನೆಯಲ್ಲೇ ಉಳಿದಾಗ ಭಾರಿ ಮಳೆ ಶುರುವಾಯಿತು. ನೋಡನೋಡುತ್ತಿದ್ದಂತೆಯೇ ಗಣಿಯಲ್ಲಿ ಭೂಕುಸಿತ ಸಂಭವಿಸಿ ನೂರಾರು ಕಾರ್ಮಿಕರು ಪ್ರಾಣ ಬಿಟ್ಟರು. ಅವರಲ್ಲಿ ನನ್ನಪ್ಪ, ಅಮ್ಮ, ತಂಗಿಯೂ ಸೇರಿದ್ದರು'.

ಜಿಲ್ಲಾಧಿಕಾರಿಯ ಕಣ್ಣಿಂದ ಧಾರಾಕಾರವಾಗಿ ಕಣ್ಣೀರು ಸುರಿಯತೊಡಗಿತು. ಉಸಿರು ಬಿಗಿಹಿಡಿದು ಕೇಳುತ್ತಿದ್ದ ಪ್ರೇಕ್ಷಕರ ಕಣ್ಣಾಲಿಗಳು ಸಹ ಒದ್ದೆಯಾದವು.

'ನನಗಾಗ ಕೇವಲ 6 ವರ್ಷ. ಯಾರೋ ಅನಾಥಾಶ್ರಮಕ್ಕೆ ಸೇರಿಸಿದರು. ಅಲ್ಲಿದ್ದವರು ನನಗೆ ಓದು–ಬರಹ ಕಲಿಸಿದರು. ಆ ಮೂಲಕ, ನನ್ನ ಹಳ್ಳಿಯಲ್ಲಿ ಅಕ್ಷರ ಕಲಿತ ಮೊದಲಿಗಳಾದೆ. ಅದರ ಫಲವಾಗಿಯೇ ಇದೋ ನೋಡಿ, ಈಗ ಇಲ್ಲಿ ನಿಂತಿದ್ದೇನೆ ನಿಮ್ಮೆದುರು, ನಿಮ್ಮ ಜಿಲ್ಲಾಧಿಕಾರಿಯಾಗಿ. ನನ್ನ ಈ ಕತೆಗೂ ನಾನು ಮೇಕಪ್ ಮಾಡಿಕೊಳ್ಳದಿರುವುದಕ್ಕೂ ಎಲ್ಲಿಗೆಲ್ಲಿಯ ಸಂಬಂಧ ಎಂದು ನಿಮಗೆ ಅನ್ನಿಸುತ್ತಿರಬಹುದು. ಆ ಕಿರಿದಾದ ಗುಹೆಗಳ ಒಳಗೆ ಪುಟ್ಟ ಪುಟ್ಟ ಮಕ್ಕಳು ಜೀವವನ್ನು ಅಂಗೈಯಲ್ಲಿ ಇಟ್ಟುಕೊಂಡು ಹೋಗಿ ಹೊತ್ತು ತರುವ ಮೈಕಾವನ್ನು ಮೇಕಪ್ ಉತ್ಪನ್ನಗಳ ತಯಾರಿಕೆಗೆ ಬಳಸುತ್ತಾರೆ ಎನ್ನುವುದು ನಂತರ ನನಗೆ ತಿಳಿಯಿತು. ನಿಮ್ಮ ಚರ್ಮ ಫಳಫಳನೆ ಹೊಳೆಯುವಂತೆ ಮಾಡುವ ದೊಡ್ಡ ದೊಡ್ಡ ಕಾಸ್ಮೆಟಿಕ್ ಕಂಪನಿಗಳ ಕ್ರೀಮ್‌ಗಳು, ನಿಮ್ಮ ಕೆನ್ನೆಗಳ ಮೇಲೆ ಮೃದುವಾಗಿ ಹರಡಿಕೊಂಡು ಮಧುರ ಭಾವನೆ ಉಕ್ಕಿಸುವ ಚೀಕ್ ರೋಸ್... ಎಲ್ಲವೂ ಆ ಬಂಡೆಗಳ ನಡುವೆ ಹುದುಗಿಹೋಗುವ ಅದೇ ಮಕ್ಕಳ ಕಮರಿದ ಬದುಕಿನ ಫಲವೇ ಆಗಿರುತ್ತವೆ'.

'ನಮ್ಮ ಚೆಲುವು ಹೆಚ್ಚಿಸಲು ನೆರವಾಗುವ ಲಕ್ಷಾಂತರ ಡಾಲರ್ ಮೌಲ್ಯದ ಆ ಮೈಕಾವನ್ನು ಈಗಲೂ ಗಣಿಗಳಿಂದ ಹೆಕ್ಕುವುದು ಚಿಣ್ಣರೇ. ಈಗ ಹೇಳಿ, ನಾನು ಹೇಗೆತಾನೇ ಮೇಕಪ್ ಮಾಡಿಕೊಳ್ಳಲಿ? ಹಸಿವಿನಿಂದ ಪ್ರಾಣತೆತ್ತ ಅಣ್ಣಂದಿರ ನೆನಪು ಸದಾ ನನ್ನನ್ನು ಕಾಡುವಾಗ, ಹೇಗೆ ತಾನೇ ಹೊಟ್ಟೆ ತುಂಬಾ ಊಟ ಮಾಡಲಿ? ಯಾವಾಗಲೂ ಹರಿದ ಸೀರೆಯಲ್ಲೇ ಇರುತ್ತಿದ್ದ ನನ್ನಮ್ಮನ ಚಿತ್ರ ನನ್ನ ಮನದಲ್ಲಿ ಅಚ್ಚೊತ್ತಿರುವಾಗ ರೇಷ್ಮೆ ಉಡುಪನ್ನು ಹೇಗೆ ತಾನೇ ತೊಡಲಿ?'

ಅಷ್ಟು ಹೇಳಿದ ಆಕೆ ವಿಷಾದದ ನಗುವಿನೊಂದಿಗೆ ತಲೆ ಮೇಲೆತ್ತಿ ಮೌನವಾಗಿ ಹೊರನಡೆದಾಗ, ಸಭಾಂಗಣದಲ್ಲಿದ್ದ ಎಲ್ಲರೂ ತಮ್ಮಷ್ಟಕ್ಕೇ ಎದ್ದು ನಿಂತರು. ಅವರ ಮುಖದಲ್ಲಿದ್ದ ಮೇಕಪ್, ಅವರೆಲ್ಲರ ಕಣ್ಣುಗಳಿಂದ ಇಳಿಯುತ್ತಿದ್ದ ಕಂಬನಿಯೊಂದಿಗೇ ಜಾರಿ ಹೋಗುತ್ತಿತ್ತು.

***

ಇಂಥದ್ದೊಂದು ಸುದೀರ್ಘ ಚಿತ್ರಣವುಳ್ಳ ಮನಕಲಕುವ ಪೋಸ್ಟ್, ಅದೇ ಕಪ್ಪು ಮೈಬಣ್ಣದ, ಪೇಲವ ಮುಖಭಾವದ ಮಹಿಳೆಯೊಬ್ಬರ ಚಿತ್ರದೊಂದಿಗೆ ಸಾಮಾಜಿಕ ಮಾಧ್ಯಮಗಳಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತಲೇ ಇರುತ್ತದೆ. ಸುಮಾರು 2–3 ವರ್ಷಗಳ ಹಿಂದೆ ಮೊದಲ ಬಾರಿಗೆ ಕಂಡಾಗಿನಿಂದ ಇಂದಿನವರೆಗೂ ದೇಶದಾದ್ಯಂತ ಅದನ್ನು ಓದಿದ ಸಾವಿರಾರು ಮಂದಿಯ ಕಣ್ಣುಗಳು ತುಂಬಿಬಂದಿವೆ. ಎಂತಹ ಕಡುಕಷ್ಟದಲ್ಲಿ ಅರಳಿದ ಮಾದರಿ ಬದುಕು ಈ ರಾಣಿ ಮೋಯ್‌ದು ಎಂದು ಹಲವರು ಕೊಂಡಾಡಿದ್ದಾರೆ, ಲೈಕ್ ಗುಂಡಿ ಒತ್ತಿದ್ದಾರೆ, ಶೇರ್ ಮಾಡಿಕೊಂಡಿದ್ದಾರೆ, ಆಕೆಗೆ ಮನಃಪೂರ್ವಕವಾಗಿ ಹಾರೈಸಿದ್ದಾರೆ.

ಆದರೆ ಎಷ್ಟೋ ಜನರಿಗೆ ಗೊತ್ತಿಲ್ಲದ ಆಘಾತಕಾರಿ ಸಂಗತಿಯೆಂದರೆ, ಇದೊಂದು ಫೇಕ್ ನ್ಯೂಸ್ ಎನ್ನುವುದು! ವಾಸ್ತವದಲ್ಲಿ ರಾಣಿ ಮೋಯ್ ಎನ್ನುವ ಹೆಸರಿನವರ‍್ಯಾರೂ ಮಲಪ್ಪುರಂ ಜಿಲ್ಲಾಧಿಕಾರಿಯೇ ಆಗಿರಲಿಲ್ಲ. ಅಲ್ಲಿ ಆ ಹುದ್ದೆಯಲ್ಲಿದ್ದ ಶೈನಾಮೋಳ್ ಎನ್ನುವವರ ಚಿತ್ರವನ್ನೇ ಒಂದಷ್ಟು ತಿರುಚಿ, ಈ ನಕಲಿ ಕತೆಯೊಟ್ಟಿಗೆ ಸೇರಿಸಿ ಹರಿಯಬಿಡಲಾಗಿದೆ. ಶೈನಾಮೋಳ್ ಜಾರ್ಖಂಡ್‌ನವರಲ್ಲ, ಕೇರಳ ಮೂಲದವರು.

ಜಿಲ್ಲಾಧಿಕಾರಿಯಂತಹ ಪ್ರಮುಖ ಹುದ್ದೆಯನ್ನೂ ಬಿಡದೆ, ಅದನ್ನೂ ಪ್ರಚಾರದ ಹಪಹಪಿಗೆ ಬಳಸಿಕೊಳ್ಳುವ ನಿರ್ಭಾವುಕರಿಗೆ ಇದೊಂದು ತಮಾಷೆಯ ಸಂಗತಿ ಆಗಿರಬಹುದು. ಆದರೆ, ಕಡುಕಷ್ಟದಲ್ಲಿ ಬದುಕು ಅರಳಿಸಿಕೊಂಡವರಿಗಾಗಿ ಮಿಡಿಯುವ, ಅವರಿಗೆ ನೈತಿಕ ಬೆಂಬಲದ ಹೆಗಲೆಣೆಯಾಗ ಬಯಸುವ ಸಹೃದಯರ ಪಾಲಿಗೆ ಮಾತ್ರ ಇದೊಂದು ಅಕ್ಷಮ್ಯವಾದ ವಿಶ್ವಾಸಘಾತುಕ ಕೃತ್ಯವೇ ಹೌದು.

ಇಲ್ಲಿದೆ ಅಸಲಿ ಕತೆ

ಯಾವಾಗ 'ಜಿಲ್ಲಾಧಿಕಾರಿ' ರಾಣಿ ಸೋಯಾಮೋಯ್ ಅವರಿಗೆ ಸಂಬಂಧಿಸಿದ ಪೋಸ್ಟ್ ಇನ್ನಿಲ್ಲದಂತೆ ವೈರಲ್ ಆಗತೊಡಗಿತೋ ಅಸಲಿ ಕತೆ ಹುಡುಕಿ ಹೊರಟವರು ಬಂದು ನಿಂತದ್ದು ಹಕೀಂ ಮೊರಯೂರ್ ಎನ್ನುವ ಕೇರಳದ ಕತೆಗಾರನ ಬಳಿ. ಹಕೀಂ ತಮ್ಮ ಕಿರುಕತೆಗಳ ಸಂಕಲನ 'ತ್ರೀ ವಿಮೆನ್'ನ 'ಶೈನಿಂಗ್ ಫೇಸಸ್' ಎನ್ನುವ ಕತೆಯಲ್ಲಿ ಸೃಷ್ಟಿಸಿದ ಪಾತ್ರವೇ ರಾಣಿ ಮೋಯ್!

ತಮ್ಮ ಕತೆ ಚರ್ವಿತಚರ್ವಣವಾಗಿ ಹೀಗೆ ಆನ್‌ಲೈನ್ ಗೋಡೆಗಳಿಗೆ ಆಹಾರವಾದದ್ದನ್ನು ಕಂಡು ನಗಬೇಕೋ ಅಳಬೇಕೋ ತಿಳಿಯದಾದ ಹಕೀಂ, ಕಡೆಗೆ ಫೇಸ್‌ಬುಕ್‌ನಲ್ಲಿ ಸ್ಪಷ್ಟನೆಯನ್ನೇ ಕೊಟ್ಟರು. ಏನೇ ಆದರೂ ಹೀಗೆ ನಕಲಿ ಕತೆ ಸೃಷ್ಟಿಸುವುದನ್ನು ಸರ್ವಥಾ ಒಪ್ಪಲಾಗದು ಎಂದು ಅಸಮಾಧಾನ ಹೊರಹಾಕಿದರು. ಅದಾಗಿ ಸುಮಾರು ಮೂರು ವರ್ಷಗಳೇ ಗತಿಸಿದ್ದರೂ ಈ ನಕಲಿ ಕತೆ ಮಾತ್ರ ಈಗಲೂ ಆ ಗೋಡೆಗಳ ಮೇಲೆ ಆಗಾಗ್ಗೆ ಇಣುಕುತ್ತಲೇ ಇರುತ್ತದೆ, ಲೈಕ್ ಬಟನ್ ಒತ್ತಿಸಿಕೊಳ್ಳುತ್ತಲೇ ಇರುತ್ತದೆ, ಹೊಗಳಿಕೆಯ ಸುರಿಮಳೆಯೊಂದಿಗೆ ಸೋಯಾಮೋಯ್‌ಗೆ 'ರಾಣಿ'ಯ ಪಟ್ಟ ದಕ್ಕಿಸಿಕೊಡುತ್ತಲೇ ಇರುತ್ತದೆ.

ಈ ಮೇಡಂಗೆ ಮೇಕಪ್ ಅಂದರೆ ಅಲರ್ಜಿ ಯಾಕೆ?

ಪೇಲವ ಮುಖಭಾವದ ಆ ಮಹಿಳೆಯನ್ನು ಜಿಲ್ಲಾಧಿಕಾರಿ ಎಂದು ನಂಬಲೇ ಅವರಿಗೆ ಸಾಧ್ಯವಾಗಲಿಲ್ಲ

ಅಡುಗೆ ಕೋಣೆಯಲ್ಲಿ Some ಕ್ರಾಂತಿ!

• ಸುಮಾ ಬಿ.

ರಸಾಸ್ವಾದ

ಧನುರ್ಮಾಸ ಮುಗಿಯುತ್ತಿದ್ದಂತೆಯೇ ಸೂರ್ಯ ದಕ್ಷಿಣಾಯಣದಿಂದ ಉತ್ತರಾಯಣಕ್ಕೆ ಕ್ರಮಿಸುತ್ತಾನೆ. ಈ ಕ್ರಮಿಸುವ ಆರಂಭದ ಹಾದಿಯಲ್ಲಿ 'ಸಂಕ್ರಾಂತಿ' ಹಬ್ಬ ಕಳೆಗಟ್ಟುತ್ತದೆ. ವರ್ಷಪೂರ್ತಿ ಎಲ್ಲ ಹಬ್ಬಗಳ ದ್ವಾರದಂತಿರುವ ಸಂಕ್ರಾಂತಿ, ಆಹಾರ ವೈವಿಧ್ಯಕ್ಕೂ ಹೆಬ್ಬಾಗಿಲು. ಮಾಗಿ ಚಳಿಯ ಈ ಸಮಯದಲ್ಲಿ ದೇಹವನ್ನು ಬೆಚ್ಚಗಿಡುವ ಖಾದ್ಯಗಳಿಗೇ ಆದ್ಯತೆ.

ರೈತ ಬಿತ್ತಿದ ಬೀಜ ಫಲ ಕೊಡುವ ಸಮಯವೂ ಸುಗ್ಗಿಯ ಹಿಗ್ಗೂ, ಕಟಾವು ಮಾಡಿದ ಪೈರನ್ನು ಸಂಸ್ಕರಿಸಿ, ಖಾದ್ಯ ತಯಾರಿಸಿ ಸೂರ್ಯನಿಗೆ ನೈವೇದ್ಯ ಅರ್ಪಿಸುವ ಭಕ್ತಿಯೂ ಇಲ್ಲಿ ಸಮ್ಮಿಳಿತಗೊಳ್ಳುತ್ತವೆ. ಎಳ್ಳು, ಬೆಲ್ಲ, ಕಬ್ಬು, ಹೆಸರುಕಾಳು, ಅವರೆಕಾಳು, ಹೊಸ ಅಕ್ಕಿಯಿಂದ ತಯಾರಿಸಿದ ಸಿಹಿ ಮತ್ತು ಖಾರದ ಖಾದ್ಯಗಳೇ ಪ್ರಾಧಾನ್ಯ. ದೇಹಕ್ಕೆ ಉಷ್ಣಕಾರಕ ಹಾಗೂ ಶಕ್ತಿ ವೃದ್ಧಿಸುವ ಈ ಖಾದ್ಯಗಳು ಚಳಿಗಾಲಕ್ಕೆ ಪೂರಕ. ವೈವಿಧ್ಯಮಯ ಭಾರತದಲ್ಲಿ ವಿಧ ವಿಧದ ಆಹಾರ, ಆಚರಣೆಗೆ ಒತ್ತು. ಬರುವ ಸಂಕ್ರಾಂತಿ ಹಬ್ಬಕ್ಕೆ ನಮ್ಮ ಪೊಂಗಲ್ ಜೊತೆಗೆ ಸವಿಯಲು ವಿವಿಧ ರಾಜ್ಯಗಳ ಈ ಖಾದ್ಯಗಳನ್ನೂ ನೀವು ಟ್ರೈ ಮಾಡಬಹುದು.



ತಿಲ್ ಪೀತ

ಅಸ್ಸಾಂನ ಸಾಂಪ್ರದಾಯಿಕ ಸಿಹಿ ಖಾದ್ಯವಿದು. ಅಲ್ಲಿನ ಸುಗ್ಗಿ ಹಬ್ಬವಾದ 'ಬೊಹಾಗ್ ಬಿಹು' ಸಮಯದಲ್ಲಿ ಇದನ್ನು ತಯಾರಿಸುತ್ತಾರೆ. ಅಕ್ಕಿಹಿಟ್ಟು, ಎಳ್ಳು, ಬೆಲ್ಲದಿಂದ ತಯಾರಿಸುವ ವಿಶಿಷ್ಟ ಖಾದ್ಯ.

ಏನೇನು ಬೇಕು? ಅಕ್ಕಿ ಎರಡು ಕಪ್, ಎಳ್ಳು ಒಂದು ಕಪ್, ಬೆಲ್ಲ ರುಚಿಗೆ ಅಗತ್ಯವಿದ್ದಷ್ಟು.

ಹೀಗೆ ಮಾಡಿ: ಅಕ್ಕಿಯನ್ನು ನೀರಿನಲ್ಲಿ ತೊಳೆದು ಸ್ವಲ್ಪ ಹೊತ್ತು ನೆನೆಸಿ, ಬಳಿಕ ಒಣ ಬಟ್ಟೆ ಮೇಲೆ ಆರಲು ಬಿಡಬೇಕು (ಸ್ವಲ್ಪ ಆರಿದರೆ ಸಾಕು). ಬಳಿಕ ಅದನ್ನು ಸಣ್ಣಗೆ ರುಬ್ಬಿಕೊಂಡು ಜರಡಿ ಹಿಡಿದಿಟ್ಟುಕೊಳ್ಳಬೇಕು. ಇನ್ನೊಂದು ಪಾತ್ರೆಯಲ್ಲಿ ಎಳ್ಳನ್ನು ಹುರಿದು, ಬೆಲ್ಲ ಸೇರಿಸಿ ತರಿತರಿಯಾಗಿ ರುಬ್ಬಿಕೊಂಡು ಹುಡಿಹುಡಿಯಾದ ಹೂರಣ ತಯಾರಿಸಿಕೊಳ್ಳಬೇಕು.

ಬಳಿಕ ಬಿಸಿ ತವಾ ಮೇಲೆ, ಸಾಣಿಸಿ ಇಟ್ಟಿದ್ದ ಅಕ್ಕಿಹಿಟ್ಟನ್ನು ತೆಳ್ಳಗೆ ಸಿಲಿಂಡರ್ ಆಕಾರದಲ್ಲಿ ಹರಡಬೇಕು (ಹೀಗೆ ಮಾಡಲು ಚಹಾ ಸೋಸುವ ಜಾಲರಿಯ ಸಹಾಯ ಪಡೆಯಬಹುದು. ಜಾಲರಿಯಲ್ಲಿ ಹಿಟ್ಟು ಹಾಕಿ ತವಾ ಮೇಲೆ ಮೆಲ್ಲಗೆ ಹಿಟ್ಟನ್ನು ಉದುರಿಸಬೇಕು). ಅದರ ಮೇಲೆ ಎಳ್ಳು, ಬೆಲ್ಲದ ಮಿಶ್ರಣವನ್ನು ಉದ್ದಕ್ಕೂ ಇಟ್ಟು ಅಕ್ಕಿಹಿಟ್ಟಿನ ಅಂಚನ್ನು ಸುರುಳಿಯಾಗಿ ಸುತ್ತಬೇಕು– ಅಕ್ಕಿಹಿಟ್ಟು ಹಸಿಯಾಗಿ ಇರುವುದರಿಂದ ಸುರುಳಿ ಸುತ್ತಲು ಸಾಧ್ಯವಾಗುತ್ತದೆ– ಬಳಿಕ ತವಾಮೇಲೆ ಮೂರ್ನಾಲ್ಕು ನಿಮಿಷ ಹೊರಳಾಡಿಸಿ ತೆಗೆಯಬೇಕು.

ಹೊರಗಿನಿಂದ ಗರಿಗರಿಯಾಗಿ, ಒಳಭಾಗದಲ್ಲಿ ಸಿಹಿ ರುಚಿ ನೀಡುವ ತಿಲ್ ಪೀತ ಮಕ್ಕಳಿಗಂತೂ ಅಚ್ಚುಮೆಚ್ಚು. ಎಳ್ಳು, ಬೆಲ್ಲದ ಜಾಗದಲ್ಲಿ ಬೇರೆ ಬೇರೆ ಹೂರಣಗಳನ್ನೂ ಇಟ್ಟು ಪ್ರಯೋಗಕ್ಕೆ ಇಳಿಯಬಹುದು.

ಪಂಜಾಬಿ ಪಂಜಿರಿ



ಉತ್ತರ ಭಾರತದ ಸಾಂಪ್ರದಾಯಿಕ ಖಾದ್ಯಗಳಲ್ಲೊಂದು. ಗೋಧಿಹಿಟ್ಟು, ತುಪ್ಪ, ಬೆಲ್ಲ, ಒಣಹಣ್ಣುಗಳನ್ನು ಬೆರೆಸಿ ಮಾಡುವ ಇದು, ಚಳಿಗಾಲದಲ್ಲಿ ಪರಿಪೂರ್ಣ ಪೌಷ್ಟಿಕಾಂಶ ನೀಡುವ ಖಾದ್ಯ. ಮನೆಯಲ್ಲಿ ಬಾಣಂತಿ ಇದ್ದಾಗ ಹಾಗೂ ಸಂಕ್ರಾಂತಿ ಹಬ್ಬದ ಸಮಯದಲ್ಲಿ ಈ ಖಾದ್ಯದ ಹಾಜರಿ ಇದ್ದೇ ಇರುತ್ತದೆ.

ಏನೇನು ಬೇಕು?

ಗೋಧಿಹಿಟ್ಟು, ತುಪ್ಪ, ಬೆಲ್ಲ, ಒಣಹಣ್ಣುಗಳು (ಬಾದಾಮಿ, ಗೋಡಂಬಿ, ಪಿಸ್ತಾ, ಮಖಾನ್, ಆಕ್ರೂಟ್, ಕಲ್ಲಂಗಡಿ ಬೀಜ– ಎಲ್ಲವೂ ಸಮ ಪ್ರಮಾಣ), ಅಂಟು ಎರಡು ಕಪ್, ಒಂದು ಬಟ್ಟಲು ಒಣಕೊಬ್ಬರಿ, ಒಣಶುಂಠಿ ಪುಡಿ, ಗಸಗಸೆ, ಒಣದ್ರಾಕ್ಷಿ.

ಒಂದು ಪ್ಯಾನ್‌ನಲ್ಲಿ ತುಪ್ಪ ಹಾಕಿ ಅಂಟನ್ನು ಹರಳು ಬರುವ ಹಾಗೆ ಹುರಿದು ತೆಗೆದಿಟ್ಟುಕೊಳ್ಳಬೇಕು. ಬಳಿಕ ಈ ಅಂಟಿನ ಜೊತೆಗೆ ಎಲ್ಲ ಒಣಹಣ್ಣುಗಳು ಹಾಗೂ ಕೊಬ್ಬರಿತುರಿಯನ್ನು ತುಪ್ಪ ಹಾಕಿ ಹುರಿದುಕೊಳ್ಳಬೇಕು. ಇವು ತಣಿದಾದ ಬಳಿಕ ಮಿಕ್ಸಿಯಲ್ಲಿ ಹಾಕಿ ತರಿತರಿಯಾಗಿ ರುಬ್ಬಿಕೊಳ್ಳಬೇಕು.

ಬಳಿಕ ಒಂದು ಪಾತ್ರೆಯಲ್ಲಿ ತುಪ್ಪ, ಗೋಧಿಹಿಟ್ಟು ಹಾಕಿ ಹುರಿದುಕೊಳ್ಳಬೇಕು. ಅದಕ್ಕೆ ಗಸಗಸೆ, ಒಣದ್ರಾಕ್ಷಿ ಹಾಕಿ ಮಿಕ್ಸ್ ಮಾಡಿಕೊಂಡು, ತರಿತರಿಯಾಗಿ ರುಬ್ಬಿಕೊಂಡ ಒಣಹಣ್ಣುಗಳ ಮಿಶ್ರಣ, ಶುಂಠಿ ಪುಡಿ, ಬೆಲ್ಲ ಹಾಕಿ ಬಿಸಿ ಮಾಡಬೇಕು. ಕಾಲು ಭಾಗದಷ್ಟು ಹುರಿದ ಒಣಹಣ್ಣುಗಳನ್ನು ತೆಗೆದಿಟ್ಟುಕೊಂಡು ಕೊನೆಯಲ್ಲಿ ಬೆರೆಸಬೇಕು. ಪೌಷ್ಟಿಕಾಂಶಯುಕ್ತ ಪಂಜಿರಿ ಸವಿಯಲು ಸಿದ್ಧ.

ಇದನ್ನು ಹುಡಿಹುಡಿಯಾಗೂ ಸವಿಯಬಹುದು ಅಥವಾ ಉಂಡೆಯನ್ನೂ ಕಟ್ಟಿಡಬಹುದು. ಗೋಧಿಹಿಟ್ಟಿನ ಬದಲು ಹೆಸರುಬೇಳೆ ಹಿಟ್ಟನ್ನೂ ಹಾಕಬಹುದು. ಮಸಾಲೆ ಪದಾರ್ಥ ಇಷ್ಟಪಡುವವರು, ಸ್ವಲ್ಪ ಪ್ರಮಾಣದಲ್ಲಿ ಚಕ್ಕೆ, ಲವಂಗವನ್ನು ಬೆರೆಸಿಕೊಳ್ಳಬಹುದು.

ಉಂದಿಯು



ಗುಜರಾತ್‌ನ ಸಾಂಪ್ರದಾಯಿಕ ಖಾರದ ಖಾದ್ಯ ಇದು. ಚಳಿಗಾಲದಲ್ಲಿ ಲಭ್ಯವಿರುವ ಬಹುವಿಧದ ತರಕಾರಿಗಳನ್ನು ಬಳಸಿ ಮಾಡುತ್ತಾರೆ. ಸಂಕ್ರಾಂತಿ ಹಬ್ಬದಲ್ಲಿ ಬಹುತೇಕ ಗುಜರಾತೀಯರ ಮನೆಗಳಲ್ಲಿ ಇದರ ಹಾಜರಿ ಇರುತ್ತದೆ. ಕಡಲೆಹಿಟ್ಟು, ಮೆಂತ್ಯ ಸೊಪ್ಪಿನಿಂದ ತಯಾರಿಸುವ 'ಮುಠಿಯಾ' ಪ್ರಮುಖ ಪಾತ್ರಧಾರಿ. ಇದನ್ನು ಪೌಷ್ಟಿಕಾಂಶಯುಕ್ತ ಪಲ್ಯ ಎಂದೇ ಹೇಳಬಹುದು. ಹೆಚ್ಚು ಪದಾರ್ಥಗಳನ್ನು ಬಳಸುವ ಈ ಖಾದ್ಯ ಅಷ್ಟೇ ಸಮಯವನ್ನೂ ಬೇಡುತ್ತದೆ.

ಬೇಕಾಗುವ ತರಕಾರಿ: ಸಿಹಿಗೆಣಸು, ಮರಗೆಣಸು, ಆಲೂಗೆಡ್ಡೆ, ಬದನೆಕಾಯಿ, ಬಾಳೆಕಾಯಿ, ಚಪ್ಪರದ ಅವರೆಕಾಯಿ, ಹಸಿ ಬಟಾಣಿ ಇವು ಪ್ರಮುಖ. ಇನ್ನಷ್ಟು ತರಕಾರಿ ಬೇಕಿದ್ದರೆ ಬಳಸಬಹುದು.

'ಮುಠಿಯಾ'ವನ್ನು ಹೀಗೆ ತಯಾರಿಸಿ: ಸಣ್ಣಗೆ ಕತ್ತರಿಸಿದ ಮೆಂತ್ಯ ಸೊಪ್ಪು, ಕಡಲೆಹಿಟ್ಟು, ಗೋಧಿಹಿಟ್ಟು, ಉಪ್ಪು, ಅಜ್ವಾನ, ಖಾರದ ಪುಡಿ, ಜೀರಿಗೆ ಪುಡಿ, ಅರಸಿನ, ಸಕ್ಕರೆ, ಎಣ್ಣೆ, ಅಡುಗೆ ಸೋಡಾ ಸೇರಿಸಿ ಗಟ್ಟಿಯಾಗಿ ಕಲೆಸಿ, ಸಣ್ಣ ಉಂಡೆಗಳನ್ನಾಗಿ ಮಾಡಿ ಎಣ್ಣೆಯಲ್ಲಿ ಕರಿದಿಟ್ಟುಕೊಳ್ಳಬೇಕು.

ಬಳಿಕ ಮಸಾಲೆಗೆ ತೆಂಗಿನತುರಿ, ಕಡಲೆಬೀಜ, ಎಳ್ಳು, ಕೊತ್ತಂಬರಿ ಪುಡಿ, ಶುಂಠಿ, ಬೆಳ್ಳುಳ್ಳಿಯನ್ನು ಹಾಕಿ ತರಿತರಿಯಾಗಿ ರುಬ್ಬಿ ಪೇಸ್ಟ್ ಮಾಡಿ. ಇದಕ್ಕೆ ಅರಸಿನ, ಖಾರದ ಪುಡಿ, ಗರಂ ಮಸಾಲ, ಉಪ್ಪು, ಸಕ್ಕರೆ, ಎಣ್ಣೆ ಸೇರಿಸಿ ಮಿಶ್ರಣ ಮಾಡಿಟ್ಟುಕೊಳ್ಳಿ. ಬಳಿಕ ಮೇಲೆ ಹೇಳಿದ ತರಕಾರಿಗಳನ್ನು ಮಧ್ಯಮ ಗಾತ್ರದಲ್ಲಿ ಕತ್ತರಿಸಿ ಎಣ್ಣೆಯಲ್ಲಿ ಫ್ರೈ ಮಾಡಿಟ್ಟುಕೊಳ್ಳಬೇಕು (ಬದನೆಕಾಯಿಯನ್ನು ಎಣ್ಣೆಗಾಯಿ ರೀತಿ ಕತ್ತರಿಸಬೇಕು).

ಹೀಗೆ ಮಾಡಿ: ದಪ್ಪ ತಳ ಇರುವ ಪಾತ್ರೆಯಲ್ಲಿ ಎಣ್ಣೆ ಬಿಸಿ ಮಾಡಿ, ಜೀರಿಗೆ, ಕರಿಬೇವು, ಫ್ರೈ ಮಾಡಿದ ತರಕಾರಿ, ಮುಠಿಯಾ ಹಾಗೂ ಮೊದಲೇ ತಯಾರಿಸಿ ಇಟ್ಟುಕೊಂಡಿದ್ದ ಮಸಾಲವನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಬೇಕು. ಅಗತ್ಯವಿದ್ದರೆ ಸ್ವಲ್ಪ ನೀರು ಹಾಕಿ 10ರಿಂದ 15 ನಿಮಿಷ ಪಾತ್ರೆಯ ಬಾಯಿ ಮುಚ್ಚಿ ಸಣ್ಣ ಉರಿಯಲ್ಲಿ ಬೇಯಿಸಬೇಕು.

ಬಿಸಿಬಿಸಿಯಾದ ಉಂದಿಯುವನ್ನು ಪೂರಿ ಅಥವಾ ಚಪಾತಿ ಜೊತೆ ಸವಿಯಬಹುದು.

ಕತ್ತಲಿನ ಭಯಕ್ಕೆ ಪರಿಹಾರವೇನು?



ಅಂತರಂಗ

ಅಕ್ಷರ ದಾಮ್ಲೆ, ಮನಃಶಾಸ್ತ್ರಜ್ಞ

• **ನನಗೆ ಕತ್ತಲೆಂದರೆ ವಿಪರೀತ ಭಯ. ಸದಾ ಬೆಳಕಿನಲ್ಲಿಯೇ ಇರಬೇಕು ಎನಿಸುತ್ತದೆ. ಕತ್ತಲು ನೋಡಿದ ತಕ್ಷಣ ಉಸಿರಾಟದ ಸಮಸ್ಯೆ ಎದುರಾಗುತ್ತದೆ. ರಾತ್ರಿ ಹೊತ್ತು ಲೈಟ್ ಹಾಕಿಕೊಂಡೇ ನಿದ್ರೆ ಮಾಡುವಂತಾಗಿದೆ. ಈ ಕಾರಣಕ್ಕೆ ನನಗೂ ನನ್ನ ಹೆಂಡತಿಗೂ ಜಗಳ, ಮನಸ್ತಾಪ. 'ಕತ್ತಲು ನೋಡಿ ಹೆದರಿಕೊಳ್ಳುವ ಹೆದರುಪುಕ್ಕಲ, ನೀನು ಗಂಡಸೇ ಅಲ್ಲ' ಎಂದು ಛೇಡಿಸುತ್ತಾಳೆ. ಈ ಕಾರಣಕ್ಕಾಗಿಯೇ ಮನೆಯಲ್ಲಿ ನಿತ್ಯವೂ ಗಲಾಟೆ ಆಗುತ್ತಿತ್ತು. ಇದು ವಿಪರೀತಕ್ಕೆ ಹೋಗಿ ಮದುವೆ ಮುರಿದುಬಿದ್ದಿದೆ. ಕತ್ತಲಿನ ಈ ಭಯಕ್ಕೆ ಪರಿಹಾರವೇನು ತಿಳಿಸಿ ಸರ್.**

ಸೋಹನ್ ಫರ್ನಾಂಡಿಸ್, ಮಂಗಳೂರು

ಕತ್ತಲಿನ ಕುರಿತು ಭಯಪಡುವುದು ಮಕ್ಕಳಲ್ಲಿ ಸಾಧಾರಣವಾಗಿ ಕಂಡುಬರುತ್ತದೆ. ಆದರೆ, ದೊಡ್ಡವರಾದ ಮೇಲೂ ಅದು ಉಳಿದುಕೊಂಡಿರುವುದಕ್ಕೆ ಏನು ಕಾರಣ ಎಂಬುದನ್ನು ಮೊದಲಿಗೆ ಹುಡುಕಬೇಕು.

ಕತ್ತಲೆ ಅನ್ನುವುದು ಮಕ್ಕಳಿಗೆ ಸಹಜವಾಗಿ ಭಯವನ್ನು ಉಂಟುಮಾಡುತ್ತದೆ. ಯಾಕೆಂದರೆ, ಕತ್ತಲಿನಲ್ಲಿ ಅನಿರ್ದಿಷ್ಟತೆ ಇರುತ್ತದೆ. ಅದರ ಜೊತೆಗೆ, ಯಾರಾದರೂ ಭೂತ–ಪ್ರೇತಗಳ ಕಥೆಗಳನ್ನೂ ಹೇಳಿರುತ್ತಾರೆ. ಅದರ ಜೊತೆಗೆ, ಕತ್ತಲಿನ ಗಾಢ ಮೌನವು ಭಯವನ್ನು ಸೃಷ್ಟಿಸುತ್ತದೆ. ಎಲ್ಲಾದರೂ ಸಣ್ಣ ಸದ್ದಾದರೂ ದೊಡ್ಡದಾಗಿ ಭಾಸವಾಗುತ್ತದೆ. ಇಂತಹ ಭಯವನ್ನು ಹೋಗಲಾಡಿಸಲು ಸುಲಭ ಉಪಾಯಗಳಿವೆ. ಉದಾಹರಣೆಗೆ, ಕತ್ತಲಿನ ಕೋಣೆಯೊಳಗೆ ನಿಧಾನವಾಗಿ ಕರೆದುಕೊಂಡು ಹೋಗುವುದು, ಆಮೇಲೆ ಒಬ್ಬರೇ ಹೋಗುವುದಕ್ಕೆ ಪ್ರೇರೇಪಿಸುವುದು, ಕತ್ತಲಿನಲ್ಲಿ ಹೊರಗೆ ಹೋಗುವುದಕ್ಕೆ ಅಭ್ಯಾಸ ಮಾಡಿಸುವುದು... ಹೀಗೆ ಕತ್ತಲಿನ ಕುರಿತು ಇರುವ ಭಯವನ್ನು ನಿಧಾನವಾಗಿ ನಿವಾರಿಸಬಹುದು.

ಆದರೆ, ದೊಡ್ಡವರಾದ ಮೇಲೂ ಆ ರೀತಿಯ ಭಯ ಇದೆ ಅಂತಾದರೆ, ಅದಕ್ಕೆ ಏನಾದರೂ ಬಲವಾದ ಕಾರಣ ಇರುವ ಸಾಧ್ಯತೆಗಳಿರುತ್ತವೆ. ಭಯಪಡಬೇಕಾದ ಅಗತ್ಯವಿಲ್ಲ ಎಂಬುದು ಬೌದ್ಧಿಕವಾಗಿ ತಿಳಿದಿದ್ದರೂ, ಆ ಸಮಯಕ್ಕೆ ಹಠಾತ್ ಆಗಿ ಭಯ ಉಮ್ಮಳಿಸಿ ಬರುತ್ತದೆ. ಆಗ ಉದ್ವೇಗಕ್ಕೆ ಒಳಗಾಗಿ ಉಸಿರಾಟದ ಸಮಸ್ಯೆಯೂ ಉಂಟಾಗಬಹುದು. ಇಂತಹ ಪರಿಸ್ಥಿತಿಯನ್ನು ಸರಿಪಡಿಸಲು ಭಯದ ಆ ಮೂಲವನ್ನು ಹುಡುಕಿ ಅದಕ್ಕೆ ಚಿಕಿತ್ಸೆ ಮಾಡುವ ಅಗತ್ಯವಿದೆ.

ಇನ್ನು ಗಂಡಸೇ ಅಲ್ಲ ಅನ್ನುವ ಮಾತು ಸಾಮಾಜಿಕ ಗ್ರಹಿಕೆಯಿಂದ ಬರುವಂಥದ್ದು. ಗಂಡಸರಿಗೆ ಹೆದರಿಕೆ ಆಗಬಾರದು, ಗಂಡಸರು ಅಳಬಾರದು, ದುರ್ಬಲರಾಗಿ ಇರಬಾರದು, ಯಾವತ್ತೂ ಜಗಳಕ್ಕೆ ತಯಾರಾಗಿಯೇ ಇರಬೇಕು, ಕ್ರೋಧಿತರಾಗಿಯೇ ಇರಬೇಕೆಂಬ ಪರಿಕಲ್ಪನೆ ಸಮಾಜದಲ್ಲಿದೆ. ಗಂಡಸುತನವನ್ನು ಸಿಡುಕುತನದಿಂದ ಅಳೆಯುವುದು ತಪ್ಪು. ನಿಮ್ಮ ಪತ್ನಿಯ ಆ ರೀತಿಯ ಮಾತುಗಳು ಅವರೊಳಗಿರುವ ಹತಾಶೆ ಅಥವಾ ನಿರಾಶೆಯ ಕಾರಣದಿಂದಲೂ ಬರುತ್ತಿರಬಹುದು.

ನಿಮ್ಮ ಪ್ರಶ್ನೆಯ ಆಧಾರದ ಮೇಲೆ ಹೇಳುವುದಾದರೆ, ಅದೇ ನಿಮ್ಮ ಸಂಬಂಧದಲ್ಲಿ ತೊಂದರೆ ಕೊಟ್ಟಿರುವ ಮುಖ್ಯ ಕಾರಣ. ಮೊದಲು ಮನಃಶಾಸ್ತ್ರಜ್ಞರ ಬಳಿ ಹೋಗಿ ನಿಮ್ಮ ಭಯವನ್ನು ನಿವಾರಿಸಿಕೊಳ್ಳಿ. ಆಮೇಲೆ ಮುರಿದುಹೋಗಿರುವ ಸಂಬಂಧವನ್ನು ಕಟ್ಟುವುದಕ್ಕೆ ಮುಂದಾಗಿ. ಯಾಕೆಂದರೆ, ಈ ಸಮಸ್ಯೆ ಪರಿಹಾರವಾಗದ ವಿನಾ ನಿಮ್ಮ ಮಡದಿಯನ್ನು ಒಪ್ಪಿಸುವುದಕ್ಕೆ ಸಾಧ್ಯವಿಲ್ಲ.



ಚಿಟಿಕೆ ಸುದ್ದಿ

'ಜ.24ರಂದು 47,345 ಮನೆಗಳ ಹಂಚಿಕೆ'

ಚಿಂತಾಮಣಿ: 'ಗ್ಯಾರಂಟಿಗಳ ಒತ್ತಡದಲ್ಲೂ ಕಾಂಗ್ರೆಸ್ ಸರ್ಕಾರ ಕಳೆದ ಫೆಬ್ರುವರಿಯಲ್ಲಿ 36,789 ಮನೆಗಳನ್ನು ನೀಡಿದೆ. ಹುಬ್ಬಳ್ಳಿಯಲ್ಲಿ ಜ.24ರಂದು ನಡೆಯುವ ಕಾರ್ಯಕ್ರಮದಲ್ಲಿ ಅರ್ಹ ಫಲಾನುಭವಿಗಳಿಗೆ 47,345 ಮನೆಗಳನ್ನು ವಿತರಿಸಲಾಗುವುದು' ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಮಾಹಿತಿ ನೀಡಿದರು.


ಜಮೀರ್ ಅಹ್ಮದ್ ಖಾನ್

ಶುಕ್ರವಾರ ತಾಲ್ಲೂಕಿನ ಚಿನ್ನಸಂದ್ರ ಗ್ರಾಮಕ್ಕೆ ಭೇಟಿ ನೀಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ಒಂದು ಮನೆ ನಿರ್ಮಾಣಕ್ಕೆ ₹7.5 ಲಕ್ಷ ವೆಚ್ಚವಾಗುತ್ತದೆ. ಇದರಲ್ಲಿ ರಾಜ್ಯ ಸರ್ಕಾರ ₹1.5 ಲಕ್ಷ ಮತ್ತು ಕೇಂದ್ರ ಸರ್ಕಾರ ₹1.5 ಲಕ್ಷ ನೀಡುತ್ತದೆ. ಉಳಿದ ₹4.5 ಲಕ್ಷ ಫಲಾನುಭವಿಗಳು ಭರಿಸಬೇಕು' ಎಂದರು.

'ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಒಂದೂ ಮನೆ ನೀಡಿಲ್ಲ. ಕೊಳಚೆ ನಿರ್ಮೂಲನಾ ಮಂಡಳಿಯಿಂದ ಆಗ ಒಂದು ಮನೆ ಮಂಜೂರು ಮಾಡಿದ್ದರೂ ನಾನು ರಾಜೀನಾಮೆ ನೀಡುವೆ' ಎಂದು ಅವರು ಸವಾಲು ಹಾಕಿದರು.

'ಕಾರಿನ ಬದಲು ಟ್ರ್ಯಾಕ್ಟರ್ ನೀಡಲು ಚಿಂತನೆ'

ಚಾಮರಾಜನಗರ: 'ಸ್ವಾವಲಂಬಿ ಸಾರಥಿ' ಯೋಜನೆಯಡಿ ಫಲಾನುಭವಿಗಳಿಗೆ ಟ್ರ್ಯಾಕ್ಟರ್ ಅಥವಾ ಹೈಟೆಕ್ ಯಂತ್ರಗಳನ್ನು ನೀಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುವಂತೆ ನಿಗಮದ ವ್ಯವಸ್ಥಾಪಕರಿಗೆ ಸೂಚಿಸಲಾಗಿದೆ' ಎಂದು ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ ಶುಕ್ರವಾರ ತಿಳಿಸಿದರು.

ಅಧಿಕಾರಿಗಳ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, 'ಯೋಜನೆಯಡಿ ಈಗ ಕಾರು ಖರೀದಿಸಬಹುದು. ಬದಲಿಗೆ ಸಮುದಾಯದ ಕುಲಕಸುಬಿಗೆ ನೆರವಾಗುವಂತೆ ಯಂತ್ರೋಪಕರಣ, ಕಟ್ಟಡ ನಿರ್ಮಾಣ, ಸೆಂಟ್ರಿಂಗ್ ಪರಿಕರಗಳನ್ನು ನೀಡುವ ಚಿಂತನೆ ಇದ್ದು, ಬಜೆಟ್‌ನಲ್ಲಿ ಕಾರ್ಯಗತವಾಗುವ ವಿಶ್ವಾಸವಿದೆ' ಎಂದರು.

'ಸಮುದಾಯದ ಭೂರಹಿತ ಮಹಿಳೆಯರಿಗೆ ಭೂ ಒಡೆತನ ಯೋಜನೆಯಡಿ ಭೂಮಿ ಖರೀದಿಗೆ ಆರ್ಥಿಕ ನೆರವು ನೀಡಲಾಗುತ್ತಿದೆ. ಬೆಂಗಳೂರು ಹಾಗೂ ಸುತ್ತಮುತ್ತಲಿನ ನಾಲ್ಕು ಜಿಲ್ಲೆಗಳಲ್ಲಿ ಗರಿಷ್ಠ ₹ 25 ಲಕ್ಷ ಹಾಗೂ ಉಳಿದ ಜಿಲ್ಲೆಗಳಲ್ಲಿ ₹ 20 ಲಕ್ಷ ನೀಡಲಾಗುವುದು' ಎಂದು ತಿಳಿಸಿದರು.

ಬಿಸಿಯೂಟದಲ್ಲಿ ಹುಳು: ಮೂವರು ಅಮಾನತು

ಕೊಪ್ಪಳ: ಜಿಲ್ಲೆಯ ಎರಡು ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದಲ್ಲಿ ಹುಳುಗಳು ಕಾಣಿಸಿಕೊಂಡಿದ್ದ ಪ್ರಕರಣದಲ್ಲಿ ಕರ್ತವ್ಯಲೋಪದ ಕಾರಣಕ್ಕೆ ಮೂವರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಪಿ.ಎಂ. ಪೋಷಣ ಶಕ್ತಿ ನಿರ್ಮಾಣ ಯೋಜನೆಯ ಶಿಕ್ಷಣಾಧಿಕಾರಿ ಅನಿತಾ, ಕೊಪ್ಪಳ ತಾಲ್ಲೂಕಿನ ಸಹಾಯಕ ನಿರ್ದೇಶಕ ಗುಡಿ ಮಲ್ಲಿಕಾರ್ಜುನ ಹಾಗೂ ಕುಷ್ಟಗಿ ತಾಲ್ಲೂಕಿನ ಸಹಾಯಕ ನಿರ್ದೇಶಕ ಮಹಾಂತಯ್ಯ ಸೊಪ್ಪಿಮಠ ಅವರನ್ನು ಸೇವೆಯಿಂದ ಅಮಾನತು ಮಾಡಿ ಸರ್ಕಾರ ಆದೇಶಿಸಿದೆ.

ಕೊಪ್ಪಳ ತಾಲ್ಲೂಕಿನ ಬಿಸರಳ್ಳಿ ಗ್ರಾಮದ ನೃಪತುಂಗ ಪ್ರೌಢಶಾಲೆ ಮತ್ತು ಕುಷ್ಟಗಿ ತಾಲ್ಲೂಕಿನ ಮುದೇನೂರು ಸರ್ಕಾರಿ ಪ್ರೌಢಶಾಲೆಗಳಲ್ಲಿ ಬಿಸಿಯೂಟದಲ್ಲಿ ಹುಳುಗಳು ಕಂಡು ಬಂದಿದ್ದವು. ಈ ಕುರಿತು ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿತ್ತು.

ಉಪಚುನಾವಣೆ: ಗರಿಗೆದರಿದ ರಾಜಕೀಯ ಚಟುವಟಿಕೆ

ಮೇಟಿ ಕುಟುಂಬದ ಮೂವರು ಆಕಾಂಕ್ಷಿಗಳು

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಶಾಸಕರಾಗಿದ್ದ ಎಚ್.ವೈ. ಮೇಟಿ ಅವರ ನಿಧನದಿಂದ ತೆರವಾಗಿರುವ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಆಡಳಿತಾರೂಢ ಕಾಂಗ್ರೆಸ್‌ಗೆ ಪ್ರತಿಷ್ಠೆಯ ವಿಷಯವಾದರೆ, ಆಡಳಿತ ವಿರೋಧಿ ಅಲೆಯ ಸಾಬೀತು ಮಾಡುವ ಉಮೇದಿನಲ್ಲಿ ಬಿಜೆಪಿ ಇದೆ.

ಸಚಿವ ಸತೀಶ ಜಾರಕಿಹೊಳಿ ಈಚೆಗೆ ಬಾಗಲಕೋಟೆಗೆ ಬಂದಾಗ ಮುಖಂಡರಿಗೆ ಉಪಚುನಾವಣೆಗೆ ಸಿದ್ಧರಾಗಿರುವಂತೆ ಸೂಚಿಸಿರುವುದೇ ಅಲ್ಲದೇ ಕ್ಷೇತ್ರದ ಮಾಹಿತಿ ಪಡೆದಿದ್ದಾರೆ. ಅಭ್ಯರ್ಥಿ ಆಯ್ಕೆ, ಗೆಲುವಿನ ಲೆಕ್ಕಾಚಾರ ಕುರಿತು ಕಾಂಗ್ರೆಸ್‌ನಿಂದ ಸರ್ವೆ ಆರಂಭಗೊಂಡಿದೆ.

ಇನ್ನೊಂದೆಡೆ ಬೆಂಗಳೂರಿನಲ್ಲಿ ಜಿಲ್ಲೆಯ ಬಿಜೆಪಿ ಮುಖಂಡರೊಂದಿಗೆ ಮಾಜಿ ಸಂಸದ ಸದಾನಂದಗೌಡ ಸಭೆ ನಡೆಸಿದ್ದಾರೆ. ಪಕ್ಷದಲ್ಲಿನ ಒಳಜಗಳ ಬಗೆಹರಿಸಲು ಪ್ರಯತ್ನಿಸುವುದರ ಜೊತೆಗೆ ಗೆಲುವಿಗೆ ಬೇಕಾದ ಸಿದ್ಧತೆಯನ್ನು ಬಿಜೆಪಿ ಮಾಡುತ್ತಿದೆ.

'ಎಚ್.ವೈ.ಮೇಟಿ ಅವರ ಕುಟುಂಬಕ್ಕೆ ಟಿಕೆಟ್ ನೀಡಬೇಕು' ಎಂಬ ಕೂಗು ಕಾಂಗ್ರೆಸ್‌ನಲ್ಲಿ ಜೋರಾಗಿದೆ. ಮೇಟಿ ಅವರ ಕುಟುಂಬದಲ್ಲಿ ಪುತ್ರಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಬಾಯಕ್ಕ ಮೇಟಿ, ಪುತ್ರರಾದ ಮಲ್ಲಿಕಾರ್ಜುನ ಮೇಟಿ



ಹಾಗೂ ಉಮೇಶ ಮೇಟಿ ಹೆಸರುಗಳು ಚಾಲ್ತಿಯಲ್ಲಿವೆ.

ಮೇಟಿ ಅವರ ನಿಧನಕ್ಕೂ ಮುನ್ನ ಬಾಯಕ್ಕ ಮೇಟಿ ಹೊರತುಪಡಿಸಿದರೆ, ಪುತ್ರರಿಬ್ಬರೂ ಪಕ್ಷದ ಚಟುವಟಿಕೆಗಳಲ್ಲಿ ಕಾಣಿಸಿಕೊಂಡಿದ್ದು ಕಡಿಮೆ. ನಿಧನ ಬಳಿಕ ಎಲ್ಲ ಕಾರ್ಯಕ್ರಮಗಳಲ್ಲಿ ಪುತ್ರರಿಬ್ಬರೂ ಹಾಜರಾಗುವ ಮೂಲಕ ಉಮೇದುವಾರಿಕೆಗೆ ಸಿದ್ಧತೆ ನಡೆಸಿದ್ದಾರೆ.

ಎಚ್.ವೈ. ಮೇಟಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಟ್ಟಾ ಬೆಂಬಲಿಗರಾಗಿದ್ದರು. ಜತೆಗೆ ಅವರು ಮುಖ್ಯಮಂತ್ರಿಯವರ ಸಮುದಾಯಕ್ಕೆ ಸೇರಿದವರು. ಹೀಗಾಗಿ ಟಿಕೆಟ್ ಹಂಚಿಕೆ ವಿಷಯದಲ್ಲಿ ಮುಖ್ಯಮಂತ್ರಿ ಮಾತೇ ಅಂತಿಮವಾಗುವ ಸಾಧ್ಯತೆ ಹೆಚ್ಚಿದೆ.

ಬಿಜೆಪಿಯಲ್ಲಿ ಮಾಜಿ ಶಾಸಕ ವೀರಣ್ಣ ಚರಂತಿಮಠ ಅವರಿಗೆ ಟಿಕೆಟ್ ಸಿಗುವ ಸಾಧ್ಯತೆ ಹೆಚ್ಚಿದೆ. ಕಳೆದ ಚುನಾವಣೆಯಲ್ಲಿ ಅವರ ವಿರುದ್ಧ ಪಕ್ಷೇತರರಾಗಿ ಸ್ಪರ್ಧಿಸಿದ್ದ ಸಹೋದರ ಮಲ್ಲಿಕಾರ್ಜುನ ಚರಂತಿಮಠ 10 ಸಾವಿರ ಮತಗಳನ್ನು ಪಡೆದು ಬಿಜೆಪಿ ಸೋಲಿಗೆ ಕಾರಣರಾಗಿದ್ದರು. ಈಗ ಅವರು ಕಾಂಗ್ರೆಸ್ ಸೇರ್ಪಡೆಯಾಗಿದ್ದಾರೆ.

ಮಾಜಿ ಶಾಸಕ ವೀರಣ್ಣ ಚರಂತಿಮಠ ಹಾಗೂ ವಿಧಾನ ಪರಿಷತ್ ಸದಸ್ಯ ಪಿ.ಎಚ್. ಪೂಜಾರ ನಡುವಿನ ಕಿತ್ತಾಟ ಮುಂದುವರೆದಿದೆ. 'ಇಬ್ಬರೂ ನಾಯಕರ ಭಿನ್ನಮತ ಶಮನಗೊಳಿಸುವ ಕೆಲಸ ಆಗಬೇಕಿದೆ' ಎನ್ನುವುದು ಮುಖಂಡರ ಅನಿಸಿಕೆ.

> ಬೆಂಗಳೂರಿನಲ್ಲಿ ಉಪಚುನಾವಣೆಗೆ ಸಂಬಂಧಿಸಿದಂತೆ ಸಭೆ ನಡೆದಿದೆ. ವ್ಯತ್ಯಾಸಗಳನ್ನು ಬಿಟ್ಟು ಎಲ್ಲರೂ ಒಗ್ಗಟ್ಟಾಗಿ ಚುನಾವಣೆ ಗೆಲ್ಲಲು ವರಿಷ್ಠರು ಸೂಚಿಸಿದ್ದಾರೆ
> **ಶಾಂತಗೌಡ ಪಾಟೀಲ, ಜಿಲ್ಲಾ ಅಧ್ಯಕ್ಷ**, ಬಿಜೆಪಿ

> ಸಚಿವ ಸತೀಶ ಜಾರಕಿಹೊಳಿ ಈಗಾಗಲೇ ಬಾಗಲಕೋಟೆಯಲ್ಲಿ ಸಭೆ ಮಾಡಿದ್ದಾರೆ. ಚುನಾವಣೆ ಎದುರಿಸಲು ಮುಖಂಡರು, ಕಾರ್ಯಕರ್ತರು ಸಿದ್ಧರಾಗಿದ್ದಾರೆ
> **ಎಸ್.ಜಿ. ನಂಜಯ್ಯನಮಠ**, ಜಿಲ್ಲಾ ಅಧ್ಯಕ್ಷ, ಕಾಂಗ್ರೆಸ್

ಕಾಂಗ್ರೆಸ್ ಟಿಕೆಟ್‌ಗೆ ಅಲ್ಪಸಂಖ್ಯಾತರ ಪಟ್ಟು

• ಜಿ.ಬಿ. ನಾಗರಾಜ್

ದಾವಣಗೆರೆ: ಶಾಸಕರಾಗಿದ್ದ ಶಾಮನೂರು ಶಿವಶಂಕರಪ್ಪ ನಿಧನದಿಂದ ತೆರವಾಗಿರುವ ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಉಪ ಚುನಾವಣೆ ಘೋಷಣೆಗೂ ಮುನ್ನವೇ ಕಾಂಗ್ರೆಸ್ ಟಿಕೆಟ್‌ಗೆ ಅಲ್ಪಸಂಖ್ಯಾತ ಸಮುದಾಯ ಪಟ್ಟು ಹಿಡಿದಿದೆ. ಬಿಜೆಪಿಯಲ್ಲಿ ಟಿಕೆಟ್ ಆಕಾಂಕ್ಷಿಗಳು ತೆರೆಮರೆಯ ಲಾಬಿಯಲ್ಲಿ ನಿರತರಾಗಿದ್ದಾರೆ.

'ಕ್ಷೇತ್ರ ಪುನರ್ ವಿಂಗಡಣೆಯ ಬಳಿಕ ಎದುರಾದ ನಾಲ್ಕು ಚುನಾವಣೆಗಳಲ್ಲಿ (2008, 2013, 2018, 2023) ಸತತವಾಗಿ ಗೆಲುವು ಸಾಧಿಸಿದ್ದ ಶಾಮನೂರು ಶಿವಶಂಕರಪ್ಪ ಅವರ ಉತ್ತರಾಧಿಕಾರಿಯಾಗಿ ಕುಟುಂಬದಿಂದಲೇ ಯಾರಾದರೂ ಕಣಕ್ಕೆ ಇಳಿಯಬಹುದೇ?', 'ಪಕ್ಷದ ಹೈಕಮಾಂಡ್ ಒಂದೊಮ್ಮೆ ಕುಟುಂಬದಾಚೆಗೆ ಒಲವು ತೋರಿದಲ್ಲಿ ಕಣಕ್ಕೆ ಇಳಿಯುವವರು ಯಾರು?' ಎಂಬ ಕುತೂಹಲ ಮೂಡಿದೆ.

ಸಾವಿನ ಶೋಕದಲ್ಲಿರುವ ಕುಟುಂಬ ಇನ್ನೂ ಈ ಕುರಿತು ನಿರ್ಧಾರಕ್ಕೆ ಬಂದಿಲ್ಲ. ಉಪಚುನಾವಣೆ ಬಗ್ಗೆ ಬಹಿರಂಗ ಪ್ರತಿಕ್ರಿಯೆ ನೀಡುತ್ತಿಲ್ಲ.

ಕಾಂಗ್ರೆಸ್‌ನ ಭದ್ರ ಕೋಟೆಯಾಗಿರುವ ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿಯೇ ಪ್ರಬಲ ಎದುರಾಳಿ. ಜೆಡಿಎಸ್, ಎಸ್‌ಡಿಪಿಐ, ಸಿಪಿಐ ಸೇರಿ ಇತರ ಪಕ್ಷಗಳಿಗೆ ಇಲ್ಲಿ ನೆಲೆ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಮುಸ್ಲಿಂ ಸಮುದಾಯದ ಮತಗಳು ನಿರ್ಣಾಯಕವಾಗಿವೆ.



ದಶಕದಿಂದ ಕಾಂಗ್ರೆಸ್ ಟಿಕೆಟ್‌ಗೆ ಬೇಡಿಕೆ ಇಡುತ್ತಿರುವ ಮುಸ್ಲಿಂ ಸಮುದಾಯದವರು ಈ ಬಾರಿ ಅವಕಾಶಕ್ಕಾಗಿ ಎದುರು ನೋಡುತ್ತಿದ್ದಾರೆ. ಸಮುದಾಯದ ಸಭೆ ನಡೆಸಿ ಒಗ್ಗಟ್ಟು ಪ್ರದರ್ಶಿಸಿದ್ದಾರೆ. ವಸತಿ ಸಚಿವ ಜಮೀರ್ ಅಹಮದ್ ಸೇರಿದಂತೆ ಕಾಂಗ್ರೆಸ್ ನಾಯಕರನ್ನು ಸಂಪರ್ಕಿಸಿ ಈ ಕುರಿತು ಮನವಿ ಮಾಡಿಕೊಂಡಿದ್ದಾರೆ.

'ಶಿವಶಂಕರಪ್ಪ ಅವರ ದ್ವಿತೀಯ ಪುತ್ರ ಎಸ್.ಎಸ್. ಗಣೇಶ್ ಅಭ್ಯರ್ಥಿಯಾಗಲಿ' ಎಂಬ ಒತ್ತಾಯವೂ ಪಕ್ಷದಲ್ಲೇ ಕೇಳಿ ಬರುತ್ತಿದೆ. ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಸಂಸದೆ ಡಾ.ಪ್ರಭಾ ದಂಪತಿ ಪುತ್ರ ಸಮರ್ಥ್ ಹೆಸರೂ ಚರ್ಚೆಯ ಮುನ್ನೆಲೆಗೆ ಬಂದಿದೆ. ಕುಟುಂಬದ ವತಿಯಿಂದ ಆಯೋಜಿಸಿದ್ದ ನುಡಿನಮನ ಸಮಾರಂಭದಲ್ಲಿ ಸಮರ್ಥ್ ಚಟುವಟಿಕೆಯಿಂದ ಕಾಣಿಸಿಕೊಂಡಿದ್ದು ಮುನ್ಸೂಚನೆಯಂತಿದೆ.

ಬಿಜೆಪಿಯಿಂದ ಸ್ಪರ್ಧಿಸಿ ಪರಾಭವಗೊಂಡಿದ್ದ ಯಶವಂತರಾವ್ ಜಾಧವ್, ಬಿ.ಜಿ. ಅಜಯ್‌ಕುಮಾರ್, ಶ್ರೀನಿವಾಸ ದಾಸಕರಿಯಪ್ಪ ಸೇರಿದಂತೆ ಹಲವರು ಟಿಕೆಟ್ ಆಕಾಂಕ್ಷಿಗಳಿದ್ದಾರೆ. ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ ಪುತ್ರ ಜಿ.ಎಸ್. ಅನಿತ್‌ಕುಮಾರ್ ಹೆಸರು ಹರಿದಾಡುತ್ತಿದೆ. 'ಇನ್‌ಸೈಟ್' ಐಎಎಸ್ ಸಂಸ್ಥೆಯ ಸಂಸ್ಥಾಪಕ ಜಿ.ಬಿ. ವಿನಯ್‌ಕುಮಾರ್ 'ಅಚ್ಚರಿ'ಯ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯುವ ಸಾಧ್ಯತೆಯೂ ಇದೆ.

> ಶಾಮನೂರು ಶಿವಶಂಕರಪ್ಪ ಅಗಲಿಕೆಯ ದುಃಖದಿಂದ ಕುಟುಂಬ ಇನ್ನೂ ಹೊರಬಂದಿಲ್ಲ. ಉಪಚುನಾವಣೆ ಕುರಿತು ಪಕ್ಷ ಸಂಕ್ರಾಂತಿ ಬಳಿಕ ಗಮನ ಹರಿಸುವ ಸಾಧ್ಯತೆ ಇದೆ
> **ಎಚ್.ಬಿ. ಮಂಜಪ್ಪ**, ಅಧ್ಯಕ್ಷ ಕಾಂಗ್ರೆಸ್ ಜಿಲ್ಲಾ ಘಟಕ

> ಚುನಾವಣೆಗೆ ಸಿದ್ಧತೆ ಆರಂಭಿಸಲಾಗಿದೆ. ಮತದಾರರ ಬಗ್ಗೆ ಮಾಹಿತಿ ಕಲೆಹಾಕಲಾಗಿದೆ. ಕ್ಷೇತ್ರದ ಕುರಿತು ರಾಜ್ಯ ನಾಯಕರ ಶೀಘ್ರ ಸಭೆ ನಡೆಸುವ ನಿರೀಕ್ಷೆಯಲ್ಲಿದ್ದೇವೆ
> **ಎನ್. ರಾಜಶೇಖರ್**, ಅಧ್ಯಕ್ಷ ಬಿಜೆಪಿ ಜಿಲ್ಲಾ ಘಟಕ

ಹೈಕಮಾಂಡ್‌ನ ಆಶೀರ್ವಾದ: ಸಿ.ಎಂ

ಪ್ರಜಾವಾಣಿ ವಾರ್ತೆ

ವಿಜಯಪುರ: ಶುಕ್ರವಾರ ಇಲ್ಲಿ ನಡೆದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ಸಮಾರಂಭವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೃತಜ್ಞತೆ ಸಲ್ಲಿಕೆಗೆ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ವಿಶಿಷ್ಟ ಮಾತುಗಳಿಗೆ ವೇದಿಕೆಯಾಯಿತು. ಇಬ್ಬರ ಮಾತುಗಳಲ್ಲೂ ಅಧಿಕಾರ ವಿಷಯ ಪ್ರಸ್ತಾಪವಾಯಿತು.

ಇದೇ ಸಂದರ್ಭದಲ್ಲಿ ಸಚಿವ ಎಂ.ಬಿ. ಪಾಟೀಲ ಅವರು ತಮ್ಮ ಮನೆಯಿಂದ ತಯಾರಿಸಿಕೊಂಡು ತಂದಿದ್ದ ವಿಶೇಷ ಲಾಡುವನ್ನು ಡಿ.ಕೆ.ಶಿವಕುಮಾರ್ ಅವರು ಸಿದ್ದರಾಮಯ್ಯ ಅವರಿಗೆ ತಿನ್ನಿಸಿ, ಅಭಿನಂದಿಸಿದರು.

ಸಿದ್ದರಾಮಯ್ಯ ಮಾತನಾಡಿ,


ವಿಜಯಪುರದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿಶೇಷ ಲಾಡುವನ್ನು ತಿನ್ನಿಸಿದರು. ಸಚಿವ ಎಂ.ಬಿ.ಪಾಟೀಲ ಇದ್ದಾರೆ–ಪ್ರಜಾವಾಣಿ ಚಿತ್ರ

'ರಾಜ್ಯದ ಜನತೆ, ಕಾಂಗ್ರೆಸ್ ಹೈಕಮಾಂಡ್, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಶೀರ್ವಾದದಿಂದ ದೀರ್ಘಾವಧಿ ಮುಖ್ಯಮಂತ್ರಿ ಆಗಿದ್ದೇನೆ' ಎಂದು ಸಂತಸ ವ್ಯಕ್ತಪಡಿಸಿದರು.

'ಮಾಜಿ ಸಿ.ಎಂ ದೇವರಾಜ ಅರಸು ಅವರ 7 ವರ್ಷ 239 ದಿನಗಳ ಆಡಳಿತದ ದಾಖಲೆ ಮುರಿದಿದ್ದು, ಹೆಚ್ಚುವರಿ ಮೂರು ದಿನ ಆಡಳಿತ ನಡೆಸಿದ್ದೇನೆ. ಇದು ಸಾಧ್ಯವಾಗಿರುವುದಕ್ಕೆ ಕೃತಜ್ಞತೆ ಅರ್ಪಿಸುತ್ತೇನೆ' ಎಂದರು.

ನಂಬಿಕೆ ಬಹಳ ಮುಖ್ಯ: ಡಿಕೆಶಿ

ಡಿ.ಕೆ.ಶಿವಕುಮಾರ್ ಮಾತನಾಡಿ, 'ಮರಕ್ಕೆ ಬೇರು ಎಷ್ಟು ಮುಖ್ಯವೋ, ಅದೇ ರೀತಿ ಮನುಷ್ಯನಿಗೆ ನಂಬಿಕೆ ಬಹಳ ಮುಖ್ಯ. ದೇವರು ನಮಗೆ ಎರಡು ಆಯ್ಕೆ ನೀಡಿದ್ದಾನೆ. ಒಂದು ಕೊಟ್ಟು ಹೋಗುವುದು, ಮತ್ತೊಂದು ಬಿಟ್ಟು ಹೋಗುವುದು' ಎಂದರು.

ನುಡಿಗಟ್ಟು, ಒಗಟುಗಳನ್ನು ಭಾಷಣದುದ್ದಕ್ಕೂ ಪ್ರಸ್ತಾಪಿಸಿದ ಅವರು, 'ಬುದ್ಧಿ ಇದ್ದವರು ಯುದ್ಧ ಗೆಲ್ಲುತ್ತಾರೆ. ಗುಣ ಇದ್ದವರು ಹೃದಯವನ್ನು ಗೆಲ್ಲುತ್ತಾರೆ. ತಾಳ್ಮೆ ಇದ್ದವರು ಜಗತ್ತನ್ನೇ ಗೆಲ್ಲುತ್ತಾರೆ' ಎಂದರು.

'ಕಮಲ ಕೆರೆಯಲ್ಲಿದ್ದರೆ ಚೆಂದ, ತೆನೆ ಹೊಲದಲ್ಲಿದ್ದರೆ ಚೆಂದ. ದಾನ ಧರ್ಮ ಮಾಡುವ ಕೈ ಅಧಿಕಾರದಲ್ಲಿದ್ದರೆ ಚೆಂದ ಎಂದು ಚುನಾವಣೆ ಪ್ರಚಾರದ ವೇಳೆ ನಾನು ಹೇಳಿದ್ದೆ. ಈ ಕೈಗೆ ಅಧಿಕಾರ ಸಿಕ್ಕಿದ ಕಾರಣಕ್ಕೆ ಇಂದು ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯ ನಡೆದಿವೆ' ಎಂದರು.

ವಿಜಯಪುರಕ್ಕೆ ಸರ್ಕಾರಿ ವೈದ್ಯ ಕಾಲೇಜು

ಪ್ರಜಾವಾಣಿ ವಾರ್ತೆ

ವಿಜಯಪುರ: 'ವಿಜಯಪುರದಲ್ಲಿ ಉದ್ದೇಶಿತ ಖಾಸಗಿ–ಸಾರ್ವಜನಿಕ ಸಹಭಾಗಿತ್ವದಲ್ಲಿ (ಪಿಪಿಪಿ) ವೈದ್ಯಕೀಯ ಕಾಲೇಜು ಸ್ಥಾಪನೆ ಕೈಬಿಟ್ಟು ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಬೇಕು' ಎಂದು ಆಗ್ರಹಿಸಿ 115 ದಿನಗಳಿಂದ ನಡೆಯುತ್ತಿದ್ದ ಅನಿರ್ದಿಷ್ಟಾವಧಿ ಹೋರಾಟಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಂದಿಸಿದ್ದಾರೆ.

ಶುಕ್ರವಾರ ನಗರದಲ್ಲಿ ₹870 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಶುಕ್ರವಾರ ಶಂಕುಸ್ಥಾಪನೆ ನೆರವೇರಿಸಿದ ಅವರು, 'ವಿಜಯಪುರದಲ್ಲಿ ನಡೆದ ದೀರ್ಘಾವಧಿ ಹೋರಾಟ ನನ್ನ ಗಮನದಲ್ಲಿದೆ' ಎಂದರು.

'ಪಿಪಿಪಿ ಅಡಿ ಕಾಲೇಜು ಸ್ಥಾಪನೆ ಈ ಹಿಂದಿನ ಬಿಜೆಪಿ ಸರ್ಕಾರದ ಯೋಜನೆಯಾಗಿತ್ತು. ಅದನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದೇವೆ. ಇನ್ನು ಮುಂದೆ ಹೋರಾಟ ಮಾಡುವ ಅಗತ್ಯವಿಲ್ಲ' ಎಂದರು.

ಗೊರುಚ, ಸಂಗೀತಾ ಕಟ್ಟಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಕೂಡಲಸಂಗಮದಲ್ಲಿ ಬಸವ ಧರ್ಮ ಪೀಠದಿಂದ ಜ.12ರಿಂದ ಮೂರು ದಿನ '39ನೇ ಶರಣ ಮೇಳ' ನಡೆಯಲಿದ್ದು, 13ರಂದು ಬೆಳಿಗ್ಗೆ 10.30ಕ್ಕೆ ಮಹಾರಾಷ್ಟ್ರ ಮಾಜಿ ಮುಖ್ಯಮಂತ್ರಿ ಸುಶೀಲ್ ಕುಮಾರ ಶಿಂಧೆ ಅವರು ಉದ್ಘಾಟಿಸುವರು' ಎಂದು ಉತ್ಸವ ಸಮಿತಿ ಕಾರ್ಯಾಧ್ಯಕ್ಷೆ ಮಾತೆ ಗಂಗಾದೇವಿ ತಿಳಿಸಿದರು.

'ಲಿಂಗಾನಂದ ಸ್ವಾಮಿ ಸ್ಮರಣಾರ್ಥ ನೀಡುವ 'ಸ್ವಾಮಿ ಲಿಂಗಾನಂದಶ್ರೀ' ರಾಷ್ಟ್ರೀಯ ಪ್ರಶಸ್ತಿಗೆ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ₹1 ಲಕ್ಷ ನಗದು ಒಳಗೊಂಡಿದೆ. ಇದೇ ವೇಳೆ ಶಾಸಕ ದರ್ಶನ ಪುಟ್ಟಣ್ಣಯ್ಯ ಅವರಿಗೆ 'ಪ್ರಮುಖ ಪ್ರಜೆ' ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದರು.

'ಮಾತೆ ಮಹಾದೇವಿ ಸ್ಮರಣಾರ್ಥ ನೀಡುವ 'ಬಸವಾತ್ಮಜೆ' ರಾಷ್ಟ್ರೀಯ ಪ್ರಶಸ್ತಿಗೆ ಗಾಯಕಿ ಸಂಗೀತಾ ಕಟ್ಟಿ ಆಯ್ಕೆ ಆಗಿದ್ದು, ಪ್ರಶಸ್ತಿಯು ₹50 ಸಾವಿರ ನಗದು ಒಳಗೊಂಡಿದೆ. ಇದೇ ವೇಳೆ ಸರ್ಕಾರಿ ನೌಕರರ ಸಂಘದ ರಾಜ್ಯ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರಿಗೆ 'ಶರಣ ಕಾಯಕ ರತ್ನ, ಪತ್ರಕರ್ತ ರವಿ ಮೂಕಿ ಅವರಿಗೆ 'ಶರಣ ಜ್ಞಾನ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಲೆಯಾಳ: ಕೇರಳ ಸಿ.ಎಂಗೆ ಪತ್ರ

ಮಸೂದೆ ಜಾರಿ ಮಾಡಿದರೆ ವಿರೋಧ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳ ಸರ್ಕಾರ ರೂಪಿಸಿರುವ ಮಲಯಾಳ ಭಾಷಾ ಮಸೂದೆ ಕುರಿತು ಆತಂಕ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಕುರಿತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಪತ್ರ ಬರೆದಿದ್ದಾರೆ.

'ಸಂವಿಧಾನವು ಭಾಷಾ ಅಲ್ಪಸಂಖ್ಯಾತರಿಗೆ ದೃಢವಾದ ರಕ್ಷಣೆ ಒದಗಿಸಿದೆ. ಕನ್ನಡ ಭಾಷೆಯ ಮೇಲೆ ಕರ್ನಾಟಕಕ್ಕೆ ಅಪಾರ ಹೆಮ್ಮೆ ಇದೆ. ನಮ್ಮ ಭಾಷೆಯ ಪ್ರೋತ್ಸಾಹ ಮತ್ತೊಂದು ಭಾಷೆಯ ಮೇಲೆ ಹೇರಿಕೆಯಾಗಬಾರದು ಎಂಬ ತತ್ವವನ್ನು ಪಾಲಿಸಿಕೊಂಡು ಬಂದಿದ್ದೇವೆ. ಈ ನಂಬಿಕೆಯೇ ನಮ್ಮ ನೀತಿ, ಸೌಹಾರ್ದಕ್ಕೂ ಮೂಲವಾಗಿದೆ. ಮಸೂದೆ ಜಾರಿಯಾದರೆ ಅದನ್ನು ವಿರೋಧಿಸುತ್ತೇವೆ. ಗಡಿನಾಡ ಕನ್ನಡಿಗರ ರಕ್ಷಣೆಗೆ ನಿಲ್ಲಲಿದ್ದೇವೆ. ಹಾಗಾಗಿ, ಮಸೂದೆ ಹಿಂಪಡೆಯಬೇಕು' ಎಂದು ಒತ್ತಾಯಿಸಿದ್ದಾರೆ.

'ಕರ್ನಾಟಕ ಮತ್ತು ಕೇರಳ ಭೌಗೋಳಿಕ ಸಮೀಪವಷ್ಟೇ ಅಲ್ಲದೆ, ಆಳವಾದ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಮಾನವೀಯ ಬಂಧಗಳಿಂದ ಕೂಡಿದ್ದು, ದೀರ್ಘಕಾಲದ ಸಂಬಂಧವನ್ನು ಹೊಂದಿವೆ. ಕಾಸರಗೋಡು ಮತ್ತಿತರ ಗಡಿ ಪ್ರದೇಶಗಳು ಆತ್ಮಸ್ಪೂರ್ತಿಯ ಜೀವಂತ ಉದಾಹರಣೆಗಳಾಗಿವೆ. ಅಲ್ಲಿ ಮಲಯಾಳ, ಕನ್ನಡ, ತುಳು, ಬ್ಯಾರಿ ಹಾಗೂ ಇತರ ಭಾಷೆಗಳು ತಲೆಮಾರುಗಳಿಂದ ದಿನನಿತ್ಯದ ಜೀವನ, ಶಿಕ್ಷಣ ಮತ್ತು ಗುರುತನ್ನು ರೂಪಿಸಿಕೊಂಡು ಬಂದಿವೆ. ಗಡಿಭಾಗದ ಜಿಲ್ಲೆಗಳ ಕನ್ನಡ ಮಾಧ್ಯಮ ಶಾಲೆಗಳಲ್ಲೂ ಮಲಯಾಳ ಮಾಧ್ಯಮವನ್ನು ಪ್ರಥಮ ಭಾಷೆಯಾಗಿಸುತ್ತಿರುವುದು ಆತಂಕ ಮೂಡಿಸಿದೆ' ಎಂದಿದ್ದಾರೆ.

'ಭಾಷೆ ಆಧಾರಿತ ಅಲ್ಪಸಂಖ್ಯಾತ ಸಮುದಾಯಗಳಿಗೆ ಭಾಷೆ ಕೇವಲ ಶೈಕ್ಷಣಿಕ ಆಯ್ಕೆಯಲ್ಲ, ಅದು ಅವರ ಗುರುತು ಮತ್ತು ಅವಕಾಶಗಳ ಮೂಲ. ಕಾಸರಗೋಡು ಮಕ್ಕಳು ಕನ್ನಡ ಮಾಧ್ಯಮ ಶಿಕ್ಷಣವನ್ನು ಅವಲಂಬಿಸಿದ್ದಾರೆ. ಕರ್ನಾಟಕದ ಜತೆಗಿನ ದಶಕಗಳ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸಂಪರ್ಕ ಈ ಆಯ್ಕೆಗೆ ಕಾರಣವಾಗಿದೆ. ಜನರ ಆಯ್ಕೆಯನ್ನು ಗೌರವಿಸುವುದು ಮಲಯಾಳ ಭಾಷೆಯ ಗೌರವವನ್ನು ಕುಗ್ಗಿಸುವುದಿಲ್ಲ. ಬದಲಾಗಿ ಭಾರತದ ಬಹುತ್ವವನ್ನು ಬಲಪಡಿಸುತ್ತದೆ' ಎಂದು ವಿವರಿಸಿದ್ದಾರೆ.

'ಶೀಘ್ರ ರಾಷ್ಟ್ರಪತಿ ಭೇಟಿ'

ಬೆಳಗಾವಿ: 'ಕೇರಳ ಸರ್ಕಾರ ಅಂಗೀಕರಿಸಿರುವ ಮಲಯಾಳ ಭಾಷಾ ಮಸೂದೆಯು ಕಾಸರಗೋಡಿನ ಕನ್ನಡಿಗರ ಹಿತಾಸಕ್ತಿಗಳ ಮೇಲೆ ಪರಿಣಾಮ ಬೀರಲಿದೆ. ಅದಕ್ಕೆ ಅನುಮೋದನೆ ನೀಡದಂತೆ ಕೋರಲು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ನೇತೃತ್ವದ ನಿಯೋಗ ಶೀಘ್ರವೇ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲಿದೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಇಲ್ಲಿ ಹೇಳಿದರು.

'ಮಸೂದೆ ಕೇರಳದ ಗಡಿ ಪ್ರದೇಶಗಳ ಕನ್ನಡಿಗರ ಹಿತಾಸಕ್ತಿಗೆ ವಿರುದ್ಧವಿದೆ. ಕಾಸರಗೋಡಿನಲ್ಲಿ 7.5 ಲಕ್ಷ ಕನ್ನಡಿಗರಿದ್ದು, 210 ಕನ್ನಡ ಮಾಧ್ಯಮ ಶಾಲೆಗಳಿವೆ. ಹೀಗಾಗಿ, ಮಸೂದೆಗೆ ಅನುಮೋದನೆ ನೀಡದಂತೆ ರಾಷ್ಟ್ರಪತಿ ಮತ್ತು ಕೇರಳ ರಾಜ್ಯಪಾಲರಿಗೂ ಒತ್ತಾಯಿಸುತ್ತೇವೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಬಂಡಿ ಓಟ..

ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ


ಹಾವೇರಿ ತಾಲ್ಲೂಕಿನ ತೋಟದ ಯಲ್ಲಾಪುರ ಗ್ರಾಮದಲ್ಲಿ ದುರ್ಗಾದೇವಿ ಜಾತ್ರಾ ಮಹೋತ್ಸವ ನಿಮಿತ್ತ ಶುಕ್ರವಾರ ನಡೆದ ಗಾಡಾ ಓಡಿಸುವ ಸ್ಪರ್ಧೆಯ ರೋಮಾಂಚನಕಾರಿ ದೃಶ್ಯ

ನಾಲ್ವರು ಅಯ್ಯಪ್ಪ ಭಕ್ತರ ಸಾವು

ಪ್ರಜಾವಾಣಿ ವಾರ್ತೆ

ತುಮಕೂರು: ರಾಷ್ಟ್ರೀಯ ಹೆದ್ದಾರಿ 48ರಲ್ಲಿ, ತಾಲ್ಲೂಕಿನ ಕೋರ ಬಳಿ ಶುಕ್ರವಾರ ಬೆಳಗಿನ ಜಾವ ರಸ್ತೆ ಬದಿ ನಿಂತಿದ್ದ ಲಾರಿಗೆ ಕ್ರೂಸರ್ ಡಿಕ್ಕಿಯಾಗಿ ನಾಲ್ವರು ಮೃತಪಟ್ಟಿದ್ದು, ಏಳು ಮಂದಿ ಗಾಯಗೊಂಡಿದ್ದಾರೆ.

ಕ್ರೂಸರ್‌ನಲ್ಲಿ ಚಾಲಕ ಸೇರಿ 11 ಜನರಿದ್ದರು. ಜ.5ರಂದು ಶಬರಿಮಲೆಗೆ ತೆರಳಿದ್ದರು. ಅಯ್ಯಪ್ಪ ಸ್ವಾಮಿ ದರ್ಶನ ಮುಗಿಸಿಕೊಂಡು ಜ.7ರಂದು ಅಲ್ಲಿಂದ ವಾಪಸ್ ಆಗಿದ್ದರು. ಊರಿಗೆ ಮರಳುವಾಗ ಅವಘಡ ಸಂಭವಿಸಿದೆ.

ಸಾಕ್ಷಿ (7), ಮಾರುತಪ್ಪ, (45), ವೆಂಕಟೇಶ (30), ಗವಿಸಿದ್ದಪ್ಪ (28) ಮೃತರು. ಗಂಭೀರ ಸ್ಥಿತಿಯಲ್ಲಿರುವ ಪ್ರದೀಪ್ ಕುಮಾರ್, ರಾಜಪ್ಪ, ತಿರುಪತಿ ಅವರನ್ನು ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಎಲ್ಲರೂ ಕೊಪ್ಪಳ ಜಿಲ್ಲೆ ಕುಕನೂರು, ಗದಿಗೇರಿ ತಾಂಡಾ, ಕಕ್ಕಿಹಳ್ಳಿ ತಾಂಡಾ ನಿವಾಸಿಗಳು. ಕೋರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾ. ಮೊಗಸಾಲೆ, ಕಪ್ಪಣ್ಣ ಸೇರಿ ಏಳು ಮಂದಿಗೆ ಸಂದೇಶ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಸಾಹಿತಿ ಡಾ.ನಾ. ಮೊಗಸಾಲೆ, ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಸೇರಿದಂತೆ ವಿವಿಧ ಕ್ಷೇತ್ರಗಳ ಏಳು ಸಾಧಕರು ಹಾಗೂ ಒಂದು ಸಂಸ್ಥೆಗೆ 2026ನೇ ಸಾಲಿನ 'ಸಂದೇಶ ಪ್ರಶಸ್ತಿ' ಘೋಷಿಸಲಾಗಿದೆ.


ಡಾ.ನಾ. ಮೊಗಸಾಲೆ

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಆಯ್ಕೆಸಮಿತಿ ಸದಸ್ಯೆ ಕನ್ಸೆಪ್ಟಾ ಫರ್ನಾಂಡಿಸ್, 'ಸಂದೇಶ ಸಂಸ್ಕೃತಿ ಮತ್ತು ಶಿಕ್ಷಣ ಪ್ರತಿಷ್ಠಾನ ನೀಡುವ ಪ್ರಶಸ್ತಿ ತಲಾ ₹25 ಸಾವಿರ ನಗದು ಒಳಗೊಂಡಿದೆ' ಎಂದರು.

ಪ್ರಶಸ್ತಿ ಪುರಸ್ಕೃತರು: ಡಾ. ನಾ.ಮೊಗಸಾಲೆ (ಕನ್ನಡ ಸಾಹಿತ್ಯ) ಪ್ಯಾಟ್ರಿಕ್ ಕಾಮಿಲ್ ಮೋರಸ್ (ಕೊಂಕಣಿ ಸಾಹಿತ್ಯ), ಇಂದಿರಾ ಹೆಗ್ಗಡೆ (ತುಳು ಸಾಹಿತ್ಯ) ತುಂಗರೇಣುಕಾ (ಮಾಧ್ಯಮ) ಸೈಮನ್ ಪಾಯ್ಸ್ (ಕೊಂಕಣಿ ಸಂಗೀತ) ಶ್ರೀನಿವಾಸ ಜಿ. ಕಪ್ಪಣ್ಣ (ಕಲೆ) ದತ್ತಾತ್ರೇಯ ಅರಳಿಕಟ್ಟೆ (ಶಿಕ್ಷಣ), ನವಜೀವನ ಅಂಗವಿಕಲರ ಪುನರ್ವಸತಿ ಕೇಂದ್ರ (ವಿಶೇಷ ಪ್ರಶಸ್ತಿ). 'ಜ.21ರಂದು ಸಂಜೆ 5.30ಕ್ಕೆ ಇಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.


ಇಂದಿರಾ ಹೆಗ್ಗಡೆ


ಪ್ಯಾಟ್ರಿಕ್ ಮೊರಾಸ್


ಸೈಮನ್ ಪಾಯ್ಸ್


ದತ್ತಾತ್ರೇಯ ಅರಳಿಕಟ್ಟೆ


ತುಂಗಾ ರೇಣುಕಾ


ಶ್ರೀನಿವಾಸ ಜಿ.ಕಪ್ಪಣ್ಣ

ಸಂಸ್ಥೆಯ ಅಧ್ಯಕ್ಷ ಬಳ್ಳಾರಿಯ ಬಿಷಪ್ ಹೆನ್ರಿ ಡಿಸೋಜ ಅಧ್ಯಕ್ಷತೆ ವಹಿಸುವರು. ಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು' ಎಂದು ಪ್ರತಿಷ್ಠಾನದ ಟ್ರಸ್ಟಿ ರಾಯ್ ಕ್ಯಾಸ್ತಲಿನೊ ಅವರು ತಿಳಿಸಿದರು.

'ನರೇಗಾ' ಚರ್ಚೆ: ಜೋಶಿಗೆ ಡಿಕೆಶಿ ಪಂಥಾಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನರೇಗಾ ಯೋಜನೆ ಹಾಗೂ 'ವಿಬಿ–ಜಿ ರಾಮ್ ಜಿ' ಯೋಜನೆ ಕುರಿತು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಬಹಿರಂಗ ಚರ್ಚೆಗೆ ಬರಬೇಕು' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಂಥಾಹ್ವಾನ ನೀಡಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಯುಪಿಎ ಸರ್ಕಾರದ ಅವಧಿಯಲ್ಲಿ ನರೇಗಾ ಯೋಜನೆಯಲ್ಲಿ ₹11 ಲಕ್ಷ ಕೋಟಿ ಅವ್ಯವಹಾರ ನಡೆದಿದೆ ಎಂಬ ಜೋಶಿ ಅವರ ಹೇಳಿಕೆ ಆಧಾರ ರಹಿತ. ಈ ಕುರಿತು ಬಹಿರಂಗ ಚರ್ಚೆಗೆ ನಾವು ಸಿದ್ಧರಿದ್ದೇವೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್. ಅಶೋಕ ಸೇರಿದಂತೆ ಯಾರಾದರೂ ಒಬ್ಬರು ಮಾಧ್ಯಮ ವೇದಿಕೆಗೆ ಬಂದು ಚರ್ಚೆ ಮಾಡಲಿ' ಎಂದು ಸವಾಲು ಹಾಕಿದರು.

'ಯೋಜನೆಯಲ್ಲಿ ಅವ್ಯವಹಾರವಾಗಿದ್ದರೆ ಸಿಬಿಐ ತನಿಖೆಗೆ ಒಪ್ಪಿಸಬೇಕು. ತಾಕತ್ತಿದ್ದರೆ ತನಿಖೆ ಮಾಡಿಸಲಿ, ಜವಾಬ್ದಾರಿಯುತ ಸ್ಥಾನದಲ್ಲಿರುವ ನಾಯಕರು ಇಂತಹ ಆರೋಪ ಮಾಡಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದರು.

'ನರೇಗಾ ವಿಚಾರ ಚರ್ಚಿಸಲು ಎರಡು ದಿನಗಳ ವಿಶೇಷ ಅಧಿವೇಶನ ಕರೆಯಲಾಗುತ್ತಿದೆ. ಬಿಜೆಪಿ ನಾಯಕರು ವಿಬಿ–ಜಿ ರಾಮ್ ಜಿ ಯೋಜನೆ ಬಗ್ಗೆ ಅಭಿಯಾನ ಮಾಡಲು ಪ್ರಯತ್ನಿಸುತ್ತಿದ್ದಾರೆ. ಅವರ ಕಾರ್ಯಕ್ರಮದ ಕುರಿತು ಅವರು ಸಮರ್ಥನೆ ಮಾಡಿಕೊಳ್ಳಲಿ, ಯೋಜನೆಯ ಲೋಪಗಳು, ದುಷ್ಪರಿಣಾಮಗಳನ್ನು ಜನರಿಗೆ ಕಾಂಗ್ರೆಸ್ ಮನವರಿಕೆ ಮಾಡಿಕೊಡಲಿದೆ' ಎಂದು ಹೇಳಿದರು.

ಕಾಂಗ್ರೆಸ್ ಕಳ್ಳತನ ಬಂದ್– ಬೊಮ್ಮಾಯಿ

ಕೇಂದ್ರ ಸರ್ಕಾರದ 'ವಿಬಿ ಜಿ ರಾಮ್ ಜಿ' ಯೋಜನೆ ಜಾರಿ ಆಗುವುದರಿಂದ ತಮ್ಮ ಕಳ್ಳತನ ಸಂಪೂರ್ಣ ಬಂದ್ ಆಗುತ್ತದೆ ಎಂಬ ಭಯದಿಂದ ಕಾಂಗ್ರೆಸ್ ವಿರೋಧ ಮಾಡುತ್ತಿದೆ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಟೀಕಿಸಿದರು.


ಬಸವರಾಜ ಬೊಮ್ಮಾಯಿ

ಸುದ್ದಿಗಾರರ ಜತೆ ಮಾತನಾಡಿದ ಅವರು, ಈ ಯೋಜನೆ ಗ್ರಾಮ ಪಂಚಾಯಿತಿಗಳ ಅಧಿಕಾರವನ್ನು ಮೊಟಕುಗೊಳಿಸಿಲ್ಲ. ಆದರೆ, ಈ ಕುರಿತು ಕಾಂಗ್ರೆಸ್‌ನವರು ಸುಳ್ಳು ಹೇಳುತ್ತಿದ್ದಾರೆ ಎಂದರು.

'ವಿಬಿ ಜಿ ರಾಮ್ ಜಿ' ಮಸೂದೆಯ ಸೆಕ್ಷನ್ 16ರ ಅಡಿ ಗ್ರಾಮ ಪಂಚಾಯಿತಿಗಳಿಗೆ ಗ್ರಾಮದ ಎಲ್ಲಾ ಮನೆಗಳಲ್ಲಿರುವ ವ್ಯಕ್ತಿಗಳಿಗೆ ಕೆಲಸ ಇದೆಯೊ ಇಲ್ಲವೋ ಎಂದು ಪರಿಶೀಲಿಸುವ ಹಕ್ಕು ಇದೆ. ಗ್ರಾಮ ಅಭಿವೃದ್ಧಿ ಯೋಜನೆ ರೂಪಿಸುವ ಹಕ್ಕು, ಯೋಜನೆ ಅನುಷ್ಠಾನ ಮಾಡುವ, ಎಲ್ಲವನ್ನು ದಾಖಲೆ ಮಾಡುವ ಮತ್ತು ಕೂಲಿ ಕೊಡುವ ಅಧಿಕಾರ ಗ್ರಾಮ ಪಂಚಾಯಿತಿಗಳಿಗೆ ಇದೆ. ಇಷ್ಟೆಲ್ಲಾ ಅಧಿಕಾರ ನೀಡಿದ್ದರೂ ಕಾಂಗ್ರೆಸ್‌ನವರು ಏಕೆ ವಿರೋಧ ಮಾಡುತ್ತಿದ್ದಾರೆ' ಎಂದು ಪ್ರಶ್ನಿಸಿದರು.

ದೇಶದ ಶೇ 80 ರಷ್ಟು ಯೋಜನೆಗಳು ಜವಾಹರಲಾಲ್ ನೆಹರೂ, ಇಂದಿರಾಗಾಂಧಿ, ರಾಜೀವ್ ಗಾಂಧಿ ಹೆಸರಿನಲ್ಲಿವೆ. ನರೇಗಾಗೆ ಮೊದಲು ಜವಾಹರ್ ರೋಜಗಾರ್ ಯೋಜನೆ ಅಂತ ಇತ್ತು. ಚುನಾವಣೆ ಬಂದಾಗ ಗಾಂಧಿ ಹೆಸರನ್ನು ದುರುಪಯೋಗಪಡಿಸಿಕೊಂಡರು. ಗಾಂಧೀಜಿಯವರನ್ನು ರಾಮನಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಈ ಯೋಜನೆಗೆ ರಾಮನ ಹೆಸರು ಇಟ್ಟಿರುವುದರಿಂದ ಗಾಂಧಿ ಆತ್ಮ ಖುಷಿಯಾಗಿರುತ್ತದೆ ಎಂದು ಬೊಮ್ಮಾಯಿ ಹೇಳಿದರು.

ಒಳಮೀಸಲಾತಿ ಮಸೂದೆ ವಾಪಸ್

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಸರ್ಕಾರದ ಆದೇಶಕ್ಕೆ ಕಾನೂನು ಬಲ ನೀಡುವ ಉದ್ದೇಶದಿಂದ, ವಿಧಾನಮಂಡಲ ಅನುಮೋದನೆ ನೀಡಿದ್ದ ಮಸೂದೆಯನ್ನು ರಾಜ್ಯಪಾಲರು ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದಾರೆ.

ಬೆಳಗಾವಿ ಅಧಿವೇಶನದಲ್ಲಿ ಕರ್ನಾಟಕ ಪರಿಶಿಷ್ಟ ಜಾತಿಗಳ (ಉಪವರ್ಗೀಕರಣ) ಮಸೂದೆಗೆ ಸರ್ಕಾರ ಅನುಮೋದನೆ ಪಡೆದಿತ್ತು. ಒಳಮೀಸಲಾತಿ ಕುರಿತು ಸುಪ್ರೀಂ ಕೋರ್ಟ್‌ನ ಮಾನದಂಡ ಮತ್ತು ನ್ಯಾಯಮೂರ್ತಿ ನಾಗಮೋಹನ ದಾಸ್ ಶಿಫಾರಸಿಗೆ ಅನುಗುಣವಾಗಿಲ್ಲದ ಕಾರಣ ಸ್ಪಷ್ಟನೆ ಕೋರಿ ಹಿಂದಕ್ಕೆ ಕಳುಹಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಸೂದೆಯನ್ನೂ ವಾಪಸ್ ಕಳುಹಿಸಲಾಗಿದೆ. ಒಟ್ಟು 22 ಮಸೂದೆಗಳಲ್ಲಿ 19 ಮಸೂದೆಗಳಿಗೆ ಒಪ್ಪಿಗೆ ನೀಡಿ ಸರ್ಕಾರಕ್ಕೆ ಕಳುಹಿಸಲಾಗಿದೆ. ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ತಡೆ) ಮಸೂದೆ ರಾಜ್ಯಪಾಲರ ಪರಿಶೀಲನೆಯಲ್ಲಿದೆ ಎಂದು ಪ್ರಕಟಣೆ ಹೇಳಿದೆ.

'ಈ ಕುರಿತ ಕಡತಗಳು ಇನ್ನೂ ಬಂದಿಲ್ಲ, ಅದು ಬಂದ ನಂತರ ಯಾವ ಅಂಶಗಳ ಕುರಿತು ಸ್ಪಷ್ಟೀಕರಣ ಕೋರಿದ್ದಾರೆ ಎಂಬುದು ಗೊತ್ತಾಗಲಿದೆ' ಎಂದು ಕಾನೂನು ಇಲಾಖೆ ಮೂಲಗಳು ತಿಳಿಸಿವೆ.

ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಮೂರು ಪ್ರವರ್ಗಗಳಾಗಿ ವರ್ಗೀಕರಿಸಿ ಒಳ ಮೀಸಲಾತಿ ನೀಡಲು ಸರ್ಕಾರದ ಆದೇಶ ಹೊರಡಿಸಿತ್ತು. ಇದರ ರಕ್ಷಣೆಗಾಗಿ, ಮಸೂದೆಯನ್ನೂ ಸರ್ಕಾರ ರೂಪಿಸಿದೆ.

ಹುಬ್ಬಳ್ಳಿ: ಕೈ–ಕಮಲ ಜಟಾಪಟಿ

ಮಹಿಳೆ ವಿವಸ್ತ್ರ ಪ್ರಕರಣ: ಸಿ.ಎಂ ತನಿಖಾಧಿಕಾರಿಯೇ –ಅಶೋಕ ಪ್ರಶ್ನೆ



ಹುಬ್ಬಳ್ಳಿಯಲ್ಲಿ ಶುಕ್ರವಾರ ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ವಿರುದ್ಧ ಪ್ರತಿಭಟನೆ ನಡೆಸಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಮಹೇಶ ಟೆಂಗಿನಕಾಯಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಕೇಶ್ವಾಪುರದ ಚಾಲುಕ್ಯ ನಗರದಲ್ಲಿ ನಡೆದ ಮಹಿಳೆ ವಿವಸ್ತ್ರ ಪ್ರಕರಣ ಶುಕ್ರವಾರವೂ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ರಾಜಕೀಯ ಜಟಾಪಟಿಗೆ ಕಾರಣವಾಯಿತು.

ಬಿಜೆಪಿ ಕಾರ್ಯಕರ್ತೆ ಸುಜಾತಾ ಹಂಡಿ ಅವರು ವ್ಯಕ್ತಿಗೆ ಹಲ್ಲೆ ನಡೆಸಿರುವ ವಿಡಿಯೊವನ್ನು ಕಾಂಗ್ರೆಸ್ ಮುಖಂಡ ರಜತ್ ಉಳ್ಳಾಗಡ್ಡಿಮಠ ಅವರು ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದರು. 'ಮಾನ ಮರ್ಯಾದೆ ಇದ್ದರೆ ಬಿಜೆಪಿ, ರಾಕ್ಷಸ ಮನಸ್ಥಿತಿ, ಅಪರಾಧ ಹಿನ್ನೆಲೆಯ ಮಹಿಳೆ ಪರ ಪ್ರತಿಭಟಿಸಬಾರದು' ಎಂದು ಆಗ್ರಹಿಸಿದರು.

'ಪ್ರಕರಣ ಶಾಸಕ ಮಹೇಶ ಟೆಂಗಿನಕಾಯಿ ಅವರ ಟೂಲ್ ಕಿಟ್ ಆಗಿದ್ದು, ಹುಬ್ಬಳ್ಳಿ ಧಾರವಾಡ ಸೆಂಟ್ರಲ್ ಕ್ಷೇತ್ರದ ಮೇಲೆ ಕಣ್ಣಿಟ್ಟು, ಕೀಳುಮಟ್ಟದ ರಾಜಕೀಯಕ್ಕೆ ಇಳಿದಿದ್ದಾರೆ' ಎಂದೂ ಆರೋಪಿಸಿದರು. ಶಾಸಕ ವಿರುದ್ಧ ಹುಬ್ಬಳ್ಳಿ ಧಾರವಾಡ ಮಹಾನಗರ ಕಾಂಗ್ರೆಸ್ ಘಟಕವು ಪೊಲೀಸ್ ಕಮಿಷನರ್‌ಗೂ ದೂರು ನೀಡಿದೆ.

ಕಾಂಗ್ರೆಸ್ ಬಿಡುಗಡೆ ಮಾಡಿರುವ ವಿಡಿಯೊವನ್ನೇ ಪ್ರತ್ಯಸ್ತ್ರವನ್ನಾಗಿ ಮಾಡಿಕೊಂಡ ಬಿಜೆಪಿ ನಾಯಕರು, ಪ್ರತಿಭಟನಾ ಸಭೆಯಲ್ಲಿ ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ಕಾಂಗ್ರೆಸ್ ಪಕ್ಷದಲ್ಲಿ ಮಹಿಳೆಯರಿಗೆ ರಕ್ಷಣೆಯಿಲ್ಲ: ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, 'ಮಹಿಳೆ ವಿವಸ್ತ್ರ ಪ್ರಕರಣದ ತನಿಖೆಗೂ ಮೊದಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮಹಿಳೆಯೇ ವಿವಸ್ತ್ರವಾಗಿದ್ದಾಳೆ ಎಂದು ಹೇಳಿಕೆ ನೀಡಿದ್ದಾರೆ. ಅವರೇನು ತನಿಖಾಧಿಕಾರಿಯೇ, ಅಥವಾ ನ್ಯಾಯಮೂರ್ತಿಯೇ' ಎಂದು ಪ್ರಶ್ನಿಸಿದರು.

'ಆರೋಪಿ ಬಂಧಿಸಿ ತನಿಖೆ ನಡೆಸಬೇಕು. ವಿಚಾರಣೆ ಬಳಿಕ ತಪ್ಪಿತಸ್ಥರು ಯಾರೆಂದು ನಿರ್ಧಾರ ಆಗಲಿದೆ. ಆದರೆ ಇದ್ಯಾವುದೂ ನಡೆಯದೇ ಪೊಲೀಸರ ಸಹ ಮಹಿಳೆಯೇ ವಿವಸ್ತ್ರವಾಗಿದ್ದಾರೆ ಎಂದು ಹೇಳಿಕೆ ನೀಡುತ್ತಾರೆ. ಮೊದಲು ಸರ್ಕಾರದ ವರದಿ, ನಂತರ ತನಿಖಾ ವರದಿಯಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕಾಂಗ್ರೆಸ್‌ನಲ್ಲಿ ಮಹಿಳೆಗೆ ರಕ್ಷಣೆಯಿಲ್ಲ, ಯಾರ ವಿಡಿಯೊ ಯಾವಾಗ ಹೊರಬೀಳುತ್ತದೆ ಗೊತ್ತಿಲ್ಲ. ಆ ಪಕ್ಷದ ಮಹಿಳಾ ಕಾರ್ಯಕರ್ತರು ಎಚ್ಚರದಿಂದ ಇರಬೇಕು' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಮಿನಿ ವಿಧಾನಸೌಧದ ವರೆಗೆ ಪ್ರತಿಭಟನಾ ರ‍್ಯಾಲಿ ನಡೆಸಿ, ರಾಜ್ಯ ಸರ್ಕಾರದ ಪ್ರತಿಕೃತಿ ದಹಿಸಿದರು. ತಹಶೀಲ್ದಾರ್‌ಗೆ ಮನವಿ ಪತ್ರ ಸಲ್ಲಿಸಿದರು.

ಅಮಾನುಷವಾಗಿ ಹಲ್ಲೆ: ಮೋಹಿತೆ

ಕಾಂಗ್ರೆಸ್ ಮುಖಂಡ ರಜತ್ ಉಳ್ಳಾಗಡ್ಡಿಮಠ ಬಿಡುಗಡೆ ಮಾಡಿರುವ ವಿಡಿಯೊದಲ್ಲಿ ಹಲ್ಲೆಗೊಳಗಾಗಿದ್ದ ವ್ಯಕ್ತಿ ಕುಶಾಲ್ ಮೋಹಿತೆ ಅವರು ಪತ್ರಿಕಾಗೋಷ್ಠಿ ನಡೆಸಿ, 'ಸುಜಾತಾ ಅವರಿಗೆ ಆರ್ಥಿಕ ನೆರವು ನೀಡಲು ಮುಂದಾಗಿದ್ದೆ, ಹಣ ಪಡೆಯುವ ನೆಪದಲ್ಲಿ ನನ್ನನ್ನೇ ಅಪಹರಿಸಿ ಹಣಕ್ಕೆ ಬೇಡಿಕೆ ಇಟ್ಟು ಹಲ್ಲೆ ನಡೆಸಿ, ಚಿತ್ರಹಿಂಸೆ ಕೊಟ್ಟಿದ್ದರು. ತಮ್ಮ ಹಿಂದೆ ಮಹೇಶ ಟೆಂಗಿನಕಾಯಿ ಅವರು ಇದ್ದಾರೆಂದು ಬೆದರಿಸಿದ್ದರು' ಎಂದು ಆರೋಪಿಸಿದರು.

> **ಪ್ರಕರಣದ ತನಿಖೆಯನ್ನು ಸಿ.ಎಂ ಅನುಮತಿ ಪಡೆದು ಸಿಐಡಿಗೆ ವಹಿಸಲಾಗುವುದು. ನಂತರ ಯಾರು ತಪ್ಪಿತಸ್ಥರು, ಯಾರ ನಿರ್ಲಕ್ಷ್ಯ ಇದೆ ಎಂದು ಪರಿಗಣಿಸಿ ಸರ್ಕಾರ ಮುಂದಿನ ತೀರ್ಮಾನ ಮಾಡಲಿದೆ**
> **ಜಿ.ಪರಮೇಶ್ವರ,** ಗೃಹ ಸಚಿವ

> **ರಾಜ್ಯ ಸರ್ಕಾರ ಮಹಿಳೆಯ ವಿವಸ್ತ್ರ ಪ್ರಕರಣವನ್ನು ಸಿಐಡಿಗೆ ನೀಡಲು ಮುಂದಾಗಿದೆ. ಬಹುಶಃ ಈ ಪ್ರಕರಣವನ್ನೂ ಕ್ಲೀನ್ ಚಿಟ್ ಮಾಡುವ ಉದ್ದೇಶ ಹೊಂದಿದೆ**
> **ಆರ್. ಅಶೋಕ,** ವಿಧಾನ ಸಭೆ ವಿರೋಧ ಪಕ್ಷದ ನಾಯಕ

> **ವಿವಸ್ತ್ರ ಪ್ರಕರಣಕ್ಕೆ ಸಂಬಂಧಿಸಿ ಕೇಶ್ವಾಪುರ ಠಾಣೆ ಇನ್‌ಸ್ಪೆಕ್ಟರ್ ಕೆ.ಎಸ್. ಹಟ್ಟಿ ಹಾಗೂ ಇತರ ಸಿಬ್ಬಂದಿಯನ್ನು ಅಮಾನತು ಮಾಡಬೇಕು**
> **ಛಲವಾದಿ ನಾರಾಯಣಸ್ವಾಮಿ,** ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

> **ಕಾಂಗ್ರೆಸ್ ಮುಖಂಡರ ಬಳಿ ಸಿ.ಡಿ ಕಾರ್ಖಾನೆ ಇದೆ. ಅವರ ಬಳಿ ಪಾಲಿಕೆಯ ಕಾಂಗ್ರೆಸ್ ಸದಸ್ಯೆಯ ವಿಡಿಯೊಗಳು ಇರಬಹುದು. ನಾವು ಯಾವ ಗೊಡ್ಡು ಬೆದರಿಕೆಗೂ ಹೆದರಿಲ್ಲ**
> **ಮಹೇಶ ಟೆಂಗಿನಕಾಯಿ,** ಶಾಸಕ

ಸುದ್ದಿ 2 ನಿಮಿಷ

ಬೈರತಿ ನಿರೀಕ್ಷಣಾ ಜಾಮೀನು ರದ್ದು ಕೋರಿ ಸುಪ್ರೀಂಗೆ ಅರ್ಜಿ

ನವದೆಹಲಿ: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದ ಐದನೇ ಆರೋಪಿಯಾಗಿರುವ ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರಿಗೆ ಹೈಕೋರ್ಟ್ ನೀಡಿರುವ ಮಧ್ಯಂತರ ನಿರೀಕ್ಷಣಾ ಜಾಮೀನು ರದ್ದುಪಡಿಸಬೇಕು ಎಂದು ಕೋರಿ ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದೆ.

ಈ ಅರ್ಜಿಯು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠದಲ್ಲಿ ಸೋಮವಾರ ವಿಚಾರಣೆಗೆ ಬರಲಿದೆ.



ಮಿನಿ ಅವೆನ್ಯೂ ರಸ್ತೆಯಲ್ಲಿರುವ ಸೆಂಟ್ ಮೆಡಿಕಲ್ ಸ್ಟೋರ್ ಮುಂಭಾಗ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವುನನ್ನು 2025ರ ಜುಲೈ 15ರಂದು 8 ರಿಂದ 9 ಜನರಿದ್ದ ಗುಂಪು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿತ್ತು. ಈ ಸಂಬಂಧ ಭಾರತಿನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪ್ರಕರಣದಲ್ಲಿ ಬೈರತಿ ಬಸವರಾಜ ಐದನೇ ಆರೋಪಿಯಾಗಿದ್ದಾರೆ. ಅವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 103 ಮತ್ತು 190ರ ಅಡಿಯಲ್ಲಿ ದೂರು ದಾಖಲು ಮಾಡಿಕೊಳ್ಳಲಾಗಿದೆ. ಈ ಪ್ರಕರಣವನ್ನು ಸಿಐಡಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ನದಿ ತಿರುವಿಗೆ ವಿರೋಧ

ಬೆಂಗಳೂರು: ಬೇಡ್ತಿ-ಅಘನಾಶಿನಿ ನದಿ ತಿರುವು ಯೋಜನೆಗೆ ವಿರೋಧ ವ್ಯಕ್ತಪಡಿಸಿರುವ ಅಖಿಲ ಹವ್ಯಕ ಮಹಾಸಭೆ, ಈ ಯೋಜನೆಯಿಂದ ಹಿಂದೆ ಸರಿಯುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದೆ.

ಇದೇ 11 ರಂದು ಶಿರಸಿಯಲ್ಲಿ ನಡೆಯುವ ಬೃಹತ್ ಜನ ಸಮಾವೇಶಕ್ಕೆ ಮಹಾಸಭೆ ಬೆಂಬಲ ಸೂಚಿಸಿದೆ. 'ನದಿಗಳು ಜನ ಸಮೂಹದ ಜೀವನಾಡಿಗಳಾಗಿದ್ದು, ಅವುಗಳ ನೈಸರ್ಗಿಕ ಹರಿವಿನ ಬದಲಾವಣೆಯು ಜೀವಸಂಕುಲಕ್ಕೆ ಅಪಾಯಕಾರಿ. ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವಾಗ ದೀರ್ಘಕಾಲದ ಪರಿಣಾಮಗಳನ್ನು ಅಧ್ಯಯನ ಮಾಡಬೇಕು. ವೈಜ್ಞಾನಿಕ ಚಿಂತನೆ ಇಲ್ಲದ ಅಭಿವೃದ್ಧಿಯು ಭವಿಷ್ಯದಲ್ಲಿ ಜೀವ ಸಂಕುಲಕ್ಕೆ ಮಾರಕವಾಗಲಿದೆ. ಆದ್ದರಿಂದ ಬೇಡ್ತಿ ಹಾಗೂ ಅಘನಾಶಿನಿ ನದಿ ತಿರುವಿನ ಯೋಜನೆಯಿಂದ ಸರ್ಕಾರಗಳು ತಕ್ಷಣ ಹಿಂದೆ ಸರಿಯಬೇಕು' ಎಂದು ಮಹಾಸಭೆ ಅಧ್ಯಕ್ಷ ಡಾ.ಗಿರಿಧರ ಕಜೆ ಒತ್ತಾಯಿಸಿದ್ದಾರೆ.

'ಶಿರಸಿಯಲ್ಲಿ ನಡೆಯಲಿರುವ ಬೃಹತ್ ಜನ ಸಮಾವೇಶದಲ್ಲಿ ಹವ್ಯಕ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು, ಜನವಿರೋಧಿ ಯೋಜನೆಗೆ ನಮ್ಮ ವಿರೋಧವನ್ನು ದಾಖಲಿಸಬೇಕು' ಎಂದು ತಿಳಿಸಿದ್ದಾರೆ.

ಬಿಜೆಪಿ–ಜೆಡಿಎಸ್ ನಾಯಕರ ಸಭೆ ಇಂದು

ಬೆಂಗಳೂರು: ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ, ವಿಧಾನ ಪರಿಷತ್ ಚುನಾವಣೆ ಮತ್ತಿತರ ವಿಷಯಗಳು ಕುರಿತು ಚರ್ಚೆ ನಡೆಸುವ ಉದ್ದೇಶದಿಂದ ಬಿಜೆಪಿ ಮತ್ತು ಜೆಡಿಎಸ್ ನಾಯಕರ ಸಭೆ ಶನಿವಾರ ನಡೆಯಲಿದೆ. ಚುನಾವಣೆಗಳಲ್ಲಿ ಹೊಂದಾಣಿಕೆ, ವಿಬಿ –ಜಿ ರಾಮ್ ಜಿ ಯೋಜನೆ ಕುರಿತು ಕಾಂಗ್ರೆಸ್ ಹೋರಾಟ, ಬಳ್ಳಾರಿ ಗಲಾಟೆ ಸೇರಿದಂತೆ ಹಲವು ಪ್ರಮುಖ ವಿಷಯಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಗುವುದು. ಗೋಲ್ಡ್‌ಫಿಂಚ್ ಹೋಟೇಲ್‌ನಲ್ಲಿ ಈ ಸಭೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಬಳ್ಳಾರಿ ಗಲಭೆ: ಸಿಐಡಿ ತನಿಖೆಗೆ

ಬಳ್ಳಾರಿ: ಜ.1ರಂದು ನಗರದಲ್ಲಿ ನಡೆದ ದೊಂಬಿ, ಕಾಂಗ್ರೆಸ್ ಕಾರ್ಯಕರ್ತನ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ರೂಸ್‌ಪೇಟೆ ಠಾಣೆಯಲ್ಲಿ ದಾಖಲಾಗಿರುವ ನಾಲ್ಕು ಕ್ರಿಮಿನಲ್ ಪ್ರಕರಣಗಳನ್ನು ಉನ್ನತ ಮಟ್ಟದ ತನಿಖೆಗಾಗಿ ಸಿಐಡಿಗೆ ವರ್ಗಾಯಿಸಲಾಗಿದೆ. ಶುಕ್ರವಾರ ಈ ಕುರಿತು ಆದೇಶಿಸಲಾಗಿದೆ.

'ಬೇಸಿಗೆಗೆ ಸಮರ್ಪಕ ವಿದ್ಯುತ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಸಿಗೆಯಲ್ಲಿ ಬೇಡಿಕೆಗೆ ತಕ್ಕಂತೆ ಸಮರ್ಪಕವಾಗಿ ವಿದ್ಯುತ್ ಪೂರೈಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಲೋಡ್ ಶೆಡ್ಡಿಂಗ್ ಮಾಡಬಾರದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.



ಕೆ.ಜೆ. ಜಾರ್ಜ್

ಶುಕ್ರವಾರ ನಡೆದ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಬೇಡಿಕೆ ಮತ್ತು ಪೂರೈಕೆ ನಡುವೆ ಸಮನ್ವಯ ಸಾಧಿಸಲು ಅಗತ್ಯವಿರುವ ವಿದ್ಯುತ್ ಉತ್ಪಾದನೆ ಮತ್ತು ಖರೀದಿಗೆ ಕ್ರಮಕೈಗೊಳ್ಳಬೇಕು' ಎಂದು ತಿಳಿಸಿದರು.

'ಮಾರ್ಚ್‌ನಿಂದ ಮೇ ಅಂತ್ಯದವರೆಗೆ ಮೂರು ತಿಂಗಳಲ್ಲಿ ವಿದ್ಯುತ್ ಬೇಡಿಕೆ ಎಷ್ಟಾಗಬಹುದು ಎಂಬುದನ್ನು ಈಗಲೇ ಲೆಕ್ಕಾಚಾರ ಮಾಡಿ ಅದಕ್ಕೆ ತಕ್ಕಂತೆ ಪೂರೈಕೆ ಮಾಡಲು ವ್ಯವಸ್ಥೆ ಮಾಡಿಕೊಳ್ಳಬೇಕು. ಹಗಲು ವೇಳೆ ಸೌರ ವಿದ್ಯುತ್ ಹೇರಳವಾಗಿ ಲಭ್ಯವಿರುವುದರಿಂದ ಅದನ್ನು ಬಳಸಿಕೊಳ್ಳಬೇಕು. ರಾತ್ರಿ ವೇಳೆ ಜಲ ಮತ್ತು ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನೆ ಹೆಚ್ಚಿಸುವತ್ತ ಗಮನಹರಿಸಬೇಕು' ಎಂದರು.

ಕೃಷಿಗೆ ಹಗಲು 7 ಗಂಟೆ ವಿದ್ಯುತ್: 'ರಾಜ್ಯದ ಹಲವು ಭಾಗಗಳಲ್ಲಿ ಈಗಾಗಲೇ ಕುಸುಮ್- ಸಿ ಯೋಜನೆಯಡಿ ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಹಗಲಿನಲ್ಲಿ 7 ಗಂಟೆ ವಿದ್ಯುತ್ ಪೂರೈಸಲಾಗುತ್ತಿದೆ. ಸೌರ ವಿದ್ಯುತ್ ಉತ್ಪಾದನೆ ಹೆಚ್ಚಾಗಿರುವುದರಿಂದ ಇತರೆ ಭಾಗಗಳಲ್ಲೂ ಕೃಷಿ ಪಂಪ್ ಸೆಟ್‌ಗಳಿಗೆ ಹಗಲಿನಲ್ಲಿ 7 ಗಂಟೆ ವಿದ್ಯುತ್ ಪೂರೈಕೆ ಮಾಡಬೇಕು' ಎಂದು ಸಚಿವರು ನಿರ್ದೇಶನ ನೀಡಿದರು.

'ಕಳೆದ ಡಿಸೆಂಬರ್ ತಿಂಗಳಲ್ಲಿ ದಾಖಲೆಯ 17,220 ಮೆಗಾವಾಟ್ ವಿದ್ಯುತ್‌ಗೆ ಬೇಡಿಕೆ ಇತ್ತು. ಅದನ್ನು ಸಮರ್ಪಕವಾಗಿ ಪೂರೈಕೆ ಮಾಡಲಾಗಿದೆ. ಈ ಬಾರಿಯ ಬೇಸಿಗೆಯಲ್ಲಿ ಕಳೆದ ವರ್ಷಕ್ಕಿಂತ ಶೇ 5ರಷ್ಟು ಹೆಚ್ಚು ಬೇಡಿಕೆ ಬರುವ ಸಾಧ್ಯತೆ ಇದೆ. ಅದಕ್ಕೆ ತಕ್ಕಂತೆ ಪೂರೈಕೆಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ' ಎಂದು ಪಿಸಿಕೆಎಲ್ (ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್) ಅಧಿಕಾರಿಗಳು ಮಾಹಿತಿ ನೀಡಿದರು.

ಜಲಾಶಯಗಳಲ್ಲಿ ಸಂಗ್ರಹವಾಗಿರುವ ನೀರಿನಲ್ಲಿ ಜುಲೈ ಅಂತ್ಯದವರೆಗೆ ಪ್ರತಿನಿತ್ಯ 33 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದಿಸಬಹುದು ಎಂದರು.

ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ್ ಸೇರಿದಂತೆ ಇಂಧನ ಇಲಾಖೆ ಹಿರಿಯ ಅಧಿಕಾರಿಗಳು ಇದ್ದರು.

> **ಲಭ್ಯವಿರುವ ವಿದ್ಯುತ್ ಅನ್ನು ಸಮರ್ಪಕವಾಗಿ ಪೂರೈಕೆ ಮಾಡಲು ಈಗಲೇ ಸಿದ್ಧತೆ ಮಾಡಿಕೊಳ್ಳಬೇಕು. ಓವರ್ ಲೋಡ್ ಸಮಸ್ಯೆ ಗುರುತಿಸಿ ಪರಿಹಾರ ಕಂಡುಕೊಳ್ಳಬೇಕು**
> **ಗೌರವ್ ಗುಪ್ತ,** ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ

'93ರ ಸನ್ನಿವೇಶ ಮರುಕಳಿಸದಿರಲಿ'

ಉದ್ಯಮಿ ಒಕ್ಕಲಿಗ ಎಕ್ಸ್‌ಪೊ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಶ್ರೀ



ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ 'ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ–2026'ಕ್ಕೆ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಡಿ. ಮುನಿರಾಜು, ಜಯರಾಮ್ ರಾಯಪುರ, ಎನ್ ಚಲುವರಾಯಸ್ವಾಮಿ, ಜಿ.ಟಿ. ದೇವೇಗೌಡ, ಶೋಭಾ ಕರಂದ್ಲಾಜೆ, ಶರತ್ ಬಚ್ಚೇಗೌಡ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೂಜ್ಯ ಗುರುಗಳ (ಬಾಲ ಗಂಗಾಧರನಾಥ ಸ್ವಾಮೀಜಿ) ಕಾಲದಲ್ಲಿ 1993ರಲ್ಲಿ ಏನಾಯಿತು ಎನ್ನುವುದು ನಿಮಗೆ ಗೊತ್ತು, ಅಂಥ ಸನ್ನಿವೇಶ ಮತ್ತೆ ಮರುಕಳಿಸದಂತೆ ನೋಡಿಕೊಳ್ಳಬೇಕಾದುದು ಸಮಕಾಲೀನ ವ್ಯವಸ್ಥೆಯ ಜವಾಬ್ದಾರಿ' ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ನಗರದಲ್ಲಿ ಫಸ್ಟ್ ಸರ್ಕಲ್ ಹಮ್ಮಿಕೊಂಡಿರುವ 3 ದಿನಗಳ 'ಉದ್ಯಮಿ ಒಕ್ಕಲಿಗ ಎಕ್ಸ್‌ಪೊ' ಉದ್ಘಾಟನೆ ಶುಕ್ರವಾರ ನಡೆಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಸ್ವಾಮೀಜಿ,

> **93ರ ಇತಿಹಾಸ ಮತ್ತೆ ಮರುಕಳಿಸಿ ಸಮಾಜಕ್ಕೆ ಸಮಸ್ಯೆಯಾಗುವ ಸಂದರ್ಭ ಬಂದರೆ ಅದು ದೊಡ್ಡ ಹೋರಾಟಕ್ಕೆ ನಾಂದಿಯಾಗುವುದು**
> **ನಿರ್ಮಲಾನಂದನಾಥ ಸ್ವಾಮೀಜಿ**, ಆದಿಚುಂಚನಗಿರಿ ಮಠ

'ಸುತ್ತಮುತ್ತಲೂ ನಡೆಯುತ್ತಿರುವ ವಿಚಾರಗಳನ್ನು ನೋಡಿ ಈ ಮಾತನ್ನು ಹೇಳುತ್ತಿದ್ದೇನೆ. ಆದರೆ, ಯಾಕೆ? ಏನು? ಎಂಬುದನ್ನು ಹೇಳಲು ಈ ಸಂದರ್ಭದಲ್ಲಿ ಹೋಗುವುದಿಲ್ಲ' ಎಂದರು.

ಕೇಂದ್ರ ಕಾರ್ಮಿಕ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, 'ಕೇಂದ್ರ ಸರ್ಕಾರವು ಎಂಎಸ್‌ಎಂಇ ಅಡಿಯಲ್ಲಿ ಉದ್ಯಮ ಪೋರ್ಟಲ್ ತೆರೆದಿದೆ. ಉದ್ಯಮಿಗಳು ಇದರಲ್ಲಿ ನೋಂದಣಿ ಮಾಡಿಕೊಳ್ಳಬೇಕು' ಎಂದು ಮನವಿ ಮಾಡಿದರು. ಶಾಸಕ ಕೆ. ಗೋಪಾಲಯ್ಯ, ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್, ಒಕ್ಕಲಿಗರ ಸಂಘದ ರಾಜ್ಯ ಅಧ್ಯಕ್ಷ ಎಲ್.ಶ್ರೀನಿವಾಸ್, ಫಸ್ಟ್ ಸರ್ಕಲ್‌ನ ಜಯರಾಮ್ ರಾಯಪುರ, ಫಸ್ಟ್ ಸರ್ಕಲ್ ಅಧ್ಯಕ್ಷ ಡಿ. ಮುನಿರಾಜು, ಸಮುದಾಯದ ಜನಪ್ರತಿನಿಧಿಗಳು, ಉದ್ಯಮಿಗಳು ಭಾಗವಹಿಸಿದ್ದರು.

1993ರಲ್ಲಿ ನಡೆದಿದ್ದೇನು?

- ರಾಮಕೃಷ್ಣ ಹೆಗಡೆ ನೇತೃತ್ವದ ಸರ್ಕಾರ ಮೀಸಲಾತಿ ನಿಗದಿಗಾಗಿ ವೆಂಕಟಸ್ವಾಮಿ ಆಯೋಗ ರಚಿಸಿತ್ತು. ಆಯೋಗ ನೀಡಿದ್ದ ವರದಿಯನ್ನು ತಿರಸ್ಕರಿಸಿ 1988ರಲ್ಲಿ ಚಿನ್ನಪ್ಪ ರೆಡ್ಡಿ ಆಯೋಗವನ್ನು ರಚಿಸಲಾಗಿತ್ತು. ಚಿನ್ನಪ್ಪ ರೆಡ್ಡಿ ಆಯೋಗದ ವರದಿಯ ಶಿಫಾರಸುಗಳು ಒಕ್ಕಲಿಗ ಸೇರಿದಂತೆ ವಿವಿಧ ಸಮುದಾಯಗಳಿಗೆ ಅನ್ಯಾಯವಾಗಿದೆ ಎಂದು 1993–94ರಲ್ಲಿ ವಿರೋಧ ವ್ಯಕ್ತವಾಗಿತ್ತು. ಬಾಲಗಂಗಾಧರನಾಥ ಸ್ವಾಮೀಜಿ ನೇತೃತ್ವದಲ್ಲಿ ಹೋರಾಟ ನಡೆದಿತ್ತು.
- 1992ರಲ್ಲಿ ವೀರಪ್ಪ ಮೊಯಿಲಿ ಅವರನ್ನು ಕಾಂಗ್ರೆಸ್ ಹೈಕಮಾಂಡ್ ಮುಖ್ಯಮಂತ್ರಿ ಮಾಡಿದಾಗ, ಅವರಿಗಿಂತ ಹಿರಿಯರಾದ ಎಸ್.ಎಂ. ಕೃಷ್ಣ ಅವರಿಗೆ ಅನ್ಯಾಯವಾಗಿದೆ ಎಂಬ ಕೂಗು ಎದ್ದಿತ್ತು. ಕೃಷ್ಣ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಲಾಗಿತ್ತು. ಆ ಸರ್ಕಾರ ಇರುವವರೆಗೂ(1994) ಭಿನ್ನಮತ ಚಟುವಟಿಕೆ ನಡೆದೇ ಇತ್ತು.



ಎತ್ತಿನ ಗಾಡಿ ಮತ್ತು ವ್ಯವಸಾಯದ ಉಪಕರಣಗಳು ಗಮನ ಸೆಳೆದವು

ಉತ್ಪನ್ನಗಳ ಪ್ರದರ್ಶನ, ಮಾರಾಟಕ್ಕೆ ವೇದಿಕೆ • ಉದ್ಯಮಿಗಳ ಸಂಪರ್ಕದ ಕೊಂಡಿ

ನವೋದ್ಯಮಿಗಳ ಸೇತುಬಂಧ 'ಎಫ್‌ಸಿ'



ಧಾನ್ಯಗಳ ರಾಶಿ, ಕೃಷಿ ಉಪಕರಣಗಳನ್ನು ಜನರು ಕುತೂಹಲದಿಂದ ವೀಕ್ಷಿಸಿದರು

ಬೆಂಗಳೂರು: ಒಕ್ಕಲಿಗ ಸಮುದಾಯದ ಉದ್ಯಮಿಗಳ ನಡುವೆ ಪರಸ್ಪರ ಸಂಪರ್ಕ ಸೇತುವೆ ಕಲ್ಪಿಸುವುದು, ನವೋದ್ಯಮಿಗಳಿಗೆ ಪ್ರೋತ್ಸಾಹ ನೀಡುವುದು, ಉತ್ಪನ್ನಗಳಿಗೆ ಪ್ರದರ್ಶನ ಮತ್ತು ಮಾರಾಟಕ್ಕೆ ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ನಾಲ್ಕನೇ ಆವೃತ್ತಿಯ ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ ಕಾರ್ಯಕ್ರಮ ಶುಕ್ರವಾರ ಸಂಭ್ರಮದಿಂದ ಆರಂಭಗೊಂಡಿತು.

ಕೃಷಿ ಸಂಸ್ಕೃತಿಯನ್ನು ಬಿಂಬಿಸುವ ಗಾಣದ ಎತ್ತುಗಳು, ಎತ್ತಿನ ಬಂಡಿ, ರಾಗಿ ಬೀಸುವುದು, ಜನಪದ ಹಾಡುಗಳು ಎಕ್ಸ್‌ಪೊಗೆ ಬಂದವರನ್ನು ಎದುರುಗೊಂಡವು. ಗೊಂಬೆ ಕುಣಿತಗಳು, ವಿವಿಧ ವಾದನಗಳು ಸಾಥ್ ನೀಡಿದವು.

200ಕ್ಕೂ ಅಧಿಕ ಮಳಿಗೆಗಳಲ್ಲಿ ವಿವಿಧ ಪ್ರದರ್ಶನ ಮತ್ತು ಮಾರಾಟಗಳು ನಡೆದವು. ಸೀರೆ ಸಹಿತ ಬಟ್ಟೆಗಳು, ಕಾಸ್ಮೆಟಿಕ್ ಉತ್ಪನ್ನಗಳು, ಶ್ರೀಗಂಧದ ಉತ್ಪನ್ನಗಳು, ಆಭರಣಗಳು, ಪೇಂಟ್‌ಗಳು, ಪೀಠೋಪಕರಣಗಳು, ಉಪ್ಪಿನಕಾಯಿ, ವಿವಿಧ ಎಣ್ಣೆಗಳು, ಸಾವಯವ ತಿನಿಸುಗಳು, ರಾಜಮುಡಿ, ಸಿರಿಧಾನ್ಯಗಳು ಗಮನ ಸೆಳೆದವು.

ಸ್ಥಳದಲ್ಲೇ ಕಬ್ಬು ಬಳಸಿ ತಯಾರಿಸಿದ ಬಿಸಿ ಬೆಲ್ಲಕ್ಕೆ ಬೇಡಿಕೆ ಹೆಚ್ಚಾಗಿತ್ತು. ವಿವಿಧ ಶಾಲಾ ಕಾಲೇಜುಗಳು ತಮ್ಮ ಸಂಸ್ಥೆಗಳಲ್ಲಿ ಯಾವ ಕೋರ್ಸ್‌ಗಳು ಇವೆ ಎಂಬ ಮಾಹಿತಿ ನೀಡುತ್ತಿದ್ದವು. ಬ್ಯಾಂಕ್‌ಗಳು ಸಾಲ ಸೌಲಭ್ಯಗಳ ವಿವರ ನೀಡಿದವು. ವಿವಿಧ ಯಂತ್ರೋಪಕರಣಗಳು, ಮನೆಯ ಉಪಯುಕ್ತ ಯಂತ್ರಗಳ ಪ್ರದರ್ಶನ ನಡೆಯಿತು. ಕಟ್ಟಡ ನಿರ್ಮಾಣ ಸೂಕ್ತವೇ ಎಂದು ವೈಜ್ಞಾನಿಕವಾಗಿ ಕಂಡು ಹಿಡಿಯುವ ಭೂ ಸಮೀಕ್ಷೆ ವಿಧಾನಗಳ ವಿವರ ನೀಡಲಾಯಿತು.

ಕೆ.ಎಚ್. ರಾಮಯ್ಯ ಹೆಬ್ಬಾಗಿಲಿನಲ್ಲಿ ಒಕ್ಕಲಿಗರ ಇತಿಹಾಸವನ್ನು ಕಟ್ಟಿಕೊಡಲಾಗಿತ್ತು. ಗಂಗರು, ನಾಡಪ್ರಭು ಕೆಂಪೇಗೌಡರ ಕಾಲದ ಇತಿಹಾಸ, ಕುವೆಂಪು, ನಿರ್ಮಲಾನಂದ, ಒಕ್ಕಲಿಗರ ಪ್ರಾತಃಸ್ಮರಣೀಯರ ವಿವರಗಳನ್ನು ನೀಡಲಾಗಿತ್ತು. ಬೆಳಗೆರೆ ರಾಮಣ್ಣ ಹೆಬ್ಬಾಗಿಲಿನಲ್ಲಿ ವಿವಿಧ ದನಕರುಗಳು, ಎಮ್ಮೆ, ಎತ್ತುಗಳ ಪ್ರದರ್ಶನ ನಡೆಯಿತು. ತರಕಾರಿ ಸಂತೆ, ಕಬ್ಬಿನ ಹಾಲು ಸಹಿತ ವಿವಿಧ ಜ್ಯೂಸ್‌ಗಳಿದ್ದವು. ಫುಡ್ ಕೋರ್ಟ್‌ನಲ್ಲಿ ಸಸ್ಯಾಹಾರ, ಮಾಂಸಾಹಾರ ವ್ಯವಸ್ಥೆ ಮಾಡಲಾಗಿತ್ತು. ಬೇಕಾದುದನ್ನು ಖರೀದಿಸಿ ತಿನ್ನುವ ವ್ಯವಸ್ಥೆ ಇದಾಗಿತ್ತು.

ಎಫ್‌ಸಿ ಏಂಜಲ್ಸ್‌ನಿಂದ ಇಬ್ಬರಿಗೆ ನೆರವು

ಹೊಸದಾಗಿ ಉದ್ಯಮ ಮಾಡುವವರಿಗೆ ಮೂಲನಿಧಿ ಒದಗಿಸಲು ಫಸ್ಟ್ ಸರ್ಕಲ್ (ಎಫ್‌ಸಿ) ಏಂಜಲ್ ಎಂಬ ಯೋಜನೆ ಆರಂಭಿಸಲಾಗಿದೆ. ಈ ಬಾರಿ 7 ಅರ್ಜಿಗಳು ಬಂದಿದ್ದು, ಅದರಲ್ಲಿ ಇಬ್ಬರನ್ನು ಆಯ್ಕೆ ಮಾಡಲಾಗಿದೆ. ಅವರಿಗೆ ಮೂಲನಿಧಿ ₹50 ಲಕ್ಷ ಒದಗಿಸಲಾಗುವುದು ಎಂದು ಫಸ್ಟ್ ಸರ್ಕಲ್ ಮುಖ್ಯ ಮಾರ್ಗದರ್ಶಕ ಜಯರಾಮ್ ರಾಯಪುರ ಮಾಹಿತಿ ನೀಡಿದರು.

ಸಮುದಾಯದ ಜನರು ಕೃಷಿ, ಶಿಕ್ಷಣ ಕ್ಷೇತ್ರ, ಸಣ್ಣ ಉದ್ಯಮಗಳಲ್ಲೇ ತೊಡಗಿಸಿಕೊಂಡಿದ್ದು, ದೊಡ್ಡ ಉದ್ಯಮಿಗಳನ್ನು ಸೃಷ್ಟಿಸಿರಲಿಲ್ಲ. ಇತ್ತೀಚೆಗೆ ದೊಡ್ಡ ಉದ್ಯಮ ಆರಂಭಿಸಲು ಮನಸ್ಸು ಮಾಡುತ್ತಿದ್ದಾರೆ. ಅವರಿಗೆ ಫಸ್ಟ್ ಸರ್ಕಲ್ ಸಂಪರ್ಕ ಬೆಂಬಲ ನೀಡುತ್ತಿದೆ. ಮಹಿಳೆಯರು ಬೆಂಗಳೂರು, ಮೈಸೂರು ಸೇರಿದಂತೆ 4 ಕಡೆಗಳಲ್ಲಿ ಪ್ರತ್ಯೇಕ ಫಸ್ಟ್ ಸರ್ಕಲ್ ಆರಂಭಿಸಿಕೊಂಡಿದ್ದಾರೆ ಎಂದರು.

ಸಣ್ಣ ಮನಸ್ಸು ಇಟ್ಟುಕೊಂಡವರಿಂದ ದೊಡ್ಡ ಕೆಲಸ ಸಾಧ್ಯವಿಲ್ಲ. ಅದಕ್ಕಾಗಿ ಫಸ್ಟ್ ಸರ್ಕಲ್‌ಗೆ ದೊಡ್ಡ ವ್ಯಕ್ತಿತ್ವಗಳನ್ನು ಮಾತ್ರ ಸೇರಿಸಿಕೊಳ್ಳಲಾಗಿದೆ. ಎಫ್‌ಸಿ ಸಾಂಸ್ಥಿಕ ರೂಪ ಕೊಡಬೇಕು ಎಂದು ನಿರ್ಧರಿಸಲಾಗಿದೆ ಎಂದು ಹೇಳಿದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, 'ಒಕ್ಕಲಿಗರು ಹಿಂದೆ ಸೀಮಿತ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿತ್ತು, ಈಗ ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದೆ. ಸಮುದಾಯದ ಯುವಜನರನ್ನು ಉದ್ಯಮಿಗಳನ್ನಾಗಿ ಪರಿವರ್ತಿಸಲು ಫಸ್ಟ್ ಸರ್ಕಲ್ ಮುಂದಾಗಿರುವುದು ಶ್ಲಾಘನೀಯ' ಎಂದರು.

'ಒಕ್ಕಲಿಗರು ಶೇ 90ರಷ್ಟು ಮಂದಿ ಕೃಷಿ ಕ್ಷೇತ್ರ ನಂಬಿಕೊಂಡಿದ್ದಾರೆ. ಬೇರೆಲ್ಲ ಉದ್ಯಮಗಳಿಗಿಂತ ಕೃಷಿ ಉದ್ಯಮವನ್ನು ಸುಲಭವಾಗಿ ಮಾಡಲು ಸಾಧ್ಯ. ಕೃಷಿ ಇಲಾಖೆಯಲ್ಲಿ ₹13 ಕೋಟಿವರೆಗೆ ಸಬ್ಸಿಡಿ ನೀಡುವ ಯೋಜನೆಗಳಿದ್ದು, ಅದನ್ನು ಬಳಸಿಕೊಂಡು ಕೃಷಿ ಉದ್ಯಮಿಗಳಾಗಬೇಕು' ಎಂದು ಸಲಹೆ ನೀಡಿದರು.

ಇಂದು ಉದ್ಯಮಿ ಪ್ರತಿನಿಧಿಗಳ ಸಮಾವೇಶ

ಅರಮನೆ ಮೈದಾನದ ಗಾಯತ್ರಿ ಗ್ರ್ಯಾಂಡ್ ಮತ್ತು ಗಾಯತ್ರಿ ವೃಕ್ಷ ಸಭಾಂಗಣದಲ್ಲಿ ನಡೆಯುತ್ತಿರುವ ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ ನಾಲ್ಕನೇ ಆವೃತ್ತಿಯ ಎರಡನೇ ದಿನವಾದ ಜ.10ರಂದು ಬೆಳಿಗ್ಗೆ 10ಕ್ಕೆ ಉದ್ಯಮಿ ಪ್ರತಿನಿಧಿಗಳ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅಧ್ಯಕ್ಷತೆ ವಹಿಸುವರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಉದ್ಘಾಟಿಸುವರು. ವಿವಿಧ ಜನಪ್ರತಿನಿಧಿಗಳು, ಉದ್ಯಮಿಗಳು ಪಾಲ್ಗೊಳ್ಳುವರು.

21ರಿಂದ 25ರವರೆಗೆ ನೂತನ ಆವಿಷ್ಕಾರಗಳ ಪ್ರದರ್ಶನ

ಬೆಂಗಳೂರು: 'ಭಾರತೀಯ ಯಂತ್ರೋಪಕರಣ ತಯಾರಕರ ಸಂಘವು (ಐಎಂಟಿಎಂಎ) ಬೆಂಗಳೂರಿನ ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ಇದೇ 21ರಿಂದ ಐದು ದಿನಗಳ ಕಾಲ ಇಂಟೆಕ್ಸ್ ಫಾರ್ಮಿಂಗ್–2026 ಲೋಹದ ವಸ್ತುಗಳ ಉತ್ಪಾದನಾ ತಂತ್ರಜ್ಞಾನದಲ್ಲಿನ ನೂತನ ಆವಿಷ್ಕಾರಗಳ ಪ್ರದರ್ಶನ ಆಯೋಜಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಕಾರ್ಯದರ್ಶಿ ಗುರುಪ್ರಸಾದ್ ಕೆ.ಆರ್, 'ಜರ್ಮನಿ, ಇಟಲಿ, ಜಪಾನ್, ತೈವಾನ್ ಸೇರಿದಂತೆ 24 ದೇಶಗಳ 714 ಸಂಸ್ಥೆಗಳು, ಯಂತ್ರೋಪಕರಣ ತಯಾರಿಕೆಯಲ್ಲಿನ ನೂತನ ಆವಿಷ್ಕಾರಗಳನ್ನು ಪ್ರದರ್ಶಿಸಲಿವೆ. ವಾಹನದ ಉಪಕರಣಗಳು, ಅಂತರಿಕ್ಷ ಮತ್ತು ರಕ್ಷಣಾ ಉಪಕರಣಗಳು, ವೈದ್ಯಕೀಯ ಉಪಕರಣಗಳು, ವಿದ್ಯುತ್ ಉಪಕರಣಗಳು ಸೇರಿದಂತೆ ವಿವಿಧ ಯಂತ್ರಗಳ ತಯಾರಿಕಾ ಸಂಸ್ಥೆಗಳು ಪ್ರದರ್ಶನದಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ' ಎಂದರು.

'ವಸ್ತು ಪ್ರದರ್ಶನದ ಪ್ರತಿ ಆವೃತ್ತಿಯಲ್ಲಿ ರಾಜ್ಯದ ವಿವಿಧ ತಾಂತ್ರಿಕ ಕಾಲೇಜುಗಳ ಆಯ್ದ 35 ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ 30 ದಿನಗಳ ಬ್ರಿಡ್ಜ್ ಕೋರ್ಸ್ ಮೂಲಕ ಔದ್ಯೋಗಿಕ ಕೌಶಲ ತರಬೇತಿ ನೀಡಲಾಗುವುದು' ಎಂದು ಮಾಹಿತಿ ನೀಡಿದರು.

ಇಂಟೆಕ್ಸ್‌ನ ನಿಕಟಪೂರ್ವ ಅಧ್ಯಕ್ಷ ಆರ್. ಶ್ರೀನಿವಾಸನ್, ಮಹಾ ನಿರ್ದೇಶಕ ಜೇಬಕ್ ದಾಸ್‌ಗುಪ್ತ ಮತ್ತು ಯುಕೆನ್ ಇಂಡಿಯಾ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಸಿ.ಪಿ. ರಂಗಾಚಾರ್ ಉಪಸ್ಥಿತರಿದ್ದರು.

ಭಾರತ–ಅಮೆರಿಕ ಭಿನ್ನಸ್ವರ ತಾರಕ

'ಕರೆ ಮಾಡದ ಮೋದಿ; ಆಗದ ಒಪ್ಪಂದ'

ಒಂದನೇ ಪುಟದಿಂದ...

ಬ್ರಿಟನ್ ಮತ್ತು ವಿಯೆಟ್ನಾಂಗೆ ನೀಡಿದಂತಹ ಸುಂಕದ ದರವನ್ನೇ ತನಗೂ ವಿಧಿಸುವಂತೆ ಭಾರತ ಒತ್ತಾಯಿಸುತ್ತಿದೆ. ಈ ಹಿಂದೆ ಈ ವಿಚಾರದಲ್ಲಿ ಒಮ್ಮತಕ್ಕೂ ಬರಲಾಗಿತ್ತು. ಆದರೆ, ಈಗ ಅದರ ಅವಧಿ ಮುಗಿದಿದೆ ಎಂದು ಲಟ್ನಿಕ್ ಹೇಳಿದ್ದಾರೆ.

ತಪ್ಪು ಮಾಹಿತಿ– ಭಾರತ ತಿರುಗೇಟು

ಒಂದನೇ ಪುಟದಿಂದ...

'ಲಟ್ನಿಕ್ ಅವರ ಹೇಳಿಕೆಯನ್ನು ಗಮನಿಸಿದ್ದೇವೆ. ಕಳೆದ ಫೆ. 13ರ ಬಳಿಕ ಹಲವು ಸುತ್ತಿನ ಮಾತುಕತೆ ನಡೆದಿದೆ. ಹಲವು ಬಾರಿ ಒಪ್ಪಂದ ಪೂರ್ಣಗೊಳ್ಳುವ ಹಂತಕ್ಕೂ ಬರಲಾಗಿತ್ತು. ಈ ಮಾತುಕತೆಗಳ ಸ್ವರೂಪದ ಕುರಿತು ಬಂದಿರುವ ಹೇಳಿಕೆಯು ನಿಖರವಾಗಿಲ್ಲ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ. ಬ್ರಿಟನ್ ಜೊತೆಗೆ ವ್ಯಾಪಾರ ಒಪ್ಪಂದ ಮಾಡಿಕೊಂಡ ನಂತರ, ಮುಂದಿನ ದೇಶ ಯಾವುದು ಎಂದು ಟ್ರಂಪ್ ಅವರನ್ನು ಕೇಳಲಾಗಿತ್ತು. ಅವರು ಹಲವು ದೇಶಗಳ ಹೆಸರು ಹೇಳಿದ್ದರು. ಒಂದೆರಡು ಬಾರಿ ಭಾರತದ ಹೆಸರನ್ನೂ ಬಹಿರಂಗವಾಗಿ ಹೇಳಿದ್ದಾರೆ ಎಂದು ಲಟ್ನಿಕ್ ನೆನಪಿಸಿಕೊಂಡಿದ್ದಾರೆ.

ಪಿಯು ಪ್ರಶ್ನೆ ಪತ್ರಿಕೆ ಮತ್ತೆ ಸೋರಿಕೆ

ಕಲಬುರಗಿ: ಜ.8ರಂದು ನಡೆದ ದ್ವಿತೀಯ ಪಿಯು ಪೂರ್ವ ಸಿದ್ಧತಾ ಪರೀಕ್ಷೆಯ ಇಂಗ್ಲಿಷ್ ಪ್ರಶ್ನೆ ಪತ್ರಿಕೆ ಜಾಲತಾಣಗಳಲ್ಲಿ ಹರಿದಾಡಿದ್ದು, ಕಲಬುರಗಿ ಸ್ಟೇಷನ್ ಬಜಾರ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನೆ ಪತ್ರಿಕೆ ಹರಿಬಿಟ್ಟಿರುವವರ ವಿರುದ್ಧ ಕ್ರಮಕೈಗೊಳ್ಳಬೇಕು' ಎಂದು ಡಿಡಿಪಿಯು ಸುರೇಶ ಅಕ್ಕಣ್ಣ ಅವರು ದೂರಿನಲ್ಲಿ ತಿಳಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನಾಳೆ ಎಂಬುವುದು ನಿನ್ನಿನ ಮನಸು, ಮುಂದೆ ಎಂಬುವುದು ಇಂದಿನ ಕನಸು.

-ದ.ರಾ. ಬೇಂದ್ರೆ

ಸಂಪಾದಕೀಯ

ಬೆದರಿಕೆಗೆ ಬಾಗುವ ಪ್ರವೃತ್ತಿ ಭಾರತದ ನಡೆ ನಿರಾಶಾದಾಯಕ

ತೈಲನಿಕ್ಷೇಪ ಸಂಪದ್ಭರಿತ ರಾಷ್ಟ್ರ ವೆನೆಜುವೆಲಾ ಮೇಲೆ ದಾಳಿ ನಡೆಸಿ, ಆ ದೇಶದ ಅಧ್ಯಕ್ಷ ನಿಕೊಲಸ್ ಮಡೂರೊ ಮತ್ತು ಅವರ ಪತ್ನಿ ಸಿಲಿಯಾ ಫ್ಲೋರೆಸ್ ಅವರನ್ನು ಬಂಧಿಸಿರುವ ಅಮೆರಿಕದ ಕ್ರಮಕ್ಕೆ ಸಂಬಂಧಿಸಿದಂತೆ ಭಾರತ ನೀಡಿರುವ ಪ್ರತಿಕ್ರಿಯೆ ಎಚ್ಚರಿಕೆಯಿಂದ ಕೂಡಿದುದಾಗಿದೆ ಹಾಗೂ ನಡೆದ ಘಟನೆ ಸ್ವೀಕಾರಾರ್ಹ ಎನ್ನುವ ಧಾಟಿಯಲ್ಲಿದೆ. ಘಟನೆಗೆ ಪ್ರತಿಕ್ರಿಯಿಸಲು ತಡಬಡಾಯಿಸಿರುವ ಕೇಂದ್ರ ಸರ್ಕಾರ, ಒಂದು ದಿನದ ವಿಳಂಬದ ನಂತರ ನೀಡಿರುವ ಪ್ರತಿಕ್ರಿಯೆ ಔಪಚಾರಿಕತೆಯಿಂದ ಕೂಡಿದುದಾಗಿದೆ. 'ಬೆಳವಣಿಗೆಗಳ' ಬಗ್ಗೆ 'ತೀವ್ರ ಕಳವಳ' ವ್ಯಕ್ತಪಡಿಸಿರುವ ಸರ್ಕಾರದ ಹೇಳಿಕೆಯು ಅಮೆರಿಕದ ಹೆಸರಿನ ಉಲ್ಲೇಖ ಹಾಗೂ ದಾಳಿಯ ಬಗ್ಗೆ ಖಂಡನೆ ಇಲ್ಲದಿರುವ ಹಾಗೆ ಎಚ್ಚರಿಕೆಯಿಂದ ಆಯ್ದ ಪದಗಳಿಂದ ರೂಪುಗೊಂಡಿದೆ. ವೆನೆಜುವೆಲಾ ಜನರ ಸುರಕ್ಷತೆ ಮತ್ತು ಯೋಗಕ್ಷೇಮಕ್ಕೆ ಸಂಬಂಧಿಸಿದ ತನ್ನ ಕಾಳಜಿಯನ್ನು ಮರುದೃಢೀಕರಿಸುವುದಾಗಿಯೂ ಹೇಳಿರುವ ಈ ಹೇಳಿಕೆಯು, ಉಭಯ ದೇಶಗಳು ಎಲ್ಲ ಸಮಸ್ಯೆಗಳನ್ನು ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳುವ ಹಾಗೂ ಶಾಂತಿ ಮತ್ತು ಸ್ಥಿರತೆಯನ್ನು ಕಾಪಾಡಿಕೊಳ್ಳುವ ಕರೆಯನ್ನು ಒಳಗೊಂಡಿದೆ. ಅಂತರರಾಷ್ಟ್ರೀಯ ಕಾನೂನುಗಳ ಉಲ್ಲಂಘನೆ ಹಾಗೂ ಶಾಂತಿ–ಸೌಹಾರ್ದತೆಗೆ ಸಂಬಂಧಿಸಿದ ವಿಶ್ವಸಂಸ್ಥೆಯ ಮೂಲ ಆಶಯಗಳ ಉಲ್ಲಂಘನೆಯ ಹಿನ್ನೆಲೆಯಲ್ಲಿ ಭಾರತದ ಪ್ರತಿಕ್ರಿಯೆಯು ಅತ್ಯಂತ ನಿರಾಶಾದಾಯಕ ಆದುದಾಗಿದೆ. ಉಕ್ರೇನ್‌ನಲ್ಲಿನ ಯುದ್ಧ ಹಾಗೂ ಗಾಜಾದಲ್ಲಿನ ಹತ್ಯಾಕಾಂಡ ಘಟನೆಗಳ ಖಂಡನೆಗೆ ಸಂಬಂಧಿಸಿದಂತೆಯೂ ಭಾರತ ವಿಫಲ ಆಗಿರುವುದರ ಮುಂದುವರಿದ ಭಾಗದಂತೆ, ವೆನೆಜುವೆಲಾ ಮೇಲಿನ ಅಮೆರಿಕದ ದಾಳಿಗೆ ಸಂಬಂಧಿಸಿದ ಪ್ರತಿಕ್ರಿಯೆಯನ್ನು ಗಮನಿಸಬಹುದು.



ದಾಳಿಕೋರ ಮನಃಸ್ಥಿತಿಯನ್ನು ದಿಟ್ಟವಾಗಿ ಖಂಡಿಸುತ್ತಿದ್ದ ಭಾರತ, ಇತ್ತೀಚೆಗೆ ಯಾರನ್ನೂ ನೋಯಿಸದ ನಿಲುವು ಅನುಸರಿಸುತ್ತಿದೆ. ಈ ನೀತಿ ವೆನೆಜುವೆಲಾ ಮೇಲಿನ ಅಮೆರಿಕ ದಾಳಿಗೆ ಸಂಬಂಧಿಸಿದಂತೆಯೂ ಮುಂದುವರಿದಿದೆ.

ಹಿಂಜರಿಕೆಯ ನಿಲುವು ಹಾಗೂ ಎಚ್ಚರಿಕೆಯ ಪದಪುಂಜಗಳು ವೆನೆಜುವೆಲಾ ಮೇಲಿನ ದಾಳಿಗೆ ಸೀಮಿತವಾಗಿರದೆ, ಅಂತರರಾಷ್ಟ್ರೀಯ ಕಾನೂನುಗಳು ಮತ್ತು ವಿಶ್ವಸಂಸ್ಥೆಯ ಆಶಯಗಳಿಗೆ ಸಂಬಂಧಿಸಿದ ವಿದ್ಯಮಾನಗಳನ್ನು ನಿಭಾಯಿಸುವಲ್ಲಿ ಭಾರತ ಎದುರಿಸುತ್ತಿರುವ ಸಮಸ್ಯೆಗೆ ಸಂಬಂಧಿಸಿದ್ದಾಗಿವೆ. ಇಲ್ಲಿಯವರೆಗೆ ದುರ್ಬಲ ದೇಶಗಳ ಮೇಲೆ ಪ್ರಬಲ ದೇಶಗಳು ದಾಳಿ ನಡೆಸಿದಾಗ ಭಾರತ ಹಿಂಜರಿಕೆ ಇಲ್ಲದೆ ಖಂಡಿಸುತ್ತಿತ್ತು. ನೈತಿಕತೆ, ಶಿಷ್ಟಾಚಾರ, ದೇಶದ ಸಾರ್ವಭೌಮತೆಯನ್ನು ಗೌರವಿಸುವುದು ಹಾಗೂ ಮತ್ತೊಂದು ದೇಶದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡದಿರುವುದರ ಪರವಾಗಿ ಭಾರತ ತನ್ನನ್ನು ಗುರ್ತಿಸಿಕೊಳ್ಳುತ್ತಿತ್ತು. ಆದರೆ, ಕಳೆದ ಕೆಲವು ದಶಕಗಳಲ್ಲಿ ಜಗತ್ತು ಸಾಕಷ್ಟು ಬದಲಾಗಿದೆ ಹಾಗೂ ಗಾಳಿ ಬಂದೆಡೆ ತೂರಿಕೊಳ್ಳುವ ಅಭ್ಯಾಸವನ್ನು ಭಾರತ ರೂಢಿಸಿಕೊಳ್ಳುತ್ತಿದೆ. ಅಂತರರಾಷ್ಟ್ರೀಯ ವಿದ್ಯಮಾನಗಳನ್ನು ನಿರ್ದೇಶಿಸಬೇಕಾದ ಉನ್ನತ ಆದರ್ಶಗಳು ಹಾಗೂ ಸನ್ನಡತೆಯ ಸ್ಥಳದಲ್ಲಿ ಸ್ವಹಿತಾಸಕ್ತಿ ಕಾಣಿಸಿಕೊಳ್ಳುತ್ತಿದೆ. ಆದರ್ಶವಾದಿಯಾಗಿ ವಿಷಾದಿಸುವ ಸ್ಥಿತಿ ತಂದುಕೊಳ್ಳುವುದರ ಬದಲಾಗಿ, ಅಪಾಯಕ್ಕೆ ಆಸ್ಪದ ಕಲ್ಪಿಸದಿರುವ ವಾಸ್ತವವಾದಿ ಆಗುವುದೇ ಉತ್ತಮ ಎನ್ನುವ ಚಿಂತನೆ ಇದಾಗಿರುವಂತಿದೆ. ದಕ್ಷಿಣ ಆಫ್ರಿಕಾ, ಬ್ರೆಜಿಲ್, ಮೆಕ್ಸಿಕೊ ಸೇರಿದಂತೆ ದಕ್ಷಿಣ ಭೂಖಂಡದ ಪ್ರಮುಖ ರಾಷ್ಟ್ರಗಳು ವೆನೆಜುವೆಲಾದ ಮೇಲಿನ ಅಮೆರಿಕದ ದಾಳಿಯನ್ನು ಖಂಡಿಸಿವೆ. ಆದರೆ, ಈ ದೇಶಗಳ ಪ್ರಮುಖ ಪ್ರತಿನಿಧಿಯಂತಿರುವ ಹಾಗೂ ಅಂತರರಾಷ್ಟ್ರೀಯ ವೇದಿಕೆಯಲ್ಲಿ ತನ್ನದೇ ಆದ ಧ್ವನಿ ಹೊಂದಿರುವ ಭಾರತ, ಅಮೆರಿಕಕ್ಕೆ ಅಸಮಾಧಾನ ಆಗದಂತೆ ನಡೆದುಕೊಳ್ಳಲು ಪ್ರಯತ್ನಿಸುತ್ತಿದೆ.

ಭಾರತದ ಮೇಲೆ ಸುಂಕ ಸಮರವನ್ನು ತೀವ್ರಗೊಳಿಸುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಬೆದರಿಕೆಯ ಹಿನ್ನೆಲೆಯಲ್ಲಿ ಭಾರತದ ಪ್ರತಿಕ್ರಿಯೆಯನ್ನು ಗಮನಿಸಬೇಕಾಗಿದೆ. ರಷ್ಯಾದಿಂದ ತೈಲ ಖರೀದಿಯನ್ನು ಭಾರತ ನಿಲ್ಲಿಸಬೇಕೆಂದು ಟ್ರಂಪ್ ಬಯಸುತ್ತಿದ್ದಾರೆ. ರಷ್ಯಾದಿಂದ ತೈಲ ಖರೀದಿಸುವ ದೇಶಗಳ ಮೇಲೆ ಶೇ 500ರಷ್ಟು ತೆರಿಗೆ ವಿಧಿಸಲು ಅನುಮತಿಸುವ ಮಸೂದೆಗೆ ಅವರು ಒಪ್ಪಿಗೆ ನೀಡಿದ್ದಾರೆ. ಈ ಮಸೂದೆ ಕಾಯ್ದೆಯಾಗಿ ಬದಲಾದರೆ, ಅದರ ತೀವ್ರ ಪರಿಣಾಮ ಭಾರತದ ಮೇಲಾಗಲಿದೆ. ಶೇ 500ರಷ್ಟು ಸುಂಕ ಹೆಚ್ಚಳ ಅಮೆರಿಕದೊಂದಿಗೆ ರಫ್ತು ವ್ಯವಹಾರವನ್ನು ಕೊನೆಗೊಳಿಸಬಹುದು. ಪ್ರಸ್ತುತ, ಉಭಯ ದೇಶಗಳ ನಡುವಣ ವಾಣಿಜ್ಯ ಒಪ್ಪಂದಗಳು ನನೆಗುದಿಗೆ ಬಿದ್ದಿವೆ. ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಟ್ರಂಪ್ ಅವರು ಆಕ್ಷೇಪಾರ್ಹ ಹೇಳಿಕೆಗಳನ್ನೂ ನೀಡಿದ್ದಾರೆ. ಬಲಿಷ್ಠರಿಗೆ ನೋವಾಗದಂತೆ ನಡೆದುಕೊಳ್ಳುವುದು ಸ್ವಹಿತದ ದಾರಿ ಎನ್ನುವ ಚಿಂತನೆ ಕೇಂದ್ರ ಸರ್ಕಾರದ್ದಾಗಿರುವಂತಿದೆ.

ಚಾಟಿ

ಸಂಯಮವೇ ಭೂಷಣ



ಸಾರ್ವಜನಿಕರ ತೆರಿಗೆ ಹಣದಲ್ಲಿ ಅಧಿಕಾರ ನಡೆಸುವವರು, ಜನರ ಜೊತೆ ಸಂಯಮದಿಂದ ವರ್ತಿಸಬೇಕು, ದರ್ಪ ತೋರದೆ ತಾಳ್ಮೆಯಿಂದ ಪ್ರತಿಕ್ರಿಯಿಸಬೇಕು.

ನಿಡಸಾಲೆ ಪುಟ್ಟಸ್ವಾಮಯ್ಯ, ಪ್ರಕಾಶಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಬಳ್ಳಾರಿಯಲ್ಲಿ ಗೃಹ ಸಚಿವರೇ ಪೊಲೀಸ್ ಅಧಿಕಾರಿಗಳ ಸಭೆ ನಡೆಸಬೇಕಿತ್ತು. ಅವರು ಬಿಟ್ಟರೆ ಮುಖ್ಯಮಂತ್ರಿಯವರು ಅಂತಹ ಸಭೆ ನಡೆಸಬಹುದು. ಡಿ.ಕೆ. ಶಿವಕುಮಾರ್ ಅವರು ಸಭೆ ನಡೆಸಿದ್ದು, ಶಿಷ್ಟಾಚಾರ ಮತ್ತು ಅಧಿಕಾರದ ಸ್ಪಷ್ಟ ಉಲ್ಲಂಘನೆಯಲ್ಲವೆ?

ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಬೃಹತ್ ಕೈಗಾರಿಕೆ ಸಚಿವ

25 ವರ್ಷಗಳ ಹಿಂದೆ

ಬುಧವಾರ, 10-1-2001

● ಮಹಾ ಕುಂಭಮೇಳ ಆರಂಭ

ಅಲಹಾಬಾದ್, ಜ. 9 (ಪಿಟಿಐ)– ತೀವ್ರ ಚಳಿಯ ವಾತಾವರಣ ಹಾಗೂ ಪೊಲೀಸ್ ಬಿಗಿ ಬಂದೋಬಸ್ತ್ ನಡುವೆ ಸುಮಾರು 15 ಲಕ್ಷ ಭಕ್ತರು ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡುವುದರೊಂದಿಗೆ ಜಗತ್ತಿನ ಅತಿದೊಡ್ಡ ಸಮುದಾಯ ಸ್ನಾನ ಸಮಾವೇಶವಾದ ಹಾಗೂ ಸಹಸ್ರಮಾನದ ಮೊದಲನೆಯದಾದ 'ಮಹಾ ಕುಂಭಮೇಳ' ಇಂದು ಇಲ್ಲಿ ಆರಂಭವಾಯಿತು.

ದೇಶ, ವಿದೇಶಗಳ ಭಕ್ತರು ಸೋಮವಾರ ರಾತ್ರಿಯಿಂದಲೇ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಲು ಆರಂಭಿಸಿದ್ದರೂ ರಾತ್ರಿ 2 ಗಂಟೆಯ ನಂತರ 'ಪೌಷ ಪೌರ್ಣಮಿ'ಯ ಪವಿತ್ರ ಸ್ನಾನ ಔಪಚಾರಿಕವಾಗಿ ಆರಂಭವಾಯಿತು. ಜನರು ಸ್ನಾನದ ನಂತರ ಹಣೆಯ ಮೇಲೆ ಕುಂಕುಮ, ವಿಭೂತಿ, ಗಂಧದ ಪಟ್ಟೆ ಬಳಿದು ಗಂಗಾ ಪೂಜೆ ಮಾಡಿದರು.

● ರೈತರಿಂದ ಎಪಿಎಂಸಿ ಕಚೇರಿಗೆ ಮುತ್ತಿಗೆ: ಲಾಠಿ ಪ್ರಹಾರ

ರಾಯಚೂರು, ಜ. 9– ಕಳೆದ ಮೂರು ದಿನಗಳಿಂದ ಕೃಷಿ ಉತ್ಪನ್ನಗಳ ವ್ಯಾಪಾರ ವಹಿವಾಟು ಸ್ಥಗಿತಗೊಂಡಿದ್ದನ್ನು ಪ್ರತಿಭಟಿಸಿ ರೊಚ್ಚಿಗೆದ್ದ ಸಾವಿರಾರು ರೈತರು ರಸ್ತೆತಡೆ ನಡೆಸಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಚೇರಿಗೆ ಮುತ್ತಿಗೆ ಹಾಕಿದರು. ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿದ್ದುದನ್ನು ಗಮನಿಸಿದ ಪೊಲೀಸರು ರೈತರ ಮೇಲೆ ಲಾಠಿ ಪ್ರಹಾರ ನಡೆಸಿದರು. ರೈತರು 2 ಗಂಟೆ ರಸ್ತೆತಡೆ ನಡೆಸಿದರು.

75 ವರ್ಷಗಳ ಹಿಂದೆ

ಬುಧವಾರ, 10-1-1951

● ಭಾರತಕ್ಕೆ ಅರವತ್ತು ಲಕ್ಷ ಟನ್ ಆಹಾರ ಧಾನ್ಯ

ಲಂಡನ್, ಜ. 9– ಅಮೆರಿಕದಲ್ಲಿ ಭಾರತದ ರಾಯಭಾರಿ ವಿಜಯಲಕ್ಷ್ಮಿ ಪಂಡಿತರು ಇಂದು ಇಲ್ಲಿ ಮಾತನಾಡುತ್ತ, ವಿದೇಶದಿಂದ ಜರೂರಾಗಿ ಅಗತ್ಯವಾಗಿರುವ ಅರವತ್ತು ಲಕ್ಷ ಟನ್‌ಗಳಷ್ಟು ಧಾನ್ಯದಲ್ಲಿ ಸ್ವಲ್ಪ ಭಾಗವಾದರೂ ಭಾರತಕ್ಕೆ ಫೆಬ್ರುವರಿ ತಿಂಗಳ ಹೊತ್ತಿಗೆ ಬರುವಂತೆ ಮಾಡಬೇಕೆಂಬುದು ಭಾರತ ಸರ್ಕಾರದ ಇಚ್ಛೆಯೆಂದು ತಿಳಿಸಿದರು.

ಸರಬರಾಜು ಮಾಡಬೇಕೆಂದು ಅಮೆರಿಕಕ್ಕೆ ಕೇಳಿದ್ದ ಇಪ್ಪತ್ತು ಲಕ್ಷ ಟನ್ ಆಹಾರಧಾನ್ಯ ಸೂಕ್ತ ಕಾಲದಲ್ಲಿ ಭಾರತಕ್ಕೆ ಬರುವುದೆಂಬುದು ತಮ್ಮ ಭಾವನೆ ಎಂದು ವಿಜಯಲಕ್ಷ್ಮಿ ಅವರು ಹೇಳಿದರು.

ಸಿಎಂ ದಾಖಲೆ: ಅಂದು–ಇಂದು



ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

ದೇವರಾಜ ಅರಸು ಮತ್ತು ಸಿದ್ದರಾಮಯ್ಯನವರ ಸಾಧನೆಗಳನ್ನು ಹಾಗೂ ಅವರ ಸಾಮಾಜಿಕ ಕಾಳಜಿಯನ್ನು ವಿಶ್ಲೇಷಿಸುವಾಗ, ಅವರಿಗಿದ್ದ ರಾಜಕೀಯ, ಸಾಮಾಜಿಕ ಹಾಗೂ ಕಾಲಘಟ್ಟದ ಅನುಕೂಲ ಹಾಗೂ ಸವಾಲುಗಳನ್ನೂ ಗಮನಿಸಬೇಕಾಗುತ್ತದೆ.

ಹುಟ್ಟಿನ ಲೆಕ್ಕದಲ್ಲಿ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು (1915) ಅವರಿಗಿಂತ ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು (1948) ಮೂವತ್ತಮೂರು ವರ್ಷಗಳಷ್ಟು ಕಿರಿಯರು. ಅರಸು ಮೊದಲ ಬಾರಿ ಶಾಸಕರಾಗಿದ್ದಾಗ ಸಿದ್ದರಾಮಯ್ಯನವರಿಗೆ ನಾಲ್ಕು ವರ್ಷ. ಇವರಿಬ್ಬರು ಮುಖ್ಯಮಂತ್ರಿಯಾಗಿದ್ದ ಅವಧಿಯ ನಡುವಿನ ಅಂತರ 41 ವರ್ಷಗಳು.

ಅರಸು ಮುಖ್ಯಮಂತ್ರಿಯಾಗಿದ್ದ ಅವಧಿಯ ದಾಖಲೆಯನ್ನು ಸಿದ್ದರಾಮಯ್ಯನವರು ಮುರಿದಿರುವುದನ್ನು ಕಾಲದ ನಡುವಿನ ಅಂತರದದೃಷ್ಟಿಯಿಂದಲೂ ನೋಡಬೇಕಾಗುತ್ತದೆ. ಸರಿದು ಹೋಗಿರುವ ಕಾಲದಲ್ಲಿ ಬದಲಾವಣೆಗೊಂಡಿರುವ ರಾಜ್ಯ ಮತ್ತು ದೇಶದ ರಾಜಕೀಯ ಹಾಗೂ ಸಮಾಜವನ್ನು ಗಣನೆಗೆ ತೆಗೆದುಕೊಳ್ಳದೆ ಮೌಲ್ಯಮಾಪನಕ್ಕೆ ಹೊರಟರೆ ಸಿದ್ದರಾಮಯ್ಯನವರಿಗೆ ಮಾತ್ರವಲ್ಲ, ಅರಸು ಅವರಿಗೂ ಅನ್ಯಾಯ ಮಾಡಿದಂತಾಗುತ್ತದೆ.

ಅರಸು ದಿಟ್ಟತನದಿಂದ ಅನುಷ್ಠಾನಗೊಳಿಸಿದ್ದ ಎರಡು ಕಾರ್ಯಕ್ರಮಗಳು: ಉಳುವವನನ್ನೇ ಹೊಲದ ಒಡೆಯನನ್ನಾಗಿಸಿದ ಭೂ ಸುಧಾರಣೆ ಮತ್ತು ಹಿಂದುಳಿದ ಜಾತಿಯವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡುವ ಹಾವನೂರು ಆಯೋಗದ ವರದಿ ಆಧಾರದ ಮೀಸಲಾತಿ. ಈ ಎರಡು ಕಾರ್ಯಕ್ರಮಗಳ ಫಲಾನುಭವಿಗಳು ಸಂಖ್ಯೆಯಲ್ಲಿ ದೊಡ್ಡ ಪ್ರಮಾಣದಲ್ಲಿದ್ದರೂ, ಅಲ್ಲಿಯವರೆಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ದುರ್ಬಲರಾಗಿದ್ದರು. ಇದಕ್ಕೆ ತದ್ವಿರುದ್ಧವಾಗಿ ಈ ಎರಡು ಕಾರ್ಯಕ್ರಮಗಳಿಂದ ನಷ್ಟಕ್ಕೀಡಾಗಿದ್ದ ಲಿಂಗಾಯತ ಮತ್ತು ಒಕ್ಕಲಿಗರು ಸಾಮಾಜಿಕವಾಗಿ ಮಾತ್ರವಲ್ಲ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸಬಲರಾಗಿದ್ದರು. ಅರಸು ಅವರಿಗಿಂತ ಮೊದಲು ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರೆಲ್ಲರೂ ಈ ಎರಡು ಸಮುದಾಯಗಳಿಗೆ ಸೇರಿದವರಾಗಿದ್ದರು.

ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಭೂಸುಧಾರಣೆ ಮತ್ತು ಮೀಸಲಾತಿ ಕಾಯ್ದೆಗಳನ್ನು ಜಾರಿಗೆ ತಂದಿರುವ ಶ್ರೇಯಸ್ಸಿಗೆ ಅರಸು ಅವರು ಖಂಡಿತ ಬಾಧ್ಯರು. ಇದೇ ವೇಳೆ, ಈ ಕಾಯ್ದೆಗಳಿಂದಾಗಿ ನಷ್ಟವನ್ನು ಅನುಭವಿಸಿದ್ದ ಸಮುದಾಯಗಳು ನೀಡಿದ್ದ ಸಹಕಾರ ಕೂಡ ನೆನಪಿಸಿಕೊಳ್ಳಬೇಕಾಗುತ್ತದೆ. ಈ ಎರಡೂ ಕಾಯ್ದೆಗಳಿಗೆ ರಾಜ್ಯದಲ್ಲಿ ಪ್ರತಿರೋಧ ವ್ಯಕ್ತವಾಗಿದ್ದರೂ, ಅದು ಅರಸು ಅವರ ಸ್ಥಾನಕ್ಕೆ ಸಂಚಕಾರ ತರುವಷ್ಟು ಮಟ್ಟಿಗೆ ನಡೆದಿಲ್ಲ ಎನ್ನುವುದಕ್ಕೆ ಇತಿಹಾಸ ಸಾಕ್ಷಿ. ಬಹಳಷ್ಟು ವಿಶ್ಲೇಷಣಾಕಾರರು 1972ರ ವಿಧಾನಸಭಾ ಚುನಾವಣೆಗೆ ಟಿಕೆಟ್ ನೀಡಿದಾಗ ಅರಸು ಅವರು ನಡೆಸಿದ್ದ ಸೋಷಿಯಲ್ ಎಂಜಿನಿಯರಿಂಗ್ ಫಲಿತಾಂಶಕ್ಕೆ ಕಾರಣ ಎನ್ನುತ್ತಾರೆ. ಇದು ಅರ್ಧ ಸತ್ಯ.

1972ರ ಚುನಾವಣೆಯ ನಂತರ ರಾಜ್ಯ ವಿಧಾನಸಭೆಯಲ್ಲಿ ಹಿಂದುಳಿದ ಜಾತಿಗಳಿಗೆ ಸೇರಿದ ಶಾಸಕರ ಸಂಖ್ಯೆ 18ರಿಂದ 36ಕ್ಕೆ ಏರಿದ್ದು ನಿಜ. ಆದರೆ, ಒಕ್ಕಲಿಗ ಮತ್ತು ಲಿಂಗಾಯತ ಸದಸ್ಯರ ಒಟ್ಟು ಸಂಖ್ಯೆ 117ರಿಂದ 105ಕ್ಕಷ್ಟೇ ಇಳಿದಿತ್ತು. ಅಂದಿನ ಸಚಿವ ಸಂಪುಟದಲ್ಲಿ ಎಸ್.ಎಂ. ಕೃಷ್ಣ, ಎಚ್.ಎನ್. ನಂಜೇಗೌಡ, ಹುಚ್ಚಮಾಸ್ತಿಗೌಡ, ಕೆ.ಎಚ್. ಪಾಟೀಲ್ ಮೊದಲಾದ ಘಟಾನುಘಟಿಗಳಿದ್ದರು. ವಿರೋಧಪಕ್ಷದಲ್ಲಿ ಎಚ್.ಡಿ. ದೇವೇಗೌಡರಿದ್ದರು. ಎಸ್. ನಿಜಲಿಂಗಪ್ಪ, ವೀರೇಂದ್ರ ಪಾಟೀಲ, ಎಚ್. ಸಿದ್ದವೀರಪ್ಪ, ಸಾಹುಕಾರ್ ಚೆನ್ನಯ್ಯ ಮೊದಲಾದವರು ಶಾಸಕರಾಗದೆ ಇದ್ದರೂ ರಾಜಕೀಯದಲ್ಲಿ ಸಕ್ರಿಯರಾಗಿದ್ದರು. ಹೀಗಿದ್ದರೂ ಅವರ ಸಮುದಾಯಗಳಿಂದ ಅರಸು ಅವರ ಕಾರ್ಯಕ್ರಮಗಳಿಗೆ ಭೂಸುಧಾರಣೆ ಮತ್ತು ಮೀಸಲಾತಿಗೆ ಪ್ರಬಲವಾದ ವಿರೋಧ ವ್ಯಕ್ತವಾಗಿಲ್ಲ ಎನ್ನುವುದು ಗಮನಾರ್ಹ.

ಈ 'ಸಹಕಾರ'ದ ಮಹತ್ವವನ್ನು ಇನ್ನಷ್ಟು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕೆಂದರೆ, 1986ರಲ್ಲಿ ರಾಮಕೃಷ್ಣ ಹೆಗಡೆ ಸರ್ಕಾರ ರಚಿಸಿದ್ದ ವೆಂಕಟಸ್ವಾಮಿ ಆಯೋಗದ ವರದಿಗೆ ವ್ಯಕ್ತವಾದ ವಿರೋಧವನ್ನು ಗಮನಿಸಬೇಕಾಗುತ್ತದೆ. ವೆಂಕಟಸ್ವಾಮಿ ಆಯೋಗ ಅಲ್ಲಿಯವರೆಗೆ ಮೀಸಲಾತಿಯ ಫಲಾನುಭವಿಗಳಾಗಿದ್ದ ಒಕ್ಕಲಿಗ ಜಾತಿಯನ್ನು ಮೀಸಲಾತಿಯಿಂದ ಹೊರಗೆ ಇಟ್ಟ ಕಾರಣಕ್ಕೆ ರಾಜ್ಯದಲ್ಲಿ ಪ್ರತಿಭಟನೆ ಭುಗಿಲೆದ್ದಿತ್ತು. ಸಾಕ್ಷಾತ್ ದೇವೇಗೌಡರೇ ಬೀದಿಗಿಳಿದು ಪ್ರತಿಭಟಿಸಿದ ನಂತರ ಹೆಗಡೆಯವರು ವೆಂಕಟಸ್ವಾಮಿ ಆಯೋಗದ ವರದಿಯನ್ನು ಹಿಂದಕ್ಕೆ ಪಡೆದು ಚಿನ್ನಪ್ಪ ರೆಡ್ಡಿ ನೇತೃತ್ವದಲ್ಲಿ ಇನ್ನೊಂದು ಆಯೋಗ ರಚಿಸಬೇಕಾಯಿತು. ಕೊನೆಗೆ ರಾಜ್ಯದಲ್ಲಿರುವ ಬ್ರಾಹ್ಮಣರು, ವೈಶ್ಯರು, ನಗರ್ತರು ಮತ್ತು ಮೊದಲಿಯಾರ್ ಸಮುದಾಯಗಳನ್ನು ಹೊರತುಪಡಿಸಿ ಉಳಿದೆಲ್ಲ ಜಾತಿಗಳನ್ನು ಮೀಸಲಾತಿಯ ವ್ಯಾಪ್ತಿಗೆ ತರುವಂತಹ ರಾಜಿ ಸೂತ್ರವನ್ನು ಹೆಣೆಯಬೇಕಾಯಿತು. ಅಲ್ಲಿಗೆ ಹಾವನೂರು ಆಯೋಗದ ವರದಿ ಆಧಾರಿತ ಮೀಸಲಾತಿಯನ್ನು ಗುಂಡಿ ತೆಗೆದು ಹೂತು ಹಾಕಲಾಯಿತು.

ಸಾಮಾಜಿಕ ನ್ಯಾಯದ ವಿಚಾರದಲ್ಲಿ ದೇವರಾಜ ಅರಸು ಅವರಷ್ಟೇ ದಿಟ್ಟತನದ ನಿಲುವನ್ನು ಸಿದ್ದರಾಮಯ್ಯನವರು ತೋರಿಸಬೇಕು ಎಂದು ಹೇಳುವವರು ಈ ಬದಲಾದ ಪರಿಸ್ಥಿತಿಯನ್ನು ನೋಡಬೇಕಾಗುತ್ತದೆ. ರಾಜ್ಯದಲ್ಲಿ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ನೀಡಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿಗೆ ವಿರೋಧ ವ್ಯಕ್ತಪಡಿಸಿದವರು ಯಾರು? ಇಷ್ಟೊಂದು ಶಿಕ್ಷಣ ಮತ್ತು ಜಾಗೃತಿ ನಂತರವೂ ಹುಟ್ಟಿಕೊಂಡ ಈ ವಿರೋಧ ಏನನ್ನು ಹೇಳುತ್ತಿದೆ? ಭೂ ಸುಧಾರಣೆ ಕಾಯ್ದೆ ಇಲ್ಲವೇ ಹಾವನೂರು ಆಯೋಗದ ಆಧಾರಿತ ಮೀಸಲಾತಿ ಅರಸು ಕಾಲದಲ್ಲಿ ಜಾರಿಯಾಗದೆ ಈಗ ಜಾರಿಗೊಂಡಿದ್ದರೆ ಏನಾಗುತ್ತಿತ್ತು? ರಕ್ತಪಾತ ಆಗುತ್ತಿತ್ತೋ ಏನೋ?

ಎರಡನೆಯದಾಗಿ, ಇಂದಿನ ಕಾಲದ ರಾಜಕೀಯ ಸವಾಲುಗಳು ಕೂಡ ಅರಸು ಕಾಲಕ್ಕಿಂತ ಭಿನ್ನವಾದುವು. 1991ರಲ್ಲಿ ಆಗಿನ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ ಹೊಸ ಆರ್ಥಿಕ ನೀತಿ ಮತ್ತು 1992ರಲ್ಲಿ ಬಾಬರಿ ಮಸೀದಿ ಧ್ವಂಸದ ನಂತರ ಭುಗಿಲೆದ್ದ ಕೋಮುವಾದ ದೇಶದ ರಾಜಕೀಯದ ದಿಕ್ಕು-ದೆಸೆಗಳನ್ನೇ ಬದಲಾಯಿಸಿಬಿಟ್ಟಿದೆ. ಇಂದಿನ ಚುನಾವಣಾ ಕಾಲದ ಚರ್ಚೆಯ ಕೇಂದ್ರದಲ್ಲಿರುವುದು ಕ್ರೋನಿ ಬಂಡವಾಳವಾದ (ಅದಾನಿ-ಅಂಬಾನಿ) ಮತ್ತು ಕೋಮುವಾದ (ಹಿಂದುತ್ವ). ದೇಶದ ಸೆಕ್ಯುಲರ್ ಪಕ್ಷಗಳಿಗೆ ಈ ಸವಾಲುಗಳೇ ಜೀವನ್ಮರಣದ ಪ್ರಶ್ನೆ.

ಇತ್ತೀಚೆಗೆ ಬಹಳಷ್ಟು ಮಂದಿ ಸಿದ್ದರಾಮಯ್ಯ ಅವರ 2013–2018ರ ಅವಧಿಯ ಸರ್ಕಾರವನ್ನು ಕೊಂಡಾಡುತ್ತಿದ್ದಾರೆ. ಹಾಗಿದ್ದರೆ ಅದು ಸೋತಿದ್ದೇಕೆ? ಒಳ್ಳೆಯ ಕೆಲಸ ಮಾಡಿದ್ದರೆ ಗೆಲ್ಲಬೇಕಿತ್ತಲ್ಲವೇ? ಅರಸು ಅವರು ಸಾಮಾಜಿಕ ನ್ಯಾಯ ನೀಡುವ ಸಾಲುಸಾಲು ಕಾರ್ಯಕ್ರಮಗಳನ್ನು ನೀಡಿದ ನಂತರ 1978ರ ಚುನಾವಣೆಯಲ್ಲಿ ಪ್ರಚಂಡ ಜಯ ಸಾಧಿಸಿದ್ದರು. ಸಿದ್ದರಾಮಯ್ಯ ಸೋತಿದ್ದು ಯಾಕೆಂದರೆ, ಈಗಿನ ಚುನಾವಣಾ ಕಾಲದಲ್ಲಿ ಚರ್ಚೆಯಾಗುತ್ತಿರುವುದು ಸರ್ಕಾರದ ಸಾಧನೆ ಇಲ್ಲವೇ ವೈಫಲ್ಯಗಳು ಅಲ್ಲ. ಚರ್ಚೆ ಗಿರಕಿ ಹೊಡೆಯುತ್ತಿರುವುದು ಕೋಮುವಾದದ ಕಥನದ ಸುತ್ತಮುತ್ತ. ಧರ್ಮದ ನಶೆ ಏರಿದಾಗ ಮನುಷ್ಯನಿಗೆ ಅನ್ನ, ಹಾಲು, ನೀರು, ಶಿಕ್ಷಣ ಕೊಟ್ಟವರೆಲ್ಲರೂ ಮರೆತುಹೋಗುತ್ತಾರೆ. ಅರಸು ಅವರಿಗೆ ಈ ಸವಾಲುಗಳಿರಲಿಲ್ಲ.

ಮೂರನೆಯದಾಗಿ, ಆಗಿನ ಮತ್ತು ಈಗಿನ ಬ್ಯುರೋಕ್ರಸಿ. ಅರಸು ಅವರ ಪರಿವರ್ತನೆಯ ರಥ ಅಷ್ಟೊಂದು ಸರಾಗವಾಗಿ ಮುಂದಕ್ಕೆ ಹೋಗಲು ಜೊತೆಗಿದ್ದ ದಕ್ಷ ಮತ್ತು ಬದ್ಧತೆಯ ಅಧಿಕಾರಿಗಳೂ ಕಾರಣ. ಜೆ.ಸಿ. ಲಿನ್, ರೆಬೆಲೊ, ಎಸ್.ಕೆ. ಹಾಜರ್, ಚಿರಂಜೀವಿ ಸಿಂಗ್, ಡಿ.ಎಂ. ನಂಜುಂಡಪ್ಪ, ಅ.ನ. ಯಲ್ಲಪ್ಪ ರೆಡ್ಡಿ ಅವರಂತಹ ಅಧಿಕಾರಿಗಳನ್ನು ಈಗಿನ ಸರ್ಕಾರದಲ್ಲಿಯಾಗಲಿ, ಮುಖ್ಯಮಂತ್ರಿ ಕಚೇರಿಯಲ್ಲಾಗಲಿ ಕಾಣಲು ಸಾಧ್ಯವೆ?

ಕೊನೆಯದಾಗಿ, ಕಾಂಗ್ರೆಸ್ ಹೈಕಮಾಂಡ್. 1969ರಲ್ಲಿ ಕಾಂಗ್ರೆಸ್ ವಿಭಜನೆಯಾದ ನಂತರ ಪ್ರಧಾನಿ ಇಂದಿರಾ ಅವರ ಬೆಂಬಲಕ್ಕೆ ನಿಂತದ್ದು ಅರಸು ಅವರ ರಾಜಕೀಯ ಬದುಕಿನ ಮಹತ್ವದ ನಿರ್ಧಾರ. ಎಡಪಂಥೀಯ ಆರ್ಥಿಕ ನೀತಿಯ ಕಡೆ ವಾಲಿದ್ದ ಇಂದಿರಾ ಗಾಂಧಿಯವರು ಆ ಕಾಲದಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣ, ರಾಜಧನ ರದ್ದತಿ, ಗರೀಬಿ ಹಟಾವೋದಂತಹ ಕಾರ್ಯಕ್ರಮಗಳನ್ನು ಒಂದರ ಮೇಲೊಂದರಂತೆ ಜಾರಿಗೊಳಿಸಿದ್ದರು. ಈ ಕಾರಣದಿಂದಾಗಿ ಅರಸು ಅವರಿಗೂ ಬಡತನ ಮತ್ತು ಅಸಮಾನತೆ ನಿವಾರಣೆಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಬೆಂಬಲ ಸಿಕ್ಕಂತಾಗಿತ್ತು.

ಅರಸು ಅವರೊಬ್ಬರನ್ನು ಹೊರತುಪಡಿಸಿದರೆ ಆ ಕಾಲದಲ್ಲಿದ್ದ ಕಾಂಗ್ರೆಸ್ ಪಕ್ಷದ ಬೇರೆ ಯಾವ ಮುಖ್ಯಮಂತ್ರಿಯೂ ಸಾಮಾಜಿಕ ನ್ಯಾಯದ ರಾಜಕಾರಣದ ಬಗ್ಗೆ ಯೋಚನೆಯನ್ನೂ ಮಾಡಿರಲಿಲ್ಲ. ರಾಜೀವ್ ಗಾಂಧಿಯವರ ಕಾಲದಲ್ಲಿ ಮಂಡಲ್ ಆಯೋಗವನ್ನು ವಿರೋಧಿಸಿದ್ದ ಕಾಂಗ್ರೆಸ್, ನಂತರದ ದಿನಗಳಲ್ಲಿಯೂ ಸಾಮಾಜಿಕ ನ್ಯಾಯದ ರಾಜಕೀಯವನ್ನು ಗಂಭೀರವಾಗಿ ಮಾಡಿರಲೇ ಇಲ್ಲ. ಇಂದಿಗೂ ಆ ಪಕ್ಷದಲ್ಲಿ ಹಿಂದುಳಿದ ಜಾತಿಗೆ ಸೇರಿರುವ ರಾಷ್ಟ್ರಮಟ್ಟದ ನಾಯಕನಿಲ್ಲ. ರಾಹುಲ್ ಗಾಂಧಿಯವರಿಗೆ ಈ ಜ್ಞಾನೋದಯವಾದ ನಂತರ, ಕಳೆದ ಲೋಕಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿ ಜಾತಿ ಗಣತಿ ನಡೆಸುವ ಮತ್ತು ಮೀಸಲಾತಿಯ ಪ್ರಮಾಣ ಹೆಚ್ಚಿಸುವ ಭರವಸೆಗಳನ್ನು ಸೇರಿಸಲಾಗಿದೆ.

ಇದಾದ ನಂತರವೂ ಪಕ್ಷದೊಳಗಿನ ನಾಯಕರ ಒತ್ತಡಕ್ಕೆ ಮಣಿದ ಕಾಂಗ್ರೆಸ್ ಹೈಕಮಾಂಡ್ ರಾಜ್ಯ ಸರ್ಕಾರ ನಡೆಸಿದ್ದ ಶೈಕ್ಷಣಿಕ ಮತ್ತು ಸಾಮಾಜಿಕ ಸಮೀಕ್ಷೆಯ ವರದಿಯನ್ನು ನಿರ್ದಯವಾಗಿ ಕಸದ ಬುಟ್ಟಿಗೆ ಎಸೆಯಿತು. ಹತ್ತು ವರ್ಷಗಳಷ್ಟು ಹಳೆಯದು ಎನ್ನುವುದು ಒಂದು ನೆಪ ಅಷ್ಟೆ. ಜನಸಂಖ್ಯೆಯ ಶೇ 3-4ರಷ್ಟು ಜನಸಂಖ್ಯೆಯ ಸ್ಯಾಂಪಲ್‌ಗಳನ್ನು ಆಧರಿಸಿದ ಸಮೀಕ್ಷೆ ಆಧಾರಿತ ಮೀಸಲಾತಿ ಹೆಚ್ಚುಕಡಿಮೆ ಕಳೆದ 48 ವರ್ಷಗಳಿಂದ ಜಾರಿಯಲ್ಲಿ ಇರುವಾಗ, ಹತ್ತು ವರ್ಷಗಳಷ್ಟು ಹಳೆಯದಾದ ಸಮೀಕ್ಷೆಯನ್ನು ತಿರಸ್ಕರಿಸುವಂತಹದ್ದು ಏನಿತ್ತು?

'ಇಂತಹ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜಾತಿ ಗಣತಿ ವರದಿಯನ್ನು ಬಲವಾಗಿ ಸಮರ್ಥಿಸಿಕೊಳ್ಳಬೇಕಿತ್ತು, ಅನಿವಾರ್ಯ ಆದರೆ ಪದತ್ಯಾಗಕ್ಕೂ ಸಿದ್ಧರಾಗಬೇಕಿತ್ತು' ಎನ್ನುವುದು ಅವರ ಅಭಿಮಾನಿಗಳ ಅಭಿಮತ. ಇಂತಹ ನಿರೀಕ್ಷೆಯನ್ನು ಸಾಕಾರಗೊಳಿಸುವ ಕಾಲ ಈಗ ಕೂಡಿ ಬಂದಿದೆ. ದೇವರಾಜ ಅರಸು ಅವರ ಆಡಳಿತಾವಧಿಯ ದಾಖಲೆಯನ್ನು ಮುರಿದಿರುವ ಸಿದ್ದರಾಮಯ್ಯನವರು, ಅರಸು ಅವರಿಗೆ ಸಾಮಾಜಿಕ ನ್ಯಾಯದ ಮೇಲಿದ್ದ ಬದ್ಧತೆಯ ದಾಖಲೆಯನ್ನು ಸರಿಗಟ್ಟುವ ದಿಟ್ಟತನವನ್ನು ತೋರಬೇಕು. ಅದು ಜಾತಿ ಗಣತಿ ವರದಿಯ ಸ್ವೀಕಾರದಿಂದಲೇ ಶುರುವಾಗಲಿ.



ವಾಚಕರ ವಾಣಿ

ಮರ್ಯಾದೆಗೇಡು: ಕಠಿಣ ಕಾನೂನು ಬೇಕು

ಪ್ರೀತಿ, ಮದುವೆಯಂತಹ ವೈಯಕ್ತಿಕ ನಿರ್ಧಾರದಲ್ಲಿ ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಹಸ್ತಕ್ಷೇಪ ಮಾಡುವುದು ಮಾತ್ರವಲ್ಲದೆ, ಸ್ವಂತ ಮಕ್ಕಳನ್ನೇ ಕೊಲೆ ಮಾಡುವ ಹಂತಕ್ಕೆ ಪೋಷಕರು ಮುಂದಾಗುತ್ತಿರುವುದು ಆತಂಕಕಾರಿ. ಸುಪ್ರೀಂ ಕೋರ್ಟ್ ಈ ಹಿಂದೆಯೇ ಮರ್ಯಾದೆಗೇಡು ಹತ್ಯೆಯನ್ನು ಕಟುವಾಗಿ ಟೀಕಿಸಿದೆ. ಪ್ರಬುದ್ಧ ವಯಸ್ಕರು ತಮ್ಮ ಜೀವನ ಸಂಗಾತಿಯನ್ನು ಆರಿಸಿಕೊಳ್ಳುವ ಸಾಂವಿಧಾನಿಕ ಹಕ್ಕು ಹೊಂದಿದ್ದಾರೆ. ಆದರೆ, ಸಮಾಜದಲ್ಲಿ ಇನ್ನೂ ಬೇರೂರಿರುವ ಜಾತಿ ವ್ಯಾಮೋಹ ಅಮಾಯಕ ಜೀವಗಳನ್ನು ಬಲಿ ಪಡೆಯುತ್ತಿದೆ. ಸಾಮಾಜಿಕ ಜಾಗೃತಿಯಿಂದ ಇದನ್ನು ತಡೆಯಲು ಸಾಧ್ಯವಿಲ್ಲ. ಇಂತಹ ಹತ್ಯೆ ತಡೆಗೆ ಕಠಿಣ ಕಾನೂನು ಜಾರಿಗೊಳಿಸಬೇಕಿದೆ. ಆಗಷ್ಟೆ ಕ್ರೂರ ಮನಸ್ಸುಗಳಿಗೆ ಲಗಾಮು ಹಾಕಲು ಸಾಧ್ಯ.

ಲಾವಣ್ಯ ಬಿ.ಜೆ., ಚಿಕ್ಕಮಗಳೂರು

ಫಾತಿಮಾ: ಮೌನಕ್ರಾಂತಿಯ ಸಂಕೇತ

19ನೇ ಶತಮಾನವೆಂದರೆ ಸಾಮಾಜಿಕ ಕಟ್ಟುಪಾಡುಗಳು ಉತ್ತುಂಗದಲ್ಲಿದ್ದ ಕಾಲಘಟ್ಟ. ಮಹಿಳೆಯರಿಗೆ ಶಿಕ್ಷಣ ನೀಡಿದರೆ ಪಾಪವೆಂದು ತೀರ್ಮಾನಿಸಿದ್ದ ಕಾಲವದು. ಅಂತಹ ಸಂದರ್ಭದಲ್ಲಿ ಫಾತಿಮಾ ಶೇಖ್ ಶಿಕ್ಷಣದ ಹಕ್ಕನ್ನು ಪ್ರತಿಪಾದಿಸಿದರು (ಜನವರಿ 9 ಅವರ ಜನ್ಮದಿನ). ಅವರು ಭಾರತದ ಮೊದಲ ಮುಸ್ಲಿಂ ಮಹಿಳಾ ಶಿಕ್ಷಕಿ. ಸಾವಿತ್ರಿಬಾಯಿ ಫುಲೆ ಮತ್ತು ಜ್ಯೋತಿಬಾ ಫುಲೆ ಅವರ ಜೊತೆಯಲ್ಲಿ ದಲಿತರು, ಹೆಣ್ಣುಮಕ್ಕಳು ಹಾಗೂ ಹಿಂದುಳಿದ ಸಮುದಾಯಗಳಿಗೆ ಶಿಕ್ಷಣದ ಬೆಳಕನ್ನು ತಲಪಿಸಿದ ಮಹಾನ್ ಹೋರಾಟಗಾರ್ತಿ. ಫಾತಿಮಾ ಬರೀ ಒಂದು ಹೆಸರಲ್ಲ; ಶಿಕ್ಷಣದ ಮೂಲಕ ಸಮಾಜವನ್ನು ಬದಲಾಯಿಸಿದ ಮೌನಕ್ರಾಂತಿ.

ಎಚ್. ನಾಗಮ್ಮ ಭಂಡಾರ್, ಹೊಸಪೇಟೆ

ಅಮೆರಿಕ ಧೋರಣೆ: ಜನತಂತ್ರದ ಕಗ್ಗೊಲೆ

ಅಮೆರಿಕವನ್ನು ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೆಂದು ಕೊಂಡಾಡಲಾಗುತ್ತಿತ್ತು. ಈಗ ಟ್ರಂಪ್ ವರ್ತನೆ ಕಾರಣದಿಂದಾಗಿ ಅಪಹಾಸ್ಯಕ್ಕೀಡಾಗುತ್ತಿದೆ. ಮಾದಕವಸ್ತುಗಳ ಕಳ್ಳ ಸಾಗಾಣಿಕೆಯ ನೆಪವೊಡ್ಡಿ ವೆನೆಜುವೆಲಾದ ಅಧ್ಯಕ್ಷರನ್ನು ಮಿಲಿಟರಿ ಕಾರ್ಯಾಚರಣೆ ನಡೆಸಿ ಬಂಧಿಸಿದೆ. ಮೊದಲೆಲ್ಲಾ ಜಗತ್ತಿನ ಎಲ್ಲಿಯಾದರೂ ಪ್ರಜಾಪ್ರಭುತ್ವಕ್ಕೆ ಧಕ್ಕೆ, ಮಾನವ ಹಕ್ಕುಗಳ ಉಲ್ಲಂಘನೆ, ಭಯೋತ್ಪಾದಕ ಕೃತ್ಯ ನಡೆದರೆ ಅದರ ವಿರುದ್ಧ ಧ್ವನಿ ಎತ್ತುತ್ತಿದ್ದ ಅಮೆರಿಕ 'ದೊಡ್ಡಣ್ಣ' ಎಂಬ ಬಿರುದು ಪಡೆದಿತ್ತು. ಈಗ ಅದರ ಧೋರಣೆಯಿಂದ ಜನತಂತ್ರ ವ್ಯವಸ್ಥೆಯ ಕಗ್ಗೊಲೆಯಾಗುತ್ತಿದೆ.

ಹೊಸಮನೆ ವೆಂಕಟೇಶ, ಟಿ. ನರಸೀಪುರ

ಸ್ಮಾರ್ಟ್‌ಫೋನ್ ಗೀಳು; ಆರೋಗ್ಯ ಹಾಳು

ಆತಂಕ, ಖಿನ್ನತೆ, ಒತ್ತಡದಿಂದ ಬಳಲುತ್ತಿರುವ ವ್ಯಕ್ತಿಗಳು, ಅನಿಯಂತ್ರಿತವಾಗಿ ಅಶ್ಲೀಲ ವಿಡಿಯೊ ವೀಕ್ಷಿಸುತ್ತಾರೆ ಎಂಬುದು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ ಅಧ್ಯಯನದಿಂದ ದೃಢಪಟ್ಟಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಮಕ್ಕಳಿಗೆ ಮೊಬೈಲ್‌ನಲ್ಲಿನ ವಿಡಿಯೊ ತೋರಿಸದಿದ್ದರೆ ಊಟವನ್ನೂ ಮಾಡುವುದಿಲ್ಲ. ಮೊಬೈಲ್ ಕೊಡಿಸಿಲ್ಲವೆಂದು ಪೋಷಕರ ಮೇಲೆ ಹಲ್ಲೆ ನಡೆಸಿದ ಘಟನೆ ಹಾಗೂ ಆತ್ಮಹತ್ಯೆ ಮಾಡಿಕೊಂಡ ನಿದರ್ಶನಗಳಿವೆ. ಈ ಮೊಬೈಲ್ ಗೀಳು ಮಕ್ಕಳಿಗೆ ಮಾನಸಿಕ ಕಾಯಿಲೆಯಾಗಿ ಪರಿಣಮಿಸುತ್ತದೆ.

ವಸಂತ ಕುಮಾರ್ ಸಿ., ಚಿತ್ರದುರ್ಗ

'ಘಟ್ಟದಜೀವ'ದ ಹೋರಾಟ ಮುಂದುವರಿಸಿ

ಮಾಧವ ಗಾಡ್ಗೀಳ್ ಅವರು ಪಶ್ಚಿಮಘಟ್ಟಗಳ ಸಂರಕ್ಷಣೆಗೆ ಆಜೀವಪರ್ಯಂತ ಹೋರಾಡಿದ ಮಹನೀಯರು. ಅವರನ್ನು ಆಧುನಿಕ ಕಾಲದ 'ಭೀಷ್ಮ' ಎಂದು ಕರೆದರೂ ಅತಿಶಯೋಕ್ತಿಯಲ್ಲ. ಪಶ್ಚಿಮಘಟ್ಟಗಳ ಬಗ್ಗೆ ಒಬ್ಬ ಪ್ರೇಮಿಯಂತೆ ಭಾವನಾಲೋಕದಲ್ಲಿ ವಿಹರಿಸುತ್ತಾ ಕೂರದೇ ಅದರ ಸಂರಕ್ಷಣೆಯು ಜೀವಿತದ ಗುರಿಯೆಂದು ತಿಳಿದು ಹೋರಾಟಕ್ಕಿಳಿದರು. ಘಟ್ಟದ ಪರಿಸರದಲ್ಲಿ ಬಾಳಿ ಬದುಕಿದ ಜನಸಮುದಾಯದ ಕಷ್ಟಕಾರ್ಪಣ್ಯ ತಿಳಿದು ಅಹರ್ನಿಶಿ ಹೋರಾಡಿದರು. ಆದರೆ ಸರ್ಕಾರಗಳಾಗಲೀ ಬುದ್ಧಿವಂತರಾಗಲೀ ಅವರ ಸೇವೆಯನ್ನು ಪುರಸ್ಕರಿಸದೆ ಟೀಕೆ ಮಾಡುತ್ತಾ ಕುಳಿತರು. ಇಂಥ ಕಾರ್ಯನಿಷ್ಠ ಯೋಧರು ನಮ್ಮ ಭಾಗ್ಯದಲ್ಲಿ ಇರಲು ಸಾಧ್ಯವೇ? ಅವರ ಹೋರಾಟವನ್ನು ಮುಂದುವರಿಸಬೇಕಿದೆ.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಕಸಾಪ ಅಧ್ಯಕ್ಷರಿಗೆ ವಿಚಾರಣೆಗೇಕೆ ಭಯ?

'ನನ್ನ ವಿರುದ್ಧ ನಡೆಯುತ್ತಿರುವ ವಿಚಾರಣೆಯು ನಿಷ್ಪಕ್ಷಪಾತವಾಗಿ ನಡೆಯುವ ಬಗ್ಗೆ ಅನುಮಾನವಿದೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅಲವತ್ತುಕೊಂಡಿದ್ದಾರೆ. ಅವರಿಗೆ ಈ ಅನುಮಾನ ಏಕೆ ಬಂತು? ಅವರಲ್ಲಿ ಖರ್ಚಿನ ಎಲ್ಲಾ ದಾಖಲೆಗಳೂ ಇದ್ದಾಗ ಹೆದರುವ ಅಗತ್ಯವಾದರೂ ಏನಿದೆ? ವಿಚಾರಣೆ ವ್ಯತಿರಿಕ್ತವಾಗಿ ಬಂದರೂ ದಾಖಲೆಗಳು ಸರಿಯಾಗಿದ್ದರೆ ನ್ಯಾಯಾಲಯದಲ್ಲಿ ಪ್ರಶ್ನಿಸಬಹುದಲ್ಲವೇ? ಅಧ್ಯಕ್ಷರು ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡಿಲ್ಲ; ಬಹುಮತದ ನಂತರ ಚಟುವಟಿಕೆಗಳು ಜಾರಿಗೆ ಬಂದಿವೆಯೆಂದು ಹೇಳುತ್ತಿದ್ದಾರೆ. ಇದು ನಿಜವೇ ಆಗಿದ್ದರೆ, ಎಲ್ಲಾ ಜಿಲ್ಲಾ ಅಧ್ಯಕ್ಷರನ್ನೂ ಸೇರಿಸಿಕೊಂಡು ಮಾಧ್ಯಮಗಳ ಮುಂದೆ ಹೇಳಿಕೆ ನೀಡಬಹುದಲ್ಲವೆ?

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಜಿಡಿಪಿ ಮತ್ತು ಜೀವನದ ಗುಣಮಟ್ಟ

ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಶೇ 7.4ರಷ್ಟು ಪ್ರಗತಿ ದಾಖಲಿಸಲಿದೆ ಎಂದು ಕೇಂದ್ರ ಸರ್ಕಾರ ಅಂದಾಜಿಸಿದೆ. ಜಿಡಿಪಿ ಹೆಚ್ಚಾದ ತಕ್ಷಣ ಜನರು ಅಭಿವೃದ್ಧಿ ಹೊಂದಿದ್ದಾರೆ ಎಂದರ್ಥವೇ? ಪ್ರತಿ ವರ್ಷವೂ ಜಿಡಿಪಿ ಏರುಗತಿಯಲ್ಲಿದೆ. ಆದರೆ, ಇಂದಿಗೂ ಬಡತನ, ನಿರುದ್ಯೋಗ, ಅನಕ್ಷರತೆ ಇದೆ. ಜಿಡಿಪಿ ಆಧಾರದ ಮೇಲೆ ದೇಶದ ನಿಜವಾದ ಪ್ರಗತಿಯನ್ನು ಬಿಂಬಿಸುವುದರಲ್ಲಿ ಅರ್ಥವಿಲ್ಲ. ಜನರ ಜೀವನಮಟ್ಟ ಸುಧಾರಣೆಯಾದಾಗಷ್ಟೆ ದೇಶದ ಪ್ರಗತಿ ಸಾಧ್ಯ.

ರಾಹುಲ್ ಹಂಚಿನಾಳ, ದಾಂಡೇಲಿ

ಚುರುಮುರಿ



ಕೋಳಿಕೆ ಮಂಗ!

● ತುರುವೇಕೆರೆ ಪ್ರಸಾದ್

ತರ್ಲೇಕ್ಯಾತ್ನಳ್ಳಿ ತಿಪ್ಪೇಲಿ ಕೋಳಿಗಳ ತುರ್ತು ಸಭೆ ನಡೀತಿತ್ತು. 'ಜನ ಮಾತೆತ್ತಿದ್ರೆ ನಮ್ಮನ್ನ ಕಚಕ್ ಅನ್ಸಿ ಕಬಾಬ್ ಮಾಡ್ಕಂಡು ತಿಂತಾರೆ' ಪೇಚಾಡಿತು ಬ್ರಾಯ್ಲರ್.

'ನಿಮ್ದು ಬಿಡಿ, ಈ ರಾಜಕೀಯದೋರಂತೂ ನಾಟಿ ಕೋಳಿ ಸಾರು ಅಂತ ನಮ್ ಕತ್ ಕುಯ್ಯೋಕೆ ಕತ್ತಿ ಮಸ್ಕಂಡು ನಿಂತಿರ್‍ತಾರೆ' ಅಂತು ನಾಟಿ ಹುಂಜ.

'ಕೋಳಿ ಕೇಳಿ ಮಸಾಲೆ ಅರೀತಾರಾ? ಅಂತ ಗಾದೇನೆ ಮಾಡ್ಕಂಡ್ ಬುಟ್ಟವ್ರೆ. ಕೋಳಿ ಕೇಸ್ ಅಂದ್ರೆ ಲೆಕ್ಕಕ್ಕೇ ಇಲ್ಲ. ನಾವು ಅಂದ್ರೆ ಅಷ್ಟು ಸದರಾನ?' ಗುರ್ರಂತು ಹ್ಯಾಟೆಮ್ಮ.

'ಇವರೂ ಒಂತರಾ ನಮ್ ಅಣ್ತಮ್ಮಗಳಿದ್ದಂಗೆ! ಸೆಶನ್ನಲ್ಲೇ ಕೋಳಿ ನಿದ್ದೆ ಮಾಡ್ತಾರೆ. ಕಾಲ್ ಕೆರ್ಕಂಡು ಕೋಳಿ ಜಗಳ ಆಡ್ತಾರೆ. ಹುಂಜ, ನೀನು ಸಿಕ್ಕಿದಷ್ಟು ಗುಂಜ ಅಂತ ಪಕ್ಕದೋರ ಪುಕ್ಕ ತರೀತಾರೆ. ಬೇಡದ್ದಕ್ಕೆಲ್ಲಾ ತಿಪ್ಪೆ ಕೆದಕ್ತಾರೆ' ಅಂತು ಕಾಕ್ರೆಲ್.

'ಹೌದೌದು, ಏನಾದ್ರೂ ಎಡವಟ್ಟಾಯ್ತು ಅಂದ್ರೆ ನಾವು ಬೇಲಿ, ಕಾಂಪೌಂಡ್ ಹಾರ್‍ದಂಗೆ ಇವರೂ ಪುರ್ ಅಂತ ಪಕ್ಷದಿಂದ ಪಕ್ಷಕ್ಕೆ ಹಾರ್‍ತಾರೆ. ಸ್ವಜನ ಅನ್ನೋ ಸ್ವಲ್ಪನಾದ್ರೂ ಅಭಿಮಾನ ಬೇಡ್ವಾ?' ಅಂತು ರೂಸ್ಟರ್.

'ನಮ್ ಕೀರ್ತಿನ ತಿಪ್ಪಾರಳ್ಳಿ ಕಿಲಾಡಿ ಹುಂಜ ಕೈಲಾಸಂ ಕೋಳಿಕೆ ರಂಗಾ ಅಂತ ಹಾಡಿ ಇಂಗ್ಲೆಂಡಲ್ಲೆಲ್ಲ ಬೆಳಗಿದ್ರು. ಈಗ ನೋಡುದ್ರೆ ನಾವು 'ಕಾನ್‌ಸ್ಟಾಂಟಿನೋಪಲ್' ಹೋಗಿ 'ಇನ್‌ಸ್ಟಾಂಟ್ ಕೋಳಿ ಪಲಾವ್' ಆಗೋಗಿದೀವಿ. ಇದಕ್ಕೆಲ್ಲಾ ಕಾರಣ ನಾವು ದನಿ ಎತ್ತದೇ ಸುಮ್ನಿರೋದು' ಅಂತು ಕೊರಕನಾಥ.

'ಸುಮ್ಕಿರಲೇ ಕೋಳಿಕೇ ಮಂಗ! ಧ್ವನಿ ಎತ್ತೇ ನಾವು ಹಾಳಾಗಿರೋದು. ರಾಜಕೀಯದೋರಿಗೆ ಕೊ... ಕ್ಕೋ... ಅಂದ್ರೆ ಮುಂದಿನೋರಿಗೆ ಕೋ ಅಂತ ಅಧಿಕಾರ ದಾಟ್ಸೋದು ಆಗ್ಬರಲ್ಲ. ನಾವು ಬೆಳ್‌ಬೆಳಗ್ಗೆ ಕೊ... ಕ್ಕೊ... ಕ್ಕೋ ಅಂತ ಕೂಗುದ್ರೆ ಕೊಚ್ಚಾಕ್ದೆ ಇನ್ನೇನ್ ಮಾಡಾರು?' ಬೂರಜ್ಜ ಬೈದ.

ಅಜ್ಜಿ ಕೋಳಿಗಳೆಲ್ಲಾ ಅವಾಕ್ಕಾಗಿ ಕಣ್ ಕಣ್ ಬಿಟ್ಟವು.

ಸಂಗತ

ಯುದ್ಧಗಳ ಹೇಷಾರವ; ಶಾಂತಿ ಮರೀಚಿಕೆ

ಯುದ್ಧ ಭೀತಿಯ ದಟ್ಟ ನೆರಳು ಇಡೀ ವಿಶ್ವವನ್ನು ಕಾಡುತ್ತಿದೆ. ವಿಶ್ವಸಂಸ್ಥೆ ದುರ್ಬಲ ಆಗಿರುವ ಹೊತ್ತಲ್ಲಿ ಹೆಚ್ಚುತ್ತಿರುವ ಯುದ್ಧಗಳು ನಾಗರಿಕತೆಯ ಅಣಕದಂತಿವೆ.

● ಸುಧೀರ್ ಕೀಳಂಬಿ

ಹೊಸ ಕ್ಯಾಲೆಂಡರ್ ವರ್ಷ 2026ರ ಮೊದಲ ದಿನಗಳೇ ಜಗತ್ತಿಗೆ ಅಶಾಂತಿಯ ಸೂಚನೆ ನೀಡಿವೆ. ವೆನೆಜುವೆಲಾ ಮೇಲಿನ ಅಮೆರಿಕ ದಾಳಿ ಜಾಗತಿಕ ರಾಜಕೀಯವನ್ನು ಮತ್ತೊಮ್ಮೆ ಕದಡಿದೆ; ಹೊಸ ಯುದ್ಧದ ಭೀತಿ ಮರುಕಳಿಸುವ ಸಾಧ್ಯತೆಯನ್ನು ಹೆಚ್ಚಿಸಿದೆ. ಶಾಂತಿ ಮತ್ತು ಸೌಹಾರ್ದ ಬಯಸುವವರಿಗೆ ಇದು ಹೊಸ ಆತಂಕದ ಆರಂಭ.

ಮಾನವಕುಲ ಈಗಾಗಲೇ ಎರಡು ಮಹಾಯುದ್ಧಗಳ ಕ್ರೌರ್ಯವನ್ನು ಅನುಭವಿಸಿದೆ. ಪ್ರಥಮ ಮಹಾಯುದ್ಧದಲ್ಲಿ ನಾಲ್ಕು ಕೋಟಿ ಹಾಗೂ ದ್ವಿತೀಯ ಮಹಾಯುದ್ಧದಲ್ಲಿ ಏಳರಿಂದ ಎಂಟೂವರೆ ಕೋಟಿ ಜನರು ಪ್ರಾಣ ಕಳೆದುಕೊಂಡಿರಬಹುದೆಂಬ ಅಂದಾಜು ಇದೆ. ಇಂತಹ ದುರಂತ ಮರುಕಳಿಸದಿರಲೆಂಬ ಆಶಯದಿಂದಲೇ 1945ರಲ್ಲಿ ವಿಶ್ವಸಂಸ್ಥೆ ಸ್ಥಾಪಿಸಲಾಯಿತು. 'ಮುಂದಿನ ಪೀಳಿಗೆಯನ್ನು ಯುದ್ಧದ ವಿಪತ್ತಿನಿಂದ ರಕ್ಷಿಸುವುದು' ಎಂಬ ಅದರ ಮುನ್ನುಡಿಯಲ್ಲಿನ ಪದಪುಂಜ ವಿಶ್ವಕ್ಕೆ ಭರವಸೆ ನೀಡಿತ್ತು.

ಇಂದಿನ ವಾಸ್ತವ ಬೇರೆಯದೇ ಕಥೆ ಹೇಳುತ್ತದೆ. ಓಸ್ಲೋ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಪ್ರಕಾರ, ವಿಶ್ವಸಂಸ್ಥೆ ಸ್ಥಾಪನೆಯ ನಂತರದ ಅತ್ಯಂತ ಹಿಂಸಾತ್ಮಕ ವರ್ಷವಾದ 2024ರಲ್ಲಿ 36 ದೇಶಗಳಲ್ಲಿ 61 ಯುದ್ಧಗಳು ನಡೆದಿವೆ. 2025ರ ಕಥೆಯೂ ಭಿನ್ನವಾಗೇನೂ ಇಲ್ಲ.

ಯುದ್ಧದಲ್ಲಿ ಕಾದಾಡುತ್ತಿರುವ ಬಣಗಳು ನಾಗರಿಕರ ರಕ್ಷಣೆಯನ್ನು ಮಾಡಬೇಕೆಂದು, ಶಾಲೆ ಮತ್ತು ಆಸ್ಪತ್ರೆಯಂಥ ಸ್ಥಳಗಳ ಮೇಲೆ ದಾಳಿ ಮಾಡಬಾರದೆಂದು, ಕೈದಿಗಳನ್ನು ಮತ್ತು ಗಾಯಗೊಂಡವರನ್ನು ಹೇಗೆ ನಡೆಸಿಕೊಳ್ಳಬೇಕು ಎಂಬುದನ್ನು, ಯುದ್ಧದಲ್ಲಿ ಯಾವ ಅಸ್ತ್ರಗಳನ್ನು (ರಾಸಾಯನಿಕ, ಜೈವಿಕ) ಬಳಸಬಾರದೆಂಬುದನ್ನು, ಹೀಗೆ ಹತ್ತು ಹಲವು ನೀತಿ ನಿಯಮಗಳನ್ನು 'ಅಂತರರಾಷ್ಟ್ರೀಯ ಯುದ್ಧ ಕಾನೂನು' ಹೇಳಿದೆ. ಇವೆಲ್ಲ ಕಾನೂನುಗಳು ಮುಖ್ಯವಾಗಿ 'ಜಿನೀವಾ ಒಪ್ಪಂದ'ಗಳೆಂದೇ ಪ್ರಖ್ಯಾತವಾಗಿವೆ. ಈ ಕಾನೂನುಗಳ ಪಾಲನೆಯ ಜವಾಬ್ದಾರಿಯನ್ನು ಅಂತರರಾಷ್ಟ್ರೀಯ ರೆಡ್‌ಕ್ರಾಸ್ ಸಂಸ್ಥೆಗೆ ನೀಡಲಾಗಿದೆ. ದುರದೃಷ್ಟವಶಾತ್, ಕದನಗಳಲ್ಲಿ ಹಲವು ಬಾರಿ ಈ ನಿಯಮಗಳ ಸ್ಪಷ್ಟ ಉಲ್ಲಂಘನೆ ಆಗುತ್ತಲೇ ಇದೆ.

ಹೊನ್ನು, ಮಣ್ಣು, ಹೆಣ್ಣನ್ನು ಯುದ್ಧ ಕಾರಣಗಳಾಗಿ ಈ ಮೊದಲು ಉಲ್ಲೇಖಿಸಲಾಗುತ್ತಿತ್ತು. ಇಂದಿನ ಜಗತ್ತಿನಲ್ಲಿ ತೈಲ, ಖನಿಜ, ಅತಿಯಾದ ರಾಷ್ಟ್ರಪ್ರೇಮ, ಧರ್ಮ, ಅಸುರಕ್ಷತೆ – ಇವೆಲ್ಲವೂ ಯುದ್ಧಕ್ಕೆ ಕಾರಣಗಳಾಗಿವೆ. ಯುದ್ಧಗಳು ರಾಷ್ಟ್ರಗಳ ನಡುವೆ ಮಾತ್ರವಲ್ಲ, ಬಣಗಳ ನಡುವೆ, ಬಂಡುಕೋರರ ನಡುವೆ, ಗೆರಿಲ್ಲಾ ಮತ್ತು ಛದ್ಮ ಸಂಘರ್ಷಗಳ ರೂಪದಲ್ಲೂ ನಡೆಯುತ್ತಿವೆ. ರಣರಂಗ ಎಂಬ ಕಲ್ಪನೆಯೇ ಈಗ ಬದಲಾಗಿದ್ದು, ನಾಗರಿಕರ ವಾಸಸ್ಥಳಗಳು, ವಿದ್ಯುತ್‌ಕೇಂದ್ರಗಳು, ಸರ್ಕಾರಿ ಕಟ್ಟಡಗಳೇ ದಾಳಿಯ ಗುರಿಯಾಗುತ್ತಿವೆ. ಸೈಬರ್ ದಾಳಿ, ಮಾಹಿತಿ ಯುದ್ಧ ಹಾಗೂ ಆರ್ಥಿಕ ನಿರ್ಬಂಧಗಳು, ಆಯುಧವಿಲ್ಲದೇ ಹೆಚ್ಚು ಪರಿಣಾಮ ಬೀರುವ ಹೊಸ ಯುದ್ಧಗಳಾಗಿವೆ. ಯುದ್ಧವು ಬರೀ ಸಾವು ನೋವನ್ನಷ್ಟೇ ಅಲ್ಲ, ಲಕ್ಷಾಂತರ ಜನರನ್ನು ನಿರಾಶ್ರಿತರನ್ನಾಗಿ ಮಾಡುತ್ತದೆ. ಆರೋಗ್ಯ, ಶಿಕ್ಷಣ ಸೇರಿದಂತೆ ಮೂಲಸೌಕರ್ಯಗಳನ್ನು ನಾಶಮಾಡುತ್ತದೆ. ಯುದ್ಧೋತ್ತರ ಮಾನಸಿಕ ಆಘಾತಗಳು, ಬಡತನ, ಸಾಮಾಜಿಕ ವಿಭಜನೆಗಳು ತಲೆಮಾರುಗಳನ್ನು ಕಾಡುತ್ತವೆ. ಇತ್ತೀಚಿನ ಉದಾಹರಣೆಯನ್ನೇ ನೋಡುವುದಾದರೆ, 1.3 ಕೋಟಿ ಜನ ಸಿರಿಯಾದ ಯುದ್ಧದಲ್ಲಿ ನಿರಾಶ್ರಿತರಾದರು. ವಿಯೆಟ್ನಾಂ ಮತ್ತು ಬೋಸ್ನಿಯಾದ ಯುದ್ಧದ ನಂತರ ಲಕ್ಷಾಂತರ ಜನರು ಮಾನಸಿಕ ಕ್ಷೋಭೆಗೊಳಗಾದರು. ಇರಾಕ್ ಯುದ್ಧದ ಪರಿಣಾಮ ಆದ ಪರಿಸರ ಹಾನಿ ಇನ್ನೂ ಸರಿಯಾಗಿಲ್ಲ.



ಯುದ್ಧವನ್ನು ತಡೆಯಲು ಮೊದಲ ಹೆಜ್ಜೆ, ಹಿಂಸಾತ್ಮಕ ಮನೋಭಾವದಿಂದ ಹೊರಬರುವುದಾಗಿದೆ. ಮಹಾತ್ಮ ಗಾಂಧೀಜಿಯವರು ಹೇಳಿದಂತೆ, 'ನಿಜವಾದ ಶಾಂತಿಯನ್ನು ಬೋಧಿಸಲು ಬಯಸಿದರೆ, ಮಕ್ಕಳ ಬಳಿಯಿಂದಲೇ ಆರಂಭಿಸಬೇಕು.' ಜಗತ್ತಿನ ಪ್ರತಿಯೊಂದು ಮಗುವಿಗೂ ಶಾಂತಿಯ ಮೌಲ್ಯಗಳನ್ನು ಕಲಿಸುವುದು ಅಗತ್ಯ. ಶತಮಾನಗಳ ಹಿಂದೆ ಕಳಿಂಗ ಯುದ್ಧದ ಸಾವು ನೋವು ನೋಡಿ ಯುದ್ಧ ತ್ಯಜಿಸಿದ ಅಶೋಕ ಇಂದಿನ ನಾಯಕರಿಗೆ ಮಾದರಿ.

ಅಸಮಾನತೆ, ಪ್ರತ್ಯೇಕತೆ, ಸಂಪನ್ಮೂಲ ಕೊರತೆಯಂತಹ ಸಂಘರ್ಷದ ಮೂಲ ಕಾರಣಗಳನ್ನು ಪರಿಹರಿಸದೆ ಶಾಂತಿ ಸಾಧ್ಯವಿಲ್ಲ. ರಾಜತಾಂತ್ರಿಕ ಮಾತುಕತೆ, ಸಂವಾದ ಹಾಗೂ ಸಮನ್ವಯಕ್ಕೆ ಹೆಚ್ಚಿನ ಮಹತ್ವ ನೀಡಬೇಕಾಗಿದೆ.

1945ರಲ್ಲಿ ಜಗತ್ತಿನ ಶಾಂತಿ ಅಗತ್ಯಗಳಿಗೆ ತಕ್ಕಂತೆ ರಚನೆಯಾಗಿದ್ದ ವಿಶ್ವಸಂಸ್ಥೆ ನಿರೀಕ್ಷಿತ ಸುಧಾರಣೆ ಕಾಣದೇ ಸೊರಗುತ್ತಿದೆ. ಕೆಲವೇ ಪಟ್ಟಭದ್ರ ಹಿತಾಸಕ್ತಿಗಳ ಅಡ್ಡೆಯಾಗಿ ಮಾರ್ಪಟ್ಟಿದೆ. ಹಾಗಾಗಿ ವಿಶ್ವಸಂಸ್ಥೆಯನ್ನು ಬಲಪಡಿಸುವುದು ಇಂದಿನ ತುರ್ತು ಅಗತ್ಯ. ಭಾರತದಂತಹ ಪ್ರಭಾವಿ ರಾಷ್ಟ್ರಕ್ಕೆ ಭದ್ರತಾ ಮಂಡಳಿಯ ಕಾಯಂ ಸದಸ್ಯತ್ವ ನೀಡಬೇಕು. ವಿಟೊ ಅಧಿಕಾರವನ್ನು ಮರುಪರಿಶೀಲಿಸಬೇಕು. ಅಂತರರಾಷ್ಟ್ರೀಯ ನ್ಯಾಯಾಲಯ ಮತ್ತು ಅಂತರರಾಷ್ಟ್ರೀಯ ಕಾನೂನಿಗೆ ಹೆಚ್ಚಿನ ಗೌರವ ಮತ್ತು ಬಲ ನೀಡಬೇಕು. ಇದರಿಂದ ಯುದ್ಧವನ್ನು ವ್ಯಾಪಾರದ ಭಾಗವಾಗಿ ಬಳಸುತ್ತಿರುವ ದೇಶಗಳಿಗೆ ಜಾಗತಿಕ ಕಡಿವಾಣ ಬೀಳಬಹುದು.

ವಿಶ್ವ ನಾಯಕರು ತಮ್ಮ ಸ್ವಾರ್ಥವನ್ನು ಬದಿಗಿಟ್ಟು ಯುದ್ಧವನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನಗಳನ್ನು ನಡೆಸದೆ ಹೋದರೆ, ಜಗತ್ತು ಹಿಂಸೆಯ ಕಾವಲಿಯಲ್ಲಿ ಬೇಯುವುದು ತಪ್ಪುವುದಿಲ್ಲ. ವಿನಾಶದ ಕಬಂಧಬಾಹುಗಳ ವ್ಯಾಪ್ತಿ ಎಲ್ಲಿಯವರೆಗೆ ಇರಬಹುದು ಎನ್ನುವುದನ್ನು ಊಹಿಸುವುದೂ ಸಾಧ್ಯವಿಲ್ಲ.

ಲೇಖಕ: ಜಿನೀವಾದಲ್ಲಿನ ಭಾರತದ ಸ್ಥಾಯಿ ಮಿಷನ್‌ನಲ್ಲಿ ಭಾರತದ ರಾಜತಾಂತ್ರಿಕ ಪ್ರತಿನಿಧಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮನರೇಗಾ ಯೋಜನೆಯನ್ನು ವಿಬಿ-ಜಿ ರಾಮ್ ಜಿ ಯೋಜನೆಯಾಗಿ ಬದಲಾಯಿಸಿದ್ದ ಕುರಿತು ಎರಡು ಅಭಿಪ್ರಾಯಗಳು

ಹೇ ರಾಮ್

ಇದು ಉದ್ಯೋಗ ಖಾತ್ರಿಯಲ್ಲ, ಕತ್ತರಿ

● ಪ್ರಿಯಾಂಕ್ ಖರ್ಗೆ



ಇಪ್ಪತ್ತು ವರ್ಷಗಳಿಂದ ಗ್ರಾಮೀಣ ಭಾರತದಲ್ಲಿ ಪ್ರಗತಿಯ ಮನ್ವಂತರಕ್ಕೆ ಕಾರಣವಾಗಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (ಮನರೇಗಾ) ಯೋಜನೆಯನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಮತ್ತು ಸಾರ್ವಜನಿಕವಾಗಿ ಚರ್ಚೆಯನ್ನೇ ನಡೆಸದೆ, ಯಾವುದೇ ರಾಜ್ಯ ಸರ್ಕಾರವನ್ನು ವಿಶ್ವಾಸಕ್ಕೇ ತೆಗೆದುಕೊಳ್ಳದೆ, ಸಾರ್ವಜನಿಕ ವಿಶ್ಲೇಷಣೆ ಇಲ್ಲದಂತೆ 12 ಕೋಟಿ ಕಾರ್ಮಿಕರ ಪ್ರತಿದಿನದ ಬದುಕಾಗಿದ್ದ ಕಾಯ್ದೆಯನ್ನು ಮೂರೇ ದಿನದಲ್ಲಿ ತೆಗೆದುಹಾಕಿ, ಅದರ ಮೂಲ ಉದ್ದೇಶವನ್ನೇ ಹೊಸಕಿ ಹಾಕುವ ಕೆಲಸವನ್ನು ಮಾಡಿಬಿಟ್ಟಿದೆ.

ಉದ್ಯೋಗ ಮತ್ತು ನ್ಯಾಯಯುತ ವೇತನ ಪ್ರತಿ ಗ್ರಾಮೀಣ ಕಾರ್ಮಿಕನ ಹಕ್ಕು ಎಂದು ಪ್ರತಿಪಾದಿಸಿ, ಆ ಹಕ್ಕುಗಳನ್ನು ಒದಗಿಸಿಕೊಟ್ಟಿದ್ದು ಮನರೇಗಾ ಯೋಜನೆ. ಈಗ, ಕೆಲಸ ಮತ್ತು ಕೂಲಿಯು ಕಾರ್ಮಿಕರಿಗೆ ಸಂವಿಧಾನಾತ್ಮಕ ಹಕ್ಕಾಗಿ ಉಳಿದಿಲ್ಲ. ಬದಲಿಗೆ ಅವನ್ನು ಕೇಂದ್ರ ಸರ್ಕಾರದ ಭಿಕ್ಷೆಯನ್ನಾಗಿಸಿರುವುದು ಈ ನೂತನ ಕಾಯ್ದೆ.

ಮನರೇಗಾ ಯೋಜನೆಯಲ್ಲಿ ವರ್ಷದ 365 ದಿನವೂ ಕಾರ್ಮಿಕರು ಉದ್ಯೋಗ ಪಡೆಯುವ ಹಕ್ಕನ್ನು ಹೊಂದಿದ್ದರು. ಬದಲಾದ ಕಾಯ್ದೆಯು ಕಾರ್ಮಿಕರ ಉದ್ಯೋಗ ಭದ್ರತೆಯ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ವರ್ಷದಲ್ಲಿ 60 ದಿನಗಳು ಈ ಯೋಜನೆಯಡಿಯಲ್ಲಿ ಕೆಲಸ ನಿರ್ವಹಿಸುವುದನ್ನು ನಿಷೇಧಿಸಲಾಗಿದೆ. ಆ ದಿನಗಳಲ್ಲಿ ಕಾರ್ಮಿಕರು ಜೀವನೋಪಾಯಕ್ಕೆ ಅರ್ಹ ಮತ್ತು ನ್ಯಾಯಯುತ ಕೂಲಿಗೆ ಬೇಡಿಕೆ ಇಡಲಾಗದೆ, ಶೋಷಣೆಗೆ ಒಳಗಾಗುತ್ತಾರೆ. ಇಂತಹ ಒತ್ತಡದ ಪರಿಸ್ಥಿತಿಯು ಕಾರ್ಮಿಕರನ್ನು ನಗರಗಳಿಗೆ ವಲಸೆ ಹೋಗುವಂತಹ ಅನಿವಾರ್ಯ ಸ್ಥಿತಿಯನ್ನು ನಿರ್ಮಿಸುವುದರಲ್ಲಿ ಅನುಮಾನವಿಲ್ಲ. ಇಷ್ಟೇ ಅಲ್ಲದೆ ಕೇಂದ್ರ ಸರ್ಕಾರದ ಅಧಿಸೂಚನೆಯಿಂದ ಹೊರಗಿರುವ ಪ್ರದೇಶಗಳ ಕಾರ್ಮಿಕರ ಜೀವನೋಪಾಯ ಹೇಗೆ ಎಂಬ ಪ್ರಶ್ನೆಗೆ ಉತ್ತರವಿಲ್ಲ.

ಕಾರ್ಮಿಕರಲ್ಲ, ಗುಲಾಮರು: ಮನರೇಗಾ ಯೋಜನೆಯಲ್ಲಿ ಯಾವುದೇ ಬಗೆಯಲ್ಲಿ ಗುತ್ತಿಗೆದಾರರಿಗೆ ಅವಕಾಶವೇ ಇರಲಿಲ್ಲ, ಹೊಸ ಕಾಯ್ದೆಯಲ್ಲಿ ಗುತ್ತಿಗೆದಾರರಿಗೆ ಪರೋಕ್ಷವಾಗಿ ಅವಕಾಶವನ್ನು ಕಲ್ಪಿಸಲಾಗಿದೆ. ಈ ಯೋಜನೆಯು ಗುತ್ತಿಗೆದಾರರಿಗೆ ಕೂಲಿಯಾಳುಗಳನ್ನು ಒದಗಿಸಿಕೊಡುವ ಯೋಜನೆಯಾಗಿ ಬದಲಾಗಿದೆ.

ಮನರೇಗಾ ಯೋಜನೆಯಲ್ಲಿ ಕನಿಷ್ಠ ಕೂಲಿ ವೇತನ ಕಾಯ್ದೆ 1948ರ ಅನ್ವಯ ಕೂಲಿ ದರವನ್ನು ಪರಿಗಣಿಸಬೇಕು ಎಂಬ ನಿಯಮವಿತ್ತು. ಹಣದುಬ್ಬರ, ಬೆಲೆ ಏರಿಕೆಯಂತಹ ಸಂಗತಿಗಳನ್ನು ಗಮನದಲ್ಲಿರಿಸಿಕೊಂಡು ಕಾಲಕಾಲಕ್ಕೆ ಕನಿಷ್ಠ ಕೂಲಿ ಪರಿಷ್ಕರಿಸಿ ಅಧಿಸೂಚಿಸಲಾಗುತ್ತಿತ್ತು. ಬದಲಾದ ಕಾಯ್ದೆಯಲ್ಲಿ ಕನಿಷ್ಠ ವೇತನ ಕಾಯ್ದೆಯ ಅನ್ವಯ ವೇತನ ದರ ನಿಗದಿಪಡಿಸುವುದರ ಬಗ್ಗೆ ಉಲ್ಲೇಖವೇ ಇಲ್ಲ. ಹಣದುಬ್ಬರಕ್ಕೆ ಅನುಗುಣವಾಗಿ ವೇತನ ಪರಿಷ್ಕರಿಸುವುದರ ಬಾಧ್ಯತೆ ಇರುವುದಿಲ್ಲ. ಕನಿಷ್ಠ ವೇತನ ಎನ್ನುವುದು ಪ್ರತಿ ಕಾರ್ಮಿಕನ ಮೂಲಭೂತ ಹಕ್ಕು. ಅದನ್ನೇ ಅಪ್ರಸ್ತುತಗೊಳಿಸಿರುವ ಎನ್‌ಡಿಎ ಸರ್ಕಾರವು ಕಾರ್ಮಿಕರ ಸುಭದ್ರ ಬದುಕನ್ನು ಕೊನೆಗಾಣಿಸಲು ಮುಂದಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ತಂತ್ರಜ್ಞಾನದ ಬಳಕೆ ಉದ್ಯೋಗ ಖಾತ್ರಿ ಯೋಜನೆಯ ಲಾಭ ಹೆಚ್ಚಿಸುವ, ಜನರನ್ನು ಒಟ್ಟುಗೂಡಿಸುವ ಕೆಲಸ ಮಾಡುತ್ತಿತ್ತು. ಆದರೆ ನೂತನ ಕಾಯ್ದೆಯಲ್ಲಿ ಜಟಿಲ ತಾಂತ್ರಿಕ ವ್ಯವಸ್ಥೆ ಗ್ರಾಮೀಣ ಜನರನ್ನು ಉದ್ಯೋಗದ ಅವಕಾಶದಿಂದ ವಂಚಿಸುವಂತಿದೆ.

> 1948ರ ಜನವರಿ 30ರ ಸಂಜೆ ಮಹಾತ್ಮ ಗಾಂಧಿ ಅವರನ್ನು ತೀವ್ರಗಾಮಿಯೊಬ್ಬ ಗುಂಡಿಕ್ಕಿ ಕೊಲ್ಲುತ್ತಾನೆ. ಇಳಿ ವಯಸ್ಸಿನ ಮಹಾತ್ಮನ ಕೊನೆ ಮಾತು 'ಹೇ ರಾಮ್'. 75 ವರ್ಷಗಳ ನಂತರ, 2025ರ ನವೆಂಬರ್ 18ರಂದು ಲೋಕಸಭೆಯಲ್ಲಿ, 19ರಂದು ರಾಜ್ಯಸಭೆಯಲ್ಲಿ ಚರ್ಚೆಯೇ ಇಲ್ಲದಂತೆ ಅನುಮೋದಿಸಿ, 20ರಂದು ರಾಷ್ಟ್ರಪತಿಯ ಸಹಿಯನ್ನೂ ಹಾಕಿಸಿ ಮೋದಿ ಹೇಳಿದ್ದು 'ಜಿ ರಾಮ್'. ಮಹಾತ್ಮ ತನ್ನ ಕೊನೆಯುಸಿರಲ್ಲಿ 'ಸೀತಾರಾಮ'ನನ್ನು ನೆನೆದರೆ, ಪ್ರಧಾನಿ ಮೋದಿ ತನ್ನ ಅಧಿಕಾರದ ಅಮಲಿನಲ್ಲಿ ಕೈ ಹಿಡಿದಿರುವುದು ಮಹಾತ್ಮನಿಗೆ ಗುಂಡಿಟ್ಟ 'ನಾಥೂರಾಮ'ನನ್ನು

ನಿಯಮಾತ್ಮಕ ಹಂಚಿಕೆ ಎಂಬ ಉರುಳು: ಮನರೇಗಾ ಯೋಜನೆಯಲ್ಲಿ ರಾಜ್ಯವಾರು ಅನುದಾನ ಹಂಚಿಕೆಯ ಬಗ್ಗೆ ಯಾವುದೇ ನಿಯಮಗಳಿರಲಿಲ್ಲ. ಕಾಮಗಾರಿಗಳು ಮತ್ತು ಕೆಲಸದ ಬೇಡಿಕೆಯಷ್ಟೇ ಇದರ ಮಾನದಂಡವಾಗಿತ್ತು. ಅಲ್ಲದೆ ಕೂಲಿ ವೆಚ್ಚವನ್ನು ಸಂಪೂರ್ಣ ಕೇಂದ್ರ ಸರ್ಕಾರ ಭರಿಸುತ್ತಿತ್ತು. ಆದರೆ ಈಗಿನ ಕಾಯ್ದೆಯಲ್ಲಿ ರಾಜ್ಯಗಳಿಗೆ ಹಂಚಿಕೆಯಾದ ಕೂಲಿ, ಸಾಮಗ್ರಿ ಮತ್ತು ಆಡಳಿತ ವೆಚ್ಚಗಳಲ್ಲಿ ಶೇಕಡಾ 60ರಷ್ಟನ್ನು ಮಾತ್ರ ಕೇಂದ್ರ ಸರ್ಕಾರ ಭರಿಸುತ್ತದೆ. ಶೇಕಡ 40ರಷ್ಟು ವೆಚ್ಚವನ್ನು ರಾಜ್ಯ ಸರ್ಕಾರಗಳೇ ಭರಿಸಬೇಕು. ಇದಲ್ಲದೆ, ನಿಯಮಾತ್ಮಕ ಹಂಚಿಕೆಗಿಂತ ಹೆಚ್ಚಿನ ವೆಚ್ಚವಾದಲ್ಲಿ ರಾಜ್ಯ ಸರ್ಕಾರಗಳು ಪೂರ್ಣ ವೆಚ್ಚವನ್ನು ಭರಿಸಬೇಕಾಗುತ್ತದೆ. ಇದು ಒಕ್ಕೂಟ ವ್ಯವಸ್ಥೆಯ ಮೇಲೆ ಮೋದಿ ಸರ್ಕಾರದ ಮತ್ತೊಂದು ಸರ್ಜಿಕಲ್ ಸ್ಟ್ರೈಕ್.

ರಾಜ್ಯಕ್ಕೆ ಬರಬೇಕಾದ ಸಾವಿರಾರು ಕೋಟಿ ರೂಪಾಯಿ ಪರಿಹಾರ ಹಾಗೂ ಅನುದಾನವನ್ನು ಕೋರ್ಟ್ ಮೆಟ್ಟಿಲೇರಿ ನಾವು ಪಡೆಯುವ ಪರಿಸ್ಥಿತಿ ನಿರ್ಮಾಣವಾಗಿರುವ ಈ ಸಂದರ್ಭದಲ್ಲಿ, ನೂತನ 16ನೇ ಹಣಕಾಸು ಆಯೋಗ ರಾಜ್ಯಗಳಿಗೆ ಹಂಚಿಕೆಯಾಗಬೇಕಿರುವ ತೆರಿಗೆ ಕುರಿತು ತನ್ನ ಅಂತಿಮ ವರದಿಯನ್ನು ಸಲ್ಲಿಸಿ 3 ತಿಂಗಳಾದ ನಂತರ, ₹5,000ದಿಂದ ₹6,000 ಕೋಟಿ ಹಣ ಹೊಂದಿಸುವ ಹೊರೆಯನ್ನು ರಾಜ್ಯಗಳ ಮೇಲೆ ಹೇರಿದ್ದು ಬಿಜೆಪಿ ಆಡಳಿತದ ರಾಜ್ಯಗಳಿಗೂ ಮರಣ ಶಾಸನವಿದ್ದಂತೆ. ಈ ನಿಯಮವು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಅಪಾಯಕ್ಕೆ ತಳ್ಳುತ್ತದೆ. ಅಲ್ಲದೆ, ಯಾವುದೇ ರಾಜ್ಯ ತನ್ನ ಹಣಕಾಸಿನ ಸ್ಥಿತಿಯ ನಿರ್ವಹಣೆಗಾಗಿ ಕಾರ್ಮಿಕರು ಕೆಲಸ ಮಾಡಲು ಸಿದ್ಧರಿದ್ದರೂ ಕೆಲಸ ಒದಗಿಸಲಾಗದ ಪರಿಸ್ಥಿತಿ ಎದುರಾಗುತ್ತದೆ.

ಕೆಲಸಕ್ಕೆ 60 ದಿನಗಳ ನಿಷೇಧ, ಕಾರ್ಮಿಕರಿಗೆ ಅರ್ಥವಾಗದ ಕಠಿಣ ತಾಂತ್ರಿಕತೆ, ಗುತ್ತಿಗೆದಾರರಿಗೆ ಅವಕಾಶ, ಅನ್ವಯವಾಗದ ಕನಿಷ್ಠ ವೇತನದ ನಿಯಮ, ಇಲ್ಲದ ಉದ್ಯೋಗದ ಖಾತರಿ, ಇವೆಲ್ಲವೂ ಗ್ರಾಮೀಣ ಕಾರ್ಮಿಕರನ್ನು ಉಳ್ಳವರ ಶೋಷಣೆಯ ಬಾವಿಗೆ ತಳ್ಳುವ ಪ್ರಯತ್ನವಾಗಿದೆ. ಸ್ಥಳೀಯವಾಗಿ ಉದ್ಯೋಗ ಖಾತ್ರಿ ಸಹಾಯಕರು, ಮನರೇಗಾ ಸದಸ್ಯರು ಯೋಜನೆಯ ಅನುಷ್ಠಾನಕ್ಕೆ ಮತ್ತು ಕಾರ್ಮಿಕರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಆದರೆ ಹೊಸ ಕಾಯ್ದೆಯಲ್ಲಿ ಇದರ ಪ್ರಸ್ತಾಪವಿಲ್ಲ, ಮನರೇಗಾ ಸದಸ್ಯರು, ಸಹಾಯಕರಿಗೆ ಅವಕಾಶವಿಲ್ಲ. ಇದು ಗುತ್ತಿಗೆದಾರರಿಗೆ ಅವಕಾಶ ಮಾಡಿಕೊಡುವ ಹುನ್ನಾರಕ್ಕೆ ಪುಷ್ಟಿ ನೀಡುತ್ತದೆ.



ಭಾರತ ಒಕ್ಕೂಟ ವ್ಯವಸ್ಥೆ ಎನ್ನುವುದನ್ನು ಮರೆತಿರುವಂತಿರುವ ಮೋದಿ ಸರ್ಕಾರ, ಕೇಂದ್ರ ಹಾಗೂ ರಾಜ್ಯಗಳ ನಡುವೆ ಅಧಿಕಾರ ಮತ್ತು ತೆರಿಗೆ ಹಂಚಿಕೆಯ ಕುರಿತಾಗಿ ಸ್ಪಷ್ಟವಾದ ಸಂವಿಧಾನದ 258 ಮತ್ತು 280 ವಿಧಿಗಳನ್ನು ಉಲ್ಲಂಘಿಸಿ ನೂತನ ಕಾಯ್ದೆಯನ್ನು ಜಾರಿಗೊಳಿಸಿದೆ. ಇದನ್ನು ಪ್ರತಿಪಾದಿಸಲು ಅವರು ಬಳಸುತ್ತಿರುವ ಅಂಶ 100ರಿಂದ 125ಕ್ಕೆ ಏರಿಕೆಯಾಗಿರುವ ಮಾನವ ದಿನಗಳ ಸಂಖ್ಯೆ ಹಾಗೂ ಕಳೆದ ಹತ್ತು ವರ್ಷಗಳಲ್ಲಿ ನೂರು ಕೋಟಿಗೂ ಹೆಚ್ಚು ಮಾನವ ದಿನಗಳನ್ನು ಸೃಷ್ಟಿಸಿರುವ ಯೋಜನೆ ಕುರಿತು ದಾಖಲಾಗಿರುವ ಕೆಲವು ಲಕ್ಷ ಸಂಖ್ಯೆಯ ದೂರು. ಹತ್ತು ವರ್ಷಗಳಿಂದ ಈ ಸರ್ಕಾರ ಮನರೇಗಾ ಅಡಿಯಲ್ಲಿ ಪ್ರತಿ ಕಾರ್ಮಿಕನಿಗೆ ನೀಡಿರುವ ಸರಾಸರಿ ಮಾನವ ದಿನಗಳ ಸಂಖ್ಯೆ 51 ಅಷ್ಟೇ. ಅಲ್ಲದೆ, ತನ್ನ ಬಜೆಟ್‌ನಲ್ಲಿ ಮನರೇಗಾಕ್ಕೆ ಮೀಸಲಿದ್ದ ಅನುದಾನದಲ್ಲಿ ₹60,000 ಕೋಟಿಗಿಂತ ಹೆಚ್ಚು ಕಡಿತಗೊಳಿಸಿದ್ದೇ ಮೋದಿ ಸರ್ಕಾರ. ದೂರುಗಳ ಸಂಖ್ಯೆಯೇ ಮನರೇಗಾ ಮುಗಿಸುವ, ಜನರ ಜೀವನೋಪಾಯ ಕಸಿಯುವ ಮಾನದಂಡವಾದರೆ, ನಾಳೆಯಿಂದಲೇ ದೇಶದ ಎಲ್ಲಾ ಸರ್ಕಾರಗಳು ಬಾಗಿಲು ಮುಚ್ಚಬೇಕಾಗುತ್ತದೆ. ಈ ಎಲ್ಲಾ ಸತ್ಯಗಳು ಮೋದಿಯ ವಿಬಿ– ಜಿ ರಾಮ್ ಜಿ ಗುಣಗಾನದಲ್ಲಿ ಅಪಥ್ಯ.

1948ರ ಜನವರಿ 30ರ ಸಂಜೆ, ತನ್ನ ಪ್ರತಿದಿನದ ಪ್ರಾರ್ಥನೆ ಮುಗಿಸಿ ಬಿರ್ಲಾ ಹೌಸ್‌ನಿಂದ ಕೆಳಕ್ಕಿಳಿದು ಬರುತ್ತಿದ್ದ ಮಹಾತ್ಮ ಗಾಂಧಿ ಅವರನ್ನು ತೀವ್ರಗಾಮಿಯೊಬ್ಬ ಗುಂಡಿಕ್ಕಿ ಕೊಲ್ಲುತ್ತಾನೆ. ಇಳಿ ವಯಸ್ಸಿನ ಮಹಾತ್ಮನ ಕೊನೆ ಮಾತು 'ಹೇ ರಾಮ್'. 75 ವರ್ಷಗಳ ನಂತರ, ನವೆಂಬರ್ 18, 2025ರಂದು ಲೋಕಸಭೆಯಲ್ಲಿ, 19ರಂದು ರಾಜ್ಯಸಭೆಯಲ್ಲಿ ಚರ್ಚೆಯೇ ಇಲ್ಲದಂತೆ ಅನುಮೋದಿಸಿ, 20ರಂದು ರಾಷ್ಟ್ರಪತಿಯ ಸಹಿಯನ್ನೂ ಹಾಕಿಸಿ ಮೋದಿ ಹೇಳಿದ್ದು 'ಜಿ ರಾಮ್'. ಮಹಾತ್ಮ ತನ್ನ ಕೊನೆಯುಸಿರಲ್ಲಿ 'ಸೀತಾರಾಮ'ನನ್ನು ನೆನೆದರೆ, ಪ್ರಧಾನಿ ಮೋದಿ ತನ್ನ ಅಧಿಕಾರದ ಅಮಲಿನಲ್ಲಿ ಕೈ ಹಿಡಿದಿರುವುದು ಮಹಾತ್ಮನಿಗೆ ಗುಂಡಿಟ್ಟ 'ನಾಥೂರಾಮ'ನನ್ನು.

ಲೇಖಕ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

ಹಳ್ಳಿಗಳ ನಿರ್ಧಾರ ದಿಲ್ಲಿಯಲ್ಲಿ

ಮನರೇಗಾ ಯೋಜನೆಯು ಯಾವುದೇ ತಾರತಮ್ಯವಿಲ್ಲದೆ ಭಾರತದ ಎಲ್ಲಾ ಗ್ರಾಮೀಣ ಪ್ರದೇಶಗಳಿಗೆ ಅನ್ವಯವಾಗುತ್ತಿತ್ತು. ಎಲ್ಲಾ ಗ್ರಾಮ ಪಂಚಾಯಿತಿಗಳು ತಮ್ಮೂರಿನಲ್ಲಿ ಆಗಬೇಕಾದ ಕೆಲಸಗಳ ಕ್ರಿಯಾ ಯೋಜನೆ ರೂಪಿಸಿ ಕಾಮಗಾರಿಗಳನ್ನು ಪಡೆಯಬಹುದಾಗಿತ್ತು. ಕಾಮಗಾರಿಗಳಿಗೆ ಮತ್ತು ಕೆಲಸಗಳ ಬೇಡಿಕೆಯಂತೆ ಅನುದಾನ ಮಂಜೂರಾಗುತ್ತಿತ್ತು.


ಆದರೆ, ಬದಲಾದ ಕಾಯ್ದೆಯಡಿ ಕೇಂದ್ರ ಸರ್ಕಾರ ಅಧಿಸೂಚಿಸುವ ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ಈ ಯೋಜನೆ ಜಾರಿಯಾಗಲಿದೆ. ಅದಲ್ಲದೇ ಆ ಪ್ರದೇಶಗಳ ಗ್ರಾಮ ಪಂಚಾಯತಿಗಳು ಕೇಂದ್ರ ಸರ್ಕಾರ ನಿರ್ಧರಿಸುವ ಅನುದಾನದ ಮಿತಿಯೊಳಗೇ ಉದ್ಯೋಗ ಹಾಗೂ ಕಾಮಗಾರಿಗಳಿಗೆ ಬೇಡಿಕೆ ಇರಿಸಬೇಕು. ಜೊತೆಗೆ ಕಾಮಗಾರಿಗಳ ಪಟ್ಟಿ ಕೇಂದ್ರ ಸರ್ಕಾರ ಪೂರ್ವನಿರ್ಧರಿಸುವ ಯೋಜನೆಗಳ ಅಡಿಯಲ್ಲೇ ಬರಬೇಕಿದೆ.

ಅನುದಾನವು ಮೊದಲೇ ನಿಗದಿಯಾಗಿರುವುದರಿಂದ ಹೆಚ್ಚಿನ ಕೆಲಸಗಳ ಬೇಡಿಕೆ ಇಡಲು ಅವಕಾಶವಿರುವುದಿಲ್ಲ, ಬೇಡಿಕೆಯಂತೆ ಅನುದಾನ ಸಿಗುವುದಿಲ್ಲ, ಅಲ್ಲದೆ ಅಧಿಸೂಚನೆಯಿಂದ ಕೈಬಿಟ್ಟಿರುವ ಪ್ರದೇಶಗಳ ಕಾರ್ಮಿಕರಿಗೆ ಉದ್ಯೋಗ ನೀಡಲು ಸಾಧ್ಯವೂ ಆಗುವುದಿಲ್ಲ. ಗ್ರಾಮಗಳ ಆದ್ಯತೆ ಮತ್ತು ಅಗತ್ಯಗಳಿಗೆ ಇಲ್ಲಿ ಅವಕಾಶವಿಲ್ಲ. ಕರ್ನಾಟಕದ ಯಾವುದೋ ಒಂದು ಹಳ್ಳಿಯ ಅಗತ್ಯವೇನಿದೆ ಎನ್ನುವುದು ದೆಹಲಿಯಲ್ಲಿ ಕುಳಿತು ನಿರ್ಧರಿಸುವುದು ಕುಚೋದ್ಯವೇ ಸರಿ.

ವಿಕಸಿತ ಭಾರತಕ್ಕೆ ಗಾಂಧಿ ಮಾರ್ಗದ ಯೋಜನೆ

ರಾಮ್ ಜಿ

● ಬಿ.ವೈ.ವಿಜಯೇಂದ್ರ



'ವಿಬಿ-ಜಿ ರಾಮ್ ಜಿ' ಹೆಸರಿನ 'ವಿಕಸಿತ ಭಾರತ–ಗ್ಯಾರಂಟಿ ಫಾರ್ ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ)', ಗ್ರಾಮೀಣ ಭಾಗದ ಜನರ ಬದುಕಿಗೆ ಭರವಸೆಯ ಬೆಳಕು ನೀಡಿ ಆದಾಯದ ಮೂಲ ಖಾತ್ರಿ ಪಡಿಸುವ ಯೋಜನೆಯಾಗಿದೆ. ಕೃಷಿಕರ ಪರಿಶ್ರಮಕ್ಕೆ ಶಕ್ತಿ ತುಂಬುವ, ಮೂಲಕ ವಿಕಸಿತ ಭಾರತದ ಸಂಕಲ್ಪ ಸಾಕಾರಗೊಳಿಸುವ ಮಹತ್ವದ ಭಾಗವಾಗಿದೆ. ಆದರೆ, ಹತಾಶೆಯ ಅಂಚಿನಲ್ಲಿರುವ ಕಾಂಗ್ರೆಸ್ಸಿಗರು 'ಗಾಂಧಿ' ಮಹಾತ್ಮನ ಹೆಸರಿನಲ್ಲಿ ರಾಜಕೀಯ ಗೊಂದಲ ಸೃಷ್ಟಿಸಲು ಹೊರಟಿದ್ದಾರೆ. ಗ್ರಾಮೀಣ ಶ್ರಮಿಕರ ಜೀವನಾಡಿಯಾಗಬಹುದಾದ ಈ ಯೋಜನೆಗೆ ಶ್ರೀರಾಮನ ಹೆಸರು ಸೇರಿಕೊಂಡಿರುವುದು ಕಾಂಗ್ರೆಸ್ ಹಾಗೂ ಇತರ ವಿರೋಧ ಪಕ್ಷಗಳಿಗೆ ನುಂಗಲಾರದ ತುತ್ತಾಗಿದೆ. ಅದರಲ್ಲೂ ಕಾಂಗ್ರೆಸ್‌ನ ನಡವಳಿಕೆಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಗಾಂಧಿ ಹೆಸರನ್ನು ಬಳಸಿಕೊಳ್ಳುವುದೊಂದೇ ತನಗುಳಿದಿರುವ ದಾರಿ ಎಂಬಂತೆ ಕಾಣುತ್ತಿದೆ.

ವಾಸ್ತವವಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (ಮನರೇಗಾ) ಯೋಜನೆಯು ರದ್ದಾಗಿಲ್ಲ, ಬದಲಾಗಿ ಅದನ್ನು ಇನ್ನಷ್ಟು ಸಶಕ್ತಗೊಳಿಸುವ ದಿಸೆಯಲ್ಲಿ ಉದ್ಯೋಗ ಭರವಸೆಯನ್ನು ದ್ವಿಗುಣಗೊಳಿಸುವ ಉದ್ದೇಶದಿಂದ ಕೆಲಸದ ದಿನವನ್ನು 100ರಿಂದ 125 ದಿನಗಳವರೆಗೆ ವಿಸ್ತರಿಸಲಾಗಿದೆ. ದಿನಗೂಲಿ ₹370 ನಿಗದಿ ಮಾಡಲಾಗಿದೆ. ಈ ಹಿಂದಿನ ಯೋಜನೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವುದು ದುಸ್ತರವಾಗುತ್ತಿತ್ತು. ಅಗತ್ಯವಿಲ್ಲದ ಕೆಲಸಗಳನ್ನು ಸೃಷ್ಟಿಸಿ, ಯೋಜನೆಯ ಉದ್ದೇಶವನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿತ್ತು. ವಿಬಿ-ಜಿ ರಾಮ್ ಜಿ ಯೋಜನೆಯಲ್ಲಿ ನಿರ್ದಿಷ್ಟ ಉದ್ದೇಶ ಹಾಗೂ ಗುರಿಯನ್ನು ಸಾಧಿಸಲು ಅಗತ್ಯ ನಿಯಮಗಳು ಮತ್ತು ಷರತ್ತುಗಳನ್ನು ಅಳವಡಿಸಲಾಗಿದೆ. ಆ ಮೂಲಕ ರಾಷ್ಟ್ರೀಯ ಗ್ರಾಮೀಣ ಮೂಲ ಸೌಕರ್ಯ ಯೋಜನೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಂಡು ಗುರಿ ಸಾಧಿಸುವ ಗುರಿಹೊಂದಲಾಗಿದೆ.

> ಯೋಜನೆಯನ್ನು ಬದಲಿಸುವ ಮೂಲಕ ಗಾಂಧಿಯವರ ಹೆಸರನ್ನು ಕೈಬಿಡಲಾಗಿದೆ ಎಂಬುದು ಕಾಂಗ್ರೆಸ್ ಆರೋಪ. ಆದರೆ ವಿಬಿ-ಜಿ ರಾಮ್ ಜಿ ಯೋಜನೆಯಲ್ಲಿ ಗಾಂಧಿಯವರ ಕನಸನ್ನು ಸಾಕಾರಗೊಳಿಸಲು ಅವರು ಆರಾಧಿಸುತ್ತಿದ್ದ ರಾಮನ ಹೆಸರನ್ನು ಬಳಸಿಕೊಳ್ಳಲಾಗಿದೆ. ಗಾಂಧಿಯವರು ಕೊನೆಯುಸಿರು ಇರುವವರೆಗೂ 'ಹೇ ರಾಮ್' ಎನ್ನುತ್ತಿದ್ದರು. ರಾಮರಾಜ್ಯದ ಕಲ್ಪನೆ ಸ್ವತಂತ್ರ ಭಾರತದಲ್ಲಿ ಪಡಿಮೂಡಬೇಕು ಎಂಬುದು ಅವರ ಮಹತ್ವಾಕಾಂಕ್ಷೆಯಾಗಿತ್ತು. ಈ ಕಾರಣಕ್ಕಾಗಿಯೇ ಗಾಂಧಿ ಕನಸಿನ ಈ ಯೋಜನೆಗೆ ಶ್ರೀರಾಮನ ಹೆಸರು ಸೇರ್ಪಡೆಯಾಗಿದೆ

ಈ ಯೋಜನೆಯ ಅನುಷ್ಠಾನದಿಂದ ಭ್ರಷ್ಟಾಚಾರ ಸಹಿತ ಹಾಗೂ ಮತ್ತೆ ಮತ್ತೆ ಕಪೋಲಕಲ್ಪಿತ ಕೆಲಸಗಳನ್ನು ದಾಖಲಿಸಿ ಯೋಜನೆಯ ಹಣಕ್ಕೆ ಕನ್ನ ಹಾಕುವುದು ತಪ್ಪಲಿದೆ. ಈ ಹಿಂದಿನ ಯೋಜನೆಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲ್ಗೊಳ್ಳುವಿಕೆಯಲ್ಲಿ ಕೇಂದ್ರವೇ ವೆಚ್ಚವನ್ನು ಭರಿಸುತ್ತಿತ್ತು. ಆದರೆ ಈಗಿನ ಯೋಜನೆಯಲ್ಲಿ ರಾಜ್ಯ ಕೇಂದ್ರಗಳ ನಡುವೆ 60:40ರ ವೆಚ್ಚ ಹಂಚಿಕೆಯಾಗುತ್ತದೆ. ಇದರಿಂದ ರಾಜ್ಯ ಸರ್ಕಾರಗಳು ಅತ್ಯಂತ ಜವಾಬ್ದಾರಿಯುತವಾಗಿ ಈ ಯೋಜನೆಯನ್ನು ಜಾರಿಗೊಳಿಸಲು ವಿಶೇಷ ಗಮನಹರಿಸಬೇಕಾಗುತ್ತದೆ.

ವಿಬಿ-ಜಿ ರಾಮ್ ಜಿ ಯೋಜನೆಯಿಂದ ಕೆಲಸದ ಹಕ್ಕು ಕಸಿಯಲಾಗುತ್ತಿದೆ ಎಂಬ ಆಧಾರ ರಹಿತ ಆರೋಪ ಕೇಳಿಬರುತ್ತಿದೆ. ಆದರೆ ಈ ಯೋಜನೆಯಲ್ಲಿ ಬೇಡಿಕೆಯನ್ನು ಆಧರಿಸಿದ ರಾಷ್ಟ್ರ ನಿರ್ಮಾಣದ ಅನುಮೋದಿತ ಕೆಲಸಗಳನ್ನು ಕೈಗೆತ್ತಿಕೊಳ್ಳುವುದರಿಂದ ರಸ್ತೆ, ಒಳಚರಂಡಿ ಹಾಗೂ ಇತರ ಮೂಲ ಸೌಕರ್ಯಗಳನ್ನು ವ್ಯವಸ್ಥಿತವಾಗಿ ಕೈಗೆತ್ತಿಕೊಳ್ಳಲು ಅವಕಾಶವಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ಕಾರ್ಮಿಕರ ಲಭ್ಯತೆಗೆ ಈ ಯೋಜನೆಯಿಂದ ಕೊರತೆಯುಂಟಾಗುವುದಿಲ್ಲ. ಕನಿಷ್ಠ 60 ದಿನ ಕೆಲಸಗಾರರು ಲಭ್ಯವಾಗುವಂತೆ ನೋಡಿಕೊಳ್ಳಲಾಗುತ್ತದೆ. ಗ್ರಾಮಮಟ್ಟದಲ್ಲೇ ವಿಕಸಿತ ಭಾರತದ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ.

ಈ ಮಸೂದೆಯು ನಿಯಮದ ಅನುಸಾರ ಕನಿಷ್ಠ ಕೂಲಿಯನ್ನು ನಿಗದಿಪಡಿಸಲಿದೆ. ಈ ಹಿಂದೆ ಮನರೇಗಾ ಯೋಜನೆಯಲ್ಲಿ ನಿಗದಿಪಡಿಸಲಾಗಿದ್ದ ಕೂಲಿಯು ಯಾವುದೇ ಕಾರಣಕ್ಕೂ ಕಡಿಮೆಯಾಗದಂತೆ ಎಚ್ಚರಿಕೆ ವಹಿಸಲಾಗಿದೆ. ಗುತ್ತಿಗೆದಾರರು ಈ ಯೋಜನೆಯನ್ನು ದುರುಪಯೋಗಪಡಿಸಿಕೊಳ್ಳಲು ಅವಕಾಶವಿರುವುದಿಲ್ಲ. ಕಾರ್ಮಿಕರನ್ನು ಶೋಷಣೆ ಮಾಡದಂತೆ ಮಾರ್ಗಸೂಚಿ ಕಟ್ಟುನಿಟ್ಟಾಗಿ ಅಳವಡಿಸಲಾಗಿದೆ. ಬಯೊ ಮೆಟ್ರಿಕ್, ಜಿಯೊ ಟ್ಯಾಗಿಂಗ್, ಡಿಜಿಟಲ್ ಹಾಜರಾತಿ ಪಟ್ಟಿಗಳನ್ನು ಆಧರಿಸಿ ಕೂಲಂಕಷವಾಗಿ ಪರಿಶೀಲಿಸಿ ಬ್ಯಾಂಕಿನ ಖಾತೆಗೆ ಕೂಲಿಯ ಹಣ ಜಮಾ ಮಾಡುವುದರಿಂದ ಅನಗತ್ಯ ವಿಳಂಬ ಹಾಗೂ ಸುಳ್ಳು ಹಾಜರಾತಿ ಸೃಷ್ಟಿ ಸಂಪೂರ್ಣವಾಗಿ ನಿಲ್ಲಲಿದೆ. ನಕಲಿ ಹಾಜರಾತಿಗಳನ್ನು ಸೃಷ್ಟಿಸಿ ಮೂರ್ನಾಲ್ಕು ಕಡೆಗಳಲ್ಲಿ ಕೂಲಿ ಪಡೆಯುತ್ತಿದ್ದ ಕಳ್ಳಮಾರ್ಗವೂ ಬಂದ್ ಆಗಲಿದೆ.

ಈ ಹಿಂದಿನ ಯೋಜನೆಯಲ್ಲಿ ನಕಲಿ ಕೆಲಸಗಳ ಸೃಷ್ಟಿ ವ್ಯಾಪಕವಾಗಿತ್ತು. ಭ್ರಷ್ಟಾಚಾರವಂತೂ ವಿಪರೀತಕ್ಕೆ ಹೋಗಿತ್ತು. ಕೆಲಸಗಳ ಮೌಲ್ಯವರ್ಧನೆ ಸೂಕ್ತ ರೀತಿಯಲ್ಲಿ ಆಗುತ್ತಿರಲಿಲ್ಲ. ಇದಕ್ಕೆಲ್ಲ ಇನ್ನು ಮುಂದೆ ಕಡಿವಾಣ ಬೀಳಲಿದೆ. ವಿಬಿ-ಜಿ ರಾಮ್ ಜಿ ಯೋಜನೆಯಲ್ಲಿ ಇನ್ನು ಮುಂದೆ ಯಾವುದೇ ಸೋರಿಕೆಯಾಗದಂತೆ ಆರ್ಥಿಕ ಸುರಕ್ಷತೆ ಒದಗಿಸಲಾಗಿದೆ. ಒಟ್ಟಾರೆಯಾಗಿ ಮಹಾತ್ಮ ಗಾಂಧಿಯವರು ಕಂಡ ಕನಸಿನ ಯೋಜನೆಗಳನ್ನು ಸಾಕಾರಗೊಳಿಸುವ ಮೂಲಕ ಗ್ರಾಮ ಸಾಮ್ರಾಜ್ಯ ಹಾಗೂ ಸಮೃದ್ಧ ಭಾರತವನ್ನು ಕಟ್ಟುವ ಮೂಲಕ ವಿಕಸಿತ ಭಾರತದ ಸಂಕಲ್ಪವನ್ನು ಈಡೇರಿಸುವುದು ಕೇಂದ್ರ ಸರ್ಕಾರದ ಮಹಾಸಂಕಲ್ಪವಾಗಿದೆ.

ಸ್ವಾತಂತ್ರ್ಯಾನಂತರ ಕಾಂಗ್ರೆಸ್ ವಿಸರ್ಜಿಸಿ ಎಂದ ಮಹಾತ್ಮ ಗಾಂಧಿಯವರನ್ನು 'ಅಪ್ರಸ್ತುತ' ಎಂಬಂತೆ ನಡೆದುಕೊಂಡಿರುವ ಇತಿಹಾಸ ಬೆನ್ನುಗಂಟಿಸಿಕೊಂಡಿದ್ದರೆ ಅದು ಕಾಂಗ್ರೆಸ್ ಪಕ್ಷ ಮಾತ್ರ. ಆ ಪಕ್ಷವು 'ಗಾಂಧಿ' ವಿಚಾರಗಳು ಹಾಗೂ ಅವರ ಕಾರ್ಯಕ್ರಮಗಳನ್ನು ಮೂಲೆಗೊತ್ತರಿಸುತ್ತಾ ಮುನ್ನಡೆದಿದೆ ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಗಳಿವೆ, ನಿದರ್ಶನಗಳಿವೆ. ನೆಹರೂ ಅವರು ಪ್ರಧಾನಿಯಾದ ಸುದೀರ್ಘ ಅವಧಿ ಹಾಗೂ ಅನಂತರ ದಿನಮಾನಗಳೆಲ್ಲಾ ನೆಹರೂ ಕುಟುಂಬದ ಓಲೈಕೆ ಹಾಗೂ ಸ್ಮರಣೆಗೆ ಮೀಸಲಿಟ್ಟು ಮಹಾತ್ಮರನ್ನು ನೇಪತ್ಯಕ್ಕೆ ಸರಿಸಿ, 'ಗಾಂಧಿ' ಹೆಸರನ್ನು ರಾಜಕೀಯ ಸ್ವಾರ್ಥಕ್ಕಾಗಿ ತಮ್ಮ ಹೆಸರಿನೊಂದಿಗೆ ಬಳಸಿಕೊಂಡಿದೆ. ಗಾಂಧಿಯವರ ಹೆಸರನ್ನು ಇಂದಿಗೂ ಅಂಟಿಸಿಕೊಂಡಿರುವ ನೆಹರೂ 'ವಂಶಸ್ಥರು' ಸ್ವಾತಂತ್ರ್ಯ ಚಳವಳಿಯ ಪ್ರತಿಫಲದ ಬಹುದೊಡ್ಡ ಫಲಾನುಭವಿ ಕುಟುಂಬ.

ಗಾಂಧಿ ತತ್ವ-ಸಿದ್ಧಾಂತಗಳನ್ನು ಅಪಮಾನಿಸುವಂತೆ ಅಧಿಕಾರ ರಾಜಕಾರಣದಲ್ಲಿ ಹಾಗೂ ಪಕ್ಷ ಸಂಘಟನೆಯಲ್ಲಿ ನಡೆದುಕೊಳ್ಳುವ ಈಗಿನ ಕಾಂಗ್ರೆಸ್ 'ಗಾಂಧಿ ಸಿದ್ಧಾಂತದ ಅಸಲೀ ವಿರೋಧಿ' ಎಂಬುದು ಸ್ವಾತಂತ್ರ್ಯ ಚಳವಳಿಯ ಕೊಂಡಿಯಾಗಿರುವ ಹಳೆಯ ತಲೆಮಾರಿನ ಹಿರಿಯ ಕಾಂಗ್ರೆಸ್ಸಿಗರ ವ್ಯಥೆ ತುಂಬಿದ ಅಭಿಪ್ರಾಯ.

ದಶಕಗಳ ಕಾಲ ತಾನು ಅಧಿಕಾರ ನಡೆಸಿದ ಕೇಂದ್ರ ಹಾಗೂ ರಾಜ್ಯಗಳ ಯೋಜನೆ-ಕಾರ್ಯಕ್ರಮಗಳಿಗೆ ಬಹುತೇಕವಾಗಿ ನೆಹರೂ ಮನೆತನದ ಹೆಸರನ್ನು ಬಿಟ್ಟು ದೇಶಕ್ಕಾಗಿ ತ್ಯಾಗ, ಬಲಿದಾನ ಮಾಡಿದವರ ಬೇರೆ ಹೆಸರುಗಳನ್ನೂ ನೆನಪಿಸಿಕೊಳ್ಳುವ ಗೋಜಿಗೆ ಹೋಗದೇ ಭಟ್ಟಂಗಿ ಸಂಸ್ಕೃತಿ ಮೆರೆಯಲಾಗಿದೆ. ಗಾಂಧಿ, ಅಂಬೇಡ್ಕರ್ ಅವರನ್ನು ನಿರಂತರವಾಗಿ ಬದಿಗೆ ಸರಿಸಿದ ಉದಾಹರಣೆಗಳೇ ನಮಗೆ ಹೇರಳವಾಗಿ ಸಿಗುತ್ತವೆ. ಇಂಥಾ ಕಾಂಗ್ರೆಸ್ಸಿಗರು ಇಂದು ಮನರೇಗಾ ಯೋಜನೆ ಬದಲಿಸಿ ಗಾಂಧಿಯವರ ಹೆಸರಿಗೆ ಅಪಚಾರವೆಸಗಲಾಗಿದೆ ಎಂದು ಗುಲ್ಲೆಬ್ಬಿಸಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಹೊರಟಿರುವುದು ವಿಪರ್ಯಾಸ.

ಯಾವ ಉದಾತ್ತ ಉದ್ದೇಶಕ್ಕಾಗಿ ಸ್ವಾಂತಂತ್ರ್ಯ ಚಳವಳಿ ಜನ್ಮ ತಾಳಿತೋ, ಯಾವ ವಿಚಾರಗಳನ್ನು ಮುಂದಿಟ್ಟುಕೊಂಡು ಗಾಂಧೀಜಿಯವರು ಚಳವಳಿಯ ನೇತೃತ್ವ ವಹಿಸಿದರೋ ಅದನ್ನು ಸಾಕಾರಗೊಳಿಸುವ ಪ್ರಾಮಾಣಿಕ ಪ್ರಯತ್ನ ಹಾಗೂ ಯೋಜನೆಗಳನ್ನು ಜಾರಿಗೆ ತಂದಿದ್ದರೆ ಅದು ಕೇಂದ್ರದ ಎನ್.ಡಿ.ಎ. ಸರ್ಕಾರ ಎಂಬುದಕ್ಕೆ ಹಲವು ನಿದರ್ಶನಗಳಿವೆ.

ಹಿಂದಿನ ಮನರೇಗಾ ಯೋಜನೆಯನ್ನು ಕೈಬಿಡುವ ಮೂಲಕ ಗಾಂಧಿಯವರ ಹೆಸರನ್ನು ಕೈಬಿಡಲಾಗಿದೆ ಎಂಬುದು ಕಾಂಗ್ರೆಸ್ ಆರೋಪ. ಆದರೆ ವಿಬಿ-ಜಿ ರಾಮ್ ಜಿ ಯೋಜನೆಯ ಮೂಲಕ ಗಾಂಧಿಯವರ ಕನಸನ್ನು ಸಾಕಾರಗೊಳಿಸಲು ಗಾಂಧಿಯವರು ಆರಾಧಿಸುತ್ತಿದ್ದ ರಾಮನ ಹೆಸರನ್ನು ಬಳಸಿಕೊಳ್ಳಲಾಗಿದೆ. ಶ್ರೀರಾಮ ಆದರ್ಶದ ಸಂಕೇತ, ಗಾಂಧಿಯವರು ಕೊನೆಯುಸಿರು ಇರುವವರೆಗೂ 'ಹೇ ರಾಮ್' ಎಂದು ಸಂಬೋಧಿಸುತ್ತಲೇ ಇದ್ದರು. ರಾಮರಾಜ್ಯದ ಕಲ್ಪನೆ ಸ್ವತಂತ್ರ ಭಾರತದಲ್ಲಿ ಪಡಿಮೂಡಬೇಕು ಎಂಬುದು ಅವರ ಮಹತ್ವಾಕಾಂಕ್ಷೆಯಾಗಿತ್ತು. ಈ ಕಾರಣಕ್ಕಾಗಿಯೇ ಗಾಂಧಿ ಕನಸಿನ ಈ ಯೋಜನೆಗೆ ಶ್ರೀರಾಮನ ಹೆಸರು ಸೇರ್ಪಡೆಯಾಗಿದೆ. ಮಹಾತ್ಮ ಗಾಂಧಿಯವರ ಚಿಂತನೆಯಲ್ಲಿ ಶ್ರೀರಾಮನಿದ್ದಾನೆ. ಗಾಂಧೀಜಿಯವರ ಪರಿಕಲ್ಪನೆಯ ರಾಮರಾಜ್ಯದ ಪುನರುತ್ಥಾನದ ಮಹತ್ವಾಕಾಂಕ್ಷೆ ಇದೆ. ಭವಿಷ್ಯದ ದಿನಗಳಲ್ಲಿ ವಿಶ್ವಮಾನ್ಯರಾಗಿರುವ ಮಹಾತ್ಮ ಗಾಂಧಿ ಅವರ ಹೆಸರನ್ನು ಸಾರ್ಥಕಗೊಳಿಸುವ, ಅವರ ಚಿಂತನೆಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ಗಾಂಧಿಯವರ 'ಆತ್ಮ' ಸದಾ ಸಂತೃಪ್ತಗೊಳ್ಳುವಂತೆ ಯೋಜನೆ ಅಳವಡಿಸಲಾಗುವುದು. ನಕಲಿ ಕಾಂಗ್ರೆಸ್ಸಿಗರಿಂದ ಗಾಂಧೀಜಿಯವರ ಹೆಸರನ್ನು ಪಠಿಸುವ ಅಥವಾ ಉಳಿಸುವ ಪಾಠ ಕಲಿಯುವ ಅನಿವಾರ್ಯ ನೈಜ ಅಭಿವೃದ್ಧಿಯ ಚಿಂತನೆ ಬಯಸುವವರಿಗೆ ಎಂದಿಗೂ ಬಾರದು.

ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮುಂದಿನ ದಿನಗಳಲ್ಲಿಯೂ ಗಾಂಧಿಯವರು ಆರಂಭಿಸಿದ ಸ್ವದೇಶಿ ಚಳವಳಿ ಹಾಗೂ ಸ್ವಾವಲಂಬನೆಯ ಸಂದರ್ಭಗಳನ್ನು ದೃಷ್ಟಿಯಲ್ಲಿರಿಸಿಕೊಂಡು 'ವಿಕಸಿತ ಭಾರತ' ನಿರ್ಮಾಣವನ್ನು ಸಾಕಾರಗೊಳಿಸಲಿದೆ. ಆ ಮೂಲಕ ಲಕ್ಷಾಂತರ ಜನರು ತ್ಯಾಗ-ಬಲಿದಾನ ಮಾಡಿ ಗಳಿಸಿದ ಸ್ವಾತಂತ್ರ್ಯವನ್ನು ಸಾರ್ಥಕಗೊಳಿಸಲಿದೆ. ಗಾಂಧಿ ಪ್ರಣೀತ ರಾಮರಾಜ್ಯ ಬಿಜೆಪಿ ಗುರಿ. ಅಷ್ಟಕ್ಕೂ, ರಾಮನ ಹೆಸರೆಂದರೆ ಕಾಂಗ್ರೆಸ್‌ಗೆ ಯಾಕೆ ಉರಿ?


ಲೇಖಕ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಕಾಂಗ್ರೆಸ್ ಅಪಪ್ರಚಾರ

2014ರಲ್ಲಿ ಮೋದಿಯವರು ಪ್ರಧಾನಿಯಾದ ಮೊದಲ ವರ್ಷದಲ್ಲೇ ಗಾಂಧೀಜಿಯವರ ಕನಸಿನ ಕಾರ್ಯಕ್ರಮ ಸ್ವಚ್ಛ ಭಾರತ ಅಭಿಯಾನವನ್ನು ಮಹಾತ್ಮ ಗಾಂಧಿಯವರ ಹೆಸರಿನಲ್ಲಿಯೇ ದೇಶದ ಮೂಲೆ ಮೂಲೆಗೂ ತಲುಪುವಂತೆ ಯಶಸ್ವಿಗೊಳಿಸಿ, ಕೋಟ್ಯಂತರ ಭಾರತೀಯರನ್ನು ಜಾಗೃತಿಗೊಳಿಸಿ, ಬಾಪೂಜಿಯವರ ಸ್ಮರಣೆಯನ್ನು ಸಾರ್ಥಕಗೊಳಿಸಿದ್ದನ್ನು ಕಾಂಗ್ರೆಸ್ಸಿಗರು ಮೆಚ್ಚುವುದು ಹಾಗಿರಲಿ, ಅದರ ಕುರಿತು ಅಪ್ಪಿತಪ್ಪಿಯೂ ಉಲ್ಲೇಖಿಸುವುದಿಲ್ಲ.

ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರ್ಕಾರ ಮನರೇಗಾ ಯೋಜನೆಗೆ ಮೀಸಲಿರಿಸಿದ್ದ 2013-14 ಅನುದಾನ ₹33,000 ಕೋಟಿ ಮಾತ್ರ. 'ವಿಬಿ-ಜಿ ರಾಮ್ ಜಿ' ಯೋಜನೆಗೆ ₹2.86 ಲಕ್ಷ ಕೋಟಿ ಮೀಸಲಿರಿಸಿರುವುದು ಮೋದಿ ಸರ್ಕಾರದ ಕೃಷಿ ಕಾರ್ಮಿಕರ ಹಾಗೂ ಗ್ರಾಮೀಣ ಭಾಗದ ಬಡವರ ಬಗೆಗಿನ ಬದ್ಧತೆ ಹಾಗೂ ಕಾಳಜಿಯನ್ನು ಸಾಕ್ಷೀಕರಿಸುತ್ತದೆ. 2014ರಲ್ಲಿ 1.66 ಕೋಟಿ ಕೆಲಸದ ದಿನಗಳಿದ್ದುದು ಇದೀಗ 3.10 ಕೋಟಿಗೆ ಏರಿಕೆಯಾಗಿದೆ. ಈವರೆಗೂ ಯೋಜನೆಗೆ ₹8.53 ಲಕ್ಷ ಕೋಟಿ ಹಣ ಬಿಡುಗಡೆಯಾಗಿದೆ. 2014ರಲ್ಲಿ 1.53 ಲಕ್ಷ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿತ್ತು. ಮೋದಿಯವರ ಅವಧಿಯಲ್ಲಿ ಇದು 8.62 ಕೋಟಿ ಮೀರಿದೆ. ಮಹಿಳೆಯರ ಪಾಲ್ಗೊಳ್ಳುವಿಕೆಯಲ್ಲೂ ಗಣನೀಯ ಪ್ರಮಾಣದ ಏರಿಕೆ ಕಂಡಿದೆ. ಇಂಥಾ ಮಹತ್ವದ ಅಂಶಗಳನ್ನು ಮರೆಮಾಚಲು ಕಾಂಗ್ರೆಸ್ಸಿಗರು ಗಾಂಧಿಯವರ ಹೆಸರು ಬಳಸಿಕೊಂಡು ಗಾಂಧಿ ಚಿಂತನೆ ಹಾಗೂ ಕಾರ್ಯಕ್ರಮಗಳ ವಿರುದ್ಧ ಅಪಪ್ರಚಾರ ಮಾಡುತ್ತಿರುವುದು ಗಾಂಧಿ ಮಾರ್ಗದ ವಿರೋಧಿ ನಡೆಯಲ್ಲದೇ ಬೇರೇನೂ ಅಲ್ಲ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

10 ಜನವರಿ 2026 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ಸಪ್ತಮಿ ಗಂ 8-24 ನಕ್ಷತ್ರ: ಹಸ್ತ ಗಂ 15-40 ಯೋಗ: ಅತಿಗಂಡ ಗಂ. 16-59 ಕರಣ: ಬವ ಗಂ. 8-24 ಧನು ಮಾಸದ 26 ನೇ ದಿನ. ಮಳೆ ನಕ್ಷತ್ರ : ಪೂರ್ವಾಷಾಢ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00-10-30 ಸೂರ್ಯೋದಯ : 07-00 ಸೂರ್ಯಾಸ್ತ : 06-16 ಮುಸ್ಲಿಂ ದಿನಾಂಕ : 20 ರಜಬ್ ಅದೃಷ್ಟ ಸಂಖ್ಯೆ : 1, 12

ಮೇಷ: ಸಾಲದ ಹಣ ಹಿಂದಿರುಗುವುದರಿಂದ ಮನೆಗೆ ಹಣ ಖರ್ಚು ಮಾಡುವಿರಿ. ಇಂದಿನ ಭೋಜನ ಆರೋಗ್ಯಕ್ಕೆ ಸ್ವಲ್ಪ ತೊಂದರೆ ತರಬಹುದು. ತಂದೆ ತಾಯಿ ಆಶೀರ್ವಾದದೊಂದಿಗೆ ಈ ದಿನ ಪ್ರಾರಂಭಿಸಿದರೆ ಉತ್ತಮ.

ವೃಷಭ: ವಿವಾಹದ ವಿಷಯದಲ್ಲಿ ಮೌನ ಮುರಿಯುವುದು ಅನಿವಾರ್ಯವಾಗಿ ಪರಿಣಮಿಸುವುದು. ಹವಾ ಬದಲಾವಣೆಗಾಗಿ ಕಿರು ಪ್ರವಾಸದ ಸಾಧ್ಯತೆಗಳಿವೆ. ಈ ದಿನದ ಆಗುಹೋಗುಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ

ಮಿಥುನ: ಉತ್ತಮ ಆದಾಯದಿಂದ ಹಣಕಾಸಿನ ತೊಂದರೆ ನಿಮಗೆ ಕಾಣಿಸದು. ಕೆಲ ಸಂದರ್ಭದಲ್ಲಿ ಅಧೈರ್ಯ ಮತ್ತು ಮಾನಸಿಕ ಜಿಗುಪ್ಸೆಯಂತಹ ಸ್ಥಿತಿಯನ್ನು ಹೊಂದುವಿರಿ. ಅನಿರೀಕ್ಷಿತವಾಗಿ ಹಳೆಯ ಗೆಳೆಯರ ಭೇಟಿ ಇರಬಹುದು.

ಕರ್ಕಾಟಕ: ಪೌಷ್ಟಿಕ ಆಹಾರ ಸೇವಿಸುವ ಅಭ್ಯಾಸ ಮಾಡುವುದರಿಂದ ಆರೋಗ್ಯ ಅಭಿವೃದ್ಧಿಯಾಗುವುದು. ಕಚ್ಚಾ ತೈಲದ ವ್ಯವಹಾರದಲ್ಲಿರುವವರಿಗೆ ತಲೆಬಿಸಿಯ ವಾತಾವರಣವಾದರೂ ಅಧಿಕವಾಗಿ ಲಾಭ ಸಿಗಲಿದೆ.

ಸಿಂಹ: ನಿಮ್ಮ ಪ್ರಯತ್ನಗಳಿಗೆ ವ್ಯಕ್ತಿಯೊಬ್ಬರ ಬೆಂಬಲ ದೊರೆತು ಯಶಸ್ವಿಯಾಗಿ ನೆರವೇರಲಿದೆ. ನಿಮ್ಮ ವೃತ್ತಿ ಪ್ರವೃತ್ತಿಗಳಲ್ಲಿ ಸಮತೋಲನ ಕಾಯ್ದುಕೊಳ್ಳಿರಿ. ಪ್ರಯಾಣದಲ್ಲಿ ಆಪತ್ತುಗಳು ಎದುರಾಗಬಹುದು, ಜಾಗ್ರತರಾಗಿರಿ.

ಕನ್ಯಾ: ಇಂದಿನ ದಿನದ ಪರಿಸ್ಥಿತಿಗಳನ್ನು ನೀವು ನಿಮ್ಮ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ಸಫಲರಾಗುವಿರಿ. ಮನೆ ದೇವರ ಪೂಜೆಯ ಹರಕೆಯ ಫಲವಾಗಿ ಮಗ/ಮಗಳಿಗೆ ಉದ್ಯೋಗ ದೊರಕುವುದು.

ತುಲಾ: ವಿವಾಹ ವಿಷಯಗಳು ನಿಶ್ಚಿತಗೊಂಡಿದ್ದರೂ ಸಹ ಇನ್ನೊಮ್ಮೆ ವಿಚಾರಿಸಿ ದೃಢಪಡಿಸಿಕೊಳ್ಳುವುದು ಉತ್ತಮ. ಸಿನಿಮಾ ಕಲಾವಿದರಿಗೆ ಸದವಕಾಶ ಒದಗಿ ಬರಲಿದೆ. ಅಭಿಮಾನಿಗಳನ್ನು ಸಂಪಾದಿಸಿಕೊಳ್ಳುವಿರಿ.

ವೃಶ್ಚಿಕ: ನಿಮ್ಮ ಧ್ಯೇಯವನ್ನು ತಲುಪುವ ಹಾದಿಯಲ್ಲಿ ಬಾಲ್ಯ ಸ್ನೇಹಿತರ ಸಹಾಯ ಈ ದಿನ ದೊರೆಯಲಿದೆ. ಚಾಲಕ ವೃತ್ತಿಯವರು ಸ್ವಂತ ವಾಹನ ಖರೀದಿಯ ದಾರಿ ನೋಡಬಹುದು. ಹತ್ತಿದ ಏಣಿಯನ್ನು ಒದೆಯುವ ಕೆಲಸ ಮಾಡದಿರಿ.

ಧನು: ಮನಸ್ಸಿನ ಚಂಚಲ ಸ್ವಭಾವದಿಂದ ಇಂದಿನ ದಿನ ವಿಫಲರಾಗುವ ಸನ್ನಿವೇಶಗಳಿರುವುದು. ಸುಗಂಧ ದ್ರವ್ಯಗಳ ವ್ಯಾಪಾರಿಗಳಿಗೆ ಈ ದಿನ ಹೆಚ್ಚಿನ ವ್ಯಾಪಾರ ಸಂಭವವಿದೆ. ಶುಭಕ್ಕಾಗಿ ಮಹಾಗಣಪತಿಯನ್ನು ಆರಾಧಿಸಿ.

ಮಕರ: ಬುದ್ಧಿವಂತಿಕೆ ಹಾಗೂ ಯೋಜನೆಗಳು ನಿಮ್ಮ ವ್ಯವಹಾರವನ್ನು ಸುಲಭಗೊಳಿಸುತ್ತದೆ. ಸ್ನೇಹಿತರಿಂದ ವ್ಯಾಪಾರದಲ್ಲಿ ಒಳ್ಳೆಯ ಫಲಿತಾಂಶವನ್ನು ಕಾಣಬಹುದು. ಹಣಕಾಸಿನ ವಿಚಾರದಲ್ಲಿ ತೋರಿದ ದಾಕ್ಷಿಣ್ಯದಿಂದ ನಷ್ಟ.

ಕುಂಭ: ಸಹೋದ್ಯೋಗಿಗಳ ಯಾವುದೇ ತರಹದ ಒತ್ತಡಕ್ಕೆ ಮಣಿಯದೆ ಕೆಲಸದಲ್ಲಿ ಮುನ್ನುಗ್ಗಿ. ಜೀವನದಲ್ಲಿ ನಾಲ್ಕಾರು ದೋಣಿಯ ಪ್ರಯಾಣ ಬೇಡವೆನಿಸಲಿದೆ. ಶಸ್ತ್ರವೈದ್ಯ ವೃತ್ತಿಯವರಿಗೆ ಸೌಲಭ್ಯಗಳು ಹೆಚ್ಚಲಿದೆ.

ಮೀನ: ನಿರುದ್ಯೋಗಿಗಳಿಗೆ ಪ್ರತಿಷ್ಠಿತರ ಪರಿಚಯದಿಂದ ಗೌರವಾನ್ವಿತ ಜಾಗದಲ್ಲಿ ಉದ್ಯೋಗ ಪ್ರಾಪ್ತಿಯಾಗಲಿದೆ. ಚಿತ್ರಕಲೆ, ಗಣಿತದಂತಹ ವಿಚಾರದಲ್ಲಿ ಆಸಕ್ತಿ ಮೂಡುವುದು. ಲೇವಾದೇವಿ ವ್ಯವಹಾರಗಳಲ್ಲಿ ಜಾಗ್ರತೆ ಇರಲಿ.

ಪದಬಂಧ 6280


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
3.ಊಟ ಮಾಡದಿರುವುದು (4)
5.ಕರದಲ್ಲಿರುವುದು ಪರಿಷ್ಕೃತವಾಗದಿರುವ ಪ್ರತಿ (3)
6.ಮತಿ ಇದ್ದವ ನೀಡಿದ ಒಪ್ಪಿಗೆ! (4)
8.ಕೊಡು ಕೊಡು ಎನ್ನುತ್ತಿರುವ ಅಜ್ಜ(2)
9.ಉಮೇದುವಾರನಿಗಿರುವ ಹುರುಪು (3)
10.ವರನಿಗೆ ಜೋಡಿಯಾದ ಮದುವೆ ಹೆಣ್ಣು (2)
11.ಕಾನನದಲ್ಲಿನ ವಾಸ (4)
12.ವಂಗ ದೇಶದಿಂದ ತಂದಿರುವ ಸಂಬಾರ ಪದಾರ್ಥ (3)
15.ದಿನವೆಲ್ಲಾ ಕಾಲಕಳೆದ ಹೊಳೆಯ ದಂಡೆ (4)
16.ಮರಮುಟ್ಟುಗಳನ್ನು ತಿಂದು ಮಣ್ಣು ಮಾಡುವ ಹುಳು (3)

ಮೇಲಿಂದ ಕೆಳಕ್ಕೆ

1.ಪತಿಯ ಜೊತೆಯಿರುವ ಹೆಂಡತಿ (2)
2.ಈತ ಹೆಂಡತಿಯನ್ನು ಕಳೆದುಕೊಂಡವನು (3)
4.ಒಳ್ಳೆಯ ಗತಿ ಅಥವಾ ಮೋಕ್ಷ (3)
5.ಕೈಯನ್ನು ತಟ್ಟುವಿಕೆ (5)
6.ಆ ಮದುವೆಗೆಂದು ತರಿಸಿಕೊಂಡ ವಸ್ತು! (3)
7.ಲಗ್ನ ಮಾಡಿಕೊಳ್ಳುತ್ತಿರುವವನು (5)
9.ಮೇಲುಸಿರು ಬಿಡುವವನಿಗೆ ಗೂರಲು ರೋಗ! (3)
11.ವನದಲ್ಲಿ ಕಾಣುತ್ತಿರುವ ಮುಖ (3)
13.ಚಂದಾ ಹಣವಿದು (3)
14. ಗೆಲುವಿನ ವಿರುದ್ಧ ಪದ(2)



6279ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಕ್ರೀಡಾಪಟು 3.ಅನುಪಮ 5.ಕ್ಕಿಅ 7.ಉದ್ಯೋಗ 8.ಣಜಾ 9.ಬಾಲ್ಯವಿವಾಹ 12.ಮಾಸ 14.ಕರಟ 15.ನೆಪ 18.ದಸಕತ್ತು 19.ಮನಸ್ತಾಪ

ಮೇಲಿಂದ ಕೆಳಕ್ಕೆ:

1.ಕ್ರೀಡಾಂಗಣ 2.ಪಲ್ಲಕ್ಕಿ 3.ಅಟ್ಟೆ 4.ಮದಗಜ 6.ಅಮೂಲ್ಯ 7.ಉತ್ಸಾಹ 9.ಬಾವುಟ 10.ವಾಸನೆ 11.ಮಕರಂದ 13.ಸಮಾರೋಪ 16.ಪವನ 17.ಕುತ್ತು

ಸುಡೊಕು 6664

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3	9		2		5		6	
			4			8		5
	4	5			9		3	
4	6		9		7			
				4		1		6
8		7	5		6		4	9
		4			2			7
7						6		3
	8		7			2		

6663 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1400-2200
ಮಧ್ಯಮ	₹800-1400
ಸಣ್ಣ	₹400-800

ಷೇರುಪೇಟೆ ವಹಿವಾಟು

84,180 ಹಿಂದಿನ ಅಂತ್ಯ · 604 · 83,576 ಇಂದಿನ ಅಂತ್ಯ

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,876
ಇಂದಿನ ಅಂತ್ಯ:	25,683
ದಿನದ ಕನಿಷ್ಠ:	25,623
	193

ಮೊಟ್ಟೆ ಧಾರಣೆ (ನೆಕ್ ದರ)

ಬೆಂಗಳೂರು	100 ಕ	₹605
	12 ಕ	₹90
ಮೈಸೂರು:	100 ಕ	₹603

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿಗೆ)

ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹166

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಪ್ರ.ಕೆ)	₹370-768
ದ್ವಿತಳಿ (ಪ್ರ.ಕೆ)	₹400-901

ಮುದ್ರಮನೆ ಕಾಫಿ

ಎಪಿ	₹26900
ಎಸಿ	₹14700
ಆರ್‌ಪಿ	₹17000
ಆರ್‌ಸಿ	₹10260

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) (10 ಕೆಜಿ)

ಶೇಂಗಾ (ರಿಫೈನ್ಡ್)	₹1600 (1590)
ಸೋಯಾ (ರಿಫೈನ್ಡ್)	₹1310 (1305)
ಸೂರ್ಯಕಾಂತಿ (ರಿಫೈನ್ಡ್)	₹1530 (1520)
ಪಾಮೋಲಿನ್	₹1270 (1260)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹26672-26672
ಬೆಂಗಳೂರು	₹31000-43000
ತುಮಕೂರು	₹18000-21500

ಮುಂಬೈ ಧಾರಣೆ (ಶೇಂಗಾ)

09-01-2026	
ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ (ಹೊಸ)	7900-8000
ದಪ್ಪ ಗುಜರಾತ್ (ಹೊಸ)	9200-9300
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1610 (1600)
ಒಂದು ವಾರದ ಡೆಲಿವರಿ	1605 (1595)
ಪಾಮ್ ವಾರದ ಡೆಲಿವರಿ	1268 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1470 (1460)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,37,000 (1,35,500)
ಬೆಳ್ಳಿ ಕೆ.ಜಿಗೆ	2,44,000 (2,35,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಚಿನ್ನದ ದರ ₹1,200 ಬೆಳ್ಳಿ ₹6,500 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆಯಾಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹1,200 ಏರಿಕೆಯಾಗಿ, ₹1,41,700ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹6,500 ಹೆಚ್ಚಳವಾಗಿ, ₹2.50 ಲಕ್ಷಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್


ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಈಕ್ವಿಟಿ ಎಂ.ಎಫ್: ಒಳಹರಿವು ಇಳಿಕೆ

ಡೆಟ್ ಫಂಡ್‌ನಲ್ಲಿನ ಹೆಚ್ಚಿನ ಹೊರಹರಿವು ಇಳಿಕೆಗೆ ಕಾರಣ: ಎಎಂಎಫ್‌ಐ

ನವದೆಹಲಿ (ಪಿಟಿಐ): 'ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್‌ನಲ್ಲಿ (ಎಂ.ಎಫ್) 2025ರ ಡಿಸೆಂಬರ್ ತಿಂಗಳಿನಲ್ಲಿ ₹28,054 ಕೋಟಿ ಒಳಹರಿವು ಆಗಿದೆ. ಇದು ನವೆಂಬರ್ ತಿಂಗಳಿಗೆ ಹೋಲಿಸಿದರೆ ಶೇ 6ರಷ್ಟು ಇಳಿಕೆ' ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವು (ಎಎಂಎಫ್‌ಐ) ಶುಕ್ರವಾರ ತಿಳಿಸಿದೆ.

ಈಕ್ವಿಟಿ ಒಳಹರಿವು ಇಳಿಕೆಯಿಂದ ಉದ್ಯಮದ ಒಟ್ಟು ಸಂಪತ್ತಿನ ನಿರ್ವಹಣಾ ಮೌಲ್ಯವು (ಎಯುಎಂ) ಡಿಸೆಂಬರ್‌ನಲ್ಲಿ ₹80.23 ಲಕ್ಷ ಕೋಟಿಗೆ ಇಳಿದಿದೆ. ನವೆಂಬರ್‌ನಲ್ಲಿ ಇದು ₹80.80 ಲಕ್ಷ ಕೋಟಿಯಷ್ಟಿತ್ತು. ಡೆಟ್ ಮ್ಯೂಚುವಲ್ ಫಂಡ್‌ನಲ್ಲಿನ ಬಂಡವಾಳದ ಹೆಚ್ಚಿನ ಹೊರಹರಿವು, ಈಕ್ವಿಟಿ ಎಂ.ಎಫ್‌ನಲ್ಲಿ ಒಳಹರಿವು ಕಡಿಮೆ ಆಗಲು ಕಾರಣ ಎಂದು ತಿಳಿಸಿದೆ.



ವ್ಯವಸ್ಥಿತ ಹೂಡಿಕೆ ಯೋಜನೆಯಲ್ಲಿ (ಎಸ್‌ಐಪಿ) ನವೆಂಬರ್‌ನಲ್ಲಿ ₹29,445 ಕೋಟಿಯಷ್ಟು ಹೂಡಿಕೆ ಆಗಿತ್ತು. ಇದು ಡಿಸೆಂಬರ್‌ನಲ್ಲಿ ₹31 ಸಾವಿರ ಕೋಟಿಗೆ ಹೆಚ್ಚಳವಾಗಿದ್ದು, ಹೂಡಿಕೆದಾರರು ಶಿಸ್ತುಬದ್ಧ ಮತ್ತು ದೀರ್ಘಾವಧಿ ಸಂಪತ್ತಿನ ಸೃಷ್ಟಿಯತ್ತ ಆದ್ಯತೆ ನೀಡುತ್ತಿರುವುದನ್ನು ಇದು ತೋರಿಸುತ್ತಿದೆ. 2025ರಲ್ಲಿ ₹3.34 ಲಕ್ಷ ಕೋಟಿ ಎಸ್‌ಐಪಿ ಮೂಲಕ ಹೂಡಿಕೆ ಆಗಿದೆ.

ಒಟ್ಟಾರೆಯಾಗಿ, ಮ್ಯೂಚುವಲ್ ಫಂಡ್ ಉದ್ಯಮದ ಹೊರಹರಿವು ಡಿಸೆಂಬರ್‌ನಲ್ಲಿ ₹66,591 ಕೋಟಿ ಆಗಿದೆ. ಆದರೆ, ನವೆಂಬರ್ ತಿಂಗಳಿನಲ್ಲಿ ₹29,911 ಕೋಟಿ, ಅಕ್ಟೋಬರ್‌ನಲ್ಲಿ ₹24,690 ಕೋಟಿ ಒಳಹರಿವಾಗಿತ್ತು.

ಫ್ಲೆಕ್ಸಿ ಕ್ಯಾಪ್ ಫಂಡ್‌ನಲ್ಲಿ ನವೆಂಬರ್ ತಿಂಗಳಿನಲ್ಲಿ ₹8,135 ಕೋಟಿ ಒಳಹರಿವಾಗಿದ್ದರೆ, ಡಿಸೆಂಬರ್‌ನಲ್ಲಿ ₹10,019 ಕೋಟಿಯಷ್ಟಾಗಿದೆ. ಅನಿಶ್ಚಿತ ಮಾರುಕಟ್ಟೆ ಪರಿಸ್ಥಿತಿಯಲ್ಲೂ ಬಂಡವಾಳ ಒಳಹರಿವು ಹೆಚ್ಚಿದೆ ಎಂದು ತಿಳಿಸಿದೆ.

ಮಿಡ್‌ಕ್ಯಾಪ್ ಫಂಡ್ ₹4,176 ಕೋಟಿ, ಸ್ಮಾಲ್‌ಕ್ಯಾಪ್ ₹3,824 ಕೋಟಿ ಮತ್ತು ಲಾರ್ಜ್‌ಕ್ಯಾಪ್ ಫಂಡ್ ₹1,567 ಕೋಟಿ ಒಳಹರಿವಾಗಿದೆ. ಡಿಸೆಂಬರ್‌ನಲ್ಲಿ ಡೆಟ್ ಮ್ಯೂಚುವಲ್ ಫಂಡ್‌ನಲ್ಲಿ ₹1.32 ಲಕ್ಷ ಕೋಟಿ ಹೊರಹರಿವಾಗಿದೆ. ನವೆಂಬರ್‌ನಲ್ಲಿ ಇದು ₹25,693 ಕೋಟಿಯಷ್ಟಾಗಿತ್ತು.

ಚಿನ್ನದ ಇಟಿಎಫ್‌ಗಳಲ್ಲಿ ಹೂಡಿಕೆ ₹11,647 ಕೋಟಿಗೆ ಏರಿಕೆಯಾಗಿದೆ. ಇದು ನವೆಂಬರ್‌ನಲ್ಲಿ ₹3,742 ಕೋಟಿ ಮತ್ತು ಅಕ್ಟೋಬರ್‌ನಲ್ಲಿ ₹7,743 ಕೋಟಿಯಷ್ಟಾಗಿತ್ತು. ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನದಲ್ಲಿ ಹೂಡಿಕೆ ಮಾಡಲು ಮುಂದಾಗಿರುವುದನ್ನು ಇದು ತಿಳಿಸುತ್ತದೆ ಎಂದು ಹೇಳಿದೆ.

ಸೆನ್ಸೆಕ್ಸ್ 604 ಅಂಶ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸೂಚ್ಯಂಕಗಳು ಸತತ ಐದನೇ ವಹಿವಾಟಿನ ದಿನವಾದ ಶುಕ್ರವಾರವೂ ಇಳಿಕೆ ಕಂಡಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 604 ಅಂಶ ಇಳಿಕೆಯಾಗಿ, 83,576ಕ್ಕೆ ವಹಿವಾಟು ಕೊನೆಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 193 ಅಂಶ ಕಡಿಮೆಯಾಗಿ, 25,683ಕ್ಕೆ ಅಂತ್ಯಗೊಂಡಿದೆ.

ಸತತ ಐದು ದಿನದ ವಹಿವಾಟಿನಲ್ಲಿ ಸೆನ್ಸೆಕ್ಸ್ 2,185 ಅಂಶ ಮತ್ತು ನಿಫ್ಟಿ 645 ಅಂಶ ಕುಸಿದಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹3,367 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದರೆ, ದೇಶೀ ಹೂಡಿಕೆದಾರರು ₹3,701 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟು, ಅಮೆರಿಕದ ವ್ಯಾಪಾರ ನೀತಿಯ ಸುತ್ತಲಿನ ಅನಿಶ್ಚಿತತೆ, ಕಚ್ಚಾ ತೈಲದ ಬೆಲೆ ಹೆಚ್ಚಳ, ವಿದೇಶಿ ಬಂಡವಾಳದ ಹೊರಹರಿವು, ರೂಪಾಯಿ ಮೌಲ್ಯ ಇಳಿಕೆಯು ಹೂಡಿಕೆದಾರರ ಮೇಲೆ ಪರಿಣಾಮ ಬೀರಿತು. ಇದು ದೇಶದ ಷೇರುಪೇಟೆ ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.18ರಷ್ಟು ಏರಿಕೆಯಾಗಿದೆ. ಪ್ರತೀ ಬ್ಯಾರಲ್ ದರವು 62.10 ಡಾಲರ್ ಆಗಿದೆ.

ಸರ್ಕಾರಕ್ಕೆ ₹1,144 ಕೋಟಿ ಪಾವತಿಸಲಿರುವ ವಿಐಎಲ್



ನವದೆಹಲಿ (ಪಿಟಿಐ): ಮುಂದಿನ 10 ವರ್ಷದಲ್ಲಿ ಕೇಂದ್ರ ಸರ್ಕಾರಕ್ಕೆ, ₹1,144 ಕೋಟಿ ಪಾವತಿಸಲಾಗುವುದು. ಉಳಿದ ಬಾಕಿಯನ್ನು 2036ರ ಮಾರ್ಚ್‌ನಿಂದ ಪಾವತಿಸಲಾಗುವುದು ಎಂದು ವೊಡಾಫೋನ್ ಐಡಿಯಾ ಕಂಪನಿಯು (ವಿಐಎಲ್) ಶುಕ್ರವಾರ ಹೇಳಿದೆ.

2026ರ ಮಾರ್ಚ್‌ನಿಂದ 2031ರ ಮಾರ್ಚ್‌ವರೆಗೆ ಸರ್ಕಾರಕ್ಕೆ, ಪ್ರತಿ ವರ್ಷ ₹124 ಕೋಟಿ ಪಾವತಿ ಮಾಡಲಾಗುವುದು. 2032ರ ಮಾರ್ಚ್‌ನಿಂದ 2035ರ ಮಾರ್ಚ್‌ವರೆಗೆ ವಾರ್ಷಿಕ ₹100 ಕೋಟಿ ಪಾವತಿಸಲಾಗುವುದು. ಉಳಿದ ಹೊಂದಾಣಿಕೆ ಮಾಡಿದ ಒಟ್ಟು ವರಮಾನಕ್ಕೆ (ಎಜಿಆರ್) ಸಂಬಂಧಿಸಿದ ಬಾಕಿಯನ್ನು ಸಮಾನ ಕಂತುಗಳಲ್ಲಿ 2036ರ ಮಾರ್ಚ್‌ನಿಂದ 2041ರ ಮಾರ್ಚ್‌ವರೆಗೆ ಪಾವತಿಸಲಾಗುತ್ತದೆ ಎಂದು ಕಂಪನಿ ಷೇರುಪೇಟೆಗೆ ತಿಳಿಸಿದೆ.

ವಿಐಎಲ್ ಬಾಕಿ ಇರಿಸಿಕೊಂಡಿರುವ ಎಜಿಆರ್ ಮೊತ್ತ ₹87,695 ಕೋಟಿ. ಇದನ್ನು ಈ ಮಟ್ಟದಲ್ಲೇ ಉಳಿಸಲು ಕೇಂದ್ರ ಸಂಪುಟವು ಇತ್ತೀಚೆಗೆ ನಿರ್ಧರಿಸಿತ್ತು. ಈ ಮೊತ್ತದ ಪಾವತಿಯನ್ನು ಕಂಪನಿಯು 2031-32ರಿಂದ ಆರಂಭಿಸಿ, 2040-41ರೊಳಗೆ ಪೂರ್ಣಗೊಳಿಸಬೇಕಿದೆ ಎಂದು ಹೇಳಿತ್ತು.

ಈ ಬಾಕಿ ಜೊತೆಗೆ ಕಂಪನಿಯು, 2017-18 ಹಾಗೂ 2018-19ಕ್ಕೆ ಸಂಬಂಧಿಸಿದಂತೆ ಪಾವತಿ ಮಾಡಬೇಕಿರುವ ಎಜಿಆರ್ ಬಾಕಿಯನ್ನು ಸುಪ್ರೀಂ ಕೋರ್ಟ್‌ನ 2020ರ ಆದೇಶದ ನಂತರ ಅಂತಿಮಗೊಳಿಸಲಾದ ಮೊತ್ತವನ್ನು 2025-26ರಿಂದ ಆರಂಭಿಸಿ 2030-31ರ ಆರ್ಥಿಕ ವರ್ಷಗಳಲ್ಲಿ ಯಾವುದೇ ಬದಲಾವಣೆಯಿಲ್ಲದೆ ಪಾವತಿಸಬೇಕಿದೆ ಎಂದು ತಿಳಿಸಿದೆ.

ಪ್ರಸಕ್ತ ವರ್ಷ ಜಾಗತಿಕ ಜಿಡಿಪಿ ಶೇ 2.7ರಷ್ಟು ಅಂದಾಜು

ಭಾರತದ ಜಿಡಿಪಿ ಶೇ 6.6: ವಿಶ್ವಸಂಸ್ಥೆ

ವಿಶ್ವಸಂಸ್ಥೆ (ಪಿಟಿಐ): ಅಮೆರಿಕ ಭಾರತದ ಮೇಲೆ ಹೇರಿರುವ ಹೆಚ್ಚುವರಿ ಸುಂಕದ ಪರಿಣಾಮದ ನಡುವೆಯೂ, ಪ್ರಸಕ್ತ ಕ್ಯಾಲೆಂಡರ್ ವರ್ಷದಲ್ಲಿ ಭಾರತವು ಶೇ 6.6ರಷ್ಟು ಜಿಡಿಪಿ ಪ್ರಗತಿ ದಾಖಲಿಸಲಿದೆ ಎಂದು ವಿಶ್ವಸಂಸ್ಥೆ ಅಂದಾಜು ಮಾಡಿದೆ.

ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಇಲಾಖೆ ಶುಕ್ರವಾರ ಜಾಗತಿಕ ಆರ್ಥಿಕ ಸ್ಥಿತಿಗತಿ ಮತ್ತು ಮುನ್ನೋಟ ವರದಿ -2026 ಬಿಡುಗಡೆ ಮಾಡಿದ್ದು, ಈ ಅವಧಿಯಲ್ಲಿ ಜಾಗತಿಕ ಜಿಡಿಪಿ ಶೇ 2.7ರಷ್ಟಾಗಬಹುದು ಎಂದು ಹೇಳಿದೆ.

ಭಾರತದಲ್ಲಿ ಹೂಡಿಕೆ ಹೆಚ್ಚಳ, ಬಡ್ಡಿ ದರದಲ್ಲಿ ಆಗಿರುವ ಇಳಿಕೆ, ತೆರಿಗೆ ಸುಧಾರಣೆಗಳು ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಲಿದೆ. 2025ರಲ್ಲಿ ಭಾರತದ ಜಿಡಿಪಿ ಶೇ 7.4ರಷ್ಟು ಇರಲಿದೆ. 2026ರಲ್ಲಿ ಇದು ಶೇ 6.6ಕ್ಕೆ ಇಳಿಯಬಹುದು. ಆದರೂ ಭಾರತವು ವಿಶ್ವದ ಅತ್ಯಂತ ವೇಗದ ಆರ್ಥಿಕತೆಯಾಗಿ ಉಳಿಯಲಿದೆ ಎಂದು ವರದಿ ಹೇಳಿದೆ.



ಅಮೆರಿಕದ ಸುಂಕವು ಕೆಲವು ಸರಕುಗಳ ಮೇಲೆ ಪರಿಣಾಮ ಬೀರಬಹುದಾದರೂ, ಎಲೆಕ್ಟ್ರಾನಿಕ್ಸ್ ಮತ್ತು ಸ್ಮಾರ್ಟ್‌ಫೋನ್‌ಗಳಂತಹ ಪ್ರಮುಖ ವಲಯಗಳು ಇದರಿಂದ ವಿನಾಯಿತಿ ಪಡೆಯುವ ನಿರೀಕ್ಷೆ ಇದೆ. ಯುರೋಪ್, ಪಶ್ಚಿಮ ಏಷ್ಯಾ ದೇಶಗಳು ಸೇರಿದಂತೆ ಪ್ರಮುಖ ಮಾರುಕಟ್ಟೆಗಳಿಂದ ಭಾರತದ ಸರಕುಗಳಿಗೆ ಬೇಡಿಕೆ ಹೆಚ್ಚಿದೆ. ಇದು ಸುಂಕದ ಒತ್ತಡವನ್ನು ಕಡಿಮೆ ಮಾಡಲಿದೆ. ತಯಾರಿಕೆ ಮತ್ತು ಸೇವಾ ವಲಯದ ಚಟುವಟಿಕೆಯು ಸದೃಢವಾಗಿರಲಿದೆ ಎಂದೂ ವರದಿಯಲ್ಲಿ ಹೇಳಲಾಗಿದೆ.

ಚೀನಾಕ್ಕೆ ಭಾರತದ ರಫ್ತು ಶೇ 33ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ನವೆಂಬರ್‌ವರೆಗೆ ಚೀನಾಕ್ಕೆ, ದೇಶದಿಂದ ₹1.10 ಲಕ್ಷ ಕೋಟಿ ಮೌಲ್ಯದಷ್ಟು ಸರಕುಗಳು ರಫ್ತಾಗಿವೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಶುಕ್ರವಾರ ತಿಳಿಸಿದೆ.

2024-25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ದೇಶದಿಂದ ಚೀನಾಕ್ಕೆ ₹82,965 ಕೋಟಿ ಮೌಲ್ಯದ ಸರಕುಗಳು ರಫ್ತಾಗಿದ್ದವು. ಇದಕ್ಕೆ ಹೋಲಿಸಿದರೆ ಈ ಬಾರಿ ರಫ್ತು ಪ್ರಮಾಣವು ಶೇ 33ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ಚೀನಾವು ಕ್ರಮೇಣವಾಗಿ, ಭಾರತದ ಪ್ರಮುಖ ರಫ್ತು ಕೇಂದ್ರವಾಗಿ ಹೊರಹೊಮ್ಮುತ್ತಿದೆ. ಅಲ್ಲದೆ, ಈ ದತ್ತಾಂಶವು ದ್ವಿಪಕ್ಷೀಯ ವ್ಯಾಪಾರ ಸಂಬಂಧದಲ್ಲಿ ರಚನಾತ್ಮಕ ಬದಲಾವಣೆಯನ್ನು ಸೂಚಿಸುತ್ತಿದೆ ಎಂದು ತಿಳಿಸಿದೆ.

ಎಲೆಕ್ಟ್ರಾನಿಕ್ಸ್ ವಸ್ತುಗಳು, ಕೃಷಿ ಮತ್ತು ಸಾಗರೋತ್ಪನ್ನಗಳು, ದೂರಸಂಪರ್ಕ ಉಪಕರಣಗಳು ಹಾಗೂ ಮಸಾಲೆಗಳಂತಹ ಉತ್ಪನ್ನಗಳು ರಫ್ತು ಹೆಚ್ಚಳಕ್ಕೆ ಕಾರಣವಾಗಿವೆ ಎಂದು ತಿಳಿಸಿದೆ.

ಅಮೆರಿಕದಲ್ಲಿ ಭಾರತದ ಸರಕುಗಳಿಗೆ ಹೆಚ್ಚಿನ ಸುಂಕ ಹೇರಲಾಗುತ್ತಿದೆ. ಇದರಿಂದ ಅಲ್ಲಿಗೆ ರಫ್ತು ಮಾಡಲು ಕಷ್ಟಕರವಾಗುತ್ತಿದೆ. ಈ ವೇಳೆ ಭಾರತವು ವಿವಿಧ ಮಾರುಕಟ್ಟೆಗಳಲ್ಲಿ ವ್ಯಾಪಾರದ ಅವಕಾಶಕ್ಕಾಗಿ ಅನ್ವೇಷಣೆ ಮಾಡುತ್ತಿದೆ ಎಂದು ರಫ್ತುದಾರರೊಬ್ಬರು ಹೇಳಿದ್ದಾರೆ.

ರಾಷ್ಟ್ರೀಯ ಐಇಡಿ ದತ್ತಾಂಶ ವೇದಿಕೆ ಉದ್ಘಾಟನೆ

ಗುರುಗ್ರಾಮ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 'ರಾಷ್ಟ್ರೀಯ ಡಿಜಿಟಲ್ ಐಇಡಿ ದತ್ತಾಂಶ ನಿರ್ವಹಣಾ ವ್ಯವಸ್ಥೆ'ಯನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ (ಎನ್‌ಐಡಿಎಂಎಸ್) ಶುಕ್ರವಾರ ಉದ್ಘಾಟಿಸಿದರು.

ರಾಷ್ಟ್ರೀಯ ರಕ್ಷಾ ವಿಶ್ವವಿದ್ಯಾಲಯ, ಐಐಟಿ-ದೆಹಲಿ, ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಹಾಗೂ ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರಗಳ ಸಹಾಯದೊಂದಿಗೆ ಭಯೋತ್ಪಾದನಾ ನಿಗ್ರಹ ದಳವು (ಎನ್‌ಎಸ್‌ಜಿ) ಎನ್‌ಐಡಿಎಂಎಸ್ ಅನ್ನು ಅಭಿವೃದ್ಧಿಪಡಿಸಿದೆ.

ವಿವಿಧ ರೀತಿಯ ಬಾಂಬ್ ದಾಳಿಯ ಮಾದರಿಗಳು ಹಾಗೂ ಕಾರ್ಯವಿಧಾನವನ್ನು ವಿಶ್ಲೇಷಿಸಲು, ಪೊಲೀಸರು, ವಿವಿಧ ತನಿಖಾ ಸಂಸ್ಥೆಗಳು, ರಾಜ್ಯ ಭಯೋತ್ಪಾದಕ ನಿಗ್ರಹ ದಳಗಳು ಹಾಗೂ ಎನ್‌ಐಎ ಸೇರಿದಂತೆ ಹಲವು ಸಂಸ್ಥೆಗಳಿಗೆ ಸಮಗ್ರ ದತ್ತಾಂಶವನ್ನು ಒದಗಿಸುತ್ತದೆ.

'ಇದು ಭಯೋತ್ಪಾದನೆಯ ವಿರುದ್ಧ ಮುಂದಿನ ಪೀಳಿಗೆಗೆ ಭದ್ರತಾ ಗುರಾಣಿಯಾಗಿ ಹಾಗೂ ದೇಶದ ಆಸ್ತಿಯಾಗಿ ಒದಗಿಬರಲಿದೆ. ದೇಶದಲ್ಲಿ ನಡೆಯುವ ಎಲ್ಲಾ ರೀತಿಯ ಬಾಂಬ್ ದಾಳಿಗಳನ್ನು ಸಮಗ್ರವಾಗಿ ತಡೆಗಟ್ಟುವ ಗೋಡೆಯಾಗಿರಲಿದೆ' ಎಂದು ಅಮಿತ್ ಶಾ ಹೇಳಿದರು.

ಕಚ್ಚಾ ಬಾಂಬ್ ಸ್ಫೋಟಗಳಿಗೆ ಸಂಬಂಧಿಸಿದಂತೆ 'ಒಂದು ರಾಷ್ಟ್ರ, ಒಂದು ದತ್ತಾಂಶ ಭಂಡಾರ'ವಾಗಿ ಎನ್‌ಐಡಿಎಂಎಸ್ ಕಾರ್ಯನಿರ್ವಹಿಸಲಿದೆ. ಸಂಗ್ರಹಿಸಲಾಗುವ ವಿಧಿವಿಜ್ಞಾನ ಸಾಕ್ಷ್ಯಗಳ ಗುಣಮಟ್ಟ ಹೆಚ್ಚಿಸುವ ಮೂಲಕ ತನಿಖೆಯನ್ನು ವೇಗಗೊಳಿಸಲು ಸಹಾಯ ಮಾಡುತ್ತದೆ ಹಾಗೂ ಸಂಸ್ಥೆಗಳ ನಡುವಿನ ಸಮನ್ವಯವನ್ನು ಹೆಚ್ಚಿಸುತ್ತದೆ ಎಂದೂ ಹೇಳಿದರು.

ಹೆದ್ದಾರಿಯಲ್ಲಿ ಹೆಚ್ಚಿದ ದರೋಡೆ

ಒಂದನೇ ಪುಟದಿಂದ...

ವಾಹನಗಳ ಡ್ಯಾಶ್ ಬೋರ್ಡ್ ಕ್ಯಾಮೆರಾದಲ್ಲಿ ಕೃತ್ಯಗಳು ಸೆರೆಯಾಗುತ್ತಿವೆ. ಈ ದೃಶ್ಯಾವಳಿ ಆಧರಿಸಿ ಪೊಲೀಸರು ತನಿಖೆ ನಡೆಸುತ್ತಿದ್ದರೂ ಕೃತ್ಯ ಎಸಗಿದವರ ಸುಳಿವು ದೊರೆಯುತ್ತಿಲ್ಲ.

'ಹೆದ್ದಾರಿಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೆಚ್ಚು ಪ್ರಕರಣಗಳು ನಡೆದಿವೆ. ಬಹುತೇಕ ಪ್ರಕರಣಗಳಲ್ಲಿ ಆರೋಪಿಗಳ ಬಂಧನ ಸಾಧ್ಯವಾಗಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹೆದ್ದಾರಿ ಬದಿಯಲ್ಲಿಯೇ ಹೊಂಚು: ಬೆಂಗಳೂರು-ಚೆನ್ನೈ 'ಎಕ್ಸ್‌ಪ್ರೆಸ್ ವೇ'ನಲ್ಲಿ ದರೋಡೆಕೋರರು ಹೆಚ್ಚು ಸಕ್ರಿಯ ಆಗಿದ್ದಾರೆ ಎಂದು ವಾಹನ ಚಾಲಕರು, ಪ್ರಯಾಣಿಕರು ಆತಂಕ ವ್ಯಕ್ತಪಡಿಸಿದ್ದಾರೆ. ದರೋಡೆಕೋರರನ್ನು ಪತ್ತೆಹಚ್ಚಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ವಕೀಲ ಹುಸೇನ್ ಅವರು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಮನವಿ ಸಲ್ಲಿಸಿದ್ದರು. ಆದರೂ, ಹೆದ್ದಾರಿಗಳಲ್ಲಿ ರಾತ್ರಿ ವೇಳೆ ದುಷ್ಕರ್ಮಿಗಳು ನಿರಾತಂಕವಾಗಿ ಕೃತ್ಯ ಎಸಗುತ್ತಿದ್ದಾರೆ ಎಂಬ ಆರೋಪವಿದೆ.

ಹಾವೇರಿ- ಮೊಳಕಾಲ್ಮುರು, ಬಂಗಾರಪೇಟೆ -ಬಾಗೇಪಲ್ಲಿ, ದೇವಸಗೂರು- ರಾಯಚೂರು- ಕಟಗೋಡು, ತುಮಕೂರು -ಶಿವಮೊಗ್ಗ- ಹೊನ್ನಾವರದ ನಡುವೆ ಹಾದು ಹೋಗಿರುವ ರಾಜ್ಯ ಹೆದ್ದಾರಿಯಲ್ಲಿ ದರೋಡೆಕೋರರ ತಂಡಗಳು ಹೆಚ್ಚಾಗಿ ಕೃತ್ಯ ಎಸಗಿವೆ ಎಂದು ಮೂಲಗಳು ಹೇಳಿವೆ.

ಪ್ರಕರಣಗಳ ವಿವರ

ವರ್ಷ	ರಾಜ್ಯ ಹೆದ್ದಾರಿ		ರಾಷ್ಟ್ರೀಯ ಹೆದ್ದಾರಿ	
	ಸುಲಿಗೆ	ದರೋಡೆ	ಸುಲಿಗೆ	ದರೋಡೆ
2023	39	17	81	23
2024	35	22	66	16
2025	25	28	60	18

ಬೆಂಗಳೂರು-ಪುಣೆ, ಬೆಂಗಳೂರು- ಹಾಸನ -ಮಂಗಳೂರು, ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ವೇ, ಮಂಗಳೂರು- ಉಡುಪಿ-ಕಾರವಾರ, ಕುಣಿಗಲ್-ಮೈಸೂರು, ರಾಮನಗರ- ಕನಕಪುರ ಮಾರ್ಗವಾಗಿ ತಮಿಳುನಾಡಿನ ಕೊಯಮತ್ತೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಗಳಲ್ಲೂ ಚಾಲಕರು ಹಾಗೂ ಪ್ರಯಾಣಿಕರಿಂದ ಹಣ ದೋಚಲಾಗುತ್ತಿದೆ. ಬೇರೆ ಸ್ಥಳಗಳಲ್ಲಿ ನಡೆಯುವ ಶುಭ ಸಮಾರಂಭಗಳಿಗೆ ವಾಹನಗಳಲ್ಲಿ ತೆರಳುತ್ತಿದ್ದವರು ಆಭರಣ ಕಳೆದುಕೊಳ್ಳುತ್ತಿದ್ದಾರೆ. ಹಲ್ಲೆಗೂ ಒಳಗಾಗಿದ್ದಾರೆ.

> ರಾತ್ರಿ 10ರ ಬಳಿಕ ನೈಸ್ ರಸ್ತೆಯಲ್ಲಿ ದ್ವಿಚಕ್ರ ವಾಹನ ಸಂಚಾರಕ್ಕೆ ಅವಕಾಶ ಇರುವುದಿಲ್ಲ. ವೇಗದ ಕಾರಣಕ್ಕೆ ಅಪಘಾತಗಳು ಸಂಭವಿಸುತ್ತಿವೆ. ಇತ್ತೀಚೆಗೆ ದರೋಡೆ ನಡೆದಿಲ್ಲ
>
> **ಅನೂಪ್ ಶೆಟ್ಟಿ,** ಡಿಸಿಪಿ, ಪಶ್ಚಿಮ ಸಂಚಾರ ವಿಭಾಗ

'ಬೆಂಗಳೂರು-ಚೆನ್ನೈ 'ಎಕ್ಸ್‌ಪ್ರೆಸ್ ವೇ'ನ ಕೆಜಿಎಫ್ ಬಳಿ ಕಲ್ಲು, ಕಬ್ಬಿಣದ ರಾಡುಗಳನ್ನಿಟ್ಟು ದುಷ್ಕರ್ಮಿಗಳು ಅಪಘಾತ ಮಾಡುತ್ತಾರೆ. ಬಳಿಕ, ದರೋಡೆ ನಡೆಸುತ್ತಾರೆ. ಅಪಘಾತದಿಂದ ಚಾಲಕರು ಹಾಗೂ ಪ್ರಯಾಣಿಕರು ಗಂಭೀರವಾಗಿ ಗಾಯಗೊಳ್ಳುತ್ತಿದ್ದಾರೆ. ಹೆದ್ದಾರಿಗಳಲ್ಲಿ ತಕ್ಷಣಕ್ಕೆ ಯಾರೂ ನೆರವಿಗೂ ಬರುವುದಿಲ್ಲ' ಎಂದು ಹುಸೇನ್ ಆತಂಕ ವ್ಯಕ್ತಪಡಿಸಿದ್ದಾರೆ.

ಹೆದ್ದಾರಿಗಳಲ್ಲಿ ಸಂಶಯಾಸ್ಪದ ವ್ಯಕ್ತಿಗಳು, ವಾಹನಗಳನ್ನು ತಡೆದು ತಪಾಸಣೆ ಮಾಡುವ ವ್ಯವಸ್ಥೆ ಇಲ್ಲ. ವಿದ್ಯುತ್ ದೀಪಗಳನ್ನು ಹೆದ್ದಾರಿ ಪ್ರಾಧಿಕಾರದವರು ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿಲ್ಲ ಎಂದು ಚಾಲಕ ಮಹೇಶ್ ಆರೋಪಿಸಿದರು.

'ಎಂಒಬಿ ಕಾರ್ಡ್‌ಗೆ ಹೆಸರು ಸೇರ್ಪಡೆ'

'2023ರಲ್ಲಿ 160, 2024ರಲ್ಲಿ 139 ಹಾಗೂ 2025ರಲ್ಲಿ 131 ಪ್ರಕರಣಗಳು ನಡೆದಿವೆ. ಹೆದ್ದಾರಿಗಳಲ್ಲಿ ಗಸ್ತು ನಡೆಸಲು ಪ್ರತಿ ಠಾಣೆಗೂ ದ್ವಿಚಕ್ರ ವಾಹನ ವಿತರಿಸಲಾಗಿದೆ. ದರೋಡೆಕೋರರ ಕೃತ್ಯ ತಡೆಗಟ್ಟಲು ದಿನದ 24 ಗಂಟೆಯೂ ಮೂರು ಪಾಳಿಯಲ್ಲಿ 112 ಇಆರ್‌ಎಸ್‌ಎಸ್ ಗಸ್ತು (ಪೆಟ್ರೋಲಿಂಗ್) ನಿಯೋಜಿಸಲಾಗಿದೆ. ಕೃತದಲ್ಲಿ ಭಾಗಿ ಆದವರ ವಿರುದ್ಧ ಎಂಒಬಿ ಕಾರ್ಡ್(ಅಪರಾಧ ಹಿನ್ನೆಲೆಯುಳ್ಳವ) ತೆರೆಯಲಾಗುತ್ತಿದೆ. ಸಂಶಯಾಸ್ಪದ ವ್ಯಕ್ತಿಗಳನ್ನು ಗುರುತಿಸಲು ಸಿಬ್ಬಂದಿಗೆ ಎಂಸಿಸಿಟಿ-ಎನ್‌ಎಸ್ ಮೊಬೈಲ್ ಅಪ್ಲಿಕೇಶನ್ ಬಳಸಲು ಸೂಚಿಸಲಾಗಿದೆ' ಎಂದು ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಕಾರ್ಯತಂತ್ರ ಕದಿಯಲು ದಾಳಿ'

ಒಂದನೇ ಪುಟದಿಂದ...

ಶೋಧ ನಡೆಯುತ್ತಿದ್ದ ಸ್ಥಳಕ್ಕೆ ಬಂದದ್ದನ್ನು ಸಮರ್ಥಿಸಿಕೊಂಡ ಮಮತಾ, 'ಯಾರಾದರೂ ನನ್ನನ್ನು ಕೊಲ್ಲಲು ಪ್ರಯತ್ನಿಸಿದರೆ, ಅವರಿಂದ ರಕ್ಷಿಸಿಕೊಳ್ಳುವ ಹಕ್ಕು ನನಗಿಲ್ಲವೇ? ನನ್ನ ಪಕ್ಷ ಅಸ್ತಿತ್ವ ಕಳೆದುಕೊಂಡರೆ, ನಾನು ಜನರಿಗಾಗಿ ಹೋರಾಡುವುದು ಹೇಗೆ?' ಎಂದರು.

ಮಮತಾ ದೂರು: 'ಐ-ಪ್ಯಾಕ್' ಮೇಲಿನ ದಾಳಿಗೆ ಸಂಬಂಧಿಸಿದಂತೆ ಮಮತಾ ಅವರು ಶುಕ್ರವಾರ ಇ.ಡಿಯ ಅಪರಿಚಿತ ಅಧಿಕಾರಿಗಳು ಮತ್ತು ಸಿಆರ್‌ಪಿಎಫ್ ಸಿಬ್ಬಂದಿ ವಿರುದ್ಧ ಕೋಲ್ಕತ್ತದ ಶೇಕ್ಸ್‌ಪಿಯರ್ ಸಾರಣಿ ಪೊಲೀಸ್ ಠಾಣೆ ಹಾಗೂ ಬಿಧಾನ್‌ನಗರದ ಎಲೆಕ್ಟ್ರಾನಿಕ್ ಕಾಂಪ್ಲೆಕ್ಸ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. 'ಅವರ ದೂರಿನಂತೆ ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ಆರಂಭಿಸಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆದರಿಕೆ, ಕಳ್ಳತನ ಮತ್ತು ಅತಿಕ್ರಮ ಪ್ರವೇಶಕ್ಕೆ ಸಂಬಂಧಿಸಿದಂತೆ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಹಾಗೂ ಐ.ಟಿ ಕಾಯ್ದೆಯ ಸೆಕ್ಷನ್ 66ರ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.

> ಮಮತಾ ನಡೆಯ ಸುತ್ತ ಹಲವು ಅನುಮಾನಗಳು ಹುಟ್ಟಿವೆ. ಅವರು ಪಕ್ಷಕ್ಕೆ ಸಂಬಂಧಿಸಿದ ಸೂಕ್ಷ್ಮವಾದ ಏನನ್ನೋ ರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ
>
> **ರವಿ ಶಂಕರ್ ಪ್ರಸಾದ್,** ಬಿಜೆಪಿ ನಾಯಕ

ಸಿಬಿಐ ತನಿಖೆಗೆ ಇ.ಡಿ ಆಗ್ರಹ

ಮಮತಾ ಬ್ಯಾನರ್ಜಿ ಮತ್ತು ಕೋಲ್ಕತ್ತದ ಹಿರಿಯ ಪೊಲೀಸ್ ಅಧಿಕಾರಿಗಳ ವಿರುದ್ಧ ಸಿಬಿಐ ತನಿಖೆ ನಡೆಸುವಂತೆ ಕೋರಿ ಜಾರಿ ನಿರ್ದೇಶನಾಲಯ ಕಲ್ಕತ್ತಾ ಹೈಕೋರ್ಟ್ ಮೊರೆಹೋಗಿದೆ.

ಮಮತಾ ಅವರು ಪೊಲೀಸ್ ಅಧಿಕಾರಿಗಳನ್ನು ಬಳಸಿಕೊಂಡು ಇ.ಡಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ. ಸರ್ಕಾರದ ಉನ್ನತ ಹುದ್ದೆಯಲ್ಲಿರುವವರು ಇದರಲ್ಲಿ ನೇರವಾಗಿ ಭಾಗಿಯಾಗಿದ್ದಾರೆ ಎಂದು ಇ.ಡಿ ಆರೋಪಿಸಿದೆ.

'ಪ್ರಸ್ತುತ ಪ್ರತಿವಾದಿಗಳಾದ ಮುಖ್ಯಮಂತ್ರಿ, ಪೊಲೀಸ್ ಅಧಿಕಾರಿಗಳು ಮತ್ತು ಇದರ ಹಿಂದೆ ಒಂದು ತಂಡವಾಗಿ ಕೆಲಸ ಮಾಡಿದ ಎಲ್ಲ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಸಿಬಿಐಗೆ ನಿರ್ದೇಶಿಸಬೇಕು' ಎಂದು ಅರ್ಜಿಯಲ್ಲಿ ಕೋರಿದೆ.

ಶೋಧ ನಡೆಸುತ್ತಿದ್ದ ಸ್ಥಳದಿಂದ 'ಕಾನೂನು ಬಾಹಿರವಾಗಿ ಮತ್ತು ಬಲವಂತವಾಗಿ' ತೆಗೆದುಕೊಂಡು ಹೋಗಿರುವ ಎಲ್ಲಾ ಡಿಜಿಟಲ್ ಸಾಧನಗಳು, ಎಲೆಕ್ಟ್ರಾನಿಕ್ ದಾಖಲೆಗಳು ಮತ್ತು ಕಡತಗಳನ್ನು ತಕ್ಷಣವೇ ವಾಪಸ್ ಪಡೆದು ಇ.ಡಿ ವಶಕ್ಕೆ ಒಪ್ಪಿಸಬೇಕು ಎಂದೂ ಒತ್ತಾಯಿಸಿದೆ.

ವಿಚಾರಣೆ 14ಕ್ಕೆ ಮುಂದೂಡಿಕೆ

'ಐ-ಪ್ಯಾಕ್' ಕಚೇರಿ ಮೇಲಿನ ಇ.ಡಿ ದಾಳಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಕಲ್ಕತ್ತಾ ಹೈಕೋರ್ಟ್ ಜನವರಿ 14ಕ್ಕೆ ಮುಂದೂಡಿದೆ.

ಇ.ಡಿ ಮತ್ತು ಟಿಎಂಸಿ ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಸುವ್ರಾ ಘೋಷ್ ಅವರು ಶುಕ್ರವಾರ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕಿತ್ತು. ಆದರೆ ವಕೀಲರು ಹಾಗೂ ಕಕ್ಷಿದಾರರು ಸೇರಿದಂತೆ ಹೆಚ್ಚಿನ ಸಂಖ್ಯೆಯ ಜನ ಸೇರಿದ್ದರು. ಅರ್ಜಿಗಳೊಂದಿಗೆ ಸಂಬಂಧವಿಲ್ಲದವರು ಕೊಠಡಿಯಿಂದ ಹೊರಹೋಗುವಂತೆ ನ್ಯಾಯಮೂರ್ತಿ ಮನವಿ ಮಾಡಿದರೂ, ಅಲ್ಲಿದ್ದವರು ಕಿವಿಗೊಡಲಿಲ್ಲ. ಇದರಿಂದ ವಿಚಾರಣೆಯನ್ನು ಅನಿವಾರ್ಯವಾಗಿ ಮುಂದೂಡಬೇಕಾಯಿತು.

ಟಿಎಂಸಿ ಸಂಸದರ ಪ್ರತಿಭಟನೆ

ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡಿದೆ ಎಂದು ಆರೋಪಿಸಿ ನವದೆಹಲಿಯಲ್ಲಿ ಗೃಹ ಸಚಿವಾಲಯದ ಕಚೇರಿಯ ಹೊರಗೆ ಶುಕ್ರವಾರ ಪ್ರತಿಭಟನೆ ನಡೆಸಿದ ಟಿಎಂಸಿ ಸಂಸದರನ್ನು ಪೊಲೀಸರು ವಶಕ್ಕೆ ಪಡೆದರು.

ಡೆರೆಕ್ ಒಬ್ರಯಾನ್, ಮಹುವಾ ಮೊಯಿತ್ರಾ ಮತ್ತು ಶತಾಬ್ದಿ ರಾಯ್ ಸೇರಿದಂತೆ ಪ್ರತಿಭಟನೆ ನಡೆಸಿದ ಟಿಎಂಸಿಯ ಎಂಟು ಸಂಸದರನ್ನು ಪೊಲೀಸರು ಬಲ ಪ್ರಯೋಗಿಸಿ ವಶಕ್ಕೆ ಪಡೆದರು. 'ಮಧ್ಯಾಹ್ನ 3ರ ವೇಳೆಗೆ ಎಲ್ಲರನ್ನೂ ಬಿಡುಗಡೆ ಮಾಡಲಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ.

ಅಡಿಕೆ ಧಾರಣೆ

ಮಾರುಕಟ್ಟೆ	ತಳಿ	ದರ
ಕುಮಟಾ	ಚಾಲಿ	47899-51343
	ಚಿಪ್ಪು	29089-37099
	ಕೋಕ	12689-31999
	ಫ್ಯಾಕ್ಟರಿ	9069-24869
	ಹೊಸಚಾಲಿ	41099-46033
ಪುತ್ತೂರು	ಕೋಕ	20000-35500
	ಹೊಸತು	26000-46000
ಶಿವಮೊಗ್ಗ	ಬೆಟ್ಟೆ	51199-67000
	ಗೊರಬಲು	19010-41696
	ರಾಶಿ	47199-58699
	ಸರಕು	57100-85520
ಸಿದ್ದಾಪುರ	ಬಿಳಿಗೋಟು	33686-40536
	ಚಾಲಿ	45789-50199
	ಕೋಕ	24719-34108
	ಹೊಸಚಾಲಿ	37619-44108
	ಕೆಂಪುಗೋಟು	28319-36689
	ರಾಶಿ	52689-58599
	ತಟ್ಟಿಬೆಟ್ಟೆ	43789-52699
ಶಿರಸಿ	ಬೆಟ್ಟೆ	39699-54899
	ಬಿಳಿಗೋಟು	23599-43666
	ಚಾಲಿ	45478-52566
	ಕೆಂಪುಗೋಟು	32099-36399
	ರಾಶಿ	52181-59066
ಯಲ್ಲಾಪುರ	ಅಪಿ	65009-74300
	ಬಿಳಿಗೋಟು	16899-39799
	ಕೋಕ	16299-31299
	ಹಳೆಚಾಲಿ	38892-51599
	ಹೊಸಚಾಲಿ	38733-43201
	ಕೆಂಪುಗೋಟು	18009-40969
	ರಾಶಿ	52099-64690
	ತಟ್ಟಿಬೆಟ್ಟೆ	38099-51666

'ಪ್ರತಿಭಟನಕಾರರ ವಿರುದ್ಧ ಕಠಿಣ ಕ್ರಮ'

ದುಬೈ (ಎಪಿ): ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವವರ ಮೇಲೆ ಭದ್ರತಾ ಪಡೆಗಳು ಕಠಿಣ ಕ್ರಮ ಕೈಗೊಳ್ಳುತ್ತವೆ ಎಂದು ಇರಾನ್ ಸರ್ವೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ ಶುಕ್ರವಾರ ಎಚ್ಚರಿಕೆ ನೀಡಿದ್ದಾರೆ.



ಅಯಾತೊಲ್ಲಾ ಅಲಿ ಖಮೇನಿ

ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿರುವವರ ವಿರುದ್ಧ ಕ್ರಮ ಕೈಗೊಂಡರೆ ಅವರ ನೆರವಿಗೆ ಧಾವಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ್ದ ಎಚ್ಚರಿಕೆಗೆ ಖಮೇನಿ ತಿರುಗೇಟು ನೀಡಿದ್ದಾರೆ.

ಟೆಹರಾನ್‌ನಲ್ಲಿ ಜನಸಮೂಹವನ್ನು ಉದ್ದೇಶಿಸಿ ಮಾತನಾಡಿದ ಖಮೇನಿ, 'ಟ್ರಂಪ್ ಅವರ ಕೈಗಳಲ್ಲಿ ಇರಾನಿಯರ ರಕ್ತದ ಕಲೆ ಇದೆ. ಅವರನ್ನು ಮೆಚ್ಚಿಸುವ ಸಲುವಾಗಿ ಪ್ರತಿಭಟನಕಾರರು ತಮ್ಮ ನೆಲವನ್ನು ಹಾಳು ಮಾಡುತ್ತಿದ್ದಾರೆ. ಪ್ರತಿಭಟನಕಾರರ ನೆರವಿಗೆ ಬರುವುದಾಗಿ ಹೇಳಿದ್ದಾರೆ. ಅದಕ್ಕೂ ಮೊದಲು ಟ್ರಂಪ್ ತಮ್ಮದೇ ದೇಶದ ಬಗ್ಗೆ ಗಮನಹರಿಸಲಿ' ಎಂದು ಸಲಹೆ ನೀಡಿದರು.

ಸರ್ಕಾರಿ ಸ್ವಾಮ್ಯದ ಮಾಧ್ಯಮ ಪ್ರತಿಭಟನಕಾರರನ್ನು ಭಯೋತ್ಪಾದಕರು ಎಂದು ಪದೇ ಪದೇ ಹೇಳಿದೆ.

'ಪ್ರತಿಭಟನಕಾರರಿಗೆ ನಿರ್ಣಾಯಕ, ಗರಿಷ್ಠ ಮತ್ತು ಕಾನೂನಿನ ವಿನಾಯಿತಿ ಇಲ್ಲದೇ ಕಠಿಣ ಶಿಕ್ಷೆ ವಿಧಿಸಲಾಗುತ್ತದೆ' ಎಂದು ಇರಾನ್‌ನ ನ್ಯಾಯಾಂಗ ಮುಖ್ಯಸ್ಥರು ಎಚ್ಚರಿಕೆ ನೀಡಿದ್ದಾರೆ.

ಇಂಟರ್‌ನೆಟ್ ಸ್ಥಗಿತ: ಗುರುವಾರ ರಾತ್ರಿ ಪ್ರತಿಭಟನೆ ಮತ್ತಷ್ಟು ತೀವ್ರಗೊಂಡ ಪರಿಣಾಮ ಇಂಟರ್‌ನೆಟ್, ದೂರವಾಣಿ ಸಂಪರ್ಕಗಳನ್ನು ಕಡಿತಗೊಳಿಸಲಾಗಿತ್ತು.

‘ನಾಯಿಪ್ರೇಮಿಗಳು ಪ್ರಕರಣ ದಾಖಲಿಸಲಿ’

ನಾಯಿಗಳ ಕಾಳಜಿ ಮಾಡುವವರ ತೊಂದರೆ ಬಗ್ಗೆ ವಿಚಾರಣೆ ಇಲ್ಲ; ಸುಪ್ರೀಂ

ನವದೆಹಲಿ (ಪಿಟಿಐ): ‘ನಾಯಿಗಳಿಗೆ ಆಹಾರ ನೀಡುವ ಮಹಿಳೆಯರು ಮತ್ತು ನಾಯಿಗಳ ಕಾಳಜಿ ಮಾಡುವವರಿಗೆ ಆಗುತ್ತಿರುವ ತೊಂದರೆಗಳ ಕುರಿತು ಹೆಚ್ಚು ವಿಚಾರಣೆ ನಡೆಸಲು ಹೋಗುವುದಿಲ್ಲ’ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿತು.

‘ಇದು ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದ ವಿಚಾರವಾಗಿದ್ದು, ಸಂಬಂಧಿತ ವ್ಯಕ್ತಿಗಳು ಈ ಬಗ್ಗೆ ಎಫ್‌ಐಆರ್ ದಾಖಲಿಸಬೇಕು’ ಎಂದು ತಿಳಿಸಿತು.

ಬೀದಿ ನಾಯಿಗಳ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯವು, ‘ನಾಯಿಗಳಿಗೆ ಆಹಾರ ನೀಡುವ ಮಹಿಳೆಯರ ವಿರುದ್ಧ ಅವಹೇಳನಕಾರಿ ಹೇಳಿಕೆ ಮತ್ತು ಕಿರುಕುಳ ನೀಡುತ್ತಿರುವ ಆರೋಪದ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿತು.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್‌.ವಿ.ಅಂಜಾರಿಯಾ ಅವರ ನೇತೃತ್ವದ ನ್ಯಾಯಪೀಠವು, ‘ಇಲ್ಲಿ ನಡೆದ ಕೆಲವು ವಾದವು ವಾಸ್ತವಕ್ಕೆ ವಿರುದ್ಧವಾಗಿದೆ. ಬೀದಿ ನಾಯಿಗಳು ಮಕ್ಕಳು ಮತ್ತು ವಯೋವೃದ್ಧರ ಮೇಲೆ ದಾಳಿ ನಡೆಸಿರುವ ಹಲವು ವಿಡಿಯೊಗಳು ಲಭ್ಯವಿವೆ’ ಎಂದು ಹೇಳಿತು.

ಈ ಮುಂಚಿನ ಆದೇಶವನ್ನು ಪರಿಶೀಲಿಸುವಂತೆ ನಾಯಿ ಪ್ರೇಮಿಗಳು ಸಲ್ಲಿಸಿದ್ದ ಅರ್ಜಿಯೂ ಸೇರಿದಂತೆ ನಿರ್ದೇಶನದ ಕಟ್ಟುನಿಟ್ಟಿನ ಪಾಲನೆಗೆ ಸೂಚಿಸಬೇಕೆಂದು ಕೋರಿದ್ದ ಅರ್ಜಿಗಳನ್ನು ನ್ಯಾಯಾಲಯವು ವಿಚಾರಣೆ ನಡೆಸಿತು.

‘ಸುಪ್ರೀಂ ಕೋರ್ಟ್‌ನ ಈ ಮುಂಚಿನ ಆದೇಶ ಪಾಲಿಸುವಂತೆ ಹೇಳುತ್ತಾ, ತನಿಖಾ ಸಂಸ್ಥೆಗಳಂತೆ ವರ್ತಿಸುತ್ತಿರುವ ಕೆಲವರು ಮಹಿಳೆಯರನ್ನು ನಿಂದಿಸುತ್ತಿದ್ದಾರೆ, ಅವರನ್ನು ಥಳಿಸುತ್ತಿದ್ದಾರೆ’ ಎಂದು ಹಿರಿಯ ವಕೀಲೆ ಮಹಾಲಕ್ಷ್ಮಿ ಪಾವನಿ ಹೇಳಿದರು.

ನ್ಯಾಯಮೂರ್ತಿ ವಿಕ್ರಮ್ ನಾಥ್ ಅವರು, ‘ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ, ನಿಮ್ಮನ್ನು ತಡೆದಿರುವುದು ಯಾರು’ ಎಂದು ಪ್ರಶ್ನಿಸಿದರು.

‘ಇಂಥ ಪ್ರತಿಯೊಂದು ಪ್ರಕರಣವನ್ನೂ ನ್ಯಾಯಾಲಯವು ವಿಚಾರಣೆ ನಡೆಸಲು ಸಾಧ್ಯವಿಲ್ಲ. ಅದು ಕಾನೂನು ಸುವ್ಯವಸ್ಥೆ ಸಮಸ್ಯೆ. ಮಹಿಳೆಯರಿಗೆ ತೊಂದರೆ ನೀಡುವುದು ಅಪರಾಧ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ತಿಳಿಸಿತು.

ನಂತರ ಪ್ರಕರಣದ ವಿಚಾರಣೆಯು ಜ. 13ರಂದು ಮುಂದುವರಿಯಲಿದೆ ಎಂದು ಹೇಳಿತು.

‘ನಟಿ ಶರ್ಮಿಳಾ ಟ್ಯಾಗೋರ್ ಹೇಳಿಕೆ ವಾಸ್ತವಕ್ಕೆ ದೂರ’

‘ಬೀದಿಗಳನ್ನು ನಾಯಿಗಳಿಂದ ಮುಕ್ತವಾಗಿರಿಸುವುದೊಂದೇ ಎಲ್ಲ ಸಮಸ್ಯೆಗೆ ಪರಿಹಾರ ಅಲ್ಲ’ ಎಂಬ ನಟಿ ಶರ್ಮಿಳಾ ಟ್ಯಾಗೋರ್ ಅವರ ವಾದವು ವಾಸ್ತವಕ್ಕೆ ವಿರುದ್ಧವಾಗಿದೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು.

ಶರ್ಮಿಳಾ ಪರ ವಕೀಲರು, ‘ಜನಸ್ನೇಹಿ ನಾಯಿಗಳು ಏಮ್ಸ್‌ನಲ್ಲಿ ಹಲವು ವರ್ಷಗಳಿಂದಲೂ ಇವೆ’ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಲಯವು, ‘ಬೀದಿ ನಾಯಿಗಳನ್ನು ಶಸ್ತ್ರಚಿಕಿತ್ಸೆ ಕೊಠಡಿಗೂ ಕೊಂಡೊಯ್ಯುತ್ತೀರಾ? ಬೀದಿ ನಾಯಿಗಳಲ್ಲಿ ಉಣ್ಣೆ ಹುಳುಗಳು ಇರುತ್ತವೆ. ಇಂಥ ನಾಯಿಗಳು ಆಸ್ಪತ್ರೆ ಆವರಣದಲ್ಲಿ ಇರುವುದರಿಂದ ಆಗುವ ಅಪಾಯದ ಬಗ್ಗೆ ಅರಿವಿದೆಯೇ? ಬೀದಿ ನಾಯಿಗಳು ಆಸ್ಪತ್ರೆಗಳಲ್ಲೂ ಇರುತ್ತವೆ ಎಂಬುದನ್ನು ವೈಭವೀಕರಿಸಬೇಡಿ’ ಎಂದು ತೀಕ್ಷ್ಣವಾಗಿ ಹೇಳಿತು.

‘ಆಕ್ರಮಣಕಾರಿ ನಾಯಿಗಳನ್ನು ಗುರುತಿಸಲು ಬಣ್ಣ ಆಧರಿತ ಕಾಲರ್ ಅಳವಡಿಸಬಹುದು. ಜಾರ್ಜಿಯಾ ಮತ್ತು ಅರ್ಮೇನಿಯಾಗಳಲ್ಲಿ ಇದು ಚಾಲ್ತಿಯಲ್ಲಿದೆ’ ಎಂದು ವಕೀಲರು ಸಲಹೆ ನೀಡಿದರು.

ಈ ವಾದವನ್ನೂ ಅಲ್ಲಗಳೆದ ನ್ಯಾಯಾಲಯ, ‘ಆ ದೇಶಗಳ ಜನಸಂಖ್ಯೆ ಎಷ್ಟಿದೆ? ದಯವಿಟ್ಟು ವಾಸ್ತವಕ್ಕೆ ಬನ್ನಿ’ ಎಂದು ಹೇಳಿತು.

ಸಂಕ್ಷಿಪ್ತ ಸುದ್ದಿ

63 ನಕ್ಸಲರ ಶರಣಾಗತಿ

ದಂತೇವಾಡ (ಪಿಟಿಐ): ಛತ್ತೀಸಗಢದ ದಂತೇವಾಡ ಜಿಲ್ಲೆಯಲ್ಲಿ 63 ನಕ್ಸಲರು ಶರಣಾಗಿದ್ದು, ಇವರಲ್ಲಿ 36 ಮಂದಿಯ ಸುಳಿವು ನೀಡಿದವರಿಗೆ ಒಟ್ಟು ₹1.19 ಕೋಟಿ ನಗದು ಬಹುಮಾನ ಕೊಡುವುದಾಗಿ ಪೊಲೀಸರು ಘೋಷಿಸಿದ್ದರು.



ರಾಜ್ಯ ಸರ್ಕಾರದ ಶರಣಾಗತಿ ಮತ್ತು ಪುನರ್ವಸತಿ ಯೋಜನೆಯಿಂದ ಪ್ರಭಾವಿತರಾಗಿ ಶರಣಾದವರಲ್ಲಿ 18 ಮಹಿಳೆಯರು ಇದ್ದಾರೆ. ಇವರೆಲ್ಲರೂ ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಅಧಿಕಾರಿಗಳ ಮುಂದೆ ಶಸ್ತ್ರ ತ್ಯಜಿಸಿ ಶರಣಾಗಿದ್ದಾರೆ ಎಂದು ದಂತೇವಾಡ ಪೊಲೀಸ್ ವರಿಷ್ಠಾಧಿಕಾರಿ ಗೌರವ್ ರಾಯ್ ಶುಕ್ರವಾರ ತಿಳಿಸಿದ್ದಾರೆ.

ಶರಣಾದ 63 ನಕ್ಸಲರಿಗೂ ತಕ್ಷಣದ ಪರಿಹಾರವಾಗಿ ತಲಾ ₹50 ಸಾವಿರ ನೀಡಲಾಗುವುದು. ಸರ್ಕಾರದ ಯೋಜನೆಯಂತೆ ಪುನರ್ವಸತಿಯನ್ನು ಕಲ್ಪಿಸಿಕೊಡಲಾಗುವುದು ಎಂದಿದ್ದಾರೆ.

ಛತ್ತೀಸಗಢದ ಬಸ್ತಾರ್‌ನ ದಕ್ಷಿಣ ಹಾಗೂ ಪಶ್ಚಿಮ ವಿಭಾಗ, ಮಾದ್ ವಿಭಾಗ ಸೇರಿದಂತೆ ಒಡಿಶಾದ ಗಡಿಯಲ್ಲಿ ಇವರೆಲ್ಲರೂ ಸಕ್ರಿಯರಾಗಿದ್ದರು ಎಂದು ಮಾಹಿತಿ ನೀಡಿದ್ದಾರೆ.

ಲಾಲೂ ವಿರುದ್ಧ ದೋಷಾರೋಪ ನಿಗದಿಗೆ ಹೈಕೋರ್ಟ್ ಆದೇಶ

ನವದೆಹಲಿ (ಪಿಟಿಐ): ಉದ್ಯೋಗಕ್ಕಾಗಿ ಭೂಮಿ ಹಗರಣದಲ್ಲಿ ಆರ್‌ಜೆಡಿ ಮುಖ್ಯಸ್ಥ, ಮಾಜಿ ರೈಲ್ವೆ ಸಚಿವ ಲಾಲೂ ಪ್ರಸಾದ್, ಅವರ ಕುಟುಂಬಸ್ಥರು ಹಾಗೂ ಇತರರ ವಿರುದ್ಧ ದೋಷಾರೋಪ ನಿಗದಿಪಡಿಸಲು ದೆಹಲಿ ಹೈಕೋರ್ಟ್ ಶುಕ್ರವಾರ ಆದೇಶಿಸಿದೆ.


ಲಾಲೂ

ವಿಶೇಷ ನ್ಯಾಯಮೂರ್ತಿ ವಿಶಾಲ್ ಗೋಗ್ನೆ ಅವರು, ‘ಲಾಲೂ ಅವರು ರೈಲ್ವೆ ಸಚಿವಾಲಯವನ್ನು ತಮ್ಮ ವೈಯಕ್ತಿಕ ಲಾಭಕ್ಕಾಗಿ ಬಳಸಿಕೊಂಡಿದ್ದಾರೆ. ಭೂಕಬಳಿಕೆಗಾಗಿ ಸಾರ್ವಜನಿಕ ಉದ್ಯೋಗವನ್ನು ಚೌಕಾಸಿ ಅಸ್ತ್ರವಾಗಿ ಬಳಸಿಕೊಳ್ಳಲಾಗಿದೆ’ ಎಂದು ಹೇಳಿದರು.

ಆದೇಶದ ಕೆಲವು ಅಂಶಗಳನ್ನು ಮೌಖಿಕವಾಗಿ ಪ್ರಸ್ತುತಪಡಿಸಿದ ಅವರು, ‘ಗಂಭೀರ ಪಿತೂರಿ ನಡೆದಿರುವುದಕ್ಕೆ ಬಲವಾದ ಸಾಕ್ಷ್ಯಗಳನ್ನು ಸಿಬಿಐ ಅಂತಿಮ ವರದಿಯು ಬಹಿರಂಗಪಡಿಸಿದೆ’ ಎಂದು ಹೇಳಿದರು. ಇದೇ ವೇಳೆ, ಲಾಲೂ ಮತ್ತು ಅವರ ಕುಟುಂಬದ ಸದಸ್ಯರು ಬಿಡುಗಡೆಗೆ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ತಿರಸ್ಕರಿಸಿದರು.

ಶಬರಿಮಲೆ ಮುಖ್ಯ ಅರ್ಚಕರ ಬಂಧಿಸಿದ ಎಸ್‌ಐಟಿ

ತಿರುವನಂತಪುರ (ಪಿಟಿಐ): ಶಬರಿಮಲೆ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಚಿನ್ನ ನಾಪತ್ತೆಯಾಗಿರುವ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ದೇವಸ್ಥಾನದ ಪ್ರಧಾನ ಅರ್ಚಕ ಕಂಡರಾರು ರಾಜೀವಾರು ಅವರನ್ನು ಶುಕ್ರವಾರ ಇಲ್ಲಿ ಬಂಧಿಸಿದೆ.

ಈ ಮೂಲಕ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 11ಕ್ಕೆ ಏರಿಕೆಯಾಗಿದೆ.

ದೇವಸ್ಥಾನದ ಸಂಪೂರ್ಣ ಧಾರ್ಮಿಕ ಅಧಿಕಾರ ಹೊಂದಿದ್ದ ರಾಜೀವಾರು ಅವರನ್ನು ಗೋಪ್ಯ ಸ್ಥಳದಲ್ಲಿ ವಿಚಾರಣೆ ನಡೆಸಲಾಯಿತು. ಬಳಿಕ ಬಂಧಿಸಲಾಯಿತು ಎಂದು ಮೂಲಗಳು ಹೇಳಿವೆ.

ಪ್ರಕರಣದ ಪ್ರಮುಖ ಆರೋಪಿ, ಬೆಂಗಳೂರಿನ ಉದ್ಯಮಿ ಉಣ್ಣಿಕೃಷ್ಣನ್ ಪೋಟಿ ಮತ್ತು ತಿರುವಾಂಕೂರು ದೇವಸ್ವ ಮಂಡಳಿಯ ಮಾಜಿ ಅಧ್ಯಕ್ಷ ಎ. ಪದ್ಮಕುಮಾರ್ ನೀಡಿದ ಹೇಳಿಕೆಗಳ ಆಧಾರದ ಮೇಲೆ ರಾಜೀವಾರು ಅವರನ್ನು ಬಂಧಿಸಲಾಗಿದ್ದು, ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತನಿಖೆಯ ಭಾಗವಾಗಿ ಈ ಹಿಂದೆ ರಾಜೀವಾರು ಅವರನ್ನು ಒಮ್ಮೆ ಎಸ್‌ಐಟಿ ವಿಚಾರಣೆಗೊಳಪಡಿಸಿತ್ತು. ಪ್ರಕರಣದ ತನಿಖೆ ನಡೆಸಲು ಕೇರಳ ಹೈಕೋರ್ಟ್ ಎಸ್‌ಐಟಿಯನ್ನು ರಚಿಸಿದೆ.

ಪ್ರಕರಣ ದಾಖಲಿಸಿದ ಇ.ಡಿ: ದೇವಸ್ಥಾನದಲ್ಲಿ ಚಿನ್ನ ನಾಪತ್ತೆಯಾಗಿರುವ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯವು ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಿದೆ ಎಂದು ಮೂಲಗಳು ತಿಳಿಸಿವೆ.

‘ಜನ ನಾಯಗನ್’ ಸೆನ್ಸಾರ್ ಪ್ರಮಾಣ ಪತ್ರಕ್ಕೆ ತಡೆ

ಚೆನ್ನೈ (ಪಿಟಿಐ): ನಟ ವಿಜಯ್ ಅಭಿನಯದ ‘ಜನ ನಾಯಗನ್’ ಸಿನಿಮಾಕ್ಕೆ ಸೆನ್ಸಾರ್ ಪ್ರಮಾಣಪತ್ರ ನೀಡಲು ಚಲನಚಿತ್ರ ಸೆನ್ಸಾರ್ ಮಂಡಳಿಗೆ (ಸಿಬಿಎಫ್‌ಸಿ) ನಿರ್ದೇಶನ ನೀಡಿದ್ದ ಏಕಸದಸ್ಯ ಪೀಠದ ಆದೇಶಕ್ಕೆ ಮದ್ರಾಸ್ ಹೈಕೋರ್ಟ್ ಶುಕ್ರವಾರ ತಡೆ ನೀಡಿದೆ.


ವಿಜಯ್

ನ್ಯಾಯಮೂರ್ತಿಗಳಾದ ಮನೀಂದ್ರ ಮೋಹನ್ ಶ್ರೀವಾಸ್ತವ ಮತ್ತು ಜಿ.ಅರುಲ್ ಮುರುಗನ್ ಅವರ ನೇತೃತ್ವದ ವಿಭಾಗೀಯ ಪೀಠವು ಆದೇಶಕ್ಕೆ ತಡೆಯಾಜ್ಞೆ ನೀಡಿದೆ. ಬಳಿಕ ಅರ್ಜಿಯ ವಿಚಾರಣೆಯನ್ನು ಜನವರಿ 21ಕ್ಕೆ ಮುಂದೂಡಿದೆ.

ಇದಕ್ಕೂ ಮುನ್ನ ಕೆವಿಎನ್ ನಿರ್ಮಾಣ ಸಂಸ್ಥೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ಮಾಡಿದ್ದ ನ್ಯಾಯಮೂರ್ತಿ ಪಿ.ಟಿ ಆಶಾ ನೇತೃತ್ವದ ಏಕಸದಸ್ಯ ನ್ಯಾಯಪೀಠವು ಪ್ರಮಾಣಪತ್ರ ನೀಡಲು ಸಿಬಿಎಫ್‌ಸಿ ಸೂಚಿಸಿತ್ತು.

ಪುಣೆ, ಪಿಂಪ್ರಿ–ಚಿಂಚವಾಡ್ ಪಾಲಿಕೆ ಚುನಾವಣೆ ಪರಿಣಾಮ

ಒಗ್ಗಟ್ಟು: ಪವಾರ್ ಬಣಗಳ ಒಲವು

ಪುಣೆ: ಬೃಹನ್ ಮುಂಬೈ ಮಹಾನಗರಪಾಲಿಕೆ (ಬಿಎಂಸಿ) ಸೇರಿ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ಸಮೀಪಿಸುತ್ತಿರುವಂತೆಯೇ, ಮಹಾರಾಷ್ಟ್ರದಲ್ಲಿ ‘ರಾಜಕೀಯ ಸಮೀಕರಣ’ಗಳು ಬದಲಾಗುತ್ತಿವೆ.

ರಾಜ್ಯದಲ್ಲಿ ಬಿಜೆಪಿ ಜೊತೆ ಕೈಜೋಡಿಸಿರುವ ಡಿಸಿಎಂ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಬಣವು, ಈಗ ಈ ಚುನಾವಣೆಯಲ್ಲಿ ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಜೊತೆ ಕೈಜೋಡಿಸುವ ಸಾಧ್ಯತೆಗಳು ನಿಚ್ಚಳವಾಗಿವೆ. ಎನ್‌ಡಿಟಿವಿ ಹಾಗೂ ಪಿಟಿಐಗೆ ನೀಡಿರುವ ಪ್ರತ್ಯೇಕ ಸಂದರ್ಶನಗಳಲ್ಲಿ ಡಿಸಿಎಂ ಅಜಿತ್ ಪವಾರ್ ನೀಡಿರುವ ಹೇಳಿಕೆಗಳು ಇಂತಹ ಸಾಧ್ಯತೆಗಳನ್ನು ಪುಷ್ಟೀಕರಿಸುವಂತಿವೆ.

ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿರುವ ಅಜಿತ್ ಪವಾರ್ ಅವರು, ಪುಣೆ ಮತ್ತು ಪಿಂಪ್ರಿ ಚಿಂಚವಾಡದಲ್ಲಿನ ಬಿಜೆಪಿಯ ಸ್ಥಳೀಯ ನಾಯಕರ ವಿರುದ್ಧ ಹರಿಹಾಯ್ದಿದ್ದಾರೆ.

ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ, ‘ರಾಜಕೀಯ ಪಕ್ಷಗಳು ತಮ್ಮ ಸಿದ್ಧಾಂತಗಳಿಂದ ವಿಮುಖವಾಗಿವೆ. ಪಕ್ಷ ತೊರೆಯುವುದು ಇಲ್ಲವೇ ಒಂದು ಪಕ್ಷದ ನಾಯಕರಿಗೆ ಆಮಿಷ ಒಡ್ಡಿ ತಮ್ಮತ್ತ ಸೆಳೆಯುವ ಪರಿಪಾಟ ಹೆಚ್ಚುತ್ತಿದೆ’ ಎಂದು ಹೇಳುವ ಮೂಲಕ ಬಿಜೆಪಿ ನಾಯಕ ವಿರುದ್ಧ ಟೀಕಾಪ್ರಹಾರ ಮುಂದುವರಿಸಿದ್ದಾರೆ.

> **ವಿಪಕ್ಷ ಪಾಳಯದ ಅಭ್ಯರ್ಥಿಗೆ ಗೆಲ್ಲುವ ಸಾಮರ್ಥ್ಯ ಇರುವುದು ಸಮೀಕ್ಷೆಯಿಂದ ಗೊತ್ತಾದಾಗ ಆ ಅಭ್ಯರ್ಥಿಯನ್ನು ತಮ್ಮ ಪಕ್ಷಕ್ಕೆ ಸೆಳೆಯುವ ಪ್ರಯತ್ನಗಳು ನಡೆಯುತ್ತಿವೆ**
> **ಅಜಿತ್ ಪವಾರ್,** ಎನ್‌ಸಿಪಿ ನಾಯಕ

ಮತ್ತೊಂದೆಡೆ, ಎನ್‌ಡಿಟಿವಿಗೆ ಸಂದರ್ಶನ ನೀಡಿರುವ ಅವರು, ‘ಎನ್‌ಸಿಪಿಯ ಎರಡೂ ಬಣಗಳು ಒಂದುಗೂಡಬೇಕು ಎಂಬುದು ಎರಡೂ ಪಕ್ಷಗಳ ಕಾರ್ಯಕರ್ತರ ಒತ್ತಾಸೆಯಾಗಿದೆ. ಪವಾರ್ ಕುಟುಂಬಗಳಲ್ಲಿನ ಭಿನ್ನಾಭಿಪ್ರಾಯಗಳು ಈಗ ಇತ್ಯರ್ಥವಾಗಿವೆ’ ಎಂದು ಹೇಳಿದ್ದಾರೆ.

ಖಚಿತಪಡಿಸಿರುವ ಸುಳೆ: ಪಾಲಿಕೆ ಚುನಾವಣೆಗಾಗಿ ಎನ್‌ಸಿಪಿಯ ಎರಡೂ ಬಣಗಳು ಒಂದಾಗಲು ನಿರ್ಧರಿಸುವುದನ್ನು ಸಂಸದೆ ಸುಪ್ರಿಯಾ ಸುಳೆ (ಎನ್‌ಸಿಪಿ ಶರದ್ ಪವಾರ್ ಬಣ) ಕೂಡ ಖಚಿತಪಡಿಸಿದ್ದಾರೆ.

‘ಅಜಿತ್ ಪವಾರ್ ಬಣದೊಂದಿಗಿನ ಈ ಮೈತ್ರಿಯನ್ನು ಈ ಸ್ಥಳೀಯ ಚುನಾವಣೆ ಬಳಿಕವೂ ಮುಂದುವರಿಸುವ ಕುರಿತು ಚರ್ಚೆ ನಡೆದಿಲ್ಲ’ ಎಂದೂ ಸ್ಪಷ್ಟಪಡಿಸಿದ್ದಾರೆ.

ಬಿಜೆಪಿ ಹೊರಗಿಡಲು ಒಂದಾದ ಡಿಸಿಎಂಗಳು

ಠಾಣೆ: ಮಹತ್ವದ ಬೆಳವಣಿಗೆಯಲ್ಲಿ, ಠಾಣೆ ಜಿಲ್ಲೆಯ ಅಂಬರನಾಥ ನಗರಸಭೆಯಲ್ಲಿ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವ ಉದ್ದೇಶದಿಂದ ಏಕನಾಥ ಶಿಂದೆ ಅವರ ಶಿವಸೇನಾ ಬಣ ಹಾಗೂ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಶುಕ್ರವಾರ ಮೈತ್ರಿ ಮಾಡಿಕೊಂಡಿವೆ.

ನಗರಸಭೆಯ ಒಬ್ಬ ಪಕ್ಷೇತರ ಸದಸ್ಯ ಕೂಡ ಈ ಮೈತ್ರಿಕೂಟದೊಂದಿಗೆ ಗುರುತಿಸಿಕೊಂಡಿದ್ದು, ಈ ಗುಂಪು ಈಗ ಸ್ಥಳೀಯ ಸಂಸ್ಥೆಯ ಆಡಳಿತ ಚುಕ್ಕಾಣಿ ಹಿಡಿಯುವುದಕ್ಕೆ ಸಂಬಂಧಿಸಿ ಹಕ್ಕು ಮಂಡಿಸಲು ಮುಂದಾಗಿದೆ.

‘ಈ ಕುರಿತ ಪತ್ರವನ್ನು ಜಿಲ್ಲಾ ಆಡಳಿತಕ್ಕೆ ಸಲ್ಲಿಸಲಾಗಿದೆ’ ಎಂದು ಶಿವಸೇನಾ ಪಕ್ಷದ ಸ್ಥಳೀಯ ನಾಯಕರೊಬ್ಬರು ತಿಳಿಸಿದ್ದಾರೆ.

ಕಲ್ಲು ತೂರಾಟ: ಶಿಂದೆ ಬಣ ಆರೋಪ

‘ಪುಣೆ ಪಾಲಿಕೆಯ ಚುನಾವಣೆಗೆ ಪ್ರಚಾರ ಕಾರ್ಯದಲ್ಲಿ ತೊಡಗಿದ್ದ ಪಕ್ಷದ ಅಭ್ಯರ್ಥಿಗಳ ಮೇಲೆ ಕಲ್ಲು ತೂರಾಟ ನಡೆಸಲಾಗಿದೆ. ಇದು ಹೇಡಿಗಳ ಕೃತ್ಯ. ಇಂತಹ ರಾಜಕೀಯಕ್ಕೆ ನಾವು ಹೆದರುವುದಿಲ್ಲ’ ಎಂದು ಡಿಸಿಎಂ ಏಕನಾಥ ಶಿಂದೆ ಶುಕ್ರವಾರ ಹೇಳಿದ್ದಾರೆ.

ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು,‘ವಿಪಕ್ಷಗಳು ಇಂತಹ ಕೃತ್ಯ ನಡೆಸಬಾರದು. ನಾವು ಬಾಳಾ ಸಾಹೇಬ ಠಾಕ್ರೆ ಅವರ ಸೈನಿಕರು. ಇಂತಹ ಕೃತ್ಯಗಳಿಗೆ ಹೆದರುವುದಿಲ್ಲ’ ಎಂದು ಹೇಳಿದರು.

‘ನನ್ನ ಹಾಗೂ ಪಕ್ಷದ ಮತ್ತೊಬ್ಬ ಅಭ್ಯರ್ಥಿ ಸಾರಿಕಾ ಪವಾರ್ ಮೇಲೆ ಬುಧವಾರ ತಡರಾತ್ರಿ ಕಲ್ಲು ಎಸೆಯಲಾಗಿದೆ’ ಎಂದು ವಾರ್ಡ್ ನಂ.41ರ ಅಭ್ಯರ್ಥಿ ಪ್ರಮೋದ್ ನಾನಾ ಭಂಗೀರೆ ಆರೋಪಿಸಿದ್ದಾರೆ.

‘ಸಾರಿಕಾ ಅವರಿಗೆ ಸಣ್ಣಪುಟ್ಟ ಗಾಯಗಳಿವೆ. ನನ್ನ ಕಾರಿನ ಕಿಟಕಿ ಗಾಜಿಗೆ ಹಾನಿಯಾಗಿದೆ’ ಎಂದೂ ಅವರು ಹೇಳಿದ್ದಾರೆ.

ಕಂದಕಕ್ಕೆ ಬಸ್: 14 ಸಾವು

ನಹಾನ್ (ಪಿಟಿಐ): ಹಿಮಾಚಲ ಪ್ರದೇಶದ ಸಿರ್‌ಮೌರ್ ಜಿಲ್ಲೆಯಲ್ಲಿ ಶುಕ್ರವಾರ ಮಧ್ಯಾಹ್ನ ಖಾಸಗಿ ಬಸ್ 500 ಅಡಿ ಆಳದ ಕಂದಕಕ್ಕೆ ಬಿದ್ದು 14 ಮಂದಿ ಮೃತಪಟ್ಟಿದ್ದು, 25ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಶಿಮ್ಲಾದಿಂದ ರಾಜಗಢ ಮೂಲಕ ಕುಪ್ವಿಗೆ ಹೋಗುತ್ತಿದ್ದ ಬಸ್ ಜಿಲ್ಲಾ ಕೇಂದ್ರವಾದ ನಹಾನ್‌ನಿಂದ 95 ಕಿ.ಮೀ. ದೂರದಲ್ಲಿರುವ ಹರಿಪುರಧಾರ್ ಗ್ರಾಮದ ಬಳಿ ಕಂದಕಕ್ಕೆ ಉರುಳಿದೆ.

ರಕ್ಷಣಾ ಕಾರ್ಯಾಚರಣೆ ನಡೆಸಿದ್ದು, ಗಾಯಾಳುಗಳನ್ನು ಸಂಗಢಾಹ ಹಾಗೂ ದದಾಹು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ ಎಂದು ಉಪ ವಿಭಾಗಾಧಿಕಾರಿ ಸುನಿಲ್ ಕಾಯತ್ ತಿಳಿಸಿದ್ದಾರೆ.

ಮೃತರ ಸಂಬಂಧಿಕರಿಗೆ ಅಗತ್ಯ ನೆರವು ಹಾಗೂ ಗಾಯಾಳುಗಳಿಗೆ ವೈದ್ಯಕೀಯ ನೆರವು ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ತಿಳಿಸಿದ್ದಾರೆ.


ಹಿಮಾಚಲ ಪ್ರದೇಶದ ಸಿರ್‌ಮೌರ್ ಜಿಲ್ಲೆಯಲ್ಲಿ ಖಾಸಗಿ ಬಸ್ 500 ಅಡಿ ಆಳದ ಕಂದಕಕ್ಕೆ ಉರುಳಿ ಬಿದ್ದಿದೆ ಪಿಟಿಐ ಚಿತ್ರ

ಘಟನೆಗೆ ನಿಖರ ಕಾರಣ ಗೊತ್ತಾಗಿಲ್ಲ. ಚಾಲಕ ನಿಯಂತ್ರಣ ಕಳೆದುಕೊಂಡಿರುವ ಸಾಧ್ಯತೆ ಇದೆ. ಹಿಮ ಶೇಖರಣೆಯಿಂದಾಗಿ ಬಸ್ ರಸ್ತೆಯಿಂದ ಜಾರಿ ಕಂದಕಕ್ಕೆ ಉರುಳಿರಬಹುದು ಎಂದು ಸ್ಥಳೀಯರು ಶಂಕಿಸಿದ್ದಾರೆ.

ಸ್ವರ್ಣಕ್ಕೆ ಮುತ್ತಿಕ್ಕಿದ ಅಶ್ಮಿತಾ ಚಂದ್ರ

ಖೇಲೊ ಇಂಡಿಯಾ ಬೀಚ್ ಗೇಮ್ಸ್: ರಾಜ್ಯದ ಈಜುಪಟುಗಳಿಗೆ ನಾಲ್ಕು ಪದಕ

• ಪ್ರದೀಶ್ ಎಚ್.ಮರೋಡಿ

ದಿಯು: ನಿರೀಕ್ಷೆಯಂತೆ ಕರ್ನಾಟಕದ ಈಜುಪಟುಗಳು ಘೋಘ್ಲಾ ಕಡಲ ಕಿನಾರೆಯಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಬೀಚ್ ಗೇಮ್ಸ್‌ನಲ್ಲಿ ಪಾಬಲ್ಯ ಮೆರೆದರು. ಶುಕ್ರವಾರ ನಡೆದ ಓಪನ್ ವಾಟರ್ ಸ್ವಿಮ್ಮಿಂಗ್‌ನ 10 ಕಿಲೋ ಮೀಟರ್ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿದ್ದ ಆರು ಪದಕಗಳ ಪೈಕಿ ನಾಲ್ಕನ್ನು ಬಾಚಿಕೊಂಡರು. ಇದರೊಂದಿಗೆ ಕರ್ನಾಟಕದ ಪದಕಗಳ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ.

ಅರಬ್ಬಿ ಸಮುದ್ರದಲ್ಲಿ ಏಳುತ್ತಿದ್ದ ಉಗ್ರ ಸ್ವರೂಪಿ ಅಲೆಗಳನ್ನು ಸೀಳಿಕೊಂಡು ಮುನ್ನುಗ್ಗಿದ ಬೆಂಗಳೂರಿನ 20 ವರ್ಷದ ಅಶ್ಮಿತಾ ಚಂದ್ರ ಅವರು ಮಹಿಳೆಯರ ವಿಭಾಗದಲ್ಲಿ ಚಿನ್ನದ ಪದಕಕ್ಕೆ ಮುತ್ತಿಕ್ಕಿದರು. ಎರಡನೇ ಆವೃತ್ತಿಯ ಕೂಟದಲ್ಲಿ ಕರ್ನಾಟಕಕ್ಕೆ ಲಭಿಸಿದ ಮೊದಲ ಸ್ವರ್ಣ ಇದಾಗಿದೆ. ಅಶ್ಮಿತಾ ಅವರು 2 ಗಂಟೆ 46.34 ನಿಮಿಷಗಳಲ್ಲಿ ಗುರಿ ತಲುಪಿದರು.

ಸಿಲಿಕಾನ್ ಸಿಟಿಯ ಮತ್ತೊಬ್ಬ ಪ್ರತಿಭೆ ಆಶ್ರಾ ಸುಧೀರ್ (2.47:57) ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಮೊದಲ ಆವೃತ್ತಿಯಲ್ಲಿ ಇದೇ ಸ್ಪರ್ಧೆಯಲ್ಲಿ ಕಂಚು ಗೆದ್ದಿದ್ದ 18 ವರ್ಷದ ಆಶ್ರಾ ಅವರು ಈ ಬಾರಿ ಪದಕದ ಬಣ್ಣವನ್ನು ಉತ್ತಮಪಡಿಸಿಕೊಂಡರು. ಕಂಚಿನ ಪದಕ ಮಹಾರಾಷ್ಟ್ರದ ದೀಕ್ಷಾ ಸಂದೀಪ್ ಯಾದವ್ (2.48:04) ಪಾಲಾಯಿತು. ಅಶ್ಮಿತಾ ಮತ್ತು ಆಶ್ರಾ ಅವರು ಶನಿವಾರ ನಡೆಯುವ 5 ಕಿ.ಮೀ. ಸ್ಪರ್ಧೆಯಲ್ಲೂ ಭಾಗವಹಿಸುತ್ತಿದ್ದು, ಪದಕ ಡಬಲ್ ಸಾಧಿಸುವ ಛಲದಲ್ಲಿದ್ದಾರೆ.


ಚಿನ್ನ ಗೆದ್ದ ಕರ್ನಾಟಕದ ಅಶ್ಮಿತಾ ಚಂದ್ರ ಪ್ರಜಾವಾಣಿ ಚಿತ್ರ

ಪುರುಷರ ವಿಭಾಗದಲ್ಲಿ ಬೆಂಗಳೂರಿನ ಉದಯೋನ್ಮುಖ ಈಜುಪಟುಗಳಾದ 15 ವರ್ಷದ ಅಕ್ಷಜ್ ಪಿ. (2.38:27) ಮತ್ತು 15 ವರ್ಷದ ಕನಿಷ್ಕ್ ಎಸ್‌.ಎ. (2.41:51) ಅವರು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಜಯಿಸಿದರು. ಉತ್ತರ ಪ್ರದೇಶದ ಅನುರಾಗ್ ಆರ್. ಸಿಂಗ್ (2.22.02) ಚಿನ್ನದ ಪದಕ ಗೆದ್ದರು.

‘ಸ್ಪರ್ಧೆಗೆ ಮುನ್ನದಿನ ಇದೇ ಬೀಚ್‌ನಲ್ಲಿ ರಾಜ್ಯದ ಈಜುಪಟುಗಳೊಂದಿಗೆ ತಾಲೀಮು ಮಾಡಿದ್ದೆ. ಆ ಸಂದರ್ಭದಲ್ಲಿ ಅಲೆಗಳು ಸಣ್ಣ ಪ್ರಮಾಣದಲ್ಲಿತ್ತು. ಆದರೆ, ಸ್ಪರ್ಧೆಯ ವೇಳೆ ಬೃಹತ್ ಗಾತ್ರದ ಅಲೆಗಳು ಎದುರಾಗಿದ್ದರಿಂದ ಅದರ ವಿರುದ್ಧ ಈಜುವುದು ಸವಾಲಾಯಿತು. ರಾಜ್ಯವನ್ನು ಪ್ರತಿನಿಧಿಸಿ ಚಿನ್ನ ಗೆದ್ದಿರುವುದು ಖುಷಿ ತಂದಿದೆ. ಮುಂದಿನ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವುದು ನನ್ನ ಗುರಿ’ ಎಂದು ಜೈನ್ ವಿ.ವಿಯಲ್ಲಿ ದ್ವಿತೀಯ ವರ್ಷದ ಬಿಎ ವ್ಯಾಸಂಗ ಮಾಡುತ್ತಿರುವ ಅಶ್ಮಿತಾ ಹೇಳಿದರು.

ಅಶ್ಮಿತಾ ಅವರು ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್‌ನಲ್ಲಿ ಮತ್ತು ಆಶ್ರಾ, ಅಕ್ಷಜ್, ಕನಿಷ್ಕ್ ಅವರು ಬಸವನಗುಡಿ ಈಜು ಕೇಂದ್ರದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಸಾಕರ್ ತಂಡಕ್ಕೆ ಕಂಚು: ಕರ್ನಾಟಕದ ಪುರುಷರ ಬೀಚ್ ಸಾಕರ್ (ಬೀಚ್ ಫುಟ್‌ಬಾಲ್) ತಂಡವು ಕಂಚಿನ ಪದಕದೊಂದಿಗೆ ಅಭಿಯಾನವನ್ನು ಮುಗಿಸಿತು. ರಾಜ್ಯ ತಂಡವು ಸೆಮಿಫೈನಲ್‌ನಲ್ಲಿ 3–6ರಿಂದ ಗೋವಾ ತಂಡಕ್ಕೆ ಮಣಿಯಿತು.

ಬೆಂಗಳೂರು ಓಪನ್ ಟೆನಿಸ್: ಭಾರತದ ಸವಾಲು ಅಂತ್ಯ

ಫೈನಲ್‌ಗೆ ಪೆಡ್ರೊ, ಸ್ಕೆಟೋವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರ ಶ್ರೇಯಾಂಕಕ್ಕೆ ಯೋಗ್ಯವಾದ ರೀತಿಯಲ್ಲಿ ಆಡಿದ ಸ್ಪೇನ್‌ನ ಪೆಡ್ರೊ ಮಾರ್ಟಿನೆಝ್ ಅವರು ಶುಕ್ರವಾರ 7–6 (4), 6–1 ರಿಂದ ಫ್ರಾನ್ಸ್‌ನ ಮಾಟೆ ಮಾರ್ಟಿನೊ ಅವರನ್ನು ಸೋಲಿಸಿ ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್ ತಲುಪಿದರು.

ಕಬ್ಬನ್ ಪಾರ್ಕ್‌ನ ಎಸ್‌.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಶನಿವಾರ ನಡೆಯುವ ಫೈನಲ್‌ನಲ್ಲಿ ಸ್ಪೇನ್‌ನ ಆಟಗಾರ, ಆರನೇ ಶ್ರೇಯಾಂಕದ ಟಿಮೋಫಿ ಸ್ಕೆಟೋವ್ ಅವರನ್ನು ಎದುರಿಸಲಿದ್ದಾರೆ.

ಕಜಾಕಸ್ತಾನದ ಸ್ಕೆಟೋವ್ ಒಂದೂಕಾಲು ಗಂಟೆ ನಡೆದ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಹೆರಾಲ್ಡ್ ಮಯೋಟ್ ಅವರನ್ನು 6–4, 6–3 ರಿಂದ ಸೋಲಿಸಿದರು. ವಿಶ್ವದ 96ನೇ ಕ್ರಮಾಂಕದ ಪೆಡ್ರೊ ಇಲ್ಲಿ ಉನ್ನತ ಮಟ್ಟದ ಆಟ ಪ್ರದರ್ಶಿಸಿ ಪ್ರೇಕ್ಷಕರಿಗೆ ರಸದೌತಣ ನೀಡಿದರು.

ಡಬಲ್ಸ್‌ನಲ್ಲೂ ನಿರಾಸೆ: ಆತಿಥೇಯ ಭಾರತ ಈ ಎಟಿಪಿ 125 ಚಾಲೆಂಜರ್ ಮಟ್ಟದ ಟೂರ್ನಿಯಲ್ಲಿ ಪ್ರಶಸ್ತಿ ಅವಕಾಶ ಕಳೆದುಕೊಂಡಿತು. ಡಬಲ್ಸ್ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾದ ನೀಲ್ ಒಬೆರ್‌ಲಿಟ್ನರ್ ಜೊತೆಗೂಡಿ ಆಡಿದ ಭಾರತದ ಎನ್. ಶ್ರೀರಾಮ್ ಬಾಲಾಜಿ ಅವರು 6–7 (4), 6–7 (3) ರಲ್ಲಿ ಮೂರನೇ ಶ್ರೇಯಾಂಕದ ಆರ್ಥರ್ ರೇಮಂಡ್– ಲುಕಾ ಸ್ಯಾಂಚೆಝ್ ಜೋಡಿಗೆ ಶರಣಾದರು. ಬಾಲಾಜಿ– ನೀಲ್ ಜೋಡಿ ಅಗ್ರ ಶ್ರೇಯಾಂಕ ಪಡೆದಿತ್ತು.


ಚೆಂಡನ್ನು ಹೊಡೆದಟ್ಟುವ ಯತ್ನದಲ್ಲಿ ಸ್ಪೇನ್‌ನ ಪೆಡ್ರೊ ಮಾರ್ಟಿನೆಝ್ ಚಿತ್ರ: ವಿ.ಪುಷ್ಕರ್

ರೇಮಂಡ್– ಸ್ಯಾಂಚೆಝ್ ಜೋಡಿ ಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ನಿಕೋಲಸ್ ಬೆರಿಂಟೋಸ್ (ಕೊಲಂಬಿಯಾ)– ಬೆಂಜಮಿನ್ ಕಿಟ್ಟೆ (ಅಮೆರಿಕ) ಜೋಡಿಯನ್ನು ಎದುರಿಸಲಿದೆ.

ಮೂಡುಬಿದಿರೆ: 12ರಿಂದ ಅಂತರ ವಿ.ವಿ ಅಥ್ಲೆಟಿಕ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪುರುಷ ಮತ್ತು ಮಹಿಳೆಯರ 85ನೇ ಅಥ್ಲೆಟಿಕ್ ಚಾಂಪಿಯನ್‌ಶಿಪ್ ಮೂಡುಬಿದಿರೆಯಲ್ಲಿ ಜ.12ರಿಂದ 16ರವರೆಗೆ ನಡೆಯಲಿದೆ.

ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಎಂ.ಮೋಹನ್ ಆಳ್ವ ಅವರು, ‘ರಾಜೀವ್ ಗಾಂಧಿ ಆರೋಗ್ಯ ವಿ.ವಿ, ಭಾರತೀಯ ವಿಶ್ವವಿದ್ಯಾಲಯಗಳ ಸಂಘಟನೆಗಳ ಸಹಭಾಗಿತ್ವದಲ್ಲಿ ಮೂಡುಬಿದಿರೆಯ ಸ್ವರಾಜ್ಯ ಮೈದಾನದಲ್ಲಿ ಕ್ರೀಡಾಕೂಟ ಆಯೋಜಿಸಲಾಗಿದೆ. ದೇಶದ 312 ವಿಶ್ವವಿದ್ಯಾಲಯಗಳ 4,288 ಅಥ್ಲೀಟ್‌ಗಳು ಭಾಗವಹಿಸಲಿದ್ದಾರೆ’ ಎಂದರು.

ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ 12ರಂದು ಸಂಜೆ 4.30ಕ್ಕೆ ಕ್ರೀಡಾಕೂಟದ ಉದ್ಘಾಟನೆ ನೆರವೇರಿಸಿ, ಕ್ರೀಡಾ ಜ್ಯೋತಿ ಸ್ವೀಕರಿಸುವರು ಎಂದು ತಿಳಿಸಿದರು.

ಮಂದಾನ ಬಳಗಕ್ಕೆ ರೋಚಕ ಜಯ

ಆಲ್‌ರೌಂಡರ್ ನದೀನ್ ಡಿ ಕ್ಲರ್ಕ್ ಗೆಲುವಿನ ರೂವಾರಿ • ಹರ್ಮನ್ ಬಳಗಕ್ಕೆ ನಿರಾಶೆ

ಮಹಿಳಾ ಪ್ರೀಮಿಯರ್ ಲೀಗ್

ನವಿ ಮುಂಬೈ (ಪಿಟಿಐ): ಆಲ್‌ರೌಂಡರ್ ನದೀನ್ ಡಿ ಕ್ಲರ್ಕ್ ಅವರು ಶುಕ್ರವಾರ ರಾತ್ರಿ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡದ ಕೈಗಳಿಂದ ಗೆಲುವನ್ನು ಕಸಿದುಕೊಂಡರು. ಇದರಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಬಳಗವು ರೋಚಕ ಜಯದೊಂದಿಗೆ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮುನ್ನಡೆಸಿದ ಮುಂಬೈ ಇಂಡಿಯನ್ಸ್ ತಂಡವು 154 ರನ್‌ಗಳ ಗುರಿಯೊಡ್ಡಿತ್ತು. ಈ ಹಾದಿಯಲ್ಲಿ ಸ್ಮೃತಿ ಬಳಗವು 65 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ಅಪಾಯದಲ್ಲಿತ್ತು. ಆರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ನದೀನ್ (ಅಜೇಯ 63; 44ಎ) ಅವರು ತಂಡವನ್ನು ಗೆಲುವಿನ ದಡ ಸೇರಿಸಿದರು. ದಕ್ಷಿಣ ಆಫ್ರಿಕಾದ ಆಟಗಾರ್ತಿ ಎದುರಾಳಿ ಬೌಲರ್‌ಗಳನ್ನು ದಿಟ್ಟತನದಿಂದ ಎದುರಿಸಿದರು. ಅರುಂಧತಿ ರೆಡ್ಡಿ (20; 25ಎ) ಅವರೊಂದಿಗೆ 52 ರನ್ ಸೇರಿಸಿದರು. ಆದರೆ ಅರುಂಧತಿ ಹಾಗೂ ಶ್ರೇಯಾಂಕಾ ಪಾಟೀಲ ಅವರು ಒಂದೇ ಓವರ್‌ನಲ್ಲಿ ಔಟಾದರು. ಆಗ ಆರ್‌ಸಿಬಿ ಜಯಕ್ಕೆ 3 ಓವರ್‌ಗಳಲ್ಲಿ 34 ರನ್‌ಗಳ ಅಗತ್ಯವಿತ್ತು. ಆದರೂ ಧೈರ್ಯಗೆಡದ ಕ್ಲರ್ಕ್ ತಮ್ಮ ಬೀಸಾಟ ಮುಂದುವರಿಸಿದರು.

ಅದರಲ್ಲೂ ಕೊನೆಯ ಓವರ್‌ನಲ್ಲಿ 18 ರನ್ ಬೇಕಿದ್ದ ಸಂದರ್ಭದಲ್ಲಿ ರೋಚಕತೆ ಮುಗಿಲುಮುಟ್ಟಿತು. ನ್ಯಾಟ್ ಶಿವರ್ ಬ್ರಂಟ್ ಹಾಕಿದ ಈ ಓವರ್‌ನಲ್ಲಿ ಮೊದಲೆರಡೂ ಎಸೆತಗಳು ಡಾಟ್ ಆದವು. ಹರ್ಮನ್ ಬಳಗದಲ್ಲಿ ಒಂದಿಷ್ಟು ನಿರಾಳತೆ ಸುಳಿದಾಡಿತು. ಆದರೆ ನಂತರದ ನಾಲ್ಕು ಎಸೆತಗಳಲ್ಲಿ ಕ್ಲರ್ಕ್ 6,4,6 ಮತ್ತು 4 ಹೊಡೆಯುವುದರೊಂದಿಗೆ ಜಯದ ಸಂಭ್ರಮ ಆಚರಿಸಿದರು. ಆರ್‌ಸಿಬಿ 20 ಓವರ್‌ಗಳಲ್ಲಿ 7ಕ್ಕೆ 157 ರನ್ ಗಳಿಸಿತು.

ಕ್ಲರ್ಕ್ ಅವರು ಬೌಲಿಂಗ್‌ನಲ್ಲಿಯೂ ಮಿಂಚಿದ್ದರು. ಆರ್‌ಸಿಬಿಯು ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಮುಂಬೈ ತಂಡವು ದೊಡ್ಡ ಮೊತ್ತ ಗಳಿಸದಂತೆ ನೋಡಿಕೊಂಡಿದ್ದು ಕ್ಲರ್ಕ್ (26ಕ್ಕೆ4) ಅವರೇ.



ಅಜೇಯ ಅರ್ಧಶತಕ ಗಳಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನದೀನ್ ಡಿ ಕ್ಲರ್ಕ್ ಪಿಟಿಐ ಚಿತ್ರ

ಮುಂಬೈ ತಂಡದ ಆರಂಭ ಚೆನ್ನಾಗಿರಲಿಲ್ಲ. 67 ರನ್‌ಗಳಿಗೆ 4 ವಿಕೆಟ್‌ಗಳು ಪತನವಾಗಿದ್ದವು. ನಿಕೊಲಾ ಕ್ಯಾರಿ (40; 29ಎ, 4X4) ಹಾಗೂ ಸಜೀವನ್ ಸಜನಾ (45;25ಎ, 4X7, 6X1) ಅವರ ಆಟದ ಕಾರಣದಿಂದ ತಂಡವು 20 ಓವರ್‌ಗಳಲ್ಲಿ 6ಕ್ಕೆ154 ರನ್ ಗಳಿಸಿತು. ಕ್ಯಾರಿ ಮತ್ತು ಸಜೀವನ್ ಐದನೇ ವಿಕೆಟ್ ಜೊತೆಯಾಟದಲ್ಲಿ 82 (49ಎಸೆತ) ರನ್ ಸೇರಿಸಿದರು. ಇನಿಂಗ್ಸ್‌ನ ಕೊನೆ ಓವರ್‌ನಲ್ಲಿ ಇವರಿಬ್ಬರ ವಿಕೆಟ್‌ಗಳನ್ನು ಕ್ಲರ್ಕ್ ತಮ್ಮ ಬುಟ್ಟಿಗೆ ಹಾಕಿಕೊಂಡರು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 6ಕ್ಕೆ154 (ಜಿ. ಕಮಲಿನಿ 32, ಹರ್ಮನ್‌ಪ್ರೀತ್ ಕೌರ್ 20, ನಿಕೊಲಾ ಕ್ಯಾರಿ 40, ಸಜೀವನ್ ಸಜನಾ 45, ನದೀನ್ ಡಿ ಕ್ಲರ್ಕ್ 26ಕ್ಕೆ4, ಶ್ರೇಯಾಂಕಾ ಪಾಟೀಲ 32ಕ್ಕೆ1, ಲಾರೆನ್ ಬೆಲ್ 14ಕ್ಕೆ1). ರಾಯಲ್ ಚಾಲೆಂಜರ್ಸ್ ಬೆಂಗಳೂರು: 20 ಓವರ್‌ಗಳಲ್ಲಿ 7ಕ್ಕೆ157 ಗ್ರೇಸ್ ಹ್ಯಾರಿಸ್ 25, ಸ್ಮೃತಿ ಮಂದಾನ 18, ನದೀನ್ ಡಿ ಕ್ಲರ್ಕ್ ಔಟಾಗದೇ 63, ಅರುಂಧತಿ ರೆಡ್ಡಿ 20, ನಿಕೊಲಾ ಕ್ಯಾರಿ 35ಕ್ಕೆ2, ಅಮೆಲಿಯಾ ಕೆರ್ 13ಕ್ಕೆ2). ಫಲಿತಾಂಶ: ಆರ್‌ಸಿಬಿಗೆ 3 ವಿಕೆಟ್ ಜಯ.

ಪಂದ್ಯದ ಆಟಗಾರ್ತಿ: ನದೀನ್ ಡಿ ಕ್ಲರ್ಕ್

ಇಂದಿನ ಪಂದ್ಯಗಳು
ಗುಜರಾತ್ ಜೈಂಟ್ಸ್ – ಯುಪಿ ವಾರಿಯರ್ಸ್, ಮಧ್ಯಾಹ್ನ 3.30
ಮುಂಬೈ ಇಂಡಿಯನ್ಸ್ – ಡೆಲ್ಲಿ ಕ್ಯಾಪಿಟಲ್ಸ್, ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಹಾಟ್‌ಸ್ಟಾರ್ ಆ್ಯಪ್

ನ್ಯೂಜಿಲೆಂಡ್ ವಿರುದ್ಧ ಏಕದಿನ ಸರಣಿ: ಭಾರತ ತಂಡ ಸಿದ್ಧತೆ

ಕೊಹ್ಲಿ, ರೋಹಿತ್ ತಾಲೀಮು

ವಡೋದರ (ಪಿಟಿಐ): ನ್ಯೂಜಿಲೆಂಡ್ ವಿರುದ್ಧ ಮೂರು ಪಂದ್ಯಗಳ ಏಕದಿನ ಸರಣಿಗೆ ಪೂರ್ವಭಾವಿಯಾಗಿ ಭಾರತ ತಂಡ ಶುಕ್ರವಾರ ಇಲ್ಲಿ ಮೂರು ಗಂಟೆಗಳ ಕಾಲ ತಾಲೀಮಿನಲ್ಲಿ ತೊಡಗಿತು. ಈ ವೇಳೆ ತಂಡದ ಸ್ಟಾರ್ ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ಉತ್ತಮ ಲಯದಲ್ಲಿದ್ದಂತೆ ಕಂಡಿತು.

ಏಕದಿನ ಸರಣಿಯ ಮೊದಲ ಪಂದ್ಯ ಭಾನುವಾರ ನಡೆಯಲಿದೆ. ಈ ಸರಣಿಯ ಬಳಿಕ ಉಭಯ ತಂಡಗಳು ಐದು ಪಂದ್ಯಗಳ ಟಿ20 ಸರಣಿಯಲ್ಲಿ ಆಡಲಿವೆ.

ಕೋತಂಬಿಯ ಬಿಸಿಎ ಕ್ರೀಡಾಂಗಣದಲ್ಲಿ ಮಧ್ಯಮ ವೇಗಿಗಳು, ಸ್ಪಿನ್ನರ್‌ಗಳು ಮತ್ತು ಥ್ರೋಡೌನ್ ಪರಿಣತರೆದುರು ಕೊಹ್ಲಿ ಮತ್ತು ರೋಹಿತ್ ಸುಮಾರು ಒಂದೂವರೆ ಗಂಟೆ ಅಭ್ಯಾಸ ನಡೆಸಿದರು. ಅವರು ವೇಗದ ಮತ್ತು ಸ್ಪಿನ್ ಬೌಲರ್‌ಗಳ ಎದುರು ಆರಾಮವಾಗಿ ಆಡಿದರು. ಥ್ರೋಡೌನ್ ವೇಳೆ ಅವರಿಗೆ ಸವಾಲುಗಳೂ ಎದುರಾದವು.

ಇವರಿಬ್ಬರೂ ಈಚೆಗೆ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಎರಡು ತಲಾ ಪಂದ್ಯಗಳನ್ನು ಆಡಿದ್ದರು. ಕೊಹ್ಲಿ ಆ ಪಂದ್ಯಗಳಲ್ಲಿ 77 ಮತ್ತು 131 ರನ್ ಬಾರಿಸಿದ್ದರು.

ಮಧ್ಯಮ ಕ್ರಮಾಂಕದ ಆಟಗಾರರಾದ ಶ್ರೇಯಸ್ ಅಯ್ಯರ್, ರಿಷಭ್ ಪಂತ್ ಮತ್ತು ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರು ಮೂರು ಗಂಟೆಗಳ ತಾಲೀಮಿನ ಭಾಗವಾಗಿರಲಿಲ್ಲ. ಇವರಿಬ್ಬರೂ ವಿಜಯ್ ಹಜಾರೆ ಟ್ರೋಫಿಯಲ್ಲಿ ಗುರುವಾರ ತಮ್ಮ ತಂಡಗಳ ಪರ ಆಡಿದ್ದರು.


ಭಾರತ ಏಕದಿನ ತಂಡದ ಆಟಗಾರರಾದ ರವೀಂದ್ರ ಜಡೇಜ ಹಾಗೂ ವಿರಾಟ್ ಕೊಹ್ಲಿ ವಡೋದರದ ಬಿಸಿಎ ಕ್ರೀಡಾಂಗಣದಲ್ಲಿ ತಾಲೀಮು ನಡೆಸಿದರು ಪಿಟಿಐ ಚಿತ್ರ

ಭಾರತ ತಂಡದ ನಾಯಕ ಶುಭಮನ್ ಗಿಲ್ ಸಹ ವ್ಯಾಯಾಮದಲ್ಲಿ ಮತ್ತು ನೆಟ್ ಪ್ರಾಕ್ಟೀಸ್‌ನಲ್ಲಿ ತೊಡಗಿಕೊಂಡರು. ಅವರು ಕಾಲಬೆರಳಿನ ಗಾಯದಿಂದಾಗಿ ದಕ್ಷಿಣ ಆಫ್ರಿಕಾ ವಿರುದ್ಧ ಕೊನೆಯ ಎರಡು ಟಿ20 ಪಂದ್ಯಗಳಲ್ಲಿ ಆಡಿರಲಿಲ್ಲ.

ತಂಡ ಗುರುವಾರ ಕೂಡ ಅಭ್ಯಾಸದಲ್ಲಿ ತೊಡಗಿತ್ತು. ಭಾನುವಾರ ಈ ಕ್ರೀಡಾಂಗಣದಲ್ಲಿ ಪುರುಷರ ವಿಭಾಗದ ಮೊದಲ ಏಕದಿನ ಅಂತರರಾಷ್ಟ್ರೀಯ ಪಂದ್ಯ ನಡೆಯಲಿದೆ.


ಮಲೇಷ್ಯಾ ಓಪನ್: ಸೆಮಿಗೆ ಸಿಂಧು

ಗಾಯಾಳಾಗಿ ಹಿಂದೆ ಸರಿದ ಯಮಾಗುಚಿ • ಸಾತ್ವಿಕ್–ಚಿರಾಗ್ ಸೋಲು

ಕ್ವಾಲಾಲಂಪುರ (ಪಿಟಿಐ): ಎರಡು ಬಾರಿ ಒಲಿಂಪಿಕ್ ಪದಕ ಗೆದ್ದಿರುವ ಪಿ.ವಿ.ಸಿಂಧು ಅವರು ತಮ್ಮ ಎದುರಾಳಿ, ಜಪಾನ್‌ನ ಅಕಾನೆ ಯಮಾಗುಚಿ ಅವರು ಕಾಲುನೋವಿನಿಂದ ಅರ್ಧದಲ್ಲೇ ಹಿಂದೆ ಸರಿದ ಕಾರಣ ಮಲೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ತಲುಪಿದರು.

ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದ ಮೊದಲ ಗೇಮ್‌ಅನ್ನು ಸಿಂಧು 21–11 ರಿಂದ ಪಡೆದಿದ್ದರು. ಈ ಹಂತದಲ್ಲಿ ಮೂರು ಬಾರಿಯ ವಿಶ್ವ ಚಾಂಪಿಯನ್ ಹಾಗೂ ಇಲ್ಲಿ ಮೂರನೇ ಶ್ರೇಯಾಂಕ ಪಡೆದಿದ್ದ ಯಮಾಗುಚಿ ಮೊಣಕಾಲು ನೋವಿನಿಂದ ಪಂದ್ಯದಿಂದ ಹಿಂದೆಸರಿದರು. ಪಂದ್ಯದ ವೇಳೆ ಅವರು ಮೊಣಕಾಲಿಗೆ ಪಟ್ಟಿ ಕಟ್ಟಿಕೊಂಡಿದ್ದರು.

ಇದರೊಂದಿಗೆ ಸಿಂಧು ಅವರು ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಯಮಾಗುಚಿ ವಿರುದ್ಧದ ಗೆಲುವಿನ ದಾಖಲೆಯನ್ನು 15–12ಕ್ಕೆ ಹೆಚ್ಚಿಸಿದರು.


ಭಾರತದ ಪಿ.ವಿ.ಸಿಂಧು

ಗಾಯದ ಸಮಸ್ಯೆಯಿಂದ ದೀರ್ಘಕಾಲ ವಿಶ್ರಾಂತಿಯ ನಂತರ ಸಿಂಧು ಇದೇ ಮೊದಲ ಬಾರಿ ಈ ಟೂರ್ನಿಯಲ್ಲಿ ಕಣಕ್ಕಿಳಿದಿದ್ದರು. ಸೆಮಿಫೈನಲ್‌ನಲ್ಲಿ ಅವರು ಎರಡನೇ ಶ್ರೇಯಾಂಕದ ವಾಂಗ್ ಝಿಹಿ ಅವರನ್ನು ಎದುರಿಸಲಿದ್ದಾರೆ. ಚೀನಾದ ಝಿಹಿ ಅವರು ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಆರನೇ ಶ್ರೇಯಾಂಕದ ಇಂಡೊನೇಷ್ಯಾ ಆಟಗಾರ್ತಿ ಪುತ್ರಿ ಕುಸುಮ ವಾರ್ದನಿ ಅವರನ್ನು 21–17, 21–18 ರಿಂದ ಸೋಲಿಸಿದರು.

ಸಾತ್ವಿಕ್–ಚಿರಾಗ್ ಜೋಡಿಗೆ ನಿರಾಸೆ: ಪುರುಷರ ಡಬಲ್ಸ್ ನಲ್ಲಿ ಭಾರತದ ಅಗ್ರ ಆಟಗಾರರಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ ಕ್ವಾರ್ಟರ್‌ಫೈನಲ್‌ನಲ್ಲಿ ಸೋಲನುಭವಿಸಿತು. ಇಂಡೊನೇಷ್ಯಾದ ಫಝುರ್ ಅಲ್ಫಿಯಾನ್– ಮುಹಮ್ಮದ್ ಶೊಹಿಬುಲ್ ಫಿಕ್ರಿ ಜೋಡಿ 21–10, 23–21 ರಿಂದ ಮೂರನೇ ಶ್ರೇಯಾಂಕದ ಭಾರತದ ಅನುಭವಿ ಜೋಡಿಯನ್ನು ಸೋಲಿಸಿ ಸೆಮಿಫೈನಲ್ ತಲುಪಿತು. ಪಂದ್ಯ 47 ನಿಮಿಷ ನಡೆಯಿತು.

ಪುಣೆ ಕ್ರೀಡಾಂಗಣ ಪರಿಶೀಲಿಸಿದ ಆರ್‌ಸಿಬಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ತವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಆಯೋಜಿಸಲು ಇನ್ನಷ್ಟು ಕಾಲ ಕಾಯಬೇಕಾಗಬಹುದೇ?

ಈ ಅನಿಶ್ಚಿತತೆಯ ಹಿನ್ನೆಲೆಯಲ್ಲಿ ಆರ್‌ಸಿಬಿಯು ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ಮುಂದಾಗಿದೆ. ಅದಕ್ಕಾಗಿಯೇ ಪುಣೆಯ ಗಹುಂಜೆಯಲ್ಲಿರುವ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಆಯೋಜಿಸಲು ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ (ಎಂಸಿಎ) ಜೊತೆಗೆ ಆರ್‌ಸಿಬಿಯು ಮಾತುಕತೆ ನಡೆಸಿದೆ. ಅಲ್ಲದೇ ತಂಡದ ನಿಯೋಗವು ಕ್ರೀಡಾಂಗಣಕ್ಕೂ ಭೇಟಿ ನೀಡಿ ಪರಿಶೀಲಿಸಿದೆ. ರಾಜಸ್ಥಾನ ರಾಯಲ್ಸ್ ತಂಡ ಕೂಡ ತನ್ನ ತವರು ಪಂದ್ಯಗಳನ್ನು ಪುಣೆಯಲ್ಲಿ ನಡೆಸುವ ಕುರಿತು ಮಾತುಕತೆ ನಡೆಸಿದೆ.

‘ಕೆಲವು ವಾರಗಳ ಹಿಂದೆ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ರಾಜಸ್ಥಾನ ರಾಯಲ್ಸ್ ನಿಯೋಗಗಳು ಗಹುಂಜೆಯ ಎಂಸಿಎ ಅಂತರರಾಷ್ಟ್ರೀಯ ಕ್ರೀಡಾಂಗಣಕ್ಕೆ ಭೇಟಿ ನೀಡಿದ್ದವು. ಅದಕ್ಕಾಗಿ ಆ ಫ್ರ್ಯಾಂಚೈಸಿಗಳಿಗೆ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ. ನಮ್ಮ ಕ್ರೀಡಾಂಗಣವು ಶ್ರೇಷ್ಠ ದರ್ಜೆಯ ಕ್ರಿಕೆಟ್ ಪಂದ್ಯಗಳನ್ನು ಆಯೋಜಿಸುವ ಪ್ರತಿಷ್ಠಿತ ತಾಣವೆಂಬುದು ಈ ತಂಡಗಳ ಭೇಟಿಯಿಂದ ರುಜುವಾತಾಗಿದೆ. ಎಂಸಿಎಗೆ ಬಿಸಿಸಿಐ ಕೂಡ ಉತ್ತಮ ಬೆಂಬಲ ನೀಡುತ್ತಿದೆ. ಮುಂಬರುವ ದಿನಗಳಲ್ಲಿ ಐಪಿಎಲ್ ಪಂದ್ಯಗಳನ್ನು ಆಯೋಜಿಸುವ ಅವಕಾಶ ಸಿಗುವ ವಿಶ್ವಾಸವಿದೆ’ ಎಂದು ಎಂಸಿಎ ‘ಎಕ್ಸ್’ನಲ್ಲಿ ಪ್ರಕಟಣೆ ಹಾಕಿದೆ.

ಇತ್ತ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮತ್ತೆ ಮಹತ್ವದ ಪಂದ್ಯಗಳ ಆಯೋಜನೆಗಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮಾಡಿದ ಪ್ರಯತ್ನಗಳಿಗೆ ಫಲ ಸಿಕ್ಕಿಲ್ಲ. ಈಚೆಗಷ್ಟೇ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ವಿರಾಟ್ ಕೊಹ್ಲಿ ಮತ್ತು ರಿಷಭ್ ಪಂತ್ ಅವರು ಪ್ರತಿನಿಧಿಸಿದ್ದ ದೆಹಲಿ ತಂಡದ ಪಂದ್ಯಗಳನ್ನು ಚಿನ್ನಸ್ವಾಮಿ ಅಂಗಳದಲ್ಲಿ ಆಡಿಸಲು ರಾಜ್ಯ ಸರ್ಕಾರ ಅನುಮತಿ ನೀಡಿರಲಿಲ್ಲ. ಅದರಿಂದಾಗಿ ಪಂದ್ಯಗಳನ್ನು ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮೈದಾನದಲ್ಲಿ ನಡೆಸಲಾಗಿತ್ತು.

ಟಾಟಾ ಸ್ಟೀಲ್ ಚೆಸ್: ನಿಹಾಲ್‌ಗೆ ಪ್ರಶಸ್ತಿ



ಕೋಲ್ಕತ್ತ (ಪಿಟಿಐ): ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ನಿಹಾಲ್ ಸರಿನ್ ಅವರು ಟಾಟಾ ಸ್ಟೀಲ್ ಚೆಸ್ ಇಂಡಿಯಾ ಟೂರ್ನಿಯಲ್ಲಿ ಶುಕ್ರವಾರ ರ್‍ಯಾಪಿಡ್ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಐದು ಬಾರಿಯ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ವಿರುದ್ಧ ಒಂಬತ್ತನೇ ಸುತ್ತಿನ ಪಂದ್ಯವನ್ನು ಸಂಯಮದಿಂದ ಡ್ರಾ ಮಾಡಿಕೊಳ್ಳುವ ಮೂಲಕ 21 ವರ್ಷದ ನಿಹಾಲ್ 6.5 ಅಂಕಗಳೊಡನೆ ‘ಓಪನ್’ ವಿಭಾಗದ ಚಾಂಪಿಯನ್ ಆದರು.

ಆರು ಅಂಕ ಗಳಿಸಿದ ಆನಂದ್ ಎರಡನೇ ಸ್ಥಾನ ಪಡೆದರು. ಇತ್ತೀಚೆಗಷ್ಟೇ ದೋಹಾದಲ್ಲಿ ವಿಶ್ವ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಕಂಚಿನ ಪದಕಗಳನ್ನು ಜಯಿಸಿದ್ದ ಅರ್ಜುನ್ ಇರಿಗೇಶಿ ಇಲ್ಲಿ ಐದು ಅಂಕಗಳನ್ನು ಗಳಿಸಿ ಮೂರನೇ ಸ್ಥಾನ ಪಡೆದರು.

‘ನನ್ನ ಅಜ್ಜ (ತಾಯಿಯ ತಂದೆ) ಮೃತರಾದ ಸುದ್ದಿ ಗುರುವಾರ ರಾತ್ರಿ ಗೊತ್ತಾಯಿತು. ಅವರು ನನಗೆ ಚೆಸ್ ಕಲಿಸಿದ್ದರು. ಈ ಪ್ರಶಸ್ತಿ ಅವರಿಗೆ ಅರ್ಪಿಸುತ್ತೇನೆ’ ಎಂದು ನಿಹಾಲ್ ಹೇಳಿದರು. ಮಹಿಳಾ ವಿಭಾಗದಲ್ಲಿ ರಷ್ಯಾದ ಕ್ಯಾತರಿನಾ ಲಾಗ್ನೊ (6.5) ವಿಜೇತರಾದರು.

ಬ್ಯಾಸ್ಕೆಟ್‌ಬಾಲ್: ಕರ್ನಾಟಕ ತಂಡಗಳ ನಿರ್ಗಮನ

ಚೆನ್ನೈ: ಕರ್ನಾಟಕ ಪುರುಷರ ಮತ್ತು ಮಹಿಳಾ ತಂಡಗಳು, 75ನೇ ಸೀನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಶುಕ್ರವಾರ ಸೋಲನುಭವಿಸಿದವು.

ಪುರುಷರ ವಿಭಾಗದ ಎಂಟರ ಘಟ್ಟದ ಪಂದ್ಯದಲ್ಲಿ ಕರ್ನಾಟಕ 73–80 ಅಂಕಗಳಿಂದ ದೆಹಲಿ ತಂಡದ ಎದುರು ಪರಾಭಗೊಂಡಿತು. ಕರ್ನಾಟಕ ವನಿತೆಯರ ತಂಡವು 63–64ರಿಂದ ಮಧ್ಯಪ್ರದೇಶ ವಿರುದ್ಧ ಒಂದು ಪಾಯಿಂಟ್ ಅಂತರದಲ್ಲಿ ಸೋಲು ಕಂಡಿತು.

ರಾಜ್ಯದ ಡಿಂಪಲ್, ಭಾವಿಕ್‌ಗೆ ಚಿನ್ನ


ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕದ ಡಿಂಪಲ್ ಸೋನಾಕ್ಷಿ ಗೌಡ ಮತ್ತು ಭಾವಿಕ್ ಅಗರವಾಲ್ ಭಾರತ ಈಜು ಫೆಡರೇಷನ್ ಆಶ್ರಯದಲ್ಲಿ ಕರ್ನಾಟಕ ಈಜು ಸಂಸ್ಥೆ ಆಯೋಜಿಸಿರುವ ಓಪನ್ ವಾಟರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನ ಮೊದಲ ದಿನವಾದ ಶುಕ್ರವಾರ ಚಿನ್ನ ಗೆದ್ದು ಸಂಭ್ರಮಿಸಿದರು.

ನಗರದ ತಣ್ಣೀರುಬಾವಿ ಬೀಚ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮಹಿಳೆಯರ 10 ಕಿಲೊಮೀಟರ್ ಮುಕ್ತ ವಿಭಾಗದಲ್ಲಿ ಡಿಂಪಲ್ ಮತ್ತು ಪುರುಷರ 1 ಕಿಮೀ ಗುಂಪು 1ರಲ್ಲಿ ಭಾವಿಕ್ ಮೊದಲಿಗರಾದರು. ಬಾಲಕರ 1 ಕಿಮೀ ಗುಂಪು 5ರ ಸ್ಪರ್ಧೆಯಲ್ಲಿ ತನುಜ್ ಮತ್ತು ಶಾನ್ ಕಂಚಿನ ಪದಕ ಹಂಚಿಕೊಂಡರು.

ಮೊದಲ ದಿನದ ಫಲಿತಾಂಶಗಳು: ಪುರುಷರ 10 ಕಿಮೀ ಮುಕ್ತ ವಿಭಾಗ: ಕುಶಾಗ್ರ ರಾವತ್ (ದೆಹಲಿ)–1. ಕಾಲ: 2 ಗಂಟೆ 26:13ನಿಮಿಷ, ಅದ್ವೈತ್ ಪಾಗೆ (ಮಧ್ಯಪ್ರದೇಶ)–2, ಅಲೆಸ್ಟರ್ ಸ್ಯಾಮ್ಯುಯೆಲ್ ರೇಗೊ (ಕರ್ನಾಟಕ)–3; ಮಹಿಳೆಯರ 10 ಕಿಮೀ ಮುಕ್ತ ವಿಭಾಗ: ಡಿಂಪಲ್ ಸೋನಾಕ್ಷಿ ಎಂ ಗೌಡ (ಕರ್ನಾಟಕ)–1. ಕಾಲ: 2 ಗಂಟೆ 36:52ನಿ, ಖುಷಿಕಾ ಆರ್ (ಕರ್ನಾಟಕ)–2, ವೃತ್ತಿ ಅಗರವಾಲ್ (ತೆಲಂಗಾಣ)–3; ಬಾಲಕರ 5 ಕಿಮೀ ಗುಂಪು 3: ಕಬಿಲನ್ ತಮಿಳ್‌ಸೆಲ್ವನ್ (ತಮಿಳುನಾಡು)–1. ಕಾಲ: 1 ಗಂಟೆ 16:3ನಿ, ದಕ್ಷ್ ಪ್ರಸಾದ್ (ಕರ್ನಾಟಕ)–2, ಆರವ್ ಜೆ (ಕರ್ನಾಟಕ)–3; ಬಾಲಕಿಯರ 5 ಕಿಮೀ ಗುಂಪು 3: ನೇಹ್ಯಾ ವಿಜಯಕುಮಾರ್ (ತಮಿಳುನಾಡು)–1. ಕಾಲ: 1 ಗಂಟೆ 23:33 ನಿ, ಸೈನಾ ಪಾಂಚೋಲಿ (ಮಧ್ಯಪ್ರದೇಶ)–2, ಸಹನಶ್ರೀ ಡಿ (ಕರ್ನಾಟಕ)–3; ಬಾಲಕರ 1 ಕಿಮೀ ಗುಂಪು 5: ಭಾವಿಕ್ ಅಗರವಾಲ್ (ಕರ್ನಾಟಕ)–1. ಕಾಲ: 11:56ನಿ, ಕುಶಾಲ್ ಬಿ ಗೌಡ (ಕರ್ನಾಟಕ)–2, ತನುಜ್ ಸುಂದರ್ ತಮಿಳುನಾಡು–3, ಶಾನ್ ಎ.ಆರ್ (ಕರ್ನಾಟಕ)–3; ಬಾಲಕಿಯರ 1 ಕಿಮೀ ಗುಂಪು 5: ನೀಹಾರ ಮಹೇಶ್ (ತಮಿಳುನಾಡು)–1. ಕಾಲ: 12:23ನಿ, ವಿವಾನ್ಯ ಅರವಿಂದ್ (ಕರ್ನಾಟಕ)–2, ಸಾನ್ವಿ ಆರ್ (ಕರ್ನಾಟಕ)–3.

ವಿಶ್ವವಿಖ್ಯಾತ ಕಲಾವಿದ ಸ್ವೆತೊಸ್ಲವ್ ರೋರಿಕ್ ಅವರ ವರ್ಣಚಿತ್ರಗಳ ಸಂರಕ್ಷಣೆ ಕಾರ್ಯವು ದಶಕದ ನಂತರ ಪೂರ್ಣಗೊಂಡಿದೆ. ಕೋಟ್ಯಂತರ ರೂಪಾಯಿ ಬೆಲೆಬಾಳುವ, ಬಹುಮಾನ್ಯತೆ ಪಡೆದಿರುವ ಕಲಾಕೃತಿಗಳು ಇವು.





ಆಸ್ಕರ್ ಸ್ಪರ್ಧೆಯಲ್ಲಿ 'ಕಾಂತಾರ–1'


ರಿಷಬ್ ಶೆಟ್ಟಿ

ರುಕ್ಮಿಣಿ ವಸಂತ್

ರಿಷಬ್ ಶೆಟ್ಟಿ ನಿರ್ದೇಶಿಸಿ, ನಟಿಸಿರುವ 'ಕಾಂತಾರ: ಚಾಪ್ಟರ್ 1' ಆಸ್ಕರ್ ಸ್ಪರ್ಧೆಗೆ ಪ್ರವೇಶ ಪಡೆದಿದೆ. ಭಾರತದಿಂದ ಆಸ್ಕರ್‌ಗೆ ಅಧಿಕೃತ ಪ್ರವೇಶ ಪಡೆಯದ ಸಿನಿಮಾ, ಪ್ರತ್ಯೇಕ ಅರ್ಜಿ ಮೂಲಕ 'ಅತ್ಯುತ್ತಮ ಚಿತ್ರ' ವಿಭಾಗದಲ್ಲಿ ಸ್ಥಾನ ಪಡೆದಿದೆ ಎಂದು ಚಿತ್ರ ನಿರ್ಮಾಣ ಸಂಸ್ಥೆಯಾದ ಹೊಂಬಾಳೆ ಫಿಲ್ಮ್ಸ್ ಹೇಳಿದೆ.

ಬಾಕ್ಸ್ ಆಫೀಸ್‌ನಲ್ಲಿ ₹850 ಕೋಟಿಗೂ ಅಧಿಕ ಗಳಿಕೆ ಕಂಡಿದ್ದ ಚಿತ್ರ ಹಾಲಿವುಡ್ ಸಿನಿಮಾಗಳ ಜೊತೆ ಸ್ಪರ್ಧೆ ನೀಡಲಿದೆ. ಅಮೆರಿಕದ ಆಯ್ದ ಚಿತ್ರಮಂದಿರಗಳಲ್ಲಿ ಕನಿಷ್ಠ ಒಂದು ವಾರಗಳ ಪ್ರದರ್ಶನ ಕಂಡ ಚಿತ್ರಗಳು ಆಸ್ಕರ್ ಅಕಾಡೆಮಿ ಸ್ಪರ್ಧೆಗೆ ಅರ್ಹತೆ ಪಡೆಯುತ್ತವೆ. ಅದೇ ಮಾನದಂಡದಡಿಯಲ್ಲಿ 'ಕಾಂತಾರ–1' ಕೂಡ ಪ್ರವೇಶ ಪಡೆದಿದೆ.

ಹೊಂಬಾಳೆ ಫಿಲ್ಮ್ಸ್ ಪ್ರಸ್ತುತಪಡಿಸಿದ 'ಮಹಾವತಾರ ನರಸಿಂಹ' ಕೂಡ ಸಾಮಾನ್ಯ ಪ್ರವೇಶ ಪಟ್ಟಿ ಮೂಲಕ ಆಸ್ಕರ್ ಸ್ಪರ್ಧೆಯಲ್ಲಿ ಸ್ಥಾನ ಪಡೆದಿದೆ. ಹಲವು ಹಂತಗಳಲ್ಲಿ ಸ್ಪರ್ಧೆ ನಡೆಯಲಿದ್ದು, ಮಾರ್ಚ್ 16ರಂದು 98ನೇ ಆಸ್ಕರ್ ಪ್ರಶಸ್ತಿ ವಿಜೇತರ ಘೋಷಣೆಯಾಗಲಿದೆ.

ರುಕ್ಮಿಣಿ ವಸಂತ್, ಜಯರಾಮ್, ಗುಲ್ಶನ್ ದೇವಯ್ಯ ಸೇರಿದಂತೆ ಅನೇಕರು ಚಿತ್ರದಲ್ಲಿ ನಟಿಸಿದ್ದಾರೆ.

2026ನೇ ಸಾಲಿನ ಆಸ್ಕರ್ ಪ್ರಶಸ್ತಿಯ 'ಅತ್ಯುತ್ತಮ ಅಂತರರಾಷ್ಟ್ರೀಯ ಫೀಚರ್ ಸಿನಿಮಾ' ವಿಭಾಗಕ್ಕೆ ಭಾರತದಿಂದ ಹಿಂದಿ ಭಾಷೆಯ 'ಹೋಂಬೌಂಡ್' ಕೂಡ ಅಧಿಕೃತ ಪ್ರವೇಶ ಪಡೆದಿದೆ.

'ಹೋಂ ಬೌಂಡ್' ಸಿನಿಮಾವನ್ನು ಕರಣ್ ಜೋಹರ್ ಮತ್ತು ಅದಾರ್ ಪೂನಾವಾಲಾ ಅವರು ನಿರ್ಮಿಸಿದ್ದು, ನೀರಜ್ ಘಾಯ್‌ವಾನ್ ನಿರ್ದೇಶಿಸಿದ್ದಾರೆ. ಇಶಾನ್ ಖಟ್ಟರ್, ವಿಶಾಲ್ ಜೇತ್ವಾ ಮತ್ತು ಜಾನ್ವಿ ಕಪೂರ್ ಅವರು ಮುಖ್ಯ ಭೂಮಿಕೆಯಲ್ಲಿದ್ದಾರೆ.

'ದೈಜಿ' ಯಲ್ಲಿ ಖುಷಿ ರವಿ


ಖುಷಿ ರವಿ

ರಮೇಶ್ ಅರವಿಂದ್ ನಟನೆಯ 'ದೈಜಿ' ಚಿತ್ರದ ವಿಶೇಷ ಪಾತ್ರದಲ್ಲಿ ಖುಷಿ ರವಿ ಬಣ್ಣ ಹಚ್ಚಿದ್ದಾರೆ. ಆಕಾಶ್ ಶ್ರೀವತ್ಸ ನಿರ್ದೇಶನದ ಚಿತ್ರ ರಮೇಶ್ ಅರವಿಂದ್ ಅವರ 106ನೇ ಚಿತ್ರವಾಗಿದೆ.

ಆಧ್ಯಾತ್ಮಿಕ ಹಿನ್ನೆಲೆಯ ಪಾತ್ರದಲ್ಲಿ ಖುಷಿ ಕಾಣಿಸಿಕೊಳ್ಳಲಿದ್ದಾರೆ. ಒಂದು ದಿನದ ಚಿತ್ರೀಕರಣ ಮಾತ್ರ ಬಾಕಿಯಿದ್ದು, ಉಳಿದ ಚಿತ್ರೀಕರಣ ಪೂರ್ಣವಾಗಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು, ಶೀಘ್ರದಲ್ಲಿಯೇ ಬಿಡುಗಡೆ ದಿನಾಂಕ ಘೋಷಿಸಲಾಗುವುದು ಎಂದು ಚಿತ್ರತಂಡ ಹೇಳಿದೆ.

ರಾಧಿಕಾ ನಾರಾಯಣ್ ನಾಯಕಿ. ಅವಿನಾಶ್, ದಿಗಂತ್, ಗುರು ದೇಶಪಾಂಡೆ ಮುಂತಾದವರು ಚಿತ್ರದಲ್ಲಿದ್ದಾರೆ. ರವಿ ಕಶ್ಯಪ್ ಬಂಡವಾಳ ಹೂಡಿದ್ದು, ನಕುಲ್ ಅಭಯಂಕರ್ ಹಾಗೂ ಸಚಿನ್ ಬಸ್ರೂರ್ ಸಂಗೀತ, ಜ್ಯೂಡಾ ಸ್ಯಾಂಡಿ ಹಿನ್ನೆಲೆ ಸಂಗೀತ, ಶ್ರೀಶ ಕುದುವಳ್ಳಿ ಛಾಯಾಚಿತ್ರಗ್ರಹಣವಿದೆ.


ಎಸ್.ಮಹೇಂದರ್, ಹಂಸಲೇಖ, ಕೆ.ಸಿ ವಿಜಯ ಕುಮಾರ್

ಮತ್ತೆ ಒಂದಾದ ಎಸ್.ಮಹೇಂದರ್-ಹಂಸಲೇಖ

ಒಂದು ಕಾಲಕ್ಕೆ ಸೂಪರ್ ಹಿಟ್ ಚಿತ್ರಗಳನ್ನು ನೀಡಿದ ಎಸ್.ಮಹೇಂದರ್ ಹಾಗೂ ಸಂಗೀತ ನಿರ್ದೇಶಕ ಹಂಸಲೇಖ ಹೊಸ ಚಿತ್ರವೊಂದಕ್ಕಾಗಿ ಮತ್ತೆ ಒಂದಾಗಿದ್ದಾರೆ. ಶೀಘ್ರದಲ್ಲಿ ಈ ಚಿತ್ರ ಸೆಟ್ಟೇರಲಿದೆ.

'ಕನ್ನಡ ಚಿತ್ರರಂಗದಲ್ಲಿ ಹೊಸ ಅಲೆಯ, ಹೊಸ ತಲೆಮಾರಿನ ಸಿನಿಮಾಗಳು ಬರುತ್ತಿವೆ. ಜಾಗತಿಕ ಮಟ್ಟದಲ್ಲಿ ಕನ್ನಡದ ಕಂಪು ಸೂಸುತ್ತಿವೆ. ಈ ಬೆಳವಣಿಗೆಗೆ ಅಡಿಪಾಯ ಹಾಕಿದವರು, ಆ ಕಾಲಘಟ್ಟದಲ್ಲಿ ಹಲವು ದಾಖಲೆಗಳನ್ನ ಬರೆದವರು ಮತ್ತೆ ಬರುತ್ತಿದ್ದಾರೆ' ಎಂದು ಚಿತ್ರತಂಡ ಹೇಳಿದೆ.

ಈ ಜೋಡಿ ಸುಮಾರು 20 ಸಿನಿಮಾಗಳಿಗೆ ಜೊತೆಯಾಗಿ ಕೆಲಸ ಮಾಡಿತ್ತು. ಶ್ರೀಗುರುರಾಯರು ಸಿನಿಮಾ ಬ್ಯಾನರ್‌ನಡಿಯಲ್ಲಿ ಕೆ.ಸಿ ವಿಜಯ ಕುಮಾರ್ ಹೊಸ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಜ.16ರಂದು ಚಿತ್ರ ಸೆಟ್ಟೇರಲಿದೆ. ಉಳಿದ ಮಾಹಿತಿಗಳನ್ನು ಶೀಘ್ರದಲ್ಲಿ ನೀಡಲಾಗುವುದು ಎಂದು ಚಿತ್ರತಂಡ ಹೇಳಿದೆ.

ಫ್ಯಾಷನ್

ಈಗೇನಿದ್ದರೂ ಪುಲ್‌ಓವರ್ ಟ್ರೆಂಡ್



• ಪವಿತ್ರಾ ಭಟ್

ಋತುಮಾನ ಬದಲಾದಂತೆ ಫ್ಯಾಷನ್ ಜಗತ್ತೂ ಹೊಸತನಕ್ಕೆ ಹೊರಳುತ್ತದೆ. ಆಯಾ ಕಾಲಕ್ಕೆ ತಕ್ಕ ರೀತಿಯಲ್ಲಿ ಉಡುಪುಗಳು ಮಾರುಕಟ್ಟೆಗೆ ಲಗ್ಗೆ ಇಡುತ್ತವೆ. ಈಗಂತೂ ಚಳಿ ತೀವ್ರವಾಗಿದೆ. ಹೀಗಾಗಿ, ಜನ ಬೆಚ್ಚನೆಯ ಉಡುಪನ್ನೇ ಹುಡುಕುತ್ತಾರೆ. ಅದರಲ್ಲೂ ಈಗಿನ ಜೆನ್ ಝೀ ಮಕ್ಕಳು ಯಾವುದು ಹೊಸತು, ಏನು ವಿಶೇಷ ಇದೆ ಎನ್ನುವುದನ್ನು ಗಮನಿಸುವುದರಲ್ಲಿ ನಿಸ್ಸೀಮರು.

ಜಾಕೆಟ್, ಸ್ವೆಟ್‌ಶರ್ಟ್, ಪುಲ್‌ಓವರ್‌ಗಳತ್ತ ಈಗ ಎಲ್ಲರ ಗಮನವಿದೆ. ಅದರಲ್ಲೂ ಪುಲ್‌ಓವರ್ ಧರಿಸಲು ಹೆಣ್ಣುಮಕ್ಕಳು ಹೆಚ್ಚು ಇಷ್ಟಪಡುತ್ತಾರೆ. ಪುಲ್‌ಓವರ್‌ಗಳು ಟ್ರೆಂಡಿ ಎನ್ನಿಸುವ ಜೊತೆಗೆ ಅಂದವನ್ನೂ ಹೆಚ್ಚಿಸುತ್ತವೆ. ಜೊತೆಗೆ ಚಳಿಗಾಲದಲ್ಲಿ ದೇಹವನ್ನೂ ಬೆಚ್ಚಗಿರಿಸುತ್ತವೆ. ಇದನ್ನು ಜೀನ್ಸ್, ಕುರ್ತಾ ಹಾಗೂ ಸೀರೆ ಮೇಲೆ, ಸ್ಕರ್ಟ್ ಜೊತೆಯೂ ಧರಿಸಬಹುದು.

ಸೀರೆಯ ಅಂದ ಹೆಚ್ಚಿಸುತ್ತದೆ

ಸೀರೆಯೊಂದಿಗೆ ಬ್ಲೌಸ್ ಧರಿಸುವುದು ಇದ್ದೇ ಇದೆ. ಆದರೆ ಈಗ ಅದೇ ಬ್ಲೌಸ್ ಅನ್ನು ಪುಲ್‌ಓವರ್ ರೀತಿ ಹೊಲಿಸಿಕೊಂಡು ಧರಿಸುವುದು ಟ್ರೆಂಡ್. ಇದರಿಂದ ಸೀರೆಯ ಅಂದದೊಂದಿಗೆ ನಮ್ಮ ಅಂದವನ್ನೂ ಹೆಚ್ಚಿಸಿಕೊಳ್ಳಬಹುದು. ಸಂಪ್ರದಾಯವನ್ನೂ ಬಿಡದೆ, ಹೊಸ ಟ್ರೆಂಡ್‌ನೊಂದಿಗೂ ಹೊಂದಿಕೊಂಡು, ಚಳಿಗಾಲದಲ್ಲಿ ದೇಹವನ್ನು ಬೆಚ್ಚಗಿರಿಸಬಹುದು.

ಸ್ಕರ್ಟ್ ಮತ್ತು ಪುಲ್‌ಓವರ್

ಪಾದದವರೆಗೆ ಇಳಿಬಿಟ್ಟಿರುವ ಸ್ಕರ್ಟ್ ಮೇಲೆ ಪುಲ್‌ಓವರ್ ಧರಿಸುವುದರಿಂದ ಅಂದವನ್ನು ಹೆಚ್ಚಿಸಿಕೊಳ್ಳಬಹುದು. ಈ ಉಡುಪು ನಮಗೆ ಸಾಂಪ್ರದಾಯಿಕ ಹಾಗೂ ಪಾಶ್ಚಾತ್ಯ ಎರಡೂ ನೋಟ ಸಿಗುವಂತೆ ಮಾಡುತ್ತದೆ. ಉದ್ದನೆಯ ಸ್ಕರ್ಟ್ ಜೊತೆ ತುಂಬು ತೋಳಿನ ಪುಲ್‌ಓವರ್ ಉತ್ತಮ ಆಯ್ಕೆ. ಶಾರ್ಟ್ ಸ್ಕರ್ಟ್ ಮೇಲೂ ಇದನ್ನು ಧರಿಸಬಹುದು.

ಜೀನ್ಸ್ ಜೊತೆ ಪುಲ್‌ಓವರ್

ಜೀನ್ಸ್ ಜೊತೆಯೂ ಪುಲ್‌ಓವರ್ ಹೊಂದಿಕೊಳ್ಳುತ್ತದೆ. ಯಾವುದೇ ಬಣ್ಣದ ಜೀನ್ಸ್ ಮೇಲೆ ಅದಕ್ಕೆ ವಿರುದ್ಧ ಬಣ್ಣದ ಪುಲ್‌ಓವರ್ ಧರಿಸಬಹುದು. ತುಂಬು ತೋಳಿನ, ಅರ್ಧ ತೋಳಿನ ಪುಲ್‌ಓವರ್‌ಗಳೂ ಮಾರುಕಟ್ಟೆಯಲ್ಲಿ ಸದ್ದು ಮಾಡುತ್ತಿವೆ. ಈಗ ಇದು ಜೆನ್ ಝೀಗಳ ಇಷ್ಟದ ಉಡುಗೆಯೂ ಆಗಿದೆ.

ಕುರ್ತಾ ಮೇಲೆ ಪುಲ್‌ಓವರ್

ಚಳಿಗಾಲದಲ್ಲಿ ಬೆಚ್ಚಗಿರಲು ಕುರ್ತಾ ಮೇಲೆ ಪುಲ್‌ಓವರ್ ಧರಿಸಬಹುದು. ಕುರ್ತಾ ಬಣ್ಣದ್ದೇ ವಿವಿಧ ರೀತಿಯ ಪುಲ್‌ಓವರ್ ಧರಿಸುವುದರಿಂದ ಟ್ರೆಂಡಿ ಆಗಿಯೂ ಕಾಣುತ್ತದೆ. ವುಲನ್ ಶಾಲ್ ಧರಿಸಿದರೆ ಉತ್ತಮ ಲುಕ್ ಪಡೆಯಬಹುದು. ಇದು ನಮ್ಮ ಲುಕ್ ಅನ್ನೇ ಬದಲಿಸುವುದರಲ್ಲಿ ಎರಡು ಮಾತಿಲ್ಲ.

ಒತ್ತಡ ನಿರ್ವಹಿಸಿ ಸುಖವಾಗಿ ನಿದ್ರಿಸಿ



• ಡಾ. ತಾರಾಚಂದ್

ಮಾನಸಿಕ ಮತ್ತು ದೈಹಿಕವಾಗಿ ಆರೋಗ್ಯವಾಗಿರಲು ಉತ್ತಮ ನಿದ್ರೆಯ ಜತೆಗೆ ಒತ್ತಡ ನಿರ್ವಹಣೆ ಬಹಳ ಮುಖ್ಯ. ಒತ್ತಡ ಎಂಬುದು ಬದುಕಿನಲ್ಲಿ ಸಹಜವಾದರೂ ಅತಿಯಾದರೆ ಭಯ, ಆತಂಕ ಮತ್ತು ಸುಸ್ತು ಉಂಟಾಗುತ್ತವೆ. ಯಾವೆಲ್ಲಾ ಕಾರಣಗಳಿಂದಾಗಿ ಒತ್ತಡ ಉಂಟಾಗುತ್ತದೆ ಮತ್ತು ಅದನ್ನು ನಿರ್ವಹಿಸುವುದು ಹೇಗೆ ಎಂಬುದನ್ನು ಮೊದಲು ಪಟ್ಟಿ ಮಾಡಿಕೊಳ್ಳಬೇಕು.

ಧೂಮಪಾನ, ಅತಿಯಾಗಿ ತಿನ್ನುವುದು, ಅತಿಯಾದ ಸ್ಕ್ರೀನ್ ಟೈಮ್, ಅನಾರೋಗ್ಯಕರ ಅಭ್ಯಾಸಗಳನ್ನು ಮಾಡಿಕೊಳ್ಳುವುದರಿಂದ ಒತ್ತಡ ಮತ್ತು ನಿದ್ರಾಹೀನತೆ ಉಂಟಾಗಬಹುದು. ದೈಹಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದರಿಂದ ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು.

ವ್ಯಾಯಾಮ ಮಾಡುವುದರಿಂದ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಹೆಚ್ಚಿಸುವ ಮತ್ತು ಉದ್ವೇಗವನ್ನು ಕಡಿಮೆ ಮಾಡುವ ಎಂಡಾರ್ಫಿನ್‌ಗಳು ಬಿಡುಗಡೆಯಾಗುತ್ತವೆ.

ಸಂಪರ್ಕ ಸಾಧಿಸುವುದು, ಸಮಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು ಮತ್ತು ವಿರಾಮ ತೆಗೆದುಕೊಳ್ಳುವುದರಿಂದ ಭಾವನಾತ್ಮಕ ಸಮತೋಲನವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಬಹುದು. ಒತ್ತಡವು ಅತಿಯಾದರೆ ವೃತ್ತಿಪರ ಸಹಾಯವನ್ನು ಪಡೆಯಲು ಎಂದಿಗೂ ಹಿಂಜರಿಯಬಾರದು.

ನಿದ್ರೆ ನಿರ್ವಹಣೆ ಹೀಗಿರಲಿ

ಪ್ರತಿಯೊಬ್ಬರ ಜೀವನಶೈಲಿಯಲ್ಲೂ ನಿದ್ರೆ ಪ್ರಮುಖ ಪಾತ್ರ ವಹಿಸುತ್ತದೆ. ಏಕೆಂದರೆ ಇಡೀ ದಿನ ದೇಹ ದಣಿದಿರುವಾಗ ಚೇತರಿಕೆಗೆ, ರೋಗನಿರೋಧಕ ಶಕ್ತಿಗೆ ಮತ್ತು ಹಾರ್ಮೋನ್ ನಿಯಂತ್ರಣದಲ್ಲಿಡಲು ನಿದ್ರೆ ಬಹಳ ಮುಖ್ಯ. ಏರುಪೇರಿನ ದಿನಚರಿಗಳನ್ನು ಹೊಂದಿರುವವರು ನಿದ್ರೆ ಸಮಸ್ಯೆಯನ್ನು ಹೊಂದಿರುತ್ತಾರೆ.

ಉತ್ತಮ ನಿದ್ರೆಗೆ ಹೀಗೆ ಮಾಡಿ

ನಿದ್ರೆಗೆ ನಿಗದಿತ ವೇಳಾಪಟ್ಟಿಯನ್ನು ಅನುಸರಿಸಬೇಕು. ಹಗಲಿನ ಹೊತ್ತು ನಿದ್ರೆ ಮಾಡುವುದನ್ನು ತಪ್ಪಿಸಬೇಕು ಮತ್ತು ರಾತ್ರಿ ವೇಳೆ ಸರಿಯಾಗಿ ನಿದ್ರೆ ಮಾಡುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು.

ಮಲಗುವ ಮುನ್ನ ದೀಪಗಳನ್ನು ಮಂದಗೊಳಿಸುವುದು, ವಸ್ತು/ಸಾಧನಗಳ ಬಳಕೆಯಿಂದ ದೂರವಿರುವುದು, ಸಂಜೆ ವೇಳೆ ಕೆಫೀನ್‌ಯುಕ್ತ ಪಾನೀಯಗಳನ್ನು ಸೇವಿಸುವುದು ಮತ್ತು ಭಾರಿ ಊಟ ಮಾಡುವುದನ್ನು ತಪ್ಪಿಸಬೇಕು.

ಮಲಗುವ ಕೋಣೆಯಲ್ಲಿ ಆರಾಮದಾಯಕ ಹಾಸಿಗೆ, ತಂಪಾದ ತಾಪಮಾನ ಮತ್ತು ಕನಿಷ್ಠ ಶಬ್ದದೊಂದಿಗೆ ಕೂಡಿದ ವಾತಾವರಣವನ್ನು ನಿರ್ಮಿಸಿಕೊಳ್ಳಿ.

ಲೇಖಕ: ಮನೋವೈದ್ಯ, ವಾಸವಿ ಆಸ್ಪತ್ರೆ, ಬೆಂಗಳೂರು

ಮೊಟ್ಟೆ: ಮಿತವಾಗಿ ತಿಂದರೆ ಕೆಡದು ಹೊಟ್ಟೆ

• ಡಾ. ಸುನಿತಾ ಎನ್,

ಕೆಲವು ಬ್ರ್ಯಾಂಡ್‌ಗಳ ಮೊಟ್ಟೆಗಳಲ್ಲಿ ಹಾನಿಕಾರಕ ರಾಸಾಯನಿಕ ಅಂಶಗಳಿವೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ಹರಿದಾಡಿತ್ತು. ಹಾಗಿದ್ದರೆ ಮೊಟ್ಟೆ ಸೇವನೆ ಹೇಗಿರಬೇಕು ಎಂಬುದನ್ನು ಅರಿತುಕೊಳ್ಳೋಣ.

ನಾರುಯುಕ್ತ ಆಹಾರದೊಂದಿಗೆ ಮೊಟ್ಟೆಯನ್ನು ಮಿತವಾಗಿ ಸೇವಿಸುವುದು ಆರೋಗ್ಯದ ದೃಷ್ಟಿಯಿಂದ ಉತ್ತಮ. ಸಮತೋಲಿತ ಆಹಾರ, ಉತ್ತಮ ಜೀವನಶೈಲಿ ಮತ್ತು ಸಕಾರಾತ್ಮಕ ಮನಃಸ್ಥಿತಿ ಬೆಳೆಸಿಕೊಳ್ಳುವುದು ಬಹಳ ಮುಖ್ಯ. ಕೋಳಿ ಸಾಕಣೆ ಸಂದರ್ಭದಲ್ಲಿ ಅವುಗಳಿಗೆ ರೋಗ ಬಾರದಂತೆ ತಡೆಗಟ್ಟಲು ಮತ್ತು ಮೊಟ್ಟೆಯ ಉತ್ಪಾದನೆಯನ್ನು ಹೆಚ್ಚಿಸುವ ದಿಸೆಯಲ್ಲಿ 'ನೈಟ್ರೊಫ್ಯೂರಾನ್'ನಂಥ ಔಷಧಿಗಳನ್ನು ಬಳಸಲಾಗುತ್ತದೆ. ಇವುಗಳಲ್ಲಿ ಕ್ಯಾನ್ಸರ್‌ಕಾರಕ ಅಂಶಗಳಿವೆ ಎಂದು ಸಂಶೋಧನೆಗಳು ಹೇಳುತ್ತವೆ. ಆದರೆ, ಸರಿಯಾದ ಆಹಾರ ಕ್ರಮದ ಮೂಲಕ ಮೊಟ್ಟೆಗಳನ್ನು ಸೇವನೆ ಮಾಡುವುದರಿಂದ ಈ ಅಪಾಯದಿಂದ ದೂರ ಉಳಿಯಬಹುದು.

ಆಹಾರ ಕ್ರಮ ಹೀಗಿರಲಿ

ಮೊಟ್ಟೆಗಳನ್ನು ನೇರವಾಗಿ ಸೇವಿಸುವ ಬದಲು ನಾರುಯುಕ್ತ ತರಕಾರಿಗಳೊಂದಿಗೆ ಸೇವಿಸುವುದರಿಂದ ಅಪಾಯವನ್ನು ತಡೆಗಟ್ಟಬಹುದು. ಉದಾಹರಣೆಗೆ, ಮೊಟ್ಟೆಯನ್ನು ಆಮ್ಲೆಟ್ ಅಥವಾ ಸಲಾಡ್ ರೂಪದಲ್ಲಿ ತರಕಾರಿಗಳೊಂದಿಗೆ ಸೇವಿಸಿದಾಗ, ತರಕಾರಿಗಳಲ್ಲಿರುವ ಆ್ಯಂಟಿ ಆಕ್ಸಿಡೆಂಟ್‌ಗಳು ದೇಹದ ಡಿಎನ್‌ಎ ಮೇಲೆ ಪರಿಣಾಮ ಬೀರಬಹುದಾದ ಹಾನಿಕಾರಕ ಫ್ರೀ ರ್‍ಯಾಡಿಕಲ್ ಸೃಷ್ಟಿಯಾಗುವುದನ್ನು ತಡೆಗಟ್ಟುತ್ತವೆ.

ಪೌಷ್ಟಿಕಾಂಶದ ಪ್ರಯೋಜನ

ಇತ್ತೀಚಿನ ವಿವಾದಗಳ ಹೊರತಾಗಿ ನೋಡುವುದಾದರೆ, ಮೊಟ್ಟೆ ಅತ್ಯಂತ ಪೌಷ್ಟಿಕಾಂಶವುಳ್ಳ ಆಹಾರ. ಅದನ್ನು ನಿತ್ಯ ಸೇವನೆ ಮಾಡುವುದರಿಂದ ಮೂಳೆಗಳು ಬಲಿಷ್ಠಗೊಳ್ಳುವುದಲ್ಲದೇ , ದೇಹಕ್ಕೆ ಅಗತ್ಯವಿರುವ ಶಕ್ತಿ ಪೂರೈಸುತ್ತದೆ.

- ಮೊಟ್ಟೆಯಲ್ಲಿ ಅಗತ್ಯವಾದ ಅಮೈನೋ ಆ್ಯಸಿಡ್‌ಗಳು, ವಿಟಮಿನ್ ಡಿ ಮತ್ತು ಬಿ12 ಸಮೃದ್ಧವಾಗಿವೆ.
- ಇಂದಿನ ಅನೇಕ ವಯಸ್ಕರಲ್ಲಿ ಈ ಪೋಷಕಾಂಶಗಳ ಕೊರತೆ ಹೆಚ್ಚಾಗಿದ್ದು, ಮೊಟ್ಟೆ ಸೇವನೆಯು ಈ ಕೊರತೆಯನ್ನು ನೀಗಿಸಲು ಸಹಾಯ ಮಾಡುತ್ತದೆ.
- ಉತ್ತಮ ಮೊಟ್ಟೆ ಸೇವಿಸುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು.

ಮಿತವಾದ ಸೇವನೆ

ದಿನಕ್ಕೆ ಒಂದು ಅಥವಾ ಎರಡು ಮೊಟ್ಟೆಗಳನ್ನು ತರಕಾರಿಗಳೊಂದಿಗೆ ತಿನ್ನುವುದು ಆರೋಗ್ಯಕ್ಕೆ ಉತ್ತಮ. ಮೊಟ್ಟೆ ತಿಂದರೆ ಆರೋಗ್ಯ ಸಮಸ್ಯೆ ಉಂಟಾಗಬಹುದು ಎಂಬ ಆತಂಕ ಹೊಂದಿರುವವರು ಅದಕ್ಕೆ ಪರ್ಯಾಯವಾಗಿ ಪ್ರೊಟೀನ್ ಮೂಲಗಳನ್ನು ಬಳಸಬಹುದು. ಉದಾಹರಣೆಗೆ, ಮೀನು. ಇದರಲ್ಲಿ ಹೃದಯದ ಆರೋಗ್ಯಕ್ಕೆ ಪೂರಕವಾದ ಒಮೆಗಾ ಕೊಬ್ಬಿನ ಆಮ್ಲಗಳಿವೆ.


ಸೋಯಾಬೀನ್, ಬೇಳೆಕಾಳುಗಳು, ಮೊಳಕೆ ಬರಿಸಿದ ಕಾಳುಗಳು, ಬಾದಾಮಿ, ಅಕ್ರೋಟ್ ಮತ್ತು ಗೋಡಂಬಿಯನ್ನು ಆದಷ್ಟು ಬಳಸಿ. ಮೊಳಕೆ ಕಾಳುಗಳಲ್ಲಿ ನಾರು ಮತ್ತು ವಿಟಮಿನ್ ಸಿ ಹೇರಳವಾಗಿದ್ದು, ಇವು ಕ್ಯಾನ್ಸರ್ ವಿರೋಧಿ ಗುಣಗಳನ್ನು ಹೊಂದಿವೆ. ಇದರ ಜತೆಗೆ ಸಿಹಿ ಆಲೂಗೆಡ್ಡೆ, ಹಾಲಿನ ಉತ್ಪನ್ನಗಳಾದ ಪನೀರ್, ಚೀಸ್‌ಗಳ ಬಳಕೆಯಿಂದಲೂ ದೇಹಕ್ಕೆ ಅಗತ್ಯವಿರುವ ಪ್ರೊಟೀನ್‌ಗಳನ್ನು ಪಡೆಯಬಹುದು.



ಲೇಖಕಿ: ಆಹಾರ ತಜ್ಞೆ, ವಾಸವಿ ಆಸ್ಪತ್ರೆ, ಬೆಂಗಳೂರು

ಮಹತ್ವದ ಕಲಾಕೃತಿಗಳು ಈಗ ಸುರಕ್ಷಿತ




ರೋರಿಕ್ ಅವರ ಕಲಾಕೃತಿ

• ಉಮೇಶಭಟ್ಟ ಪಿ.ಎಚ್.

ವಿಶ್ವವಿಖ್ಯಾತ ಕಲಾವಿದ ಸ್ವೆತೊಸ್ಲವ್ ರೋರಿಕ್ ಅವರ ವರ್ಣಚಿತ್ರಗಳ ಸಂರಕ್ಷಣೆ ಕಾರ್ಯವು ದಶಕದ ನಂತರ ಪೂರ್ಣಗೊಂಡಿದೆ. ಕೋಟ್ಯಂತರ ರೂಪಾಯಿ ಬೆಲೆಬಾಳುವ, ಬಹುಮಾನ್ಯತೆ ಪಡೆದಿರುವ ಕಲಾಕೃತಿಗಳು ಇವು.

ಬೆಂಗಳೂರು ಹೊರವಲಯದ ತಾತಗುಣಿ ರೋರಿಕ್ ಎಸ್ಟೇಟ್‌ನಲ್ಲಿ ಹಲವು ವರ್ಷಗಳಿಂದ ಇರಿಸಲಾಗಿದ್ದ ಈ ಕಲಾಕೃತಿಗಳ ಸಂರಕ್ಷಣೆಗೆ ನಿರ್ಧರಿಸಿದ್ದ ರಾಜ್ಯ ಸರ್ಕಾರ, ಬಹಳಷ್ಟು ಹಿಂದೆಯೇ ಈ ಕಾರ್ಯಕ್ಕೆ ಅನುಮತಿ ನೀಡಿತ್ತು.

ಪುರಾತತ್ವ, ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಪ್ರವಾಸೋದ್ಯಮ ಇಲಾಖೆಯ ಆರ್ಥಿಕ ನೆರವಿನೊಂದಿಗೆ ಇಂಟ್ಯಾಕ್ (ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಆ್ಯಂಡ್ ಕಲ್ಚರಲ್ ಹೆರಿಟೇಜ್) ಜೊತೆ ಒಪ್ಪಂದ ಮಾಡಿಕೊಂಡು ಕಲಾಕೃತಿಗಳನ್ನು ವೈಜ್ಞಾನಿಕವಾಗಿ ಜೀರ್ಣೋದ್ಧಾರ ಮಾಡಿದೆ.

ಸಂರಕ್ಷಿಸಲಾಗಿರುವ ಕಲಾಕೃತಿಗಳು ಒಂದಕ್ಕಿಂತ ಒಂದು ವಿಭಿನ್ನವಾಗಿದ್ದು, ಕಲಾ ಮಹತ್ವ ಪಡೆದುಕೊಂಡಿವೆ. ಪರಿಸರದ ಮಹತ್ವ ಸಾರುವ ಕಲಾಕೃತಿಗಳ ಜತೆಗೆ ಮೊದಲ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರೂ, ಅವರ ಪತ್ನಿ ಕಮಲಾ ನೆಹರೂ ಅವರ ಭಾವಚಿತ್ರಗಳೂ ಇದರಲ್ಲಿ ಸೇರಿವೆ.

'ಭಾರತದ ನಾನಾ ಭಾಗಗಳಲ್ಲಿ ಪಾರಂಪರಿಕ ಮಹತ್ವ ಇರುವ ತಾಣಗಳ ಪುನಶ್ಚೇತನ, ಕಲಾಕೃತಿಗಳ ಪುನರುತ್ಥಾನ ಹಾಗೂ ಸಂರಕ್ಷಣೆ ಕಾರ್ಯದಲ್ಲಿ ನಮ್ಮ ಸಂಸ್ಥೆ ನಿರತವಾಗಿದೆ. ರೋರಿಕ್ ಅವರ ಕಲಾಕೃತಿಗಳ ಸಂರಕ್ಷಣೆ ಕಾರ್ಯವನ್ನು ನಮಗೆ ವಹಿಸಿದ ಬಳಿಕ ತಜ್ಞರ ತಂಡದೊಂದಿಗೆ ಏಳೆಂಟು ವರ್ಷಗಳಿಂದ ವೈಜ್ಞಾನಿಕವಾಗಿಯೇ ಇವುಗಳನ್ನು ಸಂರಕ್ಷಣೆ ಮಾಡಲಾಗಿದೆ. ಮುಂದಿನ ಹಲವು ವರ್ಷ ಪ್ರದರ್ಶನ ಮಾಡಲು ಯೋಗ್ಯವಾದ ವಿಶಿಷ್ಟ ಕಲಾಕೃತಿಗಳು ಇವು' ಎಂದು ಇಂಟ್ಯಾಕ್ ಸಂಸ್ಥೆಯ ಸಂರಕ್ಷಣಾ ತಜ್ಞ ನಿತಿನ್ ಕುಮಾರ್ ತಿಳಿಸಿದರು.

ಸಂರಕ್ಷಣೆ ಮಾಡಲಾದ ಎಲ್ಲಾ ಕಲಾಕೃತಿಗಳನ್ನು ಕಸ್ತೂರಬಾ ರಸ್ತೆಯಲ್ಲಿನ ವೆಂಕಟಪ್ಪ ಆರ್ಟ್ ಗ್ಯಾಲರಿಯ ಆವರಣದಲ್ಲಿ ಭದ್ರವಾಗಿ ಇರಿಸಲಾಗಿದೆ. ತಾತಗುಣಿ ರೋರಿಕ್ ಎಸ್ಟೇಟ್ ಪ್ರದೇಶವನ್ನು ಪರಿಸರ ಪ್ರವಾಸೋದ್ಯಮವಾಗಿ ಅಭಿವೃದ್ಧಿಪಡಿಸಿ, ರೋರಿಕ್ ಅವರಿದ್ದ ನಿವಾಸಕ್ಕೆ ಇವುಗಳನ್ನು ಸ್ಥಳಾಂತರಿಸಿ, ಸಾರ್ವಜನಿಕ ಪ್ರದರ್ಶನಕ್ಕೆ ಮುಕ್ತಗೊಳಿಸಲಾಗುತ್ತದೆ.

ರಷ್ಯಾ ಮೂಲದ ಸ್ವೆತೊಸ್ಲವ್ ರೋರಿಕ್ ಅವರು ಪ್ರಮುಖ ವರ್ಣಚಿತ್ರ ಕಲಾವಿದ. ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ ಕಲಾವಿದೆ ಹಾಗೂ ಕವಿ ರವೀಂದ್ರನಾಥ ಟ್ಯಾಗೋರ್ ಅವರ ಸಂಬಂಧಿಯಾದ ದೇವಿಕಾರಾಣಿ ಅವರನ್ನು ವಿವಾಹವಾದ ಸ್ವೆತೊಸ್ಲವ್, ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ಹೆಚ್ಚು ಕಾಲ ನೆಲಸಿ ಹಿಮಾಲಯದ ನೆನಪುಗಳನ್ನು ಚಿತ್ರಿಸಿದ್ದರು. ಬಳಿಕ, ಕನಕಪುರ ರಸ್ತೆಯಲ್ಲಿರುವ ತಾತಗುಣಿಯಲ್ಲಿ ಜಮೀನು ಖರೀದಿಸಿ ಅಲ್ಲಿನ ಎಸ್ಟೇಟ್‌ನಲ್ಲೂ ವಾಸವಿದ್ದರು. ತಾತಗುಣಿಯಲ್ಲಿ ಕಂಡ ಪರಿಸರ, ನೈಸರ್ಗಿಕ ಸೌಂದರ್ಯಕ್ಕೆ ಚಿತ್ರದ ರೂಪ ನೀಡಿದ್ದರು. ಹಲವು ಗಣ್ಯರ ಭಾವಚಿತ್ರಗಳನ್ನೂ ರಚಿಸಿದ್ದರು. ಕೆಲವು ಕಲಾಕೃತಿಗಳನ್ನು ಚಿತ್ರಕಲಾ ಪರಿಷತ್ತಿಗೆ ನೀಡಿದ್ದರೆ, ಹೆಚ್ಚಿನವು ತಾತಗುಣಿ ಎಸ್ಟೇಟ್‌ನಲ್ಲೇ ಇದ್ದವು.

ರೋರಿಕ್ ದಂಪತಿ ನಿಧನರಾದ ಬಳಿಕ ಎಸ್ಟೇಟ್‌ನ ಮಾಲೀಕತ್ವದ ಕುರಿತು ವಿವಾದ ಏರ್ಪಟ್ಟಿತ್ತು. ನಂತರ ಸರ್ಕಾರ 'ತಾತಗುಣಿ ದೇವಿಕಾರಾಣಿ ರೋರಿಕ್ ಎಸ್ಟೇಟ್ ಮಂಡಳಿ' ರಚಿಸಿ, ಆಸ್ತಿಯ ಜತೆಗೆ ಕಲಾಕೃತಿಗಳನ್ನೂ ಸುಪರ್ದಿಗೆ ಪಡೆದಿತ್ತು. ಹಾಳಾಗಿದ್ದ ಕಲಾಕೃತಿಗಳ ಸಂರಕ್ಷಣೆಗೆ ಮುಂದಾಗಿತ್ತು.

ಎಸ್ಟೇಟ್ ಆಸ್ತಿಯ ವಿಚಾರ ನ್ಯಾಯಾಲಯದ ಮೆಟ್ಟಿಲು ಏರಿತ್ತು. ಆಗ ಮಂಡಳಿಯು ಕಲಾಕೃತಿಗಳ ಸಂರಕ್ಷಣೆಗೆ ನ್ಯಾಯಾಲಯದಿಂದ ಅನುಮತಿ ಪಡೆದು ದಶಕದ ಹಿಂದೆಯೇ ಈ ದಿಸೆಯಲ್ಲಿ ಚಟುವಟಿಕೆ ಆರಂಭಿಸಿತ್ತು.

'ರೋರಿಕ್ ಅವರು ಶತಮಾನದ ಹಿಂದೆ ಬಳಸಿರುವ ಬಣ್ಣಗಳು ವೈವಿಧ್ಯಮಯವಾಗಿವೆ. ಕಲಾಕೃತಿಗಳನ್ನು ನಿಗದಿತ ತಾಪಮಾನದಲ್ಲಿ ಇರಿಸಿ ಸಂರಕ್ಷಣೆ ಮಾಡುವುದು ಮುಖ್ಯ. ಇಲ್ಲದೇ ಇದ್ದರೆ ಕಲಾಕೃತಿಗಳಿಗೆ ಫಂಗಸ್ ಹಿಡಿದು ಬೇಗನೆ ಹಾಳಾಗಿ ಬಿಡಬಹುದು. ಬಣ್ಣವು ಮಾಸಲಾಗಿ ಚಿತ್ರದ ಮಹತ್ವವೇ ಮರೆಯಾಗಬಹುದು. ಪ್ರದರ್ಶನದ ಜತೆಗೆ ನಿರ್ವಹಣೆಯೂ ಮುಖ್ಯ' ಎಂದು ಪುರಾತತ್ವ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

ಅಭಿವೃದ್ಧಿ ಪ್ರಕ್ರಿಯೆ ಆರಂಭ

ತಾತಗುಣಿ ಎಸ್ಟೇಟ್‌ನಲ್ಲಿ ರೋರಿಕ್ ಪರಿಸರ ಪ್ರವಾಸೋದ್ಯಮ ಹಾಗೂ ಸಾಂಸ್ಕೃತಿಕ ಕೇಂದ್ರವನ್ನು ಮೊದಲ ಹಂತದಲ್ಲಿ ಅಭಿವೃದ್ಧಿಪಡಿಸಲು ಪ್ರವಾಸೋದ್ಯಮ ಇಲಾಖೆ ಟೆಂಡರ್ ಪ್ರಕ್ರಿಯೆ ನಡೆಸಿದೆ.

ಈಗಾಗಲೇ ಕೇಂದ್ರ ಪುರಸ್ಕೃತ ಯೋಜನೆಯಡಿ ₹ 100 ಕೋಟಿ ಅನುದಾನ ಸಿಗಲಿದೆ. ಮೊದಲ ಕಂತಿನಲ್ಲಿ ₹ 25 ಕೋಟಿ ಬಿಡುಗಡೆಯೂ ಆಗಿದೆ. ಪ್ರವಾಸೋದ್ಯಮ ತಾಣವಾಗಿ ಅಭಿವೃದ್ಧಿಪಡಿಸಲು ₹ 99 ಕೋಟಿ ಯೋಜನೆಗೆ ರಾಜ್ಯ ಸಚಿವ ಸಂಪುಟವೂ ಒಪ್ಪಿಗೆ ನೀಡಿದೆ.

ಇಡೀ ಪರಿಸರದಲ್ಲಿ 3 ಕಿ.ಮೀ. ಪ್ರಾಕೃತಿಕ ನಡಿಗೆಗೆ ವ್ಯವಸ್ಥೆ, ಇದಕ್ಕಾಗಿ ಲಾನ್‌ಗಳ ಅಭಿವೃದ್ಧಿ, ಸುತ್ತು ಹಾಕಲು ಅವಕಾಶ, 20 ಎಕರೆಯಷ್ಟು ವಿಶಾಲವಾದ ಕೆರೆ ಆವರಣ ಅಭಿವೃದ್ಧಿ, ಮಕ್ಕಳಿಗೆ ದೋಣಿವಿಹಾರ, ಕಾರಂಜಿ ನಿರ್ಮಾಣ, ಪ್ರವಾಸಿಗರಿಗಾಗಿ 2–3 ಕಡೆ ಫುಡ್ ಕಿಯೋಸ್ಕ್‌ಗಳ ಸ್ಥಾಪನೆ, ಉತ್ತಮ ಸೌಲಭ್ಯದೊಂದಿಗೆ ಶೌಚಾಲಯ ಸಂಕೀರ್ಣ, ಬಯಲು ರಂಗಮಂದಿರ ನಿರ್ಮಿಸಲಾಗುತ್ತದೆ.

'ರೋರಿಕ್ ದಂಪತಿ ವಾಸವಿದ್ದ ನಿವಾಸ ಹಾಗೂ ಅಲ್ಲಿನ ಭಾಗವನ್ನು ಮೊದಲ ಹಂತದಲ್ಲಿ ಅಭಿವೃದ್ಧಿಪಡಿಸಿ ಕಲಾ ಗ್ಯಾಲರಿ ರೂಪಿಸಲಾಗುತ್ತದೆ. ಇದು ಕಲಾಗ್ರಾಮದ ಮಾದರಿಯಲ್ಲಿಯೇ ಇರಲಿದೆ. ಟೆಂಡರ್ ಪ್ರಕ್ರಿಯೆಯನ್ನು ಈ ತಿಂಗಳಲ್ಲಿ ಮುಗಿಸಿ, ಅಭಿವೃದ್ಧಿ ಕಾರ್ಯವನ್ನು ಆರಂಭಿಸಲಾಗುತ್ತದೆ' ಎಂದು ಪ್ರವಾಸೋದ್ಯಮ ಇಲಾಖೆ ಆಯುಕ್ತ ಅಕ್ರಂ ಪಾಷಾ ತಿಳಿಸಿದ್ದಾರೆ.

ಸಾಂಸ್ಕೃತಿಕ ಮುನ್ನೋಟ

ಭಾವ ಬಣ್ಣ ಧಾರೆ

ಕೋಬಾಲ್ಟ್ ಆರ್ಟ್ ಆ್ಯಂಡ್ ಮ್ಯೂಸಿಕ್ ಫೋರಂ ಜ.11ರಂದು ಭಾನುವಾರ 'ಭಾವ ಬಣ್ಣ ಧಾರೆ' ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಗಾಯನ: ರಾಜೇಶ್ ರಾವ್. ತಬಲಾ: ನಾಗರಾಜ್ ಹೆಗಡೆ. ಕೊಳಲು: ಚಿರಂತನ್. ಉದ್ಘಾಟನೆ: ಸುಮನಾ ಅಯ್ಯಂಗಾರ್. ಅಧ್ಯಕ್ಷತೆ: ಕೋಬಾಲ್ಟ್ ಅಧ್ಯಕ್ಷ ಗಣಪತಿ ಎಸ್. ಹೆಗಡೆ. ಭಾಗವಹಿಸುವ ಸಂಗೀತಗಾರರು: ರಾಮಕೃಷ್ಣ ಹೆಗಡೆ, ಅನುಪಮಾ ಹೆಗಡೆ, ವಿನೋದ ಎನ್., ಸುಜಾತಾ ಹೆಗಡೆ, ಪಾರ್ವತಿ ಭಟ್, ಹೇಮಾ, ನಮಿತಾ, ಪ್ರೇಮಾ, ರಶ್ಮಿ, ಶಾಂತಲಾ, ವೇದಾ ಶರ್ಮಾ. ಸಂಜೆ 5ರಿಂದ.

ಸಂಸ್ಕೃತ ಸ್ಪರ್ಧಾವಳಿ

ಸಮ್ಯಕ್ ಪ್ರತಿಷ್ಠಾನಮ್ ಜ. 11ರಂದು ಭಾನುವಾರ ಸಂಸ್ಕೃತ ಸ್ಪರ್ಧಾವಳಿಯ ಸಮಾರೋಪ ಸಮಾರಂಭವನ್ನು ಹಮ್ಮಿಕೊಂಡಿದೆ. ಸಾನ್ನಿಧ್ಯ: ವಿದ್ಯಾವಲ್ಲಭ ಮಾಧವತೀರ್ಥ ಸ್ವಾಮೀಜಿ, ಅತಿಥಿಗಳು: ಕವಿತಾ ಜೋಡಿದಾರ್, ಕೆ.ವಿ.ಸತ್ಯನಾರಾಯಣ ರಾವ್, ಪ್ರಾಸ್ತಾವಿಕ ಭಾಷಣ: ವಿದ್ವಾನ್ ಗಣೇಶಪ್ರಸಾದ್ ಎ.

ಸ್ಥಳ: ಶಾರದೆ ವಿದ್ಯಾನಿಕೇತನ, ಇಸ್ರೊ ಬಡಾವಣೆ. ಮಧ್ಯಾಹ್ನ 2.

ಸಂಕ್ರಾಂತಿ ಕವಿಗೋಷ್ಠಿ

'ಸಮ್ಮಿಲನ' ಕಲೆ-ಸಾಹಿತ್ಯ ಸಾಂಸ್ಕೃತಿಕ ವೇದಿಕೆ ಜ. 11ರಂದು ಸಂಕ್ರಾಂತಿ ಕವಿಗೋಷ್ಠಿ-ಗೀತ ಗಾಯನ- ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಗಾಯಕ ಎನ್. ಯಲ್ಲಪ್ಪ ಸ್ಮಾರಕ ಪ್ರಶಸ್ತಿ- ಗಾಯಕ ಸಿ.ಪಿ. ಶ್ರೀಧರ್. ಅಧ್ಯಕ್ಷತೆ: ಬಿ. ಶೃಂಗೇಶ್ವರ್. ಉಪಸ್ಥಿತಿ: ನಾಗೇಶ್ ಡಿ. ಪಾಟಕ್, ಕುವರ ಯಲ್ಲಪ್ಪ. ಪ್ರಶಸ್ತಿ ಪ್ರದಾನ- ಕಿಶೋರ್ ಗಾಯಕವಾಡ್.

ಸ್ಥಳ: ಕೆನ್ ಕಲಾಶಾಲೆ, ಅಂಚೆ ಕಚೇರಿ ಪಕ್ಕ, ಶೇಷಾದ್ರಿಪುರಂ. ಬೆಳಿಗ್ಗೆ 10.30.

ಗಮಕ ವಾಚನ

ಋತುಗಾನ ಪ್ರತಿಷ್ಠಾನ ಜ. 11ರಂದು 'ಶ್ರೀ ವಿಶ್ವರೂಪ ದರ್ಶನ' ಗಮಕ ವಾಚನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಅತಿಥಿಗಳು: ಶ್ರೀ ವಾಗ್ದೇವಿ ಗಮಕ ಕಲಾ ಪ್ರತಿಷ್ಠಾನದ ಕಾರ್ಯದರ್ಶಿ ಸಿ.ವಿ. ಶ್ರೀಮತಿ. ವಾಚನ: ಆಕಾಶ್ ಎಚ್.ಸಿ., ವ್ಯಾಖ್ಯಾನ: ಆದಿತ್ಯ ಸಿ. ಹಲ್ಕೋಡು. ಸಂಯೋಜನೆ: ಅಜಿತ ಕಾರಂತ. ನಿರೂಪಣೆ: ಶೈಲಸುತೆ ರಂಜಿತಾ.

ಸ್ಥಳ: ಹಿರಿಯ ನಾಗರಿಕರ ಕೇಂದ್ರ, 1ನೇ ಮಹಡಿ, 5ನೇ ಅಡ್ಡರಸ್ತೆ, ಕಿರ್ಲೋಸ್ಕರ್ ಬಡಾವಣೆ, ಬಸವೇಶ್ವರ ನಗರ. ಸಂಜೆ 4.

ಸಂಕ್ರಾಂತಿ ಸಂಭ್ರಮ

ತೆಲುಗು ವಿಜ್ಞಾನ ಸಮಿತಿ ಜ. 11ರಂದು ಸಂಕ್ರಾಂತಿ ಸಂಭ್ರಮ ಹಾಗೂ ಸಾಂಸ್ಕೃತಿಕ ಪುರಸ್ಕಾರೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಗೋಪೂಜೆ ನಂತರ ರಂಗೋಲಿ ಸ್ಪರ್ಧೆ, ವೇಷಭೂಷಣ ಸ್ಪರ್ಧೆ ನಡೆಯಲಿದೆ. ಅತಿಥಿಗಳು: ನಟಿ ಜಯಮಾಲಾ, ರಂಗಭೂಮಿ ಕಲಾವಿದೆ ಮಾಲತಿ ಸುಧೀರ್, ಸಾಹಿತಿ ರೋಹಿಣಿ ಸತ್ಯ, ಸಮಿತಿಯ ಅಧ್ಯಕ್ಷ ಎ. ರಾಧಾಕೃಷ್ಣ ರಾಜು.

ಸ್ಥಳ: ಶ್ರೀ ಕೃಷ್ಣದೇವರಾಯ ಕಲಾಮಂದಿರ, ವೈಯಾಲಿಕಾವಲ್. ಬೆಳಿಗ್ಗೆ 10ರಿಂದ.

ಅಂತರರಾಷ್ಟ್ರೀಯ ಸ್ವಯಂಸೇವಾ ದಿನ

ಯೂಥ್ ಫಾರ್ ಸೇವಾ ಜ. 10ರಂದು ಅಂತರರಾಷ್ಟ್ರೀಯ ಸ್ವಯಂಸೇವಾ ದಿನವನ್ನು ಆಚರಿಸುತ್ತಿದೆ. ಅತಿಥಿಯಾಗಿ ಚಿತ್ರನಟ ರಿಷಬ್ ಶೆಟ್ಟಿ ಭಾಗವಹಿಸಲಿದ್ದಾರೆ. ಮುಖ್ಯ ಅತಿಥಿ- ಸ್ವಾಮಿ ವಿವೇಕಾನಂದ ಯೂಥ್ ಮೂವ್‌ಮೆಂಟ್‌ನ ಸಂಸ್ಥಾಪಕ ಡಾ. ಆರ್. ಬಾಲಸುಬ್ರಹ್ಮಣ್ಯಂ. ಸ್ಥಳ: ಆರ್.ವಿ. ಟೀಚರ್ಸ್ ಕಾಲೇಜು. ಬೆಳಿಗ್ಗೆ 10ರಿಂದ.

ಸಂಗೀತೋತ್ಸವ

ಸದ್ಗುರು ಶ್ರೀ ತ್ಯಾಗಬ್ರಹ್ಮ ಆರಾಧನಾ ಕೈಂಕರ್ಯ ಟ್ರಸ್ಟ್ ತ್ಯಾಗರಾಜರ 179ನೇ ವೈದಿಕ ಆರಾಧನಾ ಕೈಂಕರ್ಯದ ಪ್ರಯುಕ್ತ ಜನವರಿ 7ರಿಂದ ಆಯೋಜಿಸಿರುವ ಸಂಗೀತೋತ್ಸವವು ಜ. 11ರವರೆಗೆ ನಡೆಯಲಿದೆ.

ಸ್ಥಳ: ಶೃಂಗೇರಿ ಶಂಕರ ಮಠ, ಶಂಕರಪುರಂ. ಬೆಳಿಗ್ಗೆ 8.30ರಿಂದ. ಮಾಹಿತಿಗೆ: 98450 44446

ಸಂಗೀತ ಸಮ್ಮೇಳನ

ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್ ಏಳನೇ ಸಂಗೀತ ಸಮ್ಮೇಳನವನ್ನು ಜ. 11ರವರೆಗೆ ಆಯೋಜಿಸಿದೆ. ಸಮ್ಮೇಳನದ ಅಧ್ಯಕ್ಷತೆ: ಎಂ.ಎಸ್.ಶೀಲಾ. ಯುವ ಸಮ್ಮೇಳನದ ಅಧ್ಯಕ್ಷತೆ: ಅಮಿತ್ ಎ. ನಾಡಿಗ್.

ಜ.10ರಂದು ನಡೆಯುವ ಕಾರ್ಯಕ್ರಮ ಹೀಗಿದೆ: ಅಧ್ಯಯನ ಮತ್ತು ವಿಚಾರಗೋಷ್ಠಿ, ವಿಷಯ: ಪಶ್ಚಿಮದಿಂದ ಪೂರ್ವಕ್ಕೆ ವಯೊಲಿನ್ ಪಯಣ. ವಿದುಷಿ ಡಾ. ಜ್ಯೋತ್ಸ್ನಾ ಶ್ರೀಕಾಂತ್. ಬೆಳಿಗ್ಗೆ 10.

ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಮುತ್ತುಸ್ವಾಮಿ ದೀಕ್ಷಿತರ ಕೊಡುಗೆ: ಡಾ. ಎಸ್.ಸಿ. ಶರ್ಮಾ. ಬೆಳಿಗ್ಗೆ 11.40.

ಸಂಗೀತ ಕಾರ್ಯಕ್ರಮ. ಕೊಳಲು: ಅಮಿತ್ ನಾಡಿಗ್. ವಯೊಲಿನ್: ವೈಭವ್ ರಮಣಿ. ಮೃದಂಗ: ಬಿ.ಆರ್. ಶ್ರೀನಿವಾಸ್. ಘಟ: ಎಸ್. ಉತ್ತಮ್.

11ರಂದು ನಡೆಯುವ ಕಾರ್ಯಕ್ರಮ

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಭಾಷಾಂಗ ರಾಗಗಳ ಸೊಬಗು: ಡಾ. ರಾಜಲಕ್ಷ್ಮಿ. ಬೆಳಿಗ್ಗೆ 10.

ವಿದ್ಯೆ, ಸಂಗೀತ, ನಾದ ಮತ್ತು ಅನುಷ್ಠಾನ- ಆರ್.ಎಸ್. ನಂದಕುಮಾರ್. ಬೆಳಿಗ್ಗೆ 11.40.

ಸಂಗೀತ ಕಾರ್ಯಕ್ರಮ- ಗಾಯನ: ಕುನ್ನಕುಡಿ ಬಾಲಮುರಳಿ ಕೃಷ್ಣ. ವಯೊಲಿನ್: ಮೈಸೂರು ಎಂ. ಕೇಶವ, ಮೃದಂಗ: ತುಮಕೂರು ಬಿ. ರವಿಶಂಕರ್, ಘಟ: ಶಮಿತ್ ಎಸ್. ಗೌಡ. ಸಂಜೆ 4.30.

ಸಮಾರೋಪ ಸಮಾರಂಭ. ಎಂ.ಎಸ್. ಶೀಲಾ ಅವರಿಗೆ 'ಶ್ರುತಿ ಲಯ ಭಾರತಿ' ಬಿರುದು ಪ್ರದಾನ. ಅಮಿತ್ ಎ ನಾಡಿಗ್ ಅವರಿಗೆ 'ಸ್ವರ ಲಯ ಭಾರತಿ' ಬಿರುದು ಪ್ರದಾನ. ಅಧ್ಯಕ್ಷತೆ- ಟ್ರಸ್ಟ್‌ನ ಅಧ್ಯಕ್ಷ ಎಂ.ಅನಂತ್. ಸಂಜೆ 6.30.

ಮಕ್ಕಳ ವಚನ ಮೇಳ

ವಚನ ಜ್ಯೋತಿ ಬಳಗ ಜ. 10ರಂದು ಮಕ್ಕಳ ವಚನ ಮೇಳ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಂಡಿದೆ. ಉದ್ಘಾಟನೆ: ಶಾಸಕ ಎಸ್.ಟಿ. ಸೋಮಶೇಖರ ಗೌಡ, ಉಪಸ್ಥಿತಿ: ವಿಶ್ವಬಂಧು ಚಾರಿಟಬಲ್ ಟ್ರಸ್ಟ್‌ನ ಎಸ್. ಸಿದ್ಧಯ್ಯ ಗುರೂಜಿ, ಅತಿಥಿಗಳು: ಎಸ್. ಷಡಕ್ಷರಿ, ಅರವಿಂದ ಜತ್ತಿ ಹಾಗೂ ಇತರರು. ಸಾನ್ನಿಧ್ಯ: ಬೇಲಿಮಠದ ಶಿವರುದ್ರ ಸ್ವಾಮೀಜಿ. ಅಧ್ಯಕ್ಷತೆ: ಮಹೇಶ ಬೆಲ್ಲದ.

ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ. ಬೆಳಿಗ್ಗೆ 9.30ರಿಂದ.



ಅಂತರರಾಷ್ಟ್ರೀಯ ಬೊಂಬೆಯಾಟ ಉತ್ಸವ

ಧಾತು ಅಂತರರಾಷ್ಟ್ರೀಯ ಬೊಂಬೆಯಾಟ ಉತ್ಸವವನ್ನು ಜ. 11ರವರೆಗೆ ಆಯೋಜಿಸಲಾಗಿದೆ.

10ರಂದು ರಾಣೆಬೆನ್ನೂರಿನ ರಾಮನಗೌಡರ್ ಮತ್ತು ತಂಡದಿಂದ 'ಅಭಿಮನ್ಯು ಕಾಳಗ', ಮೂಡಲಪಾಳ್ಯ ತಂಡದಿಂದ 'ಭಕ್ತ ಮಾರ್ಕಂಡೇಯ', ರಮೇಶ್ ಕಾಸರಗೋಡು ಮತ್ತು ತಂಡದಿಂದ 'ಲಂಕಾ ದಹನ', ಮೂಡಲಪಾಳ್ಯ ತಂಡದಿಂದ 'ಕರಿಬಂಟನ ಕಾಳಗ', ಇಟಲಿಯ ಆ್ಯಂಡ್ರಿಯಾ ಫೆಡಿ ತಂಡದಿಂದ 'ಕ್ರೇಜಿ ಅನಿಮಲ್ಸ್' ಪ್ರದರ್ಶನ. ಬೆಳಿಗ್ಗೆ 10.30ರಿಂದ.

ಜ. 11ರಂದು ಪ್ರಹ್ಲಾದ ಚರಿತೆ, ಛತ್ರಪತಿ ಶಿವಾಜಿ ಮಹಾರಾಜ್, ಗಿರಿಜಾ ಕಲ್ಯಾಣ, ರಾಜಾ ಹರಿಶ್ಚಂದ್ರ, ಏಕಲವ್ಯ, ಅಭಿಜ್ಞಾನ ಶಾಕುಂತಲಂ ಬೊಂಬೆಯಾಟ ಪ್ರದರ್ಶನ. ಬೆಳಿಗ್ಗೆ 10.30ರಿಂದ.

ಸ್ಥಳ: ಮಂಡಲ ಸಾಂಸ್ಕೃತಿಕ ಕೇಂದ್ರ, ಕನಕಪುರ ರಸ್ತೆ, ಸಿಲ್ಕ್ ಇನ್‌ಸ್ಟಿಟ್ಯೂಟ್ ಮೆಟ್ರೊ ನಿಲ್ದಾಣದ ಬಳಿ.

ಶ್ರೇಷ್ಠರ ಮಾತುಗಳ ಅನುಕರಣೆ

ಸಪ್ತಕ ಸಂಸ್ಥೆ ಜ.10ರಂದು ಉಪನ್ಯಾಸ ಹಾಗೂ ಯಕ್ಷಗಾನ ಶ್ರೇಷ್ಠರ ಮಾತುಗಳ ಅನುಕರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಉಪನ್ಯಾಸ: ಅರ್ಥಧಾರಿ ನಾರಾಯಣ ಯಾಜಿ. ಅಧ್ಯಕ್ಷತೆ: ಶಾ.ಮಂ. ಕೃಷ್ಣರಾಯ. ಯಕ್ಷಗಾನ ಶ್ರೇಷ್ಠರ ಮಾತುಗಳ ಅನುಕರಣೆ: ವಿಠಲ ನಾರಾಯಣ ಪುರಾಣಿಕ.

ಸ್ಥಳ: ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದ ರಾವ್ ವೃತ್ತ. ಮೊಬೈಲ್: 70194 34992

ಚಿತ್ರಗೀತೆಗಳ ಗಾಯನ

ಕಲಾಭೂಮಿ ಸಂಸ್ಥೆ ಜ. 10ರಂದು, ಕೆ.ಜೆ. ಯೇಸುದಾಸ್ ಅವರು ಹಾಡಿರುವ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಸ್ಥಳ: ಸ್ಕೈ ಸ್ಪೋರ್ಟ್ಸ್ ಅರೇನಾ, ಆರ್.ಆರ್.ನಗರ. ಸಂಜೆ 5.30.

ಬೀದಿ ನಾಟಕೋತ್ಸವ

ಸಮುದಾಯ ಕರ್ನಾಟಕ 'ಸಫ್ದರ್ ಹಷ್ಮಿ ಮತ್ತು ಬಾದಲ್ ಸರ್ಕಾರ್' ರಾಜ್ಯ ಮಟ್ಟದ ಬೀದಿ ನಾಟಕೋತ್ಸವ, ವಿಚಾರಗೋಷ್ಠಿ ಹಾಗೂ ರಂಗಗೌರವ ಕಾರ್ಯಕ್ರಮವನ್ನು ಜ. 10 ಮತ್ತು 11ರಂದು ಹಮ್ಮಿಕೊಂಡಿದೆ.

10ರಂದು- ಹೋರಾಟದ ಹಾಡುಗಳು: ಉದ್ಘಾಟನೆ: ರಂಗಕರ್ಮಿ ಪ್ರಸನ್ನ. ಅತಿಥಿಗಳು: ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನ ದಾಸ್, ಹಿರಿಯ ಪತ್ರಕರ್ತೆ ಡಾ. ವಿಜಯಾ. ಉಪಸ್ಥಿತಿ: ಮನೋಜ್ ವಾಮಂಜೂರು. ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ್. ಸಂಜೆ 5.

11ರಂದು -ಹೋರಾಟದ ಹಾಡುಗಳು/ ಬೀದಿ ನಾಟಕ ಪ್ರಸ್ತುತಿ. ವಿಚಾರಗೋಷ್ಠಿ: 'ಬಾದಲ್ ಸರ್ಕಾರ್- ತೃತೀಯ ರಂಗಭೂಮಿ ಪರಿಕಲ್ಪನೆ ಮತ್ತು ಪ್ರಭಾವಗಳು. ಕಲಾನಿರ್ದೇಶಕ ಪ್ರಳಯನ್ ಚಂದ್ರಶೇಖರ್, ದು. ಸರಸ್ವತಿ. ಸುರೇಶ್ ಆನಗಳ್ಳಿ. ಬೆಳಿಗ್ಗೆ 10.30.

ಸಫ್ದರ್ ಹಷ್ಮಿ 'ಹಲ್ಲಾಬೋಲ್': ನಟ ಸುಧನ್ವ ದೇಶಪಾಂಡೆ, ಕೆ.ಎಸ್. ವಿಮಲಾ, ಐ.ಕೆ. ಬೊಳುವಾರು. ಮಧ್ಯಾಹ್ನ 2.

ಬೀದಿ ನಾಟಕಗಳು: 'ಮಾನವರಾಗೋಣ', ರಚನೆ: ಬಿ.ಐ. ಈಳಿಗೇರ. ನಿರ್ದೇಶನ, ಜೋಸೆಫ್ ಮಲ್ಲಾಡಿ. ಪಾಪ ನಿವೇದನೆ: ರಚನೆ: ಡಾ. ರಾಜಪ್ಪ ದಳವಾಯಿ, ನಿರ್ದೇಶನ: ಡಾ. ಉದಯ್ ಸೋಸಲೆ. ಹೂವು ಮತ್ತು ದಾರ, ರಚನೆ: ಉದಯ ಗಾಂವ್ಕರ್, ನಿರ್ದೇಶನ: ದಿವಾಕರ್ ಕಟೀಲ್. ಕತ್ತೆ ಪುರಾಣ. ಹಿಂದಿ ಮೂಲ: ಬ್ರಜೇಶ್ ಶರ್ಮ. ಕನ್ನಡಕ್ಕೆ: ಪ್ರೊ. ಬಿ. ಗಂಗಾಧರ ಮೂರ್ತಿ. ನಿರ್ದೇಶನ ಡಾ. ಸಹನಾ ಪಿಂಜಾರ್.

ಹೋರಾಟದ ಹಾಡುಗಳು: ವೈಜಿ. ಉಮಾ ಮತ್ತು ತಂಡ. ಜನಾರ್ದನ, ಪಿಚ್ಚಳ್ಳಿ ಶ್ರೀನಿವಾಸ್, ವಾಸುದೇವ ಗಂಗೇರ, ಲಕ್ಷ್ಮಿ ಕೆ.ಎಸ್.

ಸ್ಥಳ: ಗಾಂಧಿ ಕುಟೀರ, ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ.




ನಾಯಿ- ಬೆಕ್ಕು ರ‍್ಯಾಂಪ್ ವಾಕ್

ಪೆಟ್ ಫೇರ್ ಸಂಸ್ಥೆಯು ಜ. 10 ಮತ್ತು 11ರಂದು ಸಾಕುನಾಯಿ ಹಾಗೂ ಬೆಕ್ಕುಗಳ ರ‍್ಯಾಂಪ್ ವಾಕ್ ಮತ್ತು ಪ್ರದರ್ಶನ ಮೇಳವನ್ನು ಆಯೋಜಿಸಿದೆ. ಇದೇ ಸಂದರ್ಭದಲ್ಲಿ ನಾಯಿ ಹಾಗೂ ಬೆಕ್ಕುಗಳನ್ನು ದತ್ತು ತೆಗೆದುಕೊಳ್ಳಲು ಇಚ್ಛಿಸುವವರಿಗೂ ಅವಕಾಶ ಮಾಡಿಕೊಡಲಾಗುತ್ತದೆ.

ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 11ರಿಂದ ಸಂಜೆ 7.

ಮಾಹಿತಿಗೆ: 98440 06736

'ರತ್ನನ್ ಪರ್ಪಂಚ' ನಾಟಕ ಪ್ರದರ್ಶನ



ಧ್ವನಿ ತಂಡ ಜಿ.ಪಿ. ರಾಜರತ್ನಂ ಸ್ಮರಣೆ ಅಂಗವಾಗಿ 12ನೇ ವರ್ಷದ ರಂಗ ಸಂಕ್ರಮಣವನ್ನು ಜ. 10ರಂದು ಶನಿವಾರ ಆಯೋಜಿಸಿದೆ. ಉದ್ಘಾಟನೆ: ವಾಗ್ಮಿ ವೈ.ವಿ. ಗುಂಡೂರಾವ್, ಉಪಸ್ಥಿತಿ- ರಂಗಕರ್ಮಿ ಶ್ರೀಪತಿ ಮಂಜನಬೈಲು, ನಾಟಕಕಾರ ಬೇಲೂರು ರಘುನಂದನ್, ಅಧ್ಯಕ್ಷತೆ- ನಟಿ ಲಕ್ಷ್ಮಿ ಚಂದ್ರಶೇಖರ್, ಅತಿಥಿ: ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜ ಮೂರ್ತಿ. ರತ್ನನ್ ಪದಗಳು- ರಸಸಂಜೆ- ಪ್ರವೀಣ್ ಬಿ.ವಿ. ಮತ್ತು ಪ್ರದೀಪ್ ಬಿ.ವಿ. ತಂಡದಿಂದ. 'ರತ್ನನ್ ಪರ್ಪಂಚ' ನಾಟಕ ಪ್ರದರ್ಶನ. ನಿರ್ದೇಶನ: ಜೋಸೆಫ್. ತಂಡ: ಕ್ರಿಯೇಟಿವ್ ಥಿಯೇಟರ್.

ಸ್ಥಳ: ನಾಣಿ ಅಂಗಳ, ಸುಚಿತ್ರ, ಬನಶಂಕರಿ 2ನೇ ಹಂತ. ಸಂಜೆ 4ರಿಂದ.

ಚಿಕ್ಕಿ ಕಲಿಸಿದ ಪಾಠ ಚಿಕ್ಕದಲ್ಲ!

ರಾಜಸ್ಥಾನದ ಆ ಮಹಿಳೆ ತನ್ನ ಮಗನಿಗೆ ಬದುಕುವ ರೀತಿ, ವ್ಯವಹಾರ ಜ್ಞಾನವನ್ನು ಕಲಿಸಬೇಕು ಎಂದುಕೊಂಡಿದ್ದರು. ಅದಕ್ಕಾಗಿ, ನಾಲ್ಕು ಗೋಡೆಗಳ ನಡುವೆ ಕೂರಿಸಿಕೊಂಡು ಎಲ್ಲವನ್ನೂ ಹೇಳಿಕೊಡುವುದಕ್ಕಿಂತ, ಪ್ರಾಯೋಗಿಕವಾಗಿಯೇ ಅರ್ಥ ಮಾಡಿಸಬೇಕು ಎಂಬ ತೀರ್ಮಾನವನ್ನೂ ಮಾಡಿದ್ದರು.

ವಿಭಿನ್ನ ಮಾರ್ಗವನ್ನು ಆರಿಸಿಕೊಂಡ ಅವರು, ಉದಯಪುರದ ರಸ್ತೆಗೆ ಮಗನನ್ನು ಕರೆದುಕೊಂಡು ಹೋಗಿ, ಚಿಕ್ಕಿ ಮಾರಲು ಹೇಳಿದರು. ಅಷ್ಟು ಮಾಡಿ ಹೊರಡದೆ, ಪಕ್ಕದಲ್ಲೇ ನಿಂತು ಎಲ್ಲವನ್ನೂ ಗಮನಿಸಲಾರಂಭಿಸಿದರು.

ಬಾಲಕ ರಸ್ತೆಬದಿಯಲ್ಲಿ ಸಣ್ಣದೊಂದು ಡಬ್ಬ ಇಟ್ಟುಕೊಂಡು ವ್ಯಾಪಾರ ಶುರುಮಾಡಿದ. ಗ್ರಾಹಕರೊಂದಿಗೆ ಜಾಗರೂಕತೆಯಿಂದ ವ್ಯವಹಾರಕ್ಕಿಳಿದ. ವಿನಯವಾಗಿ ನಗುಮುಖದಿಂದಲೇ ಸಂವಹನ ನಡೆಸಿದ. ಚಿಕ್ಕಿ ಕೊಂಡವರು ಕೊಟ್ಟ ಹಣವನ್ನು ಎಚ್ಚರಿಕೆಯಿಂದ ಎಣಿಸುತ್ತಾ, ಜವಾಬ್ದಾರಿಯಿಂದ ವ್ಯವಹಾರ ನಿಭಾಯಿಸಲಾರಂಭಿಸಿದ.

ಹುಡುಗನ ಆತ್ಮವಿಶ್ವಾಸವನ್ನು ಕಂಡ ದಾರಿಹೋಕರು ಅವನತ್ತ ಬಂದರು, ಮಾತಿಗಿಳಿದರು, ಚಿಕ್ಕಿ ಕೊಂಡರು. ಆ ಬಾಲಕನ ವ್ಯಾಪಾರವೂ ಕುದುರಿತು. ಹಾಗೇ ಲೋಕ ಜ್ಞಾನವೂ...

ಇದನ್ನೆಲ್ಲ ಅಪರಿಚಿತರಂತೆ ನಿಂತು ಸ್ವಲ್ಪ ದೂರದಿಂದ ವಿಡಿಯೊ ಮಾಡಿಕೊಂಡ ತಾಯಿ, ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡು ಹರ್ಷ ವ್ಯಕ್ತಪಡಿಸಿದ್ದಾರೆ. ವಿಡಿಯೊವನ್ನು ನೋಡಿದ ನೆಟ್ಟಿಗರು ತಾಯಿಗೆ ಸಲಾಂ ಹೊಡೆದು, ವಿಶಿಷ್ಟ ಚಿಂತನೆ ಮಾಡಿದ್ದಕ್ಕೆ ಶಹಬ್ಬಾಸ್ ಎನ್ನುತ್ತಿದ್ದಾರೆ.



ಅಂದಹಾಗೆ ಆ ತಾಯಿಯ ಹೆಸರು ಚೀನೀ ಮೆಹ್ತಾ. ಅವರ ಪ್ರಕಾರ, ಇದು ವ್ಯವಹಾರ ಅಲ್ಲವೇ ಅಲ್ಲ. ತಮ್ಮ ಮಗನಿಗೆ ಜವಾಬ್ದಾರಿ, ಸ್ವತಂತ್ರವಾಗಿ ಬದುಕುವುದನ್ನು ಕಲಿಸುವ ಪ್ರಾಥಮಿಕ ಶಿಕ್ಷಣವಷ್ಟೆ. ಪಠ್ಯಪುಸ್ತಕಗಳು, ಶಾಲಾ ಪರೀಕ್ಷೆಗಳು ಕಲಿಸಲು ಸಾಧ್ಯವಾಗದ ಪಾಠವನ್ನು ತಮ್ಮ ಮಗ ಅಪರಿಚಿತರೊಂದಿಗೆ ಸಂವಹನ ಹಾಗೂ ಹಣಕಾಸಿನ ವ್ಯವಹಾರದಲ್ಲಿ ಸಣ್ಣಪುಟ್ಟ ಸವಾಲುಗಳನ್ನು ಎದುರಿಸುವ ಮೂಲಕ ಕಲಿಯುತ್ತಾನೆ ಎಂಬುದು ಮೆಹ್ತಾ ಅವರ ನಂಬಿಕೆ.

ಈ ಕುರಿತು 'TheBetterIndia' ವೆಬ್‌ಸೈಟ್ ವರದಿ ಮಾಡಿದ್ದು, 'ದೇಶದಾದ್ಯಂತ ಪೋಷಕರು ಇಂತಹ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ತಮ್ಮ ಮಕ್ಕಳಿಗೆ ಪ್ರಾಯೋಗಿಕ ಕಲಿಕೆ ನೀಡುವುದಕ್ಕಾಗಿ ಸಣ್ಣ ಅಂಗಡಿಗಳನ್ನು ನಡೆಸುವುದು ಅಥವಾ ಕೌಟುಂಬಿಕ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳುವ ಕೆಲಸ ಮಾಡುತ್ತಿದ್ದಾರೆ. ಇದರಿಂದ, ಮಕ್ಕಳಿಗೆ ಸಣ್ಣ ವಯಸ್ಸಿನಲ್ಲಿಯೇ ಲೋಕಜ್ಞಾನ ಲಭಿಸುತ್ತದೆ. ಅವರಲ್ಲಿ ಸ್ವಾವಲಂಬನೆಯ ಭಾವ ಮೂಡುತ್ತದೆ. ಶ್ರಮ ಮತ್ತು ಪ್ರತಿಫಲದ ನಡುವಿನ ಸಂಬಂಧವನ್ನೂ ಅವರು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ' ಎಂದು ಉಲ್ಲೇಖಿಸಿದೆ.

'ಮಕ್ಕಳ ಸುರಕ್ಷತೆಯ ಬಗ್ಗೆ ಕಳವಳ ಇದ್ದದ್ದೇ. ಆದರೆ, ಈ ರೀತಿ ಮುಕ್ತ ವಾತಾವರಣದಲ್ಲಿ ಕಲಿಯುವ ಪಾಠವನ್ನು ಸಾಂಪ್ರದಾಯಿಕ ಶಿಕ್ಷಣದಿಂದ ನಿರೀಕ್ಷಿಸಲಾಗದು. ಮೆಹ್ತಾ ಅವರ ಮಗ ಚಿಕ್ಕಿಯನ್ನು ಮಾರುತ್ತಾ ನಾಣ್ಯಗಳನ್ನು ಎಣಿಸುತ್ತಲೇ ಗ್ರಾಹಕರೊಂದಿಗೆ ಸಂಭಾಷಣೆ ನಡೆಸುತ್ತಾನೆ. ಆ ಮೂಲಕ ಬದುಕಿನುದ್ದಕ್ಕೂ ನೆರವಾಗುವ ಕೌಶಲಗಳನ್ನು, ಆತ್ಮವಿಶ್ವಾಸವನ್ನು ಪಡೆಯುತ್ತಿದ್ದಾನೆ' ಎಂದು ನೆಟ್ಟಿಗರು ಅಭಿಪ್ರಾಯಪಟ್ಟಿದ್ದಾರೆ.

ಅನುಭವ, ತಾಳ್ಮೆ ಮತ್ತು ಸರಿಯಾದ ಮಾರ್ಗದರ್ಶನ ಇದ್ದರೆ ಅತ್ಯಂತ ಮೌಲ್ಯಯುತ ಪಾಠಗಳನ್ನೂ ಕಲಿಯಲು ಸಾಧ್ಯ ಎಂಬುದನ್ನು ಮೆಹ್ತಾ ಸಾಬೀತು ಮಾಡಿದ್ದಾರೆ.

ಅದಕ್ಕೇ ಅಲ್ಲವೇ ಹೇಳುವುದು 'ತಾಯಿಯೇ ಮೊದಲ ಗುರು' ಎಂದು.

ಸಲಹೆ ಪಾಲಿಸಿ, ಹೃದಯ ಕಾಯ್ದುಕೊಳ್ಳಿ

• ಡಾ. ಶಿವಸ್ವಾಮಿ ಸೋಸಲೆ

ಚಳಿಗಾಲದ ಸಮಯದಲ್ಲಿ ಹೃದಯ ಸಂಬಂಧಿ ಸಮಸ್ಯೆಗಳು ಹೆಚ್ಚು. ಅದರಲ್ಲೂ ಮಧ್ಯವಯಸ್ಸಿನವರು ಹೃದಯ ಸಂಬಂಧಿ ಕಾಯಿಲೆಗಳಿಗೆ ಹೆಚ್ಚಾಗಿ ಒಳಗಾಗುತ್ತಾರೆ. ಅದಕ್ಕೆ ಕಾರಣ, ಪರಿಹಾರ ಕ್ರಮಗಳ ಬಗ್ಗೆ ಮಾಹಿತಿ ಇಲ್ಲಿದೆ:

ಚಳಿಗಾಲದಲ್ಲಿ ಹೃದಯಸಂಬಂಧಿ ಕಾಯಿಲೆಗಳು ಶೇ 10-15ರಷ್ಟು ಹೆಚ್ಚಾಗುತ್ತವೆ. ಈ ವೇಳೆ ರಕ್ತವು ಮಂದವಾಗಿದ್ದು, ನರಗಳು ಸಂಕುಚಿತವಾಗಿರುತ್ತವೆ. ರಕ್ತ ಸಂಚಾರ ನಿಧಾನವಾಗುವುದರಿಂದ ಹೃದಯದ ಮೇಲೆ ಹೆಚ್ಚು ಒತ್ತಡ ಬಿದ್ದು ಹೃದಯಾಘಾತಕ್ಕೆ ಕಾರಣವಾಗುತ್ತದೆ. ಚಳಿಯಿಂದ ದೇಹವನ್ನು ಬೆಚ್ಚಗಿಡಬೇಕೆಂಬ ಕಾರಣದಿಂದ ಧೂಮಪಾನ, ಮದ್ಯಪಾನ ಮಾಡುವುದು ಹೃದಯಾಘಾತಕ್ಕೆ ಕಾರಣವಾಗುತ್ತದೆ.

ಚಳಿಯಲ್ಲಿ ದೇಹದ ಚಲನವಲನ ಕಡಿಮೆ ಇರುವುದರಿಂದ, ನಿರಂತರವಾಗಿ ವ್ಯಾಯಾಮ ಮಾಡದೇ ಇರುವುದು ಹೃದಯ ಸಂಬಂಧಿ ಸಮಸ್ಯೆಗೆ ಕಾರಣ. ಮೊದಲೇ ಹೃದಯ ಸಂಬಂಧಿ ಕಾಯಿಲೆಗಳು ಇದ್ದರೆ, ಚಳಿಗಾಲದ ವೇಳೆ ಹೃದಯಾಘಾತಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ.

ಶ್ವಾಸಕೋಶದಲ್ಲಿ ಸೋಂಕು, ಆಮ್ಲಜನಕದ ಕೊರತೆ, ಅಭ್ಯಾಸವಿಲ್ಲದೆ ಒಂದೇ ಬಾರಿಗೆ ಭಾರ ಎತ್ತುವುದು ಕೂಡ ಹೃದಯಾಘಾತಕ್ಕೆ ಕಾರಣವಾಗಬಲ್ಲದು.

ಹೀಗೆ ಮಾಡಿ

ಆರೋಗ್ಯಕರ ಆಹಾರ ಸೇವನೆ ಮಾಡಬೇಕು. ಲಘು ವ್ಯಾಯಾಮ ಮಾಡಬೇಕು. ದಿನಕ್ಕೆ 3-4 ಲೀಟರ್ ನೀರು ಕುಡಿಯಬೇಕು. ರಕ್ತದ ಒತ್ತಡ ಹೆಚ್ಚಿದ್ದರೆ ಉಪ್ಪಿನಾಂಶ ಇರುವ ಆಹಾರವನ್ನು ಕಡಿಮೆ ಸೇವನೆ ಮಾಡಬೇಕು.

ಇಬ್ಬನಿ ಇರುವ ಜಾಗದಲ್ಲಿ ಜಾಸ್ತಿ ಓಡಾಡಬಾರದು. ಮದ್ಯಪಾನ, ಧೂಮಪಾನ ನಿಯಂತ್ರಿಸಬೇಕು. ಹಣ್ಣು, ತರಕಾರಿಗಳನ್ನು ಸೇವಿಸಬೇಕು. ಇತರ ಆರೋಗ್ಯ ಸಮಸ್ಯೆಗಳೇನಾದರೂ ಇದ್ದರೆ ವೈದ್ಯರು ಶಿಫಾರಸು ಮಾಡಿದ ಔಷಧಿಗಳನ್ನಷ್ಟೇ ತೆಗೆದುಕೊಳ್ಳಬೇಕು.



ಟಾಕ್ಸಿಕ್: ಒಂದೇ ದಿನಕ್ಕೆ ದಾಖಲೆಯ ವೀಕ್ಷಣೆ ಪಡೆದ ರಾಯನ ವಿಡಿಯೊ

'ಟಾಕ್ಸಿಕ್' ಸಿನಿಮಾದಲ್ಲಿ ರಾಕಿಂಗ್ ಸ್ಟಾರ್ ಯಶ್ ಹೇಗೆ ಕಾಣಿಸಿಕೊಳ್ಳಲಿದ್ದಾರೆ ಎನ್ನುವ ಕುತೂಹಲಕ್ಕೆ ಚಿತ್ರತಂಡ ಗುರುವಾರ ತೆರೆ ಎಳೆದಿದೆ. ಯಶ್ ಹುಟ್ಟುಹಬ್ಬದ (ಜನವರಿ 8) ನಿಮಿತ್ತ, 'ಟಾಕ್ಸಿಕ್' ಸಿನಿಮಾದಲ್ಲಿನ 'ರಾಯ' ಪಾತ್ರವನ್ನು ಪರಿಚಯಿಸುವ ವಿಡಿಯೊವನ್ನು ಬಿಡುಗಡೆ ಮಾಡಲಾಗಿದೆ.

ಬಿಡುಗಡೆಯಾದ ಒಂದೇ ದಿನಕ್ಕೆ ಈ ವಿಡಿಯೊ ಬರೋಬ್ಬರಿ 4.9 ಕೋಟಿ ವೀಕ್ಷಣೆ ಪಡೆದು ಮುನ್ನುಗ್ಗುತ್ತಿದೆ.

ಯಶ್ ಪಾತ್ರವನ್ನು ಪರಿಚಯಿಸಿರುವ 2.51 ನಿಮಿಷಗಳ ವಿಡಿಯೊವನ್ನು ವೀಕ್ಷಿಸಿದ ಅಭಿಮಾನಿಗಳಿಗೆ ಈ ಚಿತ್ರದ ಮೇಲಿನ ನಿರೀಕ್ಷೆ ದುಪ್ಪಟ್ಟಾಗಿದೆ. ಇದೇ ಮೊದಲ ಬಾರಿಗೆ ಹಿಂದೆಂದೂ ಕಾಣಿಸದ ಲುಕ್‌ನಲ್ಲಿ ರಾಕಿಂಗ್ ಸ್ಟಾರ್ ಕಾಣಿಸಿಕೊಂಡಿದ್ದಾರೆ. ವಿಶೇಷ ಏನೆಂದರೆ, ಈ ಸಿನಿಮಾದಲ್ಲಿ ಹಾಲಿವುಡ್ ನಟಿ ನಟಾಲಿಯಾ ಬರ್ನ್ ಎಂಟ್ರಿ ಕೊಟ್ಟಿರುವುದು. ವಿಡಿಯೊದಲ್ಲಿ ಹಸಿಬಿಸಿ ದೃಶ್ಯವೊಂದು ಕಾಣಿಸಿದೆ.

ಟಾಕ್ಸಿಕ್ ಸಿನಿಮಾದಲ್ಲಿ ಅಭಿನಯಿಸಿರುವ ನಟಿಯರ ಹೆಸರುಗಳನ್ನು ಈಗಾಗಲೇ ಘೋಷಿಸಲಾಗಿದೆ. ನಯನತಾರಾ, ರುಕ್ಮಿಣಿ ವಸಂತ್, ಹುಮಾ ಖುರೇಷಿ, ಕಿಯಾರಾ ಅಡ್ವಾಣಿ ಹಾಗೂ ತಾರಾ ಅವರ ಪಾತ್ರಗಳನ್ನು ಪರಿಚಯಿಸಲಾಗಿದೆ.

ಗೀತು ಮೋಹನ್‌ದಾಸ್ ಅವರು ಟಾಕ್ಸಿಕ್ ಸಿನಿಮಾದ ನಿರ್ದೇಶಕಿಯಾಗಿದ್ದು, ನಟನಾಗಿ, ಸಹ-ಬರಹಗಾರನಾಗಿ, ಸಹ-ನಿರ್ಮಾಪಕನಾಗಿ ಯಶ್ ಹೊಸ ಹೆಜ್ಜೆ ಇಟ್ಟಿದ್ದಾರೆ. ವೆಂಕಟ್ ಕೆ. ನಾರಾಯಣ್ ಈ ಸಿನಿಮಾದ ನಿರ್ಮಾಣ ಮಾಡಿದ್ದಾರೆ. ಮಾನ್‌ಸ್ಟರ್‌ಮೈಂಡ್ ಕ್ರಿಯೇಷನ್ಸ್‌ನ ಅಡಿ ನಿರ್ಮಾಣಕ್ಕೆ ಸಾಥ್ ನೀಡಿದ್ದಾರೆ. 'ಕೆ.ಜಿ.ಎಫ್' ಖ್ಯಾತಿಯ ರವಿ ಬಸ್ರೂರು ಸಂಗೀತ ನಿರ್ದೇಶನ ಮಾಡಲಿದ್ದಾರೆ. ರಾಜೀವ್ ರವಿ ಛಾಯಾಚಿತ್ರಗ್ರಹಣ, ಉಜ್ವಲ್ ಕುಲಕರ್ಣಿ ಸಂಕಲನ ಚಿತ್ರಕ್ಕಿದೆ.

ಹೊಸ ವರ್ಷದ ಹಳಿ ಮೇಲೆ ಭರವಸೆಯ ಸಿನಿ ಬೋಗಿ





ಹೊಸ ವರ್ಷದಲ್ಲಿ ಭಾರತದ ಚಿತ್ರರಂಗ ಮೈ ಕೊಡವಿಕೊಂಡು ಮೇಲೇಳುವ ಲಕ್ಷಣಗಳು ದಟ್ಟವಾಗಿವೆ.

ಪ್ರಭಾಸ್ ಅಭಿನಯದ 'ದಿ ರಾಜಾಸಾಬ್' ತೆಲುಗು ಸಿನಿಮಾ ಪ್ರೀಮಿಯರ್ ಶೋ ಸಂದರ್ಭದಲ್ಲಿ ಅವರ ಅಭಿಮಾನಿಗಳು ತಳ್ಳಾಟ ನಡೆಸಿದ ಸುದ್ದಿಯೊಂದು ಹೈದರಾಬಾದ್ ಕಡೆಯಿಂದ ಬಂದಿದೆ. ಸಾಮಾಜಿಕ ಮಾಧ್ಯಮದ ತುಂಬೆಲ್ಲ 'ಟಾಕ್ಸಿಕ್' ಸಿನಿಮಾದ ರಾಯ ಪಾತ್ರದ ಪರಿಚಯ ಮಾಡಿಕೊಡುವ ಟೀಸರ್ ಕುರಿತು ಬಿಸಿ ಚರ್ಚೆ ನಡೆಯುತ್ತಿದೆ.

ಕಳೆದ ವರ್ಷದ ಕೊನೆಯಲ್ಲಿ ಕನ್ನಡದ ಸುದೀಪ್, ಶಿವರಾಜ್‌ಕುಮಾರ್, ಉಪೇಂದ್ರ, ದರ್ಶನ್ ಎಲ್ಲ ಹೊಳೆಯುವ ತಾರೆಗಳ ಚಿತ್ರಗಳೂ ವಿವಾದಗಳನ್ನು ತುಳುಕಿಸುತ್ತಲೇ ನಿರೀಕ್ಷೆಯ ಬಾನಿನ ಎದುರು ಕಾರ್ಮೋಡ ಕವಿಯುವಂತೆ ಮಾಡಿದವು. ಅದೇ ಕಾಲಘಟ್ಟದಲ್ಲಿ ತೆರೆಕಂಡ ಹಿಂದಿಯ 'ಧುರಂಧರ್' ಯಶಸ್ಸಿನ ಅಲೆ ಈಗಲೂ ತಣ್ಣಗಾಗಿಲ್ಲ. ಇದುವರೆಗೆ ಯಾವ ಹಿಂದಿ ಚಿತ್ರವೂ ಮಾಡದಷ್ಟು ಗಳಿಕೆಯನ್ನು ಅದು ಮಾಡಿದೆ ಎನ್ನುವುದು ಗಣಿತ. ಅದರ ಎರಡನೇ ಭಾಗವು ಕನ್ನಡದ 'ಟಾಕ್ಸಿಕ್' ಬಿಡುಗಡೆ ಆಗಲಿರುವ ಮಾರ್ಚ್ 19ರಂದೇ ತೆರೆಕಾಣಲಿದೆ ಎನ್ನುವುದು ಸಂವಾದದ ವಸ್ತು.

2026ರಲ್ಲಿ ಹಿಂದಿ ಚಿತ್ರರಂಗವು ನಿರೀಕ್ಷೆಗಳ ದೋಣಿಗಳನ್ನು ತೇಲಿ ಬಿಟ್ಟಿರುವಂತೆಯೇ ದಕ್ಷಿಣ ಭಾರತದ ಚಿತ್ರರಂಗವೂ ತಾನೇನೂ ಕಡಿಮೆ ಇಲ್ಲ ಎನ್ನುವ ಸೂಚನೆ ಕೊಟ್ಟಿದೆ.

ತಲಪತಿ ವಿಜಯ್ ಕೊನೆಯ ಸಿನಿಮಾ ಎನ್ನುವ ಕಾರಣಕ್ಕೆ ನಿರೀಕ್ಷೆ ಮೂಡಿಸಿರುವ 'ಜನ ನಾಯಗನ್' ಚಿತ್ರ ಅಂದುಕೊಂಡಂತೆ ಜನವರಿ 9ರಂದು ತೆರೆ ಕಾಣಲಿಲ್ಲ. ಮದ್ರಾಸ್ ಹೈಕೋರ್ಟ್‌ಗೆ ಮೊರೆ ಹೋದರೂ ಸೆನ್ಸಾರ್ ಪ್ರಮಾಣಪತ್ರ ಸಿಗುವುದು ತಡವಾಯಿತು. ಎರಡು ವಾರ ಮೊದಲೇ ಬುಕಿಂಗ್ ಅವಕಾಶ ಕಲ್ಪಿಸಿ, ಗರಿಷ್ಠ 2 ಸಾವಿರ ರೂಪಾಯಿವರೆಗೆ ಟಿಕೆಟ್ ದರವನ್ನು ಚಿತ್ರತಂಡ ಇಟ್ಟಿತ್ತು. ಹಣ ಕೊಳ್ಳೆ ಹೊಡೆಯುವ ಎಲ್ಲ ಸಾಧ್ಯತೆಗಳಿಗೂ ಇದೇ ಕನ್ನಡಿ ಹಿಡಿಯುತ್ತದೆ. ಮಾರುತಿ ನಿರ್ದೇಶನದ 'ದಿ ರಾಜಾಸಾಬ್' ತೆಲುಗು ಚಿತ್ರದ ಗಳಿಕೆಯು ಹೊಸ ವರ್ಷದಲ್ಲಿ ಶುಭ ಸುದ್ದಿಗೆ ಮುನ್ನುಡಿಯಾದೀತು ಎಂಬ ನಿರೀಕ್ಷೆ ಇದೆ.

ಸಂಜಯ್ ಲೀಲಾ ಬನ್ಸಾಲಿ ನಿರ್ದೇಶನದ 'ಲವ್ ಆ್ಯಂಡ್ ವಾರ್' ಈ ವರ್ಷದ ನಡುಘಟ್ಟದಲ್ಲಿ ತೆರೆಗೆ ಬರುವ ಸಾಧ್ಯತೆ ಇದೆ. ರಣಬೀರ್ ಕಪೂರ್, ಆಲಿಯಾ ಭಟ್, ವಿಕ್ಕಿ ಕೌಶಲ್ ಅಭಿನಯ ಇದರಲ್ಲಿ ಇದೆ.

'ರಾಮಾಯಣ' ಹಿಂದಿ ಚಿತ್ರದ ಮೊದಲ ಭಾಗವೂ ಈ ವರ್ಷ ತೆರೆಕಾಣಲಿದೆ. ರಣಬೀರ್ ಕಪೂರ್, ಸಾಯಿ ಪಲ್ಲವಿ, ಯಶ್ ಅಭಿನಯದ, ರಾಮಾಯಣ ಕಥನದ ಈ ಚಿತ್ರವನ್ನು ನಿತೇಶ್ ತಿವಾರಿ ಅವರು ಅದ್ದೂರಿ ಸಿ.ಜಿ. ಬಳಸಿ ನಿರ್ದೇಶಿಸುತ್ತಿದ್ದಾರೆ. ದೀಪಾವಳಿ ಸಂದರ್ಭದಲ್ಲಿ ಇದು ತೆರೆ ಕಾಣಬಹುದು.

ಕಳೆದ ವರ್ಷ ಸಲ್ಮಾನ್ ಖಾನ್ ಹಾಗೂ ಶಾರುಕ್ ಖಾನ್ ನಟಿಸಿದ್ದ ಒಂದೂ ಚಿತ್ರ ಬಿಡುಗಡೆಯಾಗಿರಲಿಲ್ಲ. ಈ ವರ್ಷ ಸಲ್ಮಾನ್ ಅಭಿನಯದ 'ಬ್ಯಾಟಲ್ ಆಫ್ ಗಾಲ್ವಾನ್' ಏಪ್ರಿಲ್‌ನಲ್ಲಿ ಬಿಡುಗಡೆಯಾಗಲಿದೆ. ಈಗಾಗಲೇ ಅದರ ಕುರಿತ ವಿವಾದದ ಹೊಗೆ ದಟ್ಟವಾಗುತ್ತಿದೆ. ಶಾರುಕ್ ನಟನೆಯ 'ಕಿಂಗ್' ವರ್ಷದ ಎರಡನೇ ಅರ್ಧದಲ್ಲಿ ಬಿಡುಗಡೆಯಾಗುವ ಸಾಧ್ಯತೆ ಇದೆ. ವಯಸ್ಸಿಗೆ ತಕ್ಕಂತಹ ಪಾತ್ರದಲ್ಲಿ ಅವರು ಅಭಿನಯಿಸುತ್ತಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದ್ದು, ಅದರ ಬಾಕ್ಸಾಫೀಸ್ ಮೇಲೆ ಬಹುತೇಕರ ಕಣ್ಣು ನೆಟ್ಟಿದೆ.

ರಜನೀಕಾಂತ್ ನಟನೆಯ 'ಜೈಲರ್ 2' ತಮಿಳು ಚಿತ್ರವು ನಿರ್ದೇಶಕ ನೆಲ್ಸನ್ ವೃತ್ತಿ ಬದುಕಿಗೆ ತುಂಬಾ ಮುಖ್ಯವಾಗಿದೆ. ಕಮಲ ಹಾಸನ್ ಹಾಗೂ ರಜನಿ ಒಟ್ಟಾಗಿ ನಟಿಸಲಿರುವ ಇನ್ನೊಂದು ತಮಿಳು ಚಿತ್ರ, ಮೋಹನ್ ಲಾಲ್ ಹಾಗೂ ಮಮ್ಮೂಟಿ ತೆರೆ ಹಂಚಿಕೊಳ್ಳಲಿರುವ ಮಲಯಾಳ ಚಿತ್ರ, ರಾಮಚರಣ್ ಅಭಿನಯದ ತೆಲುಗಿನ 'ಪೆದ್ದಿ', ಪ್ರದೀಪ್ ರಂಗನಾಥನ್ ನಾಯಕ ಆಗಿರುವ, ತಮಿಳಿನ 'ಲವ್ ಇನ್ಶೂರೆನ್ಸ್ ಕಂಪನಿ', ಸೂರ್ಯ ನಾಯಕರಾಗಿರುವ 'ಕರುಪ್ಪು'... ಈ ವರ್ಷ ಅಭಿಮಾನಿಗಳು ಕಾಯುತ್ತಿರುವ ಚಿತ್ರಗಳು.

ಅನುರಾಗ್ ಕಶ್ಯಪ್ ನಿರ್ದೇಶನದ 'ಬಂದರ್' ಹಿಂದಿ ಚಿತ್ರದಲ್ಲಿ ಬಾಬಿ ಡಿಯೋಲ್ ಅಭಿನಯಿಸಿದ್ದಾರೆ. 'ಅನಿಮಲ್' ಸಿನಿಮಾದಲ್ಲಿ ಅವರ ಅಭಿನಯ ಜನಪ್ರಿಯವಾಗಿದ್ದರಿಂದ ಇದರಲ್ಲೂ ನಿರೀಕ್ಷೆಯ ಭಾರವಿದೆ. ವಿಶಾಲ್ ಭಾರದ್ವಾಜ್ ರುಜು ಇರುವ 'ಓ ರೋಮಿಯೋ' ಚಿತ್ರವು ವರ್ಷದ ಮಹತ್ವಾಕಾಂಕ್ಷಿ ಚಿತ್ರಗಳಲ್ಲಿ ಒಂದು.

ಭೀಮಾ ಗೋಲ್ಡ್‌ನಿಂದ 'ಟುಗೆದರ್ ಫ್ಯೂರ್‌ಎವರ್' ಕಿರುಚಿತ್ರ



ಬೆಂಗಳೂರು: ದಕ್ಷಿಣ ಭಾರತದ ಪ್ರತಿಷ್ಠಿತ ಚಿನ್ನಾಭರಣ ಸಂಸ್ಥೆಗಳಲ್ಲಿ ಒಂದಾದ 'ಭೀಮಾ ಗೋಲ್ಡ್', ತನ್ನ ನೂರು ವರ್ಷಗಳ ಯಶಸ್ವಿ ಪ್ರಯಾಣದ ನೆನಪಿಗಾಗಿ 'ಟುಗೆದರ್ ಫ್ಯೂರ್ ಎವರ್' ಎಂಬ ವಿಶೇಷ ಶತಮಾನೋತ್ಸವ ಕಿರುಚಿತ್ರವನ್ನು ಬಿಡುಗಡೆ ಮಾಡಿದೆ. ಈ ಚಿತ್ರವು ಭೀಮಾದ ಪರಂಪರೆಯೊಂದಿಗೆ ಪ್ರಕೃತಿಯ ಪಂಚಭೂತಗಳನ್ನೊಳಗೊಂಡು ಮಹಿಳೆಯ ಜೀವನದ ಪ್ರತಿ ಹಂತಗಳನ್ನು ಕೇಂದ್ರೀಕರಿಸಿದೆ. ಜತೆಗೆ, ಮಹಿಳೆಯರಿಗೆಂದು ಭೀಮಾ ಅನೇಕ ವರ್ಷಗಳಿಂದ ಸಿದ್ಧಪಡಿಸಿ, ನೀಡುತ್ತಿರುವ ವಿಶೇಷ ಶೈಲಿಯ ಚಿನ್ನಾಭರಣಗಳ ವಿನ್ಯಾಸದೊಂದಿಗೆ ಅತ್ಯಾಕರ್ಷಕವಾಗಿ ಮೂಡಿಬಂದಿದೆ.

ಪರಂಪರೆಯ ಪ್ರತಿಬಿಂಬ: ಈ ಕಿರುಚಿತ್ರವು ಕೇವಲ ಭೀಮಾ ಸಂಸ್ಥೆಯ ಬ್ರ್ಯಾಂಡ್ ಜಾಹೀರಾತಿನಂತಿರದೆ, ಒಂದು ಸಾಂಸ್ಕೃತಿಕ ನಿರೂಪಣೆಯಂತೆ ಮೂಡಿಬಂದಿದೆ. ಕಳೆದ ಒಂದು ಶತಮಾನದಿಂದ ಭೀಮಾ ಸಂಸ್ಥೆಯು ಹೇಗೆ ಜನರ ಸಂಪ್ರದಾಯ, ಸಂಭ್ರಮ ಮತ್ತು ಬಾಂಧವ್ಯದ ಭಾಗವಾಗಿದೆ ಎಂಬುದನ್ನು ಇದು ಚಿತ್ರಿಸುತ್ತದೆ. ತಲೆಮಾರುಗಳಿಂದ ಬೆಳೆದು ಬಂದಿರುವ ಸಂಬಂಧಗಳನ್ನು ಈ ಚಿತ್ರದಲ್ಲಿ ಮನೋಜ್ಞವಾಗಿ ಕಟ್ಟಿಕೊಡಲಾಗಿದೆ.

ಜೀವನ ಚಕ್ರದ ಕಥನ: ಜೀವನವು ಒಂದು ವೃತ್ತದಂತೆ ಸಾಗುತ್ತದೆ ಎಂಬ ಪರಿಕಲ್ಪನೆಯೊಂದಿಗೆ ಈ ಚಿತ್ರ ಮೂಡಿಬಂದಿದೆ. ಇದರಲ್ಲಿ ಹೆಣ್ಣಿನ ಜೀವನದ ವಿವಿಧ ಹಂತಗಳನ್ನು ಐದು ಪ್ರಮುಖ ವಿಭಾಗಗಳಲ್ಲಿ ತೋರಿಸಲಾಗಿದೆ. ವಿಶೇಷವಾಗಿ ಹೆಣ್ಣು, ಪ್ರಕೃತಿಯ ಪಂಚಭೂತಗಳನ್ನು ಅತ್ಯಂತ ರೋಚಕವಾಗಿ ಸಮೀಕರಿಸಲಾಗಿದೆ. ತಾಯಿ, ರಕ್ಷಕಿ, ನೃತ್ಯಗಾರ್ತಿ, ವೈದ್ಯೆ ಸ್ವರೂಪದಲ್ಲಿ ಎಲ್ಲವನ್ನೂ ಗುಣಪಡಿಸುವಾಕೆ, ಹೊಂಗನಸಿನ ಯುವತಿ ಹೀಗೆ ನಾನಾ ಹಂತಗಳ ಪಾತ್ರಗಳು ಕಿರುಚಿತ್ರದಲ್ಲಿ ಗಮನ ಸೆಳೆಯುತ್ತವೆ.

ಭೂಗರ್ಭದೊಂದಿಗೆ ಸ್ತ್ರೀ ಸಮೀಕರಣ: ಭೀಮಾ ಸಂಸ್ಥೆಯ ಚಿನ್ನದ ಗುಣಮಟ್ಟದ ಮೌಲ್ಯವನ್ನು ಬಿಂಬಿಸುವ ಸ್ವರೂಪದಲ್ಲಿ ಥೀಂ ಮೂಡಿಬಂದಿದ್ದು, ಪ್ರಕೃತಿಯ ಪಂಚಭೂತಗಳಾದ ಭೂಮಿ, ಗಾಳಿ, ಬೆಂಕಿ, ಆಕಾಶ, ನೀರಿನ ನಡುವೆ ಅನೇಕ ದೃಶ್ಯಗಳು ಮೋಡಿಮಾಡುತ್ತವೆ. ಜತೆಗೆ, ಆಭರಣಗಳು ಅಲಂಕಾರಿಕ ವಸ್ತುಗಳು ಮಾತ್ರ ಆಗಿರದೇ, ಬದುಕಿನ ಅತ್ಯಮೂಲ್ಯ ಸ್ಥಾನ ಪಡೆದುಕೊಂಡಿರುವ ಕುರಿತು ಕಿರುಚಿತ್ರ ವಿವರಿಸುತ್ತದೆ. ಜತೆಗೆ, ಅತ್ಯಾಕರ್ಷಕ ಹಿನ್ನೆಲೆ ಸಂಗೀತದೊಂದಿಗೆ ಅತ್ಯದ್ಭುತ ಗುಣಮಟ್ಟದಲ್ಲಿ ಕಿರುಚಿತ್ರ ಮೂಡಿಬಂದಿದ್ದು, ಎಲ್ಲರಿಗೂ ಇಷ್ಟವಾಗುತ್ತದೆ. ಈ ಕಿರುಚಿತ್ರ ಭೀಮಾ ಗೋಲ್ಡ್ ಯುಟ್ಯೂಬ್ ಚಾನೆಲ್‌ನಲ್ಲಿದ್ದು, ಎಲ್ಲರೂ ವೀಕ್ಷಿಸಬಹುದಾಗಿದೆ.

ಭೀಮಾ ಗೋಲ್ಡ್ ಸಂದೇಶ: ನೂರು ವರ್ಷಗಳ ಈ ಸುದೀರ್ಘ ಪಯಣದಲ್ಲಿ ಭೀಮಾ ಕೇವಲ ಗುಣಮಟ್ಟದ ಆಭರಣಗಳಿಗೆ ಮಾತ್ರವಲ್ಲದೆ, ಗ್ರಾಹಕರೊಂದಿಗೆ ಬೆಳೆಸಿಕೊಂಡ ನಂಬಿಕೆಗೆ ಹೆಸರಾಗಿದೆ.



ಚಳಿಗಾಲದಲ್ಲಿ ಕಾಂತಿಯುತ ತ್ವಚೆಗೆ..

• ಡಾ. ರಶ್ಮಿ ಪ್ರಸಾದ್

ಚಳಿಗಾಲದಲ್ಲಿ ಚರ್ಮದ ಸಮಸ್ಯೆ ಕಾಡುವುದು ಸಾಮಾನ್ಯ. ಅದಕ್ಕೆ ಕಾರಣ ಅತಿಯಾದ ಶೀತಗಾಳಿ ಮತ್ತು ತಣ್ಣನೆಯ ವಾತಾವರಣ. **ಚಳಿಗಾಲದ ಸಮಯದಲ್ಲೂ ಕಾಂತಿಯುತ ತ್ವಚೆಯನ್ನು ಕಾಯ್ದುಕೊಳ್ಳಬೇಕೆ? ಹಾಗಿದ್ದರೆ ಈ ಆಹಾರ ಸೇವಿಸಿ:**

ಕೊಬ್ಬಿನಾಂಶ ಹೆಚ್ಚಿರುವ, ಜೀರ್ಣಕ್ರಿಯೆಗೆ ಕಠಿಣವಾದ ಆಹಾರಗಳನ್ನು ಈ ಸಮಯದಲ್ಲಿ ತಿನ್ನಬಹುದು. ಉತ್ತಮ ಮಾಂಸಾಹಾರವನ್ನು ಸೇವಿಸಬಹುದು. ಗೋಧಿ ಹಾಗೂ ಉದ್ದಿನಿಂದ ತಯಾರಿಸಿದ ಆಹಾರ ಪದಾರ್ಥ, ಉಪ್ಪು, ಸಿಹಿ, ಹುಳಿ ರುಚಿಯುಳ್ಳ ಪದಾರ್ಥ, ಹಾಲು ಹಾಗೂ ಅದರ ಉತ್ಪನ್ನಗಳನ್ನು ಕೂಡ ಈ ಸಮಯದಲ್ಲಿ ಸೇವಿಸಬಹುದು.

ಹಸಿವನ್ನು ತಣಿಸುವಷ್ಟು ಆಹಾರ ಪದಾರ್ಥಗಳನ್ನು ಸೇವಿಸಿದಾಗ, ತೀಕ್ಷ್ಣವಾದ ಅಗ್ನಿಯು ಸರಿಯಾದ ರೀತಿಯಲ್ಲಿ ಉಪಯೋಗಿಸಲ್ಪಟ್ಟು, ದೇಹದಲ್ಲಿ ಪಚನ ಕ್ರಿಯೆ ಚೆನ್ನಾಗಿ ನಡೆಯುತ್ತದೆ. ಇದು ತ್ವಚೆಗೆ ಉತ್ತಮ ಕಾಂತಿ ಹಾಗೂ ಹೊಳಪನ್ನು ನೀಡುವಲ್ಲಿ ಸಹಕರಿಸುತ್ತದೆ.

ಮುಖದ ಕಾಂತಿಗಾಗಿ ಅನುಸರಿಸಬಹುದಾದ ಕ್ರಮಗಳು

- ಪ್ರತಿದಿನ ಸಂಜೆ ಎಣ್ಣೆಯಿಂದ ಮಸಾಜ್ ಮಾಡಿಕೊಳ್ಳಿ
- ಹಾಲಿನ ಕೆನೆಯಿಂದ ಅಥವಾ ಬೆಣ್ಣೆಯಿಂದ ಮುಖಕ್ಕೆ ಮಾಲೀಶು ಮಾಡಬಹುದು
- ಕಡಲೆಹಿಟ್ಟು ಅಥವಾ ಫೇಸ್‌ವಾಶ್‌ನಿಂದ ಮುಖವನ್ನು ತೊಳೆದುಕೊಳ್ಳಿ
- ಉತ್ತಮ ಗುಣಮಟ್ಟದ ಮಾಯಿಶ್ಚರೈಸರ್‌ಗಳನ್ನು ಬಳಕೆ ಮಾಡಿ
- ಚಿಟಿಕೆ ಅರಸಿನ, ಶ್ರೀಗಂಧ, ಕಡಲೆಹಿಟ್ಟಿನ ಜೊತೆ ಹಾಲು ಬೆರೆಸಿದ ಲೇಪವನ್ನು ಕೂಡ ಮುಖಕ್ಕೆ ಹಚ್ಚಬಹುದು.
- ತುಟಿಗೆ ಬೆಣ್ಣೆ ಅಥವಾ ಕೊಬ್ಬರಿಎಣ್ಣೆಯನ್ನು ಆಗಾಗ ಹಚ್ಚಬಹುದು ಅಥವಾ ಲಿಪ್ ಬಾಮ್‌ಗಳ ಬಳಕೆಯಿಂದಲೂ ತೊಂದರೆಯೇನಿಲ್ಲ.

ಲೇಖಕಿ: ವೈದ್ಯಾಧಿಕಾರಿ, ಶೃಂಗಾರ ಸೌಂದರ್ಯ ಚಿಕಿತ್ಸಾ ವಿಭಾಗ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಆಸ್ಪತ್ರೆ, ಕುತ್ಪಾಡಿ, ಉಡುಪಿ

ಒಟಿಟಿಗೆ ಲಗ್ಗೆಯಿಟ್ಟ ರಾನಿ ಸಿನಿಮಾ

ನಟ ಕಿರಣ್ ರಾಜ್ ಅಭಿನಯದ 'ರಾನಿ' ಸಿನಿಮಾ ಇದೀಗ ಒಟಿಟಿಗೆ ಲಗ್ಗೆ ಇಟ್ಟಿದೆ. 'ಕನ್ನಡತಿ' ಧಾರಾವಾಹಿಯ ನಂತರ, ಗುರುತೇಜ್ ಶೆಟ್ಟಿ ನಿರ್ದೇಶಿಸಿರುವ 'ರಾನಿ' ಸಿನಿಮಾದಲ್ಲಿ ಕಿರಣ್ ರಾಜ್ ನಾಯಕರಾಗಿ ನಟಿಸಿದ್ದರು.

ಈ ಕುರಿತು ಜೀ5 ಕನ್ನಡವು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿದೆ. 'ಮಾಸ್ ಅಲರ್ಟ್... ಕಿರಣ್ ರಾಜ್ ಅಭಿನಯದ ಆ್ಯಕ್ಷನ್ ಥ್ರಿಲ್ಲರ್ ಚಿತ್ರ 'ರಾನಿ' ಜನವರಿ 9ಕ್ಕೆ Z5ನಲ್ಲಿ ವೀಕ್ಷಿಸಿ' ಎಂದು ಬರೆದುಕೊಂಡು ಪೋಸ್ಟರ್ ಹಂಚಿಕೊಂಡಿದೆ.



ಕಿರಣ್ ರಾಜ್ ಅವರು ಈ ಹಿಂದೆ ದುಬೈಗೆ ತೆರಳಿ, ಸುಮಾರು ಹದಿಮೂರು ಸಾವಿರ ಅಡಿಯ ಮೇಲಿನಿಂದ ಸ್ಕೈ ಡೈವ್ ಮಾಡಿ ತಮ್ಮ ನೂತನ ಚಿತ್ರದ ಶೀರ್ಷಿಕೆಯನ್ನು ಅನಾವರಣ ಮಾಡಿದ್ದರು. 2024ರ ಸೆಪ್ಟೆಂಬರ್ 12ರಂದು ರಾನಿ ಸಿನಿಮಾ ರಿಲೀಸ್ ಆಗಿತ್ತು. ಕಿರಣ್ ರಾಜ್ ಜೊತೆಗೆ ಸಮೀಕ್ಷಾ, ರವಿಶಂಕರ್ ಶರ್ಮಾ ಮುಂತಾದವರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಕನ್ನಡತಿ ಧಾರಾವಾಹಿಯ ಮೂಲಕ ಜನಪ್ರಿಯತೆ ಪಡೆದುಕೊಂಡ ನಟ, ಸದ್ಯ ಜೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಕರ್ಣ' ಧಾರಾವಾಹಿಯಲ್ಲಿ ನಟಿಸುತ್ತಿದ್ದಾರೆ.

'ಕಾಂತಾರ ಅಧ್ಯಾಯ 1' ಶೀಘ್ರದಲ್ಲಿ ಕಿರುತೆರೆಗೆ

ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ ಅಧ್ಯಾಯ 1' ಚಿತ್ರವು ಅಕ್ಟೋಬರ್ 2ರಂದು ಬಿಡುಗಡೆಯಾಗಿ, ದೇಶದಾದ್ಯಂತ 7 ಸಾವಿರಕ್ಕೂ ಅಧಿಕ ಪರದೆಗಳಲ್ಲಿ ತೆರೆಕಂಡು ಯಶಸ್ವಿಯಾಗಿ ಪ್ರದರ್ಶನಗೊಂಡಿತ್ತು. ಇದೀಗ ಈ ಚಿತ್ರವು ಟಿ.ವಿ ಪರದೆ ಮೇಲೆ ತೆರೆಕಾಣಲು ಸಿದ್ಧವಾಗಿದೆ.

ಈ ಕುರಿತು ಜೀ ಕನ್ನಡ ಸಾಮಾಜಿಕ ಮಾಧ್ಯಮವು ಇನ್‌ಸ್ಟಾಗ್ರಾಂನಲ್ಲಿ ಮಾಹಿತಿ ಹಂಚಿಕೊಂಡಿದೆ. 'ಬೆಳ್ಳಿಪರದೆಯಲ್ಲಿ ಅದ್ಭುತ ಕ್ರಾಂತಿ ಮಾಡಿದ ಐತಿಹಾಸಿಕ ದಂತಕಥೆಯು ಕಿರುತೆರೆಯಲ್ಲಿ ಮೊದಲ ಬಾರಿಗೆ ತೆರೆಕಾಣುತ್ತಿದೆ' ಎಂದು ಬರೆದುಕೊಂಡಿದೆ.

ಈಗಾಗಲೇ 'ಕಾಂತಾರ ಅಧ್ಯಾಯ 1' ಅಕ್ಟೋಬರ್ 31ರಿಂದ ಕನ್ನಡ, ತಮಿಳು, ತೆಲುಗು, ಮಲಯಾಳಂ ಭಾಷೆಗಳಲ್ಲಿ ಒಟಿಟಿಗೆ ಎಂಟ್ರಿ ಕೊಟ್ಟಿತ್ತು. ಇದರ ಜೊತೆಗೆ ಇಂಗ್ಲಿಷ್ ಮತ್ತು ಸ್ಪ್ಯಾನಿಶ್ ಭಾಷೆಗಳಲ್ಲೂ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿತ್ತು. ಈ ಚಿತ್ರವು 2025ರಲ್ಲಿ ಅತಿ ಹೆಚ್ಚು ಹಣ ಗಳಿಸಿದ ಭಾರತೀಯ ಸಿನಿಮಾ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಜಾಗತಿಕ ಗಲ್ಲಾ ಪೆಟ್ಟಿಗೆಯಲ್ಲಿ ₹ 818 ಕೋಟಿಗೂ ಅಧಿಕ ಹಣ ಸಂಪಾದಿಸಿದೆ.



ಮಗನಿಗೆ ವಿಹಾನ್ ಎಂದು ಹೆಸರಿಟ್ಟ ವಿಕ್ಕಿ–ಕತ್ರಿನಾ



ಬಾಲಿವುಡ್‌ನ ತಾರಾ ಜೋಡಿ ವಿಕ್ಕಿ ಕೌಶಲ್ ಮತ್ತು ಕತ್ರಿನಾ ಕೈಫ್ ಅವರಿಗೆ ನವೆಂಬರ್‌ನಲ್ಲಿ ಗಂಡುಮಗು ಜನಿಸಿತ್ತು. ದಂಪತಿಯು ಮಗನಿಗೆ 'ವಿಹಾನ್ ಕೌಶಲ್' ಎಂದು ನಾಮಕರಣ ಮಾಡಿದ್ದಾರೆ.

ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಕತ್ರಿನಾ, 'ವಿಹಾನ್ ನಮ್ಮ ಬೆಳಕಿನ ಕಿರಣ. ಪ್ರಾರ್ಥನೆಗಳಿಗೆ ಉತ್ತರ ಸಿಗುತ್ತಿದೆ. ಜೀವನ ಸುಂದರವಾಗಿದೆ. ನಮ್ಮ ಜಗತ್ತು ಕ್ಷಣಾರ್ಧದಲ್ಲಿ ಬದಲಾಗುತ್ತಿದೆ' ಎಂದು ಬರೆದುಕೊಂಡಿದ್ದಾರೆ.

ಕತ್ರಿನಾ ಹಾಗೂ ವಿಕ್ಕಿ ಕೌಶಲ್ ತಮ್ಮ ಕೈಮೇಲೆ ಮಗುವಿನ ಪುಟ್ಟ ಕೈ ಇರುವ ಫೋಟೊವನ್ನು ಹಂಚಿಕೊಂಡಿದ್ದಾರೆ.

42ನೇ ವಯಸ್ಸಿನಲ್ಲಿ ತಾಯಿಯಾದ ಕತ್ರಿನಾ, ಈ ಮೊದಲು ಬೇಬಿ ಬಂಪ್ ಫೋಟೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಜೊತೆಗೆ 'ನಮ್ಮ ಜೀವನದ ಅತ್ಯುತ್ತಮ ಅಧ್ಯಾಯವನ್ನು ಸಂತೋಷ ಮತ್ತು ಕೃತಜ್ಞತೆಯಿಂದ ತುಂಬಿದ ಮನಸ್ಸುಗಳೊಂದಿಗೆ ಪ್ರಾರಂಭಿಸುವ ಹಾದಿಯಲ್ಲಿ ಇದ್ದೇವೆ' ಎಂದು ಬರೆದುಕೊಂಡಿದ್ದರು.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ವಸತಿ ನಿವೇಶನಗಳು ಲಭ್ಯ ಆಕರ್ಷಕ ಬೆಲೆಗಳಲ್ಲಿ

ಕಗ್ಗಲೀಪುರ

ಬೆಲೆ ಕೇವಲ

₹13.2 ಲಕ್ಷ ದಿಂದ ಪ್ರಾರಂಭ

ಬಾಕಿ ಹಣವನ್ನು 3 ಕಂತುಗಳಲ್ಲಿ ಪಾವತಿಸಬಹುದು.

ಕೆಲವೇ ಪ್ಲಾಟ್‌ಗಳು ಉಳಿದಿವೆ!

- ವಿಶಾಲ, ಅಚ್ಚುಕಟ್ಟಾದ ಪ್ಲಾಟ್ಗಳು
- ಶಾಶ್ವತ ನೀರು ಮತ್ತು ವಿದ್ಯುತ್ ವಸತಿ
- ಸುಧಾರಿತ ಮೂಲಭೂತ ಸೌಕರ್ಯಗಳು
- ಯೋಜಿತ ರಸ್ತೆ ಜಾಲ ಮತ್ತು ಡ್ರೈನೇಜ್ ವ್ಯವಸ್ಥೆ



ಅಭಿವೃದ್ಧಿ ಪ್ರದೇಶ ಭವಿಷ್ಯದ **ಹಾಟ್‌ಸ್ಪಾಟ್**

ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿದೆ


ಪೂರ್ಣ ಅನುಮೋದಿತ ನಿವೇಶನಗಳು, ಬುಕ್ಕಿಂಗ್‌ಗೆ ಲಭ್ಯ.

89700 56056

I SIRI
Sandalwood Farmlands

Get Your Home in nature!

BEST WEEKEND GETAWAYS



ಸ್ಯಾಂಡಲ್‌ವುಡ್ ಫಾರಂಲ್ಯಾಂಡ್

Offer Price
₹79 Per Sft

ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ
90 ನಿಮಿಷಗಳ ಪ್ರಯಾಣ

MONTHLY ₹6999/- **EMI**

ನೋಂದಣಿಗೆ ಸಿದ್ಧವಾಗಿದೆ
ಬ್ಯಾಂಕ್ ಸಾಲ ಸೌಲಭ್ಯವಿದೆ

FLEXIBLE PAYMENT
OPTION AVAILABLE

ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ:
6366549024

CHALLENGE. CHANGE. CONQUER.

Unveiling a new rigour,
a renewed purpose
with our new identity.



ARIHANT GROUP OF INSTITUTIONS is now **arihant** GROUP OF INSTITUTIONS

FACULTY HIRING Apply Now: hr@agiedu.in

- Commerce
- Management
- Computer Applications
- Pre-University

1) 3yrs of Teaching Experience 2) NET/SLET/Ph.D. and B.Ed. for PUC.
3) Applications are invited from all reserved categories 4) Apply within 7 days

FOR SCHOLARSHIPS (MERIT & RESERVED) & ADMISSIONS CALL US TODAY

OUR COURSES: PUC: Science & Commerce
UG: BBA, BCA & B.Com
PG: MBA & MCA

Corporate Campus
R V Road, V V Puram, Bengaluru

Global Campus
Thalaghattapura, Bengaluru

92 36 36 36 36 agiedu.in /agieduofficial

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

KHB Sites in Bangalore
Electronic City, Bommasandra, Jigani, Bannerghatta Road
Land Owner Share
Prime Location, Fully Developed Layout, Ready for Registration Plots
SBI & Nationalised Bank Loan Available
Call: 70260 13388

FOR SALE
BDA SITE No. 90, BTM 1st Stage, North facing 40×60, 60 ft. Road, Adjacent to JALA BHAVAN, Between Bannerghatta Road to Jayanagar East End Road, Approx 100 mtr. to Bannerghatta Main Road.
Genuine Buyers Call:
Muralidhar: 98453 01599

REAL ESTATE SELLING

Sites

Hebbal

40X60 West Face SITE Sale BBMP B KATHA Nr Manyata Techpark
Near MANYATA TECHPARK Back Gate No.5(200m) P&T Layout, Rachenahalli. Ct: 9483114740/ 9962377428

Anjanapura

SITE FOR SALE ANJANAPURA 1st Block 30x40 E/F and BCCHS Layout 30x40 and 40x60 E/F. Call: 9740148870 9341050991.

Banashankari

"BANASHANKARI 6TH STAGE 4th Block 50x80 North West corner and 50x80 North facing 7th-Block and 30x40 West facing 2nd-Block and 40x60 3rd-Block East facing near BDA Complex. Call: 9845146725/ 9741466369"

BDA HALF site for sale IV H Block FE of BSK VI stage 6mx9mEF 9449081178

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

DIRECT OWNER 30x40 N/F BDA Site Sale, KEMPEGWODA LAYOUT 7th H Sector, Full Developed. 9632966556

Magadi Road

SITE SALE 30x50 BMRDA, WF, 30ft Road, Rs. 12250/- Rashi Residency Layout, Magadi Road Negotiable: 9916826976

750 SQFT Vacant Site, WF Herohalli, Sunkadakatte, Magadi Road, E Katha, 53L, Direct Owner 9740073482

Mysore Road

"CONTACT FOR Selling/ Buying BMRDA Approved Sites Near Hejjala, Wonderla Gate, Eagelton Golf Resort. 9845178335"

Uttarahalli

SALE: KUMARASWAMY layout, ISRO housing society, 3rd B Main road 3630 sq ft, 17.5 K/ sq ft,Serious buyers only Call +17028216450 Whatspp or email animalhouzvet@gmail.com

Vishweshwariah Layout

DIRECT OWNER 30x40 BDA Site Sale VISHWESHWARAIAH LAYOUT 40ft Road, Full Developed Area, ₹11000/-. 9742681666

BDA SITE SALE VISHWESHWARAIAH LAYOUT 2ND BLOCK 40X60 NORTH FACE, NEAR 100FT ROAD, GOOD LOCATION CONTACT: 8892901567

'DIRECT OWNER' 20x30 N/F Vishveswaraiah Layout 2nd Block, Near Kommagatta, Full Developed Area: 8496030007/ 8310885235

30X40 SITE Sale VISHVESHWARAIAH Layout North Face, 20x30 East 46 Lakhs 6th Block Attached: 8310003509

VISHWESHWARAIAH LAYOUT, BDA 6th Block, 20x30 West Facing, 30 Feet Road Direct Owner Contact: 6360050356

Vijayanagar

SITE FOR SALE 60x90 RPC LAYOUT VIJAYANAGAR
SALE: 60X90 West Facing Only Genuine Buyers Contact: 6363250343 9845038343

Flat

Banashankari

KATRIGUPPE GANAPATHI HANUMANTHA RESIDENCY 3 BHK FLATS FOR SALE Rs. 8999/ SFT Contact: 94482-58218/ 96065-03064

SALE BSK 3rd stage- 3 BHK + 3T .1651 SF. A- khata. Recently Renovated. Mob-9801269356. E-Mail: sfylaptop@gmail.com

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Uttarahalli

4BHK NEW FLATS SALE Ready to Move, A Khatha, E-swathu, Carparking Lift Vaasthu, Maruthi Layout. Rs.1.10.Cr. 9945224058 6363181276.

House

Banashankari

RENT LEASE sale 2/ 3 house apartments Banashankari 2nd stage, Basavanagudi, Girinagar, Padmanabhanagar. Siddappa : 9964079497

Commerical

General

TENANTED PROPERTY for sale in Prestige towers Residency Road, 2244 sft Rents 1.90 lakh Per month sale price 4.25 Cr. Citilines 9741417120.

Koramangala

KORAMANGALA 740 sqft Superbuilt Furnished office- Sale, opposite Nexus, Bangalore, Raheja Arcade. Clear titles. 7010513435.

Mysore

COMMERCIAL LAND FOR SALE
52,272 sqft/ 1.08 Acres
Rs.1250/- per sqft
10 Km from Palace, Surrounded by Layouts
SUITABLE FOR Layout, Hospital, Hotels, Lodge, Villa House, Choultry, Farm House, HD Kote Main Road Mysore.
Ganishka Properties Buy/Sell
Contact: +91 97397 03467

ರೌನ್ ಇನ್ಫ್ರಾ
RAUN E-CITYSCAPE
A PREMIUM PLOTTED DEVELOPMENT LIMITED EDITION
PRIVATE KINGDOM AWAITS YOU !...
@ ELECTRONIC CITY PHASE 1
Behind Euro School
(30x40) (30x50)
PLOTS AVAILABLE FOR SALE
BDA APPROVED
SCAN FOR LOCATION
RERA NUMBER: PRM/KA/RERA/1251/308/PR/041024/007115
BDA NUMBER: ಬೆಅಪ್ರಾ/ನಯೋ/PRL-03/2065/2023-24
+91 98442 52259 / 98440 08171

Agricultural Land Converted

Intl Airport Road

ONE ACRE to Fifty acres agriculture land around devanahalli, doddaballpura, nandihills, chikkaballapur. for out rate sale Genuine/ serious buyer call: 9844471345

Agricultural Land

South

VICTORY PROPERTIES
(A 35 years Experienced Real Estate Company)
FOR SALE
3-14 ACRES
(1,36,590 Sq Ft) At Bangalore South, Uttrahalli Hobli, Nelguli Village, Bangalore 560082, 2kms from Bangalore-Kanakpura highway, Near Somanhalli Toll, 32 kms from Vidhana Soudha, Under New Greater Bangalore Authority, Excellent Property For Farmland Project, Fully Compounded, Borewell, Electricity, Price Rs 1500/ Per Sqft
CONTACT
8618576685

Mysore

MYSORE NANJANGUDU 5acre and 10acre Land For Immediate Sale Only 25 Lakhs Per Acre: 9535195656

Commercial Building

J P Nagar

RENT - JP Nagar 9th phase, 5000sft, factory Outlet / Dark Store / Warehouse. 9910022981

Farm House/ Land/ Resorts

General

HILLTOP FARM For Sale in Wayanad. Cont: 7338630606

RENTAL PROPERTIES

Accommodation Available

Commercial

AVAILABLE II Floor and Basement COMMERCIAL SPACE each 2000 Sqft for Rent for office, showroom in HSR 6th Sector MAIN ROAD. Call 9880022644

OFFICE/ ATM Space for RENT 20,000/-, 350 sqft. Bellary Main road near CBI, Ganganagar. 9845154533.

Flats

SEMI-FURNISHED 3BHK FLAT for RENT at Sumukha Meadows Vishnu Vardhan Road Channasandra Bengaluru with.CarPark, Lift.& 24hrs Water Supply. Ready to Occupy. No Brokers. Call:9533339694 9246369439.

House

FURNISHED POSH One RK Available at J.P.Nagar, 4th Phase For Rent Contact: 8431686838

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

JOB OPPORTUNITIES

Part-Time Jobs

CHANNEL PARTNER with HDFC Bank Subsidiary. Age 40-69, 75K, PF/ MC, Experience Only: 9902072424

Engg/ Production Technical

ELECTRICAL TECHNICIANS having experience in hotel background (3 or 5 star), are required for software company maintenance in Bangalore, 35000/- salary along with PF, ESI, bonus and accommodation. Candidates with ITI/Diploma pls Contact: 9886987898, 9900816937, 9845080989

JOB
To Place your Classified Ads Contact:
9886213331

Teachers / Professors

RAJYA VOKKALIGARA SANGHA
VOKKALIGARA SANGHA DENTAL COLLEGE & HOSPITAL
(Affiliated to RGUHS, Karnataka)
K.R.Road, V.V.Puram, Bangalore- 560 004

RVS/Admn/ 1701 /2025-26 Date:09.01.2026

Applications are invited from eligible candidates as per DCI norms for the post of Principal.

Required Post	No. of post
PRINCIPAL	01

Note:
1. Candidates possessing requisite qualification as per DCI norms may submit their application to The Principal, VSDCH and College mail vsdchbangalore@gmail.com On or before 16-01-2026 at 4.00 P.M
2. Right to reject any applications without any reason is reserved with the Rajya Vokkaligara Sangha.
3. Last date to receive applications with relevant documents at VSDCH dental college & hospital is 16-01-2026 at 4.00 P.M along with D.D for Rs. 1,180/- in favor of Principal VSDCH Dental College.

Sd/- President, RVS Sd/- Vice President, RVS Sd/- Vice President, RVS
Sd/- General Secretary, RVS Sd/- Joint Secretary, RVS Sd/- Treasurer , RVS Sd/- Chairman, VSDCH

PUBLIC NOTICE

MITRAVRINDA EDUCATION TRUST®
(Reg. No.: 205/2012-2013)
No.1090/L, 8th Main Road, 6th Cross, Prakashnagar, Bangalore - 560 029.

R.No.: MET/04/2025-26 Date: 09.01.2026

M/s Mitravriunda Educational Trust

Extract of Resolution passed at the meeting of the partners held on 09-01-2026 at the registered office of the firm at 10.00 am.

The Trust owns property bearing New Municipal No.32, PID No.13-68- 32, old site No.84, formed in the land bearing Sy.No.20 of Laggere Village, measuring East - West on the Northern side 27 feet, on the Southern side 181/2 feet and North to South on the Eastern side 48 feet and on the Western side 47 feet, totally measuring 1080.625 square feet, Situated at 8th Cross, J.C.Nagara, Bangalore -560086 and the Trust has decided to sell the above said property in favour of SRI.P. VIJAYAN for the benefit of the Trust for present market value and with all the Trustees have agreed for and accordingly this day a resolution was passed and all the trustees have physically present at the time of meeting and signed this resolution.

Place: Bangalore Sd/-
Date: 09.01.2026 Trustees

PERSONAL

Change of Name

I, ASWATHAPPA, Residing at Doddakurugodu, Chikkaballapur-561208 have changed my name as ASHWATHAIAH. K.M., vide affidavit dated 7/1/2026 before Notary Anuradha.D., Bengaluru

CHANGE OF NAME
I, **Basavaraj,** residing at No. 195, Near BSN School, Kuntha Reddy Layout, Jigani Post, Anekal Taluk, Bengaluru-560105, have changed my name to **RAMAPPA BASAPPA** vide affidavit dated 07-01-2026 before notary Sumithra N, Bengaluru. Henceforth I shall be called **RAMAPPA BASAPPA** only

I, SWAPNA VIKAS KULKARNI, Residing at #204, 3rd cross Vidyamanyanagara Andrahalli Bangalore-91 have changed my son name from AGASTYA NADIGER to AGASTYA GANESH NADIGER, vide affidavit dated 7/1/2026 before Notary Devaraja.E, Bangalore

I, SWAPNA VIKAS KULKARNI, Residing at #204, 3rd cross, Vidyamanyanagara, Andrahalli, Bangalore-91 have changed my son name from AATREYA NADIGER to AATREYA GANESH NADIGER, vide affidavit dated 7/1/2026 before Notary Devaraja.E, Bangalore

I, RAJEEVA. A, Residing at #12, Lakshmipura main road, Dombarahalli, Bengaluru-562123 have changed my name as RAJEEVA K.A., vide affidavit dated 7/1/2026 before Notary Anuradha.D, Bengaluru

I, VEENA S. W/o.A.Amal Raj R/a#1135, 17th Cross 3rd Block, 1st Stage HBR Layout Bangalore 560043,Have Changed my Name to VEENA AMALRAJ vide affidavit Dated:05.1.2026 before Notary C.Sharada Bangalore.

HOUSE FOR SALE
Ground & First Floor
J.P. NAGAR 1st PHASE
Close to Oxford School & College
Site Measuring 30 x 40 Feet
About 1200 Sq. Ft.
Price Rs. 31500 Per Sq. Ft.,
Whatsapp: 7338632180

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

VAARAHI VIVAREA
RERA NO: PRM/KA/RERA/1251/310/PR/261124/007247
CC & OC PROJECT | NO COMMON WALLS | 100% VASTU | 168 UNITS
2BHK 1125-1185 Sq.ft | 3BHK 1390-1665 Sq.ft | 5 Floors



For Booking Contact: 78921 99941 / 70191 96747
Project Address : Near Rajarajeswari Medical College, Good Earth Malhar Villas Road, Opp: Challagatta Metro Station, Mysore Road, Bangalore-60

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

PRM/KA/RERA/1251/308/PR/291225/008366

ಡಿಎಸ್ ಮ್ಯಾಕ್ಸ್ ಸ್ಕೈ ಸಂಪಧ

www.dsmaxproperties.com

DS MAX®



"Turn Your Resolution into a Lifelong Assurance"

We are proud to announce our

New Launch

DS MAX SKY SAMPADHA

10 MINS. ELECTRONIC CITY

HOSUR ROAD

LUXURIOUS 2 & 3-BHK APARTMENTS

2-BHK STARTS @ ₹ 61 L*

3-BHK STARTS @ ₹ 89 L*

8880 003 003

My commitment to you extends far beyond the calendar year with a lifetime of **Returns, Rewards,** and **Reliability**.

- Dr K V Satish, Founder & Chairman, DS MAX Group.

2, 3 & 4-BHK APARTMENTS FOR SALE IN VARIOUS LOCATIONS

RERA No.	Floors	Location	Landmark	Price	Phone
PRM/KA/RERA/1251/308/PR/281125/008287	G+14	JIGANI	5 MINS. APC CIRCLE	₹ 58.45 - 92.06 Lakhs*	8880 003 003
PRM/KA/RERA/1251/310/PR/151223/006489	G+3	BANASHANKARI	OPP. NPS SCHOOL (3 & 4-BHK)	₹ 1.45 - 2.17 Cr*	8880 461 461
PRM/KA/RERA/1251/308/PR/160824/006972	G+4	HOSA ROAD METRO	NEAR ELECTRONIC CITY	₹ 67.92 L - 1.34 Cr*	8880 013 310
PRM/KA/RERA/1250/301/PR/251024/007178	G+14	YELAHANKA	5 MINS. RAJANUKUNTE	₹ 54.85 - 97.21 Lakhs*	8880 465 465
PRM/KA/RERA/1251/310/PR/210324/006724	G+14	SILKBOARD	NEAR SINGASANDRA METRO STN.	₹ 87.62 L - 1.31 Cr*	8880 013 310
PRM/KA/RERA/1250/304/PR/251024/007179	G+14	WHITEFIELD	10 MINS. HOPE FARM METRO STN.	₹ 77.91 L - 1.32 Cr*	8880 461 461
PRM/KA/RERA/1251/472/PR/250225/007524	G+14	AIRPORT ROAD	NEAR PRESTIGE TECH IT PARK	₹ 87.89 L - 1.21 Cr*	8880 465 465
PRM/KA/RERA/1250/304/PR/150224/006622	G+14	WHITEFIELD	SOUKYA ROAD	₹ 70.65 L - 1.06 Cr*	8880 461 461
PRM/KA/RERA/1251/308/PR/160824/006973	G+14	BANNERGHATTA RD.	NEAR KOPPA GATE	₹ 62.42 - 82.18 Lakhs*	8880 013 310
PRM/KA/RERA/1251/308/PR/290122/004660	G+4	SARJAPURA	SARJAPUR - ATTIBELE ROAD	₹ 63.60 - 83.25 Lakhs*	8880 003 003
PRM/KA/RERA/1251/310/PR/150223/005721	G+14	MYSORE ROAD	NEAR CHALLAGHATTA METRO STN.	₹ 67.28 - 95.28 Lakhs*	8880 461 461

Visit our website or talk to our advisors for the complete portfolio

ಡಿಎಸ್ ಮ್ಯಾಕ್ಸ್

CREDAI BENGALURU

FACILITY MANAGEMENT SERVICES



We Manage and Maintain Your Apartment

9164 022 000

INTERIORS



We design and style your home.

9164 056 000

REFER A DS MAX HOME



Refer a buyer to earn big

9164 043 000

REFER A LAND TO DS MAX



Offer a Land, Get a Home.

8880 463 463

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331





